ವಿಶ್ವವಾಣಿ
ವಿಶ್ವಾಸವೇ ವಿಶ್ವ

ದೀಪಾ ಭಾಸ್ತಿ ಅನುವಾದಿತ ಬಾನು ಮುಷ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿಗೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ

ಕನ್ನಡದ ಕೀರ್ತಿ ಬಾನಿಗೇರಿಸಿದ ಮುಷ್ತಾಕ್

ಲಂಡನ್: ಖ್ಯಾತ ಕನ್ನಡ ಲೇಖಕಿ ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕತೆಗಳು' ಕಥಾಸಂಕಲನದ ಇಂಗ್ಲಿಷ್ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್' ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದೆ. ಈ ಪ್ರಶಸ್ತಿ ಪಡೆದ ಮೊದಲ ಕನ್ನಡ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೇ 21ರಂದು ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಅಧಿಕೃತ ಘೋಷಣೆ ಹೊರಬಿದ್ದಿದ್ದು, ವಿಜೇತರಿಗೆ 50,000 ಪೌಂಡ್ ಬಹುಮಾನ (ಅಂದಾಜು 57.28 ಲಕ್ಷ ರು.) ಸಿಗಲಿದೆ. ಇದನ್ನು ಲೇಖಕರು ಹಾಗೂ ಅನುವಾದಕರ ನಡುವೆ ಹಂಚಲಾಗುತ್ತದೆ. ಮೇ 2024 ಮತ್ತು ಏಪ್ರಿಲ್ 2025 ರ ನಡುವೆ ಯುಕೆ ಮತ್ತು ಐರ್ಲೆಂಡ್‌ನಲ್ಲಿ ಪ್ರಕಟ ವಾದ ಇಂಗ್ಲಿಷ್‌ಗೆ ಅನುವಾದಿಸಲಾದ ಅತ್ಯುತ್ತಮ ಕಾದಂಬರಿ ಅಥವಾ ಸಣ್ಣ ಕಥೆಗಳ ಸಂಗ್ರಹಕ್ಕೆ ಈ ಪ್ರಶಸ್ತಿ ನೀಡಲಾಗುತ್ತದೆ. ಬಾನು ಮುಷ್ತಾಕ್ ಅವರು ತಮ್ಮ ಅನುವಾದಕಿ ದೀಪಾ ಭಾಸ್ತಿ ಅವರೊಂದಿಗೆ ಪ್ರಶಸ್ತಿಯನ್ನು ಸ್ವೀಕರಿಸಿದರು. 'ನನ್ನ ಸುಂದರವಾದ ಭಾಷೆಗೆ ದೊರೆತ ಎಂತಹ ಸೊಗಸಾದ ಗೆಲುವು ಇದು' ಎಂದು ಅನುವಾದಕಿ ಭಾಸ್ತಿ ಹರ್ಷ ವ್ಯಕ್ತಪಡಿಸಿದ್ದಾರೆ.

ಸ್ಪರ್ಧೆಯಲ್ಲಿದ್ದ ಇತರ 5 ಪುಸ್ತಕಗಳು ಯಾವವು?

1. ಸೋಲ್ವೆಜ್ ಬಲ್ಲೆ ಅವರ ಆನ್ 'ದಿ ಕ್ಯಾಲ್ಕುಲೇಷನ್ ಆಫ್ ವಾಲ್ಯೂಮ್ ಐ' (ಡ್ಯಾನಿಶ್‌ನಿಂದ ಬಾರ್ಬರಾ ಜೆ. ಹ್ಯಾವೆಲ್ಯಾಂಡ್ ಅನುವಾದಿಸಿದ್ದಾರೆ)
2. ವಿನ್ಸೆಂಟ್ ಡೆಲೆಕ್ರೊಯಿಕ್ಸ್ ಅವರ 'ಸ್ಮಾಲ್ ಬೋಟ್' (ಫ್ರೆಂಚ್‌ನಿಂದ ಹೆಲೆನ್ ಸ್ಟೀವನ್ಸನ್ ಅನುವಾದಿಸಿದ್ದಾರೆ)
3. ಹಿರೋಮಿ ಕವಾಕಾಮಿ ಅವರ 'ಅಂಡರ್ ದಿ ಐ ಆಫ್ ದಿ ಬಿಗ್ ಬರ್ಡ್' (ಜಪಾನೀಸ್‌ನಿಂದ ಆಸಾ ಯೊನೆಡಾ ಅನುವಾದಿಸಿದ್ದಾರೆ)
4. ವಿನ್ಸೆಂಜೊ ಲ್ಯಾಟ್ರೊನಿಕೊ ಅವರ 'ಪರ್ಫೆಕ್ಷನ್' (ಇಟಾಲಿಯನ್‌ನಿಂದ ಸೋಫಿ ಹ್ಯೂಸ್ ಅನುವಾದಿಸಿದ್ದಾರೆ)
5. ಅನ್ನೆ ಸೆರ್ರೆ ಅವರ 'ಎ ಲೆಪರ್ಡ್-ಸ್ಕಿನ್ ಹ್ಯಾಟ್' (ಫ್ರೆಂಚ್‌ನಿಂದ ಮಾರ್ಕ್ ಹಚಿನ್ಸನ್ ಅನುವಾದಿಸಿದ್ದಾರೆ)

ಲಂಡನ್‌ನ ಟೆಡ್ ಮಾಡರ್ನ್‌ನಲ್ಲಿ ನಡೆದ ಸಮಾರಂಭದಲ್ಲಿ ಬಾನು ಮುಷ್ತಾಕ್ ಅವರು ತಮ್ಮ ಅನುವಾದಕಿ ದೀಪಾ ಭಾಸ್ತಿ ಅವರೊಂದಿಗೆ ಪ್ರಶಸ್ತಿಯನ್ನು ಸ್ವೀಕರಿಸಿದರು.

ಬೂಕರ್ ಪ್ರಶಸ್ತಿ ದೊರೆತಿರುವುದು ವೈವಿಧ್ಯತೆಗೆ ದೊರೆತ ಜಯ. ಯಾವುದೇ ಕಥೆಯು ಚಿಕ್ಕದಲ್ಲ. ಮಾನವ ಅನುಭವದ ಕಥೆಯಲ್ಲಿ ಪ್ರತಿ ಯೊಂದು ಎಳೆಯೂ ಮುಖ್ಯವಾಗಿರುತ್ತದೆ ಎಂಬ ನಂಬಿಕೆಯಿಂದ ಈ ಪುಸ್ತಕ ಹುಟ್ಟಿದೆ. ಜಗತ್ತು ನಮ್ಮನ್ನು ವಿಭಜಿಸಲು ಪ್ರಯತ್ನಿಸುತ್ತದೆ. ಆದರೆ ಸಾಹಿತ್ಯವು ನಾವು ಪರಸ್ಪರರ ಮನಸ್ಸಿನಲ್ಲಿ ಬದುಕಲು ಸಾಧ್ಯವಾಗುವ ಪವಿತ್ರ ಸ್ಥಳವಾಗಿದೆ. ಒಬ್ಬ ವಿಮರ್ಶಕನಾಗಿರುವುದು ಸುಲಭವಲ್ಲ.
- ಬಾನು ಮುಷ್ತಾಕ್ ಸಾಹಿತಿ

ಕನ್ನಡದ ಹೆಮ್ಮೆಯ ಲೇಖಕಿ ಬಾನು ಮುಷ್ತಾಕ್ ಅವರಿಗೆ ಹೃತ್ಪೂರ್ವಕ ಅಭಿ ನಂದನೆಗಳು. ಇದು ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಸಂಭ್ರಮಿಸುವ ಹೊತ್ತು. ಅವರು ಇನ್ನಷ್ಟು ಕಾಲ ಸತ್ವಯುತವಾಗಿ ಬರೆಯುತ್ತಾ ಕನ್ನಡದ ಕಂಪನ್ನು ಜಗದಗಲಕ್ಕೆ ಪಸರಿಸುತ್ತಾ ಇರಲಿ ಎಂದು ಹಾರೈಸುತ್ತೇನೆ. ಕೃತಿಯನ್ನು ಅನುವಾದಿಸಿರುವ ದೀಪಾ ಭಾಸ್ತಿ ಅವರಿಗೂ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಕನ್ನಡ ಸಾಹಿತ್ಯದ ಗರಿಮೆಯನ್ನು ಬಾನೆತ್ತರಕ್ಕೇರಿಸಿದ ಬಾನು ಮುಷ್ತಾಕ್ ಅವರಿಗೆ ಅಭಿನಂದನೆಗಳು. ಇದೇ ಮೊದಲ ಬಾರಿಗೆ ಕನ್ನಡದ ಕೃತಿಗೆ ಈ ಪ್ರತಿಷ್ಠಿತ ಪ್ರಶಸ್ತಿ ದೊರಕಿದೆ. ಬಾನು ಮುಷ್ತಾಕ್ ಹಾಗೂ ಈ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದ ದೀಪಾ ಭಾಸ್ತಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಇನ್ನಷ್ಟು ಉತ್ತಮ ಕೃತಿಗಳು ನಿಮ್ಮ ಲೇಖನಿಯಿಂದ ಮೂಡಿಬರಲಿ, ಸಾಹಿತ್ಯ ಸೇವೆಯು ಜಗದಗಲ ಹೆಸರು ಮಾಡಲಿ ಎಂದು ಶುಭ ಹಾರೈಸುತ್ತೇನೆ.
- ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ

ಸೊಂಪಾದ ಪುಟಗಳು

ಆಸ್ಪತ್ರೆಯಲ್ಲಿದ್ದ ಕ್ಲಿಯರ್‌ಗೆ ಮನೋಬಲವೆಂಬ ಬೆಳಕಿನ ಕಿಡಿ
ನೂರೆಂಟು ವಿಶ್ವ ವಿಶ್ವೇಶ್ವರ ಭಟ್ 6

ಬೆಂಗಳೂರಿನ ಮಳೆಗೊಂದು ಫಿಲಾಸಫಿ
ಕಾಡುದಾರಿ ಹರೀಶ್ ಕೇರ 7

ದಾರಿದೀಪೋಕ್ತಿ

ನಿಮ್ಮಿಂದ ಕೈ ತಪ್ಪಿ ಹೋದವುಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ. ಕಾರಣ ಎಷ್ಟೇ ತಲೆ ಕೆಡಿಸಿಕೊಂಡರೂ ಅದೇನೂ ವಾಪಸ್ ಬರುವುದಿಲ್ಲ. ಈಗ ಉಳಿದಿರು ವುದರ ಬಗ್ಗೆ ಮಾತ್ರ ನೆಮ್ಮದಿಯಾಗಿರಿ. ಮುಂದೆ ಬರಲಿರುವುದರ ಬಗ್ಗೆ ಆಶಾವಾದಿಯಾಗಿರಿ.

ವಕ್ರತುಂಡೋಕ್ತಿ

ಕೆಲವರನ್ನು ಬಣ್ಣಿಸಿದರೆ ಬೇಸರಿಸಿಕೊಳ್ಳುತ್ತಾರೆ. ಕಾರಣ ತಮ್ಮ ಕುರಿತು ಇದ್ದ ಹಾಗೆ ಹೇಳುವುದನ್ನು ಇಷ್ಟಪಡುವುದಿಲ್ಲ.

ಅಪಘಾತ: ಆರು ಜನ ಸ್ಥಳದಲ್ಲೇ ಸಾವು

ವಿಜಯಪುರ: ಸೋಲಾಪುರ- ಚಿತ್ರ ದುರ್ಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಮನಗೂಳಿ ಸಮೀಪ ಬುಧವಾರ ಬೆಳಗ್ಗೆ ಕಾರು-ಖಾಸಗಿ ಬಸ್-ಲಾರಿ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಆರು ಜನ ಸಾವಿಗೀಡಾಗಿದ್ದಾರೆ. ಕಾರಿನ ಲ್ಲಿದ್ದ ತೆಲಂಗಾಣದ ಗಡವಾಲದ ಕೆನರಾ ಬ್ಯಾಂಕ್ ಮ್ಯಾನೇಜರ್ ಟಿ.ಭಾಸ್ಕರನ್, ಅವರ ಪತ್ನಿ ಪವಿತ್ರಾ, ಮಗಳು ಜೋತ್ಸ್ನಾ, ಚಾಲಕ ವಿಜಯಪುರ ಜಿಲ್ಲೆಯ ಹೊರ್ತಿಯ ವಿಕಾಸ ಶಿವಪ್ಪ ಮಕನಿ, ಖಾಸಗಿ ಬಸ್ ಚಾಲಕ ಕಲಗುಟಗಿ ತಾಂಡಾದ ಬಸವರಾಜ ರಾಠೋಡ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಮಳೆಯಿಂದ ಹಾನಿಗೊಳಗಾದ ಸ್ಥಳಗಳ ವೀಕ್ಷಣೆಗೆ ಬಂದ ರಾಜಕೀಯದವರಿಗೆ ರೆಡ್ ಕಾರ್ಪೆಟ್ ಹಾಸಿದ ಬಿಬಿಎಂಪಿ ಅಧಿಕಾರಿಗಳು.

ಡಿಕೆಶಿ ಮನವಿಗೆ ಸ್ಪಂದಿಸಿದ ಆಂಧ್ರ ಡಿಸಿಎಂ ಪವನ್ ಕಲ್ಯಾಣ್ | ಕರ್ನಾಟಕದ 4 ಕುಮ್ಕಿ ಆನೆಗಳ ಹಸ್ತಾಂತರ

ನದಿ ನೀರು: ಚರ್ಚೆಗೆ ಆಂಧ್ರ ಒಪ್ಪಿಗೆ

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿಸಿದ್ದ ಆನೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೇರಿ ಮತ್ತಿತರರು ಆನೆಗಳ ಮೇಲೆ ಪುಷ್ಪವೃಷ್ಟಿ ಮಾಡಿ ಬೀಳ್ಕೊಟ್ಟರು.

ಯಾವ್ಯಾವ ಆನೆಗಳ ಹಸ್ತಾಂತರ?

ಕೃಷ್ಣ	15 ವರ್ಷದ ಆನೆ 2022ರಲ್ಲಿ ಚಿಕ್ಕಮಗಳೂರಿನಲ್ಲಿ ಸೆರೆ
ಶಿವಮೊಗ್ಗ ಅಭಿಮನ್ಯು	14 ವರ್ಷದ ಆನೆ 2023ರಲ್ಲಿ ಚಿಕ್ಕಮಗಳೂರಿನಲ್ಲಿ ಸೆರೆ
ದೇವ	39 ವರ್ಷದ ಆನೆ 2019ರಲ್ಲಿ ಕುಶಾಲನಗರದಲ್ಲಿ ಸೆರೆ
ರಂಜನ್	26 ವರ್ಷದ ಆನೆ ದುಬಾರೆ ಶಿಬಿರದಲ್ಲೇ ಜನಿಸಿದ ಆನೆ

ಬೆಂಗಳೂರು: ತುಂಗಾಭದ್ರಾ ಜಲಾಶಯಕ್ಕೆ ಸಂಬಂಧಿಸಿದ ಕರ್ನಾಟಕ ಹಾಗೂ ಆಂಧ್ರಪ್ರದೇಶದ ನಡುವಿನ ಗೊಂದಲ ನಿವಾರಣೆ ಹಾಗೂ ರಾಜ್ಯದ ಪಾಲನ್ನು ಬಳಕೆ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲು ಕರ್ನಾಟಕವು ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಮೇಲೆ ಒತ್ತಡ ಹೇರಿದ್ದು, ಇದಕ್ಕೆ ಪವನ್ ಕಲ್ಯಾಣ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಕರ್ನಾಟಕದಿಂದ ಕುಮ್ಕಿ ಆನೆಗಳ ಹಸ್ತಾಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಜತೆಗೆ ತುಂಗಭದ್ರಾ ನೀರು ಹಂಚಿಕೆಗೆ ಸಂಬಂಧಿಸಿದಂತೆ ಅನೌಪಚಾರಿಕವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಚರ್ಚಿಸಿದ್ದು, ಈ ಬಗ್ಗೆ ಚರ್ಚಿಸಲು ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಅವರ ಸಮಯ ಕೊಡಿಸುವಂತೆ ಮನವಿ ಮಾಡಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಪವನ್, ಈ ಬಗ್ಗೆ ನಾಯ್ಡು ಅವರೊಂದಿಗೆ ಚರ್ಚಿಸಿ ಸಮಯ ಕೊಡಿಸುವುದಾಗಿ ಹೇಳಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿರುವ ಆಂಧ್ರ ಡಿಸಿಎಂ ಪವನ್, ತುಂಗಭದ್ರಾ ನೀರಿನ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಭೆ ಕರೆಯುವಂತೆ ಮನವಿ ಮಾಡಿದ್ದಾರೆ. ಈ ಬಗ್ಗೆ ನಮ್ಮ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಗಮನಕ್ಕೆ ತಂದು ಸಭೆ ನಡೆಸುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದು, ತುಂಗಾಭದ್ರಾ ನದಿಯ ನಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳುವ ಬಗ್ಗೆ ಚರ್ಚಿಸಲು ಆಂಧ್ರ ಪ್ರದೇಶ ಮುಖ್ಯಮಂತ್ರಿಗಳ ಜತೆ ಸಭೆ ನಿಗದಿ ಮಾಡಿಕೊಡಿ ಎಂದು ಮನವಿ ಮಾಡಲಾಗಿದೆ. ಆಂಧ್ರ ಮತ್ತು ನಮ್ಮ ರಾಜ್ಯದ ಸಂಬಂಧ ಇನ್ನೂ ಉತ್ತಮವಾಗಲಿ. ನಮ್ಮ ಪಾಲಿನ 24 ಟಿಎಂಸಿ ನೀರಿನ ಬಳಕೆ ಬಗ್ಗೆ ನಿಮ್ಮ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಬೇಕಿದೆ. ನೀವೇ ಮುಂದೆ ನಿಂತು ಸಭೆ ನಿಗದಿ ಮಾಡಿ ಎಂದು ಕಾರ್ಯಕ್ರಮದಲ್ಲಿಯೇ ಬಹಿರಂಗವಾಗಿ ಮನವಿ ಮಾಡಲಾಗಿದೆ ಎಂದರು.

ಮೊದಲ ಹಂತದ 4 ಆನೆ ಹಸ್ತಾಂತರ

ಆಂಧ್ರಪ್ರದೇಶ ಕರ್ನಾಟಕದಿಂದ ಎಂಟು ಆನೆಗಳಿಗೆ ಮನವಿ ಮಾಡಿದ್ದರು. ಆದರೆ ರಾಜ್ಯ ಆರು ಆನೆಗಳನ್ನು ಹಸ್ತಾಂತರಿಸಲು ಸಮ್ಮತಿಸಿತ್ತು. ಮೊದಲ ಹಂತದಲ್ಲಿ ನಾಲ್ಕು ಆನೆಗಳನ್ನು ಹಸ್ತಾಂತರಿಸಲಾಗಿದೆ. ಮುಂದಿನ ದಿನಗಳಲ್ಲಿ ಆಂಧ್ರಪ್ರದೇಶಕ್ಕೆ ನೀಡಲಾಗಿರುವ ಆನೆಗಳ ಆರೋಗ್ಯದ ಬಗ್ಗೆ ಪ್ರತಿ ವರ್ಷ ವರದಿ ತರಿಸಿಕೊಳ್ಳಲಾಗುವುದು. ಈ ಅಂಶವನ್ನು ಆನೆ ಹಸ್ತಾಂ ತರ ಕುರಿತ ಒಪ್ಪಂದದಲ್ಲಿಯೂ ಸೇರಿಸಲಾಗಿದೆ. ಪವನ್ ಕಲ್ಯಾಣ್ ಅವರು ಆನೆಗಳನ್ನು ಮುತುವರ್ಜಿಯಿಂದ ಕಾಪಾಡುವ ಭರವಸೆ ನೀಡಿದ್ದಾರೆ ಎಂದು ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಮಾನವ ಆನೆ ಸಂಘರ್ಷ ತಡೆಗಟ್ಟಲು ನೆರೆರಾಜ್ಯಗಳ ಸಹಕಾರ ಅಗತ್ಯ. ದೇಶದಲ್ಲೇ ಆನೆ ಸಂಪತ್ತು ಹೆಚ್ಚಾಗಿ ರುವ ರಾಜ್ಯ ನಮ್ಮದು. 3,695 ಆನೆಗಳು ನಮ್ಮಲ್ಲಿವೆ. ಮಾನವ, ಆನೆ ಸಂಘರ್ಷ ತಡೆಯುವುದರಿಂದ ಜೀವ ಹಾನಿ, ಬೆಳೆ ಹಾನಿ ತಪ್ಪುತ್ತದೆ. ಈ ಮಹತ್ವದ ಉದ್ದೇಶದಿಂದಲೇ ರಾಜ್ಯದಿಂದ ಆರು ಕುಮ್ಕಿ ಆನೆಗಳನ್ನು ಆಂಧ್ರಕ್ಕೆ ಹಸ್ತಾಂತರಿಸಲಾಗುತ್ತದೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

72 ಗಂಟೆಗಳ ಗುಂಡಿನ ಚಕಮಕಿ ಕಮಾಂಡರ್ ಸೇರಿ ಮುಖಂಡರ ಹತ್ಯೆ

ಛತ್ತೀಸ್‌ಗಢದಲ್ಲಿ 30 ನಕ್ಸಲರ ಹತ್ಯೆ

ಕಾರ್ಯಾಚರಣೆಯಲ್ಲಿ ತೊಡಗಿರುವ ಭದ್ರತಾ ಪಡೆ ಸಿಬ್ಬಂದಿ.

ನಾರಾಯಣಪುರ: ಛತ್ತೀಸ್‌ಗಢದ ಬಸ್ತಾರ್ ಪ್ರದೇಶದಲ್ಲಿ ನಕ್ಸಲರು ಹಾಗೂ ಭದ್ರತಾ ಪಡೆಗಳ ನಡುವೆ ಬುಧವಾರ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ನಾಯಕ ಬಸವರಾಜು ಸೇರಿ 30 ನಕ್ಸಲರು ಹತ್ಯೆಗೀಡಾಗಿದ್ದಾರೆ. ಎನ್‌ಕೌಂಟರ್ ನಲ್ಲಿ ರಾಜ್ಯ ಪೊಲೀಸ್ ಜಿಲ್ಲಾ ಮೀಸಲು ಪಡೆಯ ಒಬ್ಬ ಸಿಬ್ಬಂದಿ ಹುತಾತ್ಮರಾಗಿದ್ದು, ಇನ್ನು ಕೆಲವು ಮಂದಿ ಗಾಯಗೊಂಡಿದ್ದಾರೆ. ನಂಬಲ ಕೇಶವ ರಾವ್ ಅಲಿಯಾಸ್ ಬಸವ ರಾಜು 1960ರ ದಶಕದ ನಿಷೇಧಿತ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ (ಮಾವೋವಾದಿ) ಸಂಘಟನೆಯ ಪ್ರಧಾನ ಕಾರ್ಯದರ್ಶಿ ಆಗಿದ್ದರು ಎನ್ನಲಾಗಿದೆ. ಉನ್ನತ ನಕ್ಸಲ್ ನಾಯಕನ ಹತ್ಯೆ ಮಾಡುವ ಮೂಲಕ ಐತಿಹಾಸಿಕ ಯಶಸ್ಸು ದೊರ ಕಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಕ್ಸಲ್ ನಿಗ್ರಹ; ಚಾರಿತ್ರಿಕ ಸಾಧನೆ: ಛತ್ತೀಸಗಢದಲ್ಲಿ ಬುಧವಾರ ನಡೆದ ನಕ್ಸಲ್ ನಿಗ್ರಹ ಕಾರ್ಯಾಚರಣೆ ಯನ್ನು 'ಚಾರಿತ್ರಿಕ ಸಾಧನೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ. ಈ ಕಾರ್ಯಾ ಚರಣೆಗಾಗಿ ನಮ್ಮ ಧೈರ್ಯಶಾಲಿ ಭದ್ರತಾ ಪಡೆಗಳನ್ನು ಅಭಿನಂದಿಸುತ್ತೇನೆ. ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ ಕಾರ್ಯಾಚರಣೆಯ ಬಳಿಕ ಛತ್ತೀಸಗಢ, ತೆಲಂಗಾಣ ಮತ್ತು ಮಹಾರಾಷ್ಟ್ರದಲ್ಲಿ 54 ನಕ್ಸಲರನ್ನು ಬಂಧಿಸಲಾಗಿದ್ದು, 84 ನಕ್ಸಲರು ಶರಣಾಗಿದ್ದಾರೆ. 2026ರ ಮಾರ್ಚ್ 31ರೊಳಗಾಗಿ ನಕ್ಸಲ್ ನಿರ್ಮೂಲನೆ ಮಾಡಲು ಕೇಂದ್ರ ಸರಕಾರ ಬದ್ಧವಾಗಿದೆ ಎಂದು ಪುನರುಚ್ಚರಿಸಿದ್ದಾರೆ.

- ನಾರಾಯಪುರ-ಬಿಜಾಪುರ -ದಂತೇವಾಡ ಜಿಲ್ಲೆಯ ಗಡಿಯಲ್ಲಿರುವ ದಟ್ಟಾರಣ್ಯದಲ್ಲಿ ಎನ್‌ಕೌಂಟರ್
- ನಕ್ಸಲರ ಇರುವಿಕೆಯ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳಿಂದ ಕಾರ್ಯಾಚರಣೆ
- ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶ, ಮುಂದುವರಿದ ಭದ್ರತಾ ಪಡೆಗಳ ಕಾರ್ಯಾಚರಣೆ

ತನಿಖೆಗೆ ಸಿಪಿಐ(ಎಂ) ಒತ್ತಾಯ

ಮಾವೋವಾದಿಗಳ ಹತ್ಯೆ ಕುರಿತು ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸಿಪಿಐ (ಎಂ) ಬುಧವಾರ ಒತ್ತಾಯಿಸಿದೆ. ನಕ್ಸಲ್ ವಿರೋಧಿ ಕಾರ್ಯಾಚರಣೆ ಹೆಸರಿನಲ್ಲಿ ಸರಕಾರವು ಕಾನೂನುಬಾಹಿರ ಕ್ರಮ ಕೈಗೊಂಡಿರುವುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರು ಗೃಹ ಸಚಿವ ಅಮಿತ್ ಶಾ ಅವರ ಪೋಸ್ಟ್ ಉಲ್ಲೇಖಿಸಿ ಆಗ್ರಹಿಸಿದ್ದಾರೆ.

ಸೋನಿಯಾ ವಿರುದ್ಧ ಸಾಕ್ಷ್ಯ: ಇ.ಡಿ ವಾದ

ದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ 'ಪ್ರಾಥಮಿಕವಾಗಿ ಹಣ ವರ್ಗಾವಣೆ ಪ್ರಕರಣ' ದಾಖಲಾಗಿದೆ ಎಂದು ಇ.ಡಿ. ಬುಧವಾರ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ. ಈ ವಿಷಯವನ್ನು ಪರಿಗಣಿಸಬೇಕೆ ಬೇಡವೇ ಎಂಬ ಬಗ್ಗೆ ಆರಂಭಿಕ ಸಲ್ಲಿಕೆಗಳ ಸಂದರ್ಭದಲ್ಲಿ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರ ಮುಂದೆ ಇ.ಡಿ ಹೇಳಿಕೆ ನೀಡಿತು. ಈ ಪ್ರಕರಣದಲ್ಲಿ ತನ್ನ ಆರೋಪ ಪಟ್ಟಿಯ ಪ್ರತಿಯನ್ನು ದೂರುದಾರ ಸುಬ್ರಮಣಿಯನ್ ಸ್ವಾಮಿ ಅವರಿಗೆ ಒದಗಿಸುವಂತೆ ನ್ಯಾಯಾಧೀಶರು ಸೂಚಿಸಿದ್ದಾರೆ.

ಡಾ.ಸಲೀಂ ಹೊಸ ಡಿಜಿ-ಐಜಿ

ಬೆಂಗಳೂರು: ಕರ್ನಾಟಕದ ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿ ಮತ್ತು ಐಜಿಪಿ) ಹಿರಿಯ ಐಪಿಎಸ್ ಅಧಿಕಾರಿ ಹಾಗೂ ಕನ್ನಡಿಗ ಡಾ.ಎಂ.ಎ.ಸಲೀಂ ಅವರನ್ನು ನೇಮಕ ಮಾಡಿ ಸರಕಾರ ಆದೇಶ ಹೊರಡಿಸಿದೆ. ಸದ್ಯ ಹಂಗಾಮಿ ಡಿಜಿ-ಐಜಿಯಾಗಿರುವ ಡಾ.ಎಂ.ಎ.ಸಲೀಂರಿಗೆ ಬುಧವಾರ ಡಾ.ಅಲೋಕ್ ಮೋಹನ್ ಅಧಿಕಾರ ಹಸ್ತಾಂತರಿಸಿದರು.

ಮುನಿರತ್ನ ವಿರುದ್ಧ ಮತ್ತೊಂದು ಪ್ರಕರಣ



ಬೆಂಗಳೂರು: ಶಾಸಕ ಮುನಿರತ್ನ ವಿರುದ್ಧ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಅತ್ಯಾಚಾರ ಪ್ರಕರಣ ದಾಖಲಾಗಿದೆ. 2013ರಲ್ಲಿ ಸಾಮೂಹಿಕ ಅತ್ಯಾಚಾರ ನಡೆದಿದ್ದ ಬಗ್ಗೆ ಸಂತ್ರಸ್ತೆ ಬಿಜೆಪಿ ಕಾರ್ಯಕರ್ತೆಯೊಬ್ಬರು ದೂರು ನೀಡಿದ್ದಾರೆ. ಶಾಸಕರ ಕಚೇರಿಯಲ್ಲೇ ಅತ್ಯಾಚಾರ ಎಸಗಲಾಗಿತ್ತು. ಅಷ್ಟೇ ಅಲ್ಲದೆ, ವೈರಸ್ ಇಂಜೆಕ್ಷನ್ ಚುಚ್ಚಿದ್ದರು. ಅದರಿಂದಾಗಿ ಇಡಿಆರ್ ಕಾಯಿಲೆ ಬಂದಿದೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಮುನಿರತ್ನ ಬೆಂಬಲಿಗರಾದ ವಸಂತ, ಚನ್ನಕೇಶವ, ಕಮಲ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕನ್ನಡ ಬರಲ್ಲ ಎಂದ ಎಸ್‌ಬಿಐ ಬ್ಯಾಂಕ್ ವ್ಯವಸ್ಥಾಪಕಿ ಎತ್ತಂಗಡಿ

ಬೆಂಗಳೂರು: ಕನ್ನಡ ಮಾತನಾಡುವ ವಿಷಯಕ್ಕೆ ಕೆಆರ್ ಎಸ್ ಪಕ್ಷದ ಮುಖಂಡ ಮಹೇಶ್ ಮತ್ತು ಚಂದಾಪುರ ಸೂರ್ಯಸಿಟಿ ಎಸ್‌ಬಿಐ ಶಾಖೆಯ ವ್ಯವಸ್ಥಾಪಕಿ ನಡುವೆ ಮಾತಿನ ಚಕಮಕಿ ನಡೆದಿದ್ದು, 'ಕನ್ನಡ ಬರಲ್ಲ, ಮಾತನಾಡಲ್ಲ' ಎಂಬ ಬಿಗುಮಾನಕ್ಕೆ ವರ್ಗಾವಣೆ ಶಾಸ್ತಿ ದೊರೆತಿದೆ.

ಕೆಆರ್‌ಎಸ್ ಪಕ್ಷದ ಮುಖಂಡ ಮಹೇಶ್ ಅವರು ತಾಲೂಕಿನ ಚಂದಾಪುರ ಸೂರ್ಯಸಿಟಿಯಲ್ಲಿನ ಎಸ್‌ಬಿಐ ಬ್ಯಾಂಕ್‌ಗೆ ಬೆಳಗ್ಗೆ 10.30 ಬಂದರೂ ಸಿಬ್ಬಂದಿ ಕೆಲಸ ಮಾಡುತ್ತಿಲ್ಲ ಎಂಬುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ವೇಳೆ ವಾಗ್ವಾದ ವಿಕೋಪಕ್ಕೆ ತಿರುಗಿದಾಗ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕಿ ಸಿಂಗ್ ಹಿಂದಿಯಲ್ಲಿ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಮಹೇಶ್ ಕನ್ನಡದಲ್ಲಿ ಮಾತನಾಡುವಂತೆ ಒತ್ತಾಯಿಸಿದ್ದಾರೆ. ಆದರೆ ಶಾಖಾ ವ್ಯವಸ್ಥಾಪಕಿಯು ಕನ್ನಡ ಕಡ್ಡಾಯವಾಗಿ ಮಾತನಾಡಬೇಕೆಂದು ಎಲ್ಲಿಯೂ ಹೇಳಿಲ್ಲ. ಹಾಗಾಗಿ ಕನ್ನಡ ಮಾತನಾಡುವುದಿಲ್ಲ ಎಂದು ಇಂಗ್ಲಿಷ್‌ನಲ್ಲಿ ವಾದ ಮಾಡಿದ್ದಾರೆ. ಕರ್ನಾಟಕದಲ್ಲಿರುವ ಕಾರಣ ಪ್ರಾದೇಶಿಕ ಭಾಷೆ ಕನ್ನಡ ಮಾತನಾಡಿ ಎಂದಾಗ ಇದು ಭಾರತ, ಹಾಗಾಗಿ ಕನ್ನಡ ಮಾತನಾಡು

ವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿರುವುದು ಜಾಲತಾಣದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಬ್ಯಾಂಕಿನ ಹಿರಿಯ ಅಧಿಕಾರಿಗಳು ಬಂದು ಎರಡೂ ಕಡೆ ವಾದ ಆಲಿಸಿ ಶಾಖಾ ವ್ಯವಸ್ಥಾಪಕಿಯನ್ನು ವರ್ಗಾವಣೆ ಮಾಡಿದ್ದಾರೆ.

ಕನ್ನಡ ಭಾಷೆ ತರಬೇತಿ ನೀಡಿ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಿಎಂ ಸಿದ್ದರಾಮಯ್ಯ, ಎಸ್‌ಬಿಐ ಬ್ಯಾಂಕ್ ಮ್ಯಾನೇಜರ್ ವರ್ತನೆ ಖಂಡನೀಯ, ಅವರನ್ನು ತಕ್ಷಣವೇ ವರ್ಗಾಯಿಸಿ ಕ್ರಮ ತೆಗೆದುಕೊಂಡ ಎಸ್‌ಬಿಐ ಕ್ರಮ ಶ್ಲಾಘನೀಯವಾಗಿದೆ. ಹಣಕಾಸು ಸಚಿವರು ಮತ್ತು ಹಣಕಾಸು ಸೇವೆಗಳ ಇಲಾಖೆ ಕ್ರಮ ಕೈಗೊಂಡು ಎಲ್ಲ ಸಿಬ್ಬಂದಿಗೆ ಆಯಾ ರಾಜ್ಯಗಳ ಸ್ಥಳೀಯ ಭಾಷೆ ಬಗ್ಗೆ ತರಬೇತಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ನಟಿ ರನ್ಯಾ ರಾವ್ ಹಣ ವರ್ಗಾವಣೆ ಪ್ರಕರಣಕ್ಕೆ ತಳುಕು

ಪರಂ ಶಿಕ್ಷಣ ಸಂಸ್ಥೆಗಳ ಮೇಲೆ ಇ.ಡಿ ದಾಳಿ

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಪ್ರಕರಣಕ್ಕೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಒಡೆತನದ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೇಲಿನ ಇ.ಡಿ ದಾಳಿಗೂ ಸಂಬಂಧವಿರುವ ಬಗ್ಗೆ ಸ್ಫೋಟಕ ಮಾಹಿತಿ ಬಹಿರಂಗವಾಗಿದೆ.

ರನ್ಯಾ ರಾವ್ ಮತ್ತು ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ನಡುವೆ ಹಣ ವರ್ಗಾವಣೆ ನಡೆದಿರುವ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಈ ವಿಷಯವು ತುಮಕೂರಿನ ಸಿದ್ಧಾರ್ಥ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ (ಎಸ್‌ಎಸ್ ಐಟಿ) ಮತ್ತು ಹೆಗ್ಗೆರೆಯ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದೆ ಎಂದು ತಿಳಿದುಬಂದಿದೆ.

'ಹಣ ವರ್ಗಾವಣೆ ಆರೋಪ': ತನಿಖಾಧಿಕಾರಿಗಳ ಪ್ರಕಾರ, ರನ್ಯಾ ರಾವ್‌ರ ಚಿನ್ನ ಕಳ್ಳಸಾಗಣೆಯಿಂದ ಬಂದ ಹಣವು ಸಿದ್ಧಾರ್ಥ ಕಾಲೇಜಿನ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿರಬಹುದು ಎಂಬ

ರನ್ಯಾ ರಾವ್ ವಿದೇಶದಿಂದ ಚಿನ್ನ ತಂದು ಹಲವು ಪ್ರಮುಖರಿಗೆ ಕೊಟ್ಟಿರುವ ಮಾಹಿತಿ ಇದೆ. ಈ ಹಣ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಲ್ಲಿ ಹೂಡಿಕೆ ಮಾಡುತ್ತಿದ್ದ ಬಗ್ಗೆ ಇ.ಡಿ ಮಾಹಿತಿ ಸಂಗ್ರಹಿಸಿರಬಹುದು. ಹಾಗಾಗಿ ಈ ದಾಳಿ ನಡೆದಿದೆ. ಈ ಪ್ರಕರಣ ಸರಕಾರಕ್ಕೆ ಮುಜುಗರ ತಂದಿದೆ.
-ಆರ್.ಅಶೋಕ ಪ್ರತಿಪಕ್ಷ ನಾಯಕ

ಅನುಮಾನ ವ್ಯಕ್ತವಾಗಿದೆ. ವ್ಯಾಪಾರಕ್ಕೆ ಸಂಬಂಧಿಸಿದ ಹೂಡಿಕೆಗಳ ಬಗ್ಗೆ ಇ.ಡಿ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕಾಗಿ ಮೇ 21ರಂದು ತುಮಕೂರಿನ ಸಿದ್ಧಾರ್ಥ ಕಾಲೇಜಿನ ಆಡಳಿತ ಕಚೇರಿಗಳಲ್ಲಿ ಇ.ಡಿ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದೆ. ಈ ಹಣ ವರ್ಗಾ ವಣೆಯ ಉದ್ದೇಶ ಮತ್ತು ಕಾನೂನುಬದ್ಧತೆಯನ್ನು ತನಿಖೆಯಿಂದ ದೃಢೀಕರಿಸಿಕೊಂಡಿದೆ.

ರನ್ಯಾ ರಾವ್ ಪ್ರಕರಣ ಸ್ಥಿತಿಗತಿ: ರನ್ಯಾ ರಾವ್, ಮಾರ್ಚ್ 3, 2025ರಂದು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 14.8 ಕೆಜಿ ಚಿನ್ನದೊಂದಿಗೆ ಜಾರಿ ನಿರ್ದೇಶನಾ ಲಯ (ಡಿಆರ್‌ಐ) ಅಧಿಕಾರಿ ಗಳಿಂದ ಬಂಧಿತರಾಗಿದ್ದರು. ವಿಶೇಷ ನ್ಯಾಯಾಲ ಯವು ರನ್ಯಾ ರಾವ್‌ಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ, ಆದರೆ ಕಾಫಿಪೋಸಾ ಕಾಯಿದೆಯಡಿಯಲ್ಲಿ ದೂರು ದಾಖಲಾಗಿರುವುದರಿಂದ ಆಕೆಯ ಬಿಡುಗಡೆ ಸಾಧ್ಯವಾಗಿಲ್ಲ. ಈ ಕಾಯ್ದೆಯು ಕಠಿಣ ಕಾನೂನಾಗಿದ್ದು, ಜಾಮೀನು ದೊರೆತರೂ ಬಿಡುಗಡೆಗೆ ತಡೆಯೊಡ್ಡುತ್ತದೆ. ಸದ್ಯ ರನ್ಯಾ ರಾವ್ ಜೈಲಿನಲ್ಲಿದ್ದಾಳೆ.

ಕುಖ್ಯಾತ ರೌಡಿಶೀಟರ್ ಗಾಂಜಾ ಮನೋಜ್ ಬಂಧನ

ಬೆಂಗಳೂರು: ಕುಖ್ಯಾತ ರೌಡಿಶೀಟರ್ ಗಾಂಜಾ ಮನೋಜ್ ಅಲಿಯಾಸ್ ಜಾಕಿಯನ್ನು ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಜಿಗಣಿ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಜಿಗಣಿ ಮಾದಾಪಟ್ಟಣದ ಬಳಿ ಕೆಲ ತಿಂಗಳ ಹಿಂದೆ ಎರಡು ಗುಂಪುಗಳ ನಡುವೆ ನಡೆದ ಗಲಾಟೆ ವೇಳೆ ಬೈಕ್ ಸವಾರನಿಂದ ಬೈಕ್ ಕಸಿದು ಪರಾರಿಯಾಗಿ, ತಲೆ ಮರೆಸಿಕೊಂಡಿದ್ದ. ಮನೋಜ್ ಬನ್ನೇರುಘಟ್ಟ, ಸೂರ್ಯನಗರ, ಅತ್ತಿಬೆಲೆ, ಬೆಂಗಳೂರಿನ ಕುಂಬಳಗೋಡು ಸೇರಿದಂತೆ ಮತ್ತಿತರೆಡೆ ನಡೆದ ಅಪರಾಧ ಪ್ರಕರಣಗಳಲ್ಲಿ ಬೇಕಾಗಿದ್ದ. ಮನೋಜ್ ನವೆಂಬರ್ 18 ರಂದು ತನ್ನ ಅಕ್ಕನ ಮದುವೆಯ ಕರೆಯೋಲೆ ಹಂಚಲು ಹೋದಾಗ ಮಾದಾಪಣ್ಣಟದ ಬಳಿ ಏಕಾಏಕಿ ಗುಂಪೊಂದು ದಾಳಿ ಮಾಡಿತ್ತು. ಮನೋಜ್ ಮಹಾರಾಷ್ಟ್ರಕ್ಕೆ ತೆರಳಲು ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಬರುವ ಮಾಹಿತಿ ತಿಳಿದು ಪೊಲೀಸರು ಬಂಧಿಸಿದ್ದಾರೆ. ಕೊಲೆ, ಸುಲಿಗೆ, ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮನೋಜ್ ಇದೀಗ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದಾನೆ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	1. ಶ್ರೀ.ಅಮಿತಾಭ ಮೊಹಾಪತ್ರ ಬಿನ್ ಶ್ರೀ.ಮಹೇಶ್ವರ ಮೊಹಾಪತ್ರ **2. ಶ್ರೀಮತಿ ಅಪರಾಜಿತ ಮೊಹಾಪತ್ರ** ಕೋಂ. ಶ್ರೀಅಮಿತಾಭ ಮೊಹಾಪತ್ರ **ಇವರಿಬ್ಬರ ವಿಳಾಸ:** 305, ಮಹಾವೀರ್ ಹೋಮ್ಸ್ ಬಂಡೆಮಟ್, ಕೆ.ಎಸ್. ಟೌನ್ ಕೆಂಗೇರಿ, ಉಪನಗರ, ಬೆಂಗಳೂರು, ಕರ್ನಾಟಕ – 560060. **ಮತ್ತೊಂದು ವಿಳಾಸ:** ಫ್ಲಾಟ್ ಸಂಖ್ಯೆ ಎಫ್ಎಫ್3, 1ನೇ ಮಹಡಿ, ಎಸ್ವಿ ಗ್ಯಾಲಕ್ಸಿ, ಸರ್ವೆ ನಂ.209 (ಪಿ0, 210 (ಪಿ), 211 & 206(ಪಿ) ನಿವೇಶನ ನಂ.41, 42, 43,50,51,52, ಕೆಂಗೇರಿ ಬೆಂಗಳೂರು–560060. **ಶ್ರೀಮತಿ ಅಪರಾಜಿತ ಮೊಹಾಪತ್ರ** ಕೋಂ. ಶ್ರೀ ಅಮಿತಾಭ ಮೊಹಾಪತ್ರ, ಭುಯಾನ್‌ಮಹಲಾ (ಭಾಗ) ಗ್ರಾಮ ಭದ್ರಕ್ ಟೌನ್, ಭದ್ರಕ್ ಜಿಲ್ಲೆ, ಭದ್ರಕ್, ಒರಿಸ್ಸಾ–756100.	**ಈ ಆಸ್ತಿಯು ಶ್ರೀ ಅಮಿತಾಭ ಮೊಹಾಪತ್ರ ಮತ್ತು ಶ್ರೀಮತಿ ಅಪರಾಜಿತಾ ಮೊಹಾಪತ್ರ ಅವರಿಗೆ ಸೇರಿದೆ** **ಷೆಡ್ಯೂಲ್ "ಎ" ಆಸ್ತಿಯ (ನಿವೇಶನದ ಒಟ್ಟು ವಿಸ್ತೀರ್ಣ):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ನಿವೇಶನ ನಂ.41,42,43,50,51,52 ಮತ್ತು ವಿಲೀನಗೊಂಡ ಬಿಡಿಎ ಖಾತಾ ಸಂಖ್ಯೆ.41 ರಿಂದ 43/50 ರಿಂದ 52/2013–14, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 36.58 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 36.57 ಮೀಟರ್, ಒಟ್ಟು 1337.7306 ಚದರ ಮೀಟರ್, ಸ್ಥಳ: ಕೆಂಗೇರಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರಿನಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: 10.66 ಮೀಟರ್ ರಸ್ತೆ, ಪಶ್ಚಿಮಕ್ಕೆ: 10.66 ಮೀಟರ್ ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ.49 ಮತ್ತು 44, ದಕ್ಷಿಣಕ್ಕೆ: ನಿವೇಶನ ಸಂಖ್ಯೆ.53 ಮತ್ತು 40. **ಷೆಡ್ಯೂಲ್ "ಬಿ" ಆಸ್ತಿ :** ಷೆಡ್ಯೂಲ್ 'ಎ' ಆಸ್ತಿಯ ಭೂಮಿಯಲ್ಲಿ 284 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಹೊಂದಿದೆ ಎಂದು ಇಲ್ಲಿ ಖರೀದಿದಾರರಿಗೆ ತಿಳಿಸಲಾಗುವುದು. **ಷೆಡ್ಯೂಲ್ "ಸಿ" ಆಸ್ತಿ :** ಫ್ಲಾಟ್ ನಂ.ಎಫ್ಎಫ್3, "ಎಸ್.ವಿ. ಗ್ಯಾಲಕ್ಸಿ" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ಮೊದಲನೇ ಮಹಡಿಯಲ್ಲಿದೆ, 1205 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್–ಅಪ್ ಪ್ರದೇಶವನ್ನು ಹೊಂದಿದ್ದು, ಎರಡು ಬೆಡ್ ರೂಮ್‌ಗಳು, ಹಾಲ್, ಅಡುಗೆಮನೆ, ಒಂದು ಅಟ್ಯಾಚ್ಡ್ ಬಾತ್ರೂಮ್ ಹೊಂದಿರುವ ಡೈನಿಂಗ್ ಮತ್ತು ಶೌಚಾಲಯಗಳು, ಯುಟಿಲಿಟಿ ಮತ್ತು ಬಾಲ್ಕನಿಗಳನ್ನು ಹೊಂದಿರುವ ಒಂದು ಸಾಮಾನ್ಯ ಸ್ನಾನಗೃಹ ಮತ್ತು ನೆಲಮಾಳಿಗೆಯ ಮಹಡಿಯಲ್ಲಿ "ನಂ.ಎಫ್ಎಫ್3" ಎಂದು ಗುರುತಿಸಲಾದ ಒಂದು ಕಾರ್ ಪಾರ್ಕಿಂಗ್ ಅನ್ನು ಒಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234 ರವರನ್ನು ಸಂಪರ್ಕಿಸಿ.**	30.04.2025 ಎನ್‌ಪಿಎ ದಿನಾಂಕ 08.01.2025	POWER HOME Loan A/c No. PHR000901757986 Rs.17,59,950/- O/s Amount: Rs.16,68,687/- POWER HOME VANILLA BRE Loan A/c No. HTR000902473111 Rs.3,50,000/- O/s Amount: Rs.3,32,146/- ಒಟ್ಟು ಬಾಕಿ ಮೊತ್ತ ರೂ. 20,00,833/– ದಿನಾಂಕ: 30.04.2025 ರಂದು ಇದ್ದಂತೆ
2	1. ಶ್ರೀ ತನ್ವೀರ್ ಸಿಂಗ್ ಬಿನ್ ಶ್ರೀ ಪರ್ಮಿಂದರ್ ಸಿಂಗ್, ನಂ.131,1ನೇ ಮಹಡಿ, 7ನೇ ಮುಖ್ಯರಸ್ತೆ, ಕರ್ನಾಟಕ ಆದಾಯ ತೆರಿಗೆ, ಎಚ್‌ಬಿಸಿಎಸ್ ಲೇಔಟ್, ಬೆಂಗಳೂರು–560040. **ಮತ್ತೊಂದು ವಿಳಾಸ:** ಮನೆ ನಂ.81 ಟವರ್ ಎನ್‌ಕ್ಲೇವ್ ಹಂತ 3, ನಕೋದರ್ ರಸ್ತೆ ವಡಾಲಾ ಚೌಕ್, ಜಲಂಧರ್, ಪಂಜಾಬ್–144001. **ಮತ್ತೊಂದು ವಿಳಾಸ:** ಫ್ಲಾಟ್ ಸಂಖ್ಯೆ 11 ಫಾರ್ಚುನಾ 1ಕಾನ್ 1ನೇ ಮಹಡಿ, ಸಹಕಾರ ನಗರ, ಬೆಂಗಳೂರು ಬೆಂಗಳೂರು–560092. **2. ಶ್ರೀಮತಿ ಪ್ರಿಯಾಂಕಾ ಬನ್ಸಾಲ್** ಕೋಂ. ಶ್ರೀ ತನ್ವೀರ್ ಸಿಂಗ್, ಕ್ವಾರ್ಟರ್ ನಂ.01, ಕಟ್ಟಡ ಸಂಖ್ಯೆ.1, ಎಎಐ ರೆಸಿಡೆನ್ಶಿಯಲ್ ಕಾಲೋನಿ ಇಂಫಾಲ್ ಏರ್‌ಪೋರ್ಟ್ ಪಿಒ ತುಲಿಹಾಲ್ ವಿಮಾನ ನಿಲ್ದಾಣ, ಇಂಫಾಲ್, ಮಣಿಪುರ–795140. **ಮತ್ತೊಂದು ವಿಳಾಸ:** ಫ್ಲಾಟ್ ಸಂಖ್ಯೆ 11 ಫಾರ್ಚುನಾ 1ಕಾನ್ 1ನೇ ಮಹಡಿ, ಸಹಕಾರ ನಗರ, ಬೆಂಗಳೂರು ಬೆಂಗಳೂರು–560092.	**ಈ ಆಸ್ತಿಯು ಶ್ರೀ ತನ್ವೀರ್ ಸಿಂಗ್ & ಶ್ರೀಮತಿ ಪ್ರಿಯಾಂಕ ಬನ್ಸಾಲ್ ಅವರಿಗೆ ಸೇರಿದೆ** **ಷೆಡ್ಯೂಲ್ "ಎ" ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಪಕ್ಕದ ಭಾಗಗಳ ಸರ್ವೆ ನಂ.42/1ಬಿ, ಒಟ್ಟು ವಿಸ್ತೀರ್ಣ 24 ಗುಂಟೆಗಳು, ಇದು ಬ್ಯಾಟರಾಯನಪುರ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ, ದಿನಾಂಕ 16/08/2008 ರ ವಿಶೇಷ ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ, ನಂ. SLN.SR (NA): 20:2005/06 ಅನ್ನು ಹೊಂದಿದ್ದು, ಇದರ ಚಕ್ಕುಬಂದಿ ಪೂರ್ವಕ್ಕೆ: ಚಿತ್ರಕೂಟ ಅಪಾರ್ಟ್‌ಮೆಂಟ್‌ಗಳು, ಪಶ್ಚಿಮಕ್ಕೆ: ಎನ್. ಚನ್ನಕೇಶವ ಮೂರ್ತಿ ರವರ ಆಸ್ತಿ, ಉತ್ತರಕ್ಕೆ: ಜಯರಾಮನ್ ಮತ್ತು ಅವರ ಸಹೋದರರ ಆಸ್ತಿ, ದಕ್ಷಿಣಕ್ಕೆ: ಎನ್. ಆದಿರಾಮ್ ಪಿಳ್ಳೈ ಸುಬ್ರಮಣಿ ಆಸ್ತಿ **ಷೆಡ್ಯೂಲ್ "ಬಿ" ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಫ್ಲಾಟ್ ಸಂಖ್ಯೆ ಎಫ್–11 ಮೊದಲನೇ ಮಹಡಿಯಲ್ಲಿರುವ 'ಎಫ್' ಬ್ಲಾಕ್‌ನ ವಿಸ್ತೀರ್ಣ 1494 ಚದರ ಅಡಿಯಲ್ಲಿ ಲಿವಿಂಗ್, ಅಡುಗೆಮನೆ, ಉಪಯುಕ್ತತೆ, ಮೂರು (3) ಶೌಚಾಲಯಗಳು, ಎರಡು (2) ಬಾಲ್ಕನಿಗಳು, ಮೂರು (3) ಮಲಗುವ ಕೋಣೆಗಳು ಮತ್ತು ನೆಲಮಾಳಿಗೆಯಲ್ಲಿ ಒಂದು (1) ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳ ಮತ್ತು 709.25 ಚದರ ಅಡಿಗಳನ್ನು ಅವಿಭಾಜಿತ ಪಾಲು ಹಕ್ಕು ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ಸಂಖ್ಯೆ 9916566630. ರವರನ್ನು ಸಂಪರ್ಕಿಸಿ.**	30.04.2025 ಎನ್‌ಪಿಎ ದಿನಾಂಕ 01.01.2025	POWER HOME Loan A/c No. PHR056101399306 Rs. 57,00,000/- ಒಟ್ಟು ಬಾಕಿ ಮೊತ್ತ ರೂ. 29,81,262/– ದಿನಾಂಕ: 30.04.2025 ರಂದು ಇದ್ದಂತೆ
3	**1. ಶ್ರೀ. ಸರವಣನ್ ಎಸ್** ಬಿನ್ ಶ್ರೀ. ಶ್ರೀನಿವಾಸನ್ ಕಂಗಮುತ್ತು **2. ಶ್ರೀಮತಿ. ಅನು,** ಶ್ರೀ. ಸರವಣನ್ ಎಸ್, **ಇವರಿಬ್ಬರ ವಿಳಾಸ:** 358, 4ನೇ ಕ್ರಾಸ್, 2ನೇ ಮೇನ್ ಸೌತ್ ಅವೆನ್ಯೂ ಲೇಔಟ್, ಜೆಪಿ ನಗರ ಗೊಟ್ಟಿಗೆರೆ, ಬೆಂಗಳೂರು–560083. **ಮತ್ತೊಂದು ವಿಳಾಸ:** ಫ್ಲಾಟ್ ಸಂಖ್ಯೆ. 205, 2ನೇ ಮಹಡಿ ಆನಂದ್ ಎನ್‌ಕ್ಲೇವ್, ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು, ಕರ್ನಾಟಕ–560078.	**ಈ ಆಸ್ತಿಯು ಶ್ರೀ ಸರವಣನ್ ಎಸ್ ಅವರಿಗೆ ಸೇರಿದೆ** **ಷೆಡ್ಯೂಲ್ "ಎ" ಆಸ್ತಿ: ಐಟಂ ನಂ.1:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಪರಿವರ್ತಿತ ನಿವೇಶನ ಸಂಖ್ಯೆ 374, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಮತ್ತು ಉತ್ತರ ಭಾಗದಲ್ಲಿ 102 ಚದರ ಅಡಿ (31.1 ಮೀ), ದಕ್ಷಿಣ ಭಾಗದಲ್ಲಿ 104 ಚದರ ಅಡಿ (31.7 ಮೀಟರ್) ಉತ್ತರದಿಂದ ದಕ್ಷಿಣಕ್ಕೆ. ಪೂರ್ವ ಭಾಗದಲ್ಲಿ 95 ಅಡಿ (28.96 ಮೀಟರ್) ಪಶ್ಚಿಮ ಭಾಗದಲ್ಲಿ 80 ಅಡಿ (24.39 ಮೀಟರ್) ಒಟ್ಟು ವಿಸ್ತೀರ್ಣ 9012 ಚದರ ಅಡಿ (837.47 ಚದರ ಮೀಟರ್) ಪರಿವರ್ತಿತ ಸರ್ವೆ ನಂ. 8/3, 8/6, 13/1, 13/2, 16/2, 28/3, 30(ಪಿ), 31/1, 31/2, 31/3, 31/4, 31/5, 31/6ಎ, 31/6ಬಿ, 31/7, 31/10, 32/1, 32/2, 35/1, 35/2, 35/3, 36/4, 36/7 ಮತ್ತು 39/2 ಮತ್ತು "ರಾಯಲ್ ಕೌಂಟಿ" ಎಂದು ಕರೆಯಲ್ಪಡುವ ಲೇಔಟ್, ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ.194, ಗೊಟ್ಟಿಗೆರೆ, ಬೆಂಗಳೂರಿನ ವ್ಯಾಪ್ತಿಯಲ್ಲಿದೆ, ಮತ್ತು ಎಲ್ಲಾ ಹಕ್ಕುಗಳು ಮತ್ತು ಪರಿಕರಗಳೊಂದಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.384, 385, ಮತ್ತು 386, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.373, ದಕ್ಷಿಣಕ್ಕೆ: ನಿವೇಶನ ನಂ.381 ಮತ್ತು 381ಎ. **ಐಟಂ ನಂ.2:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.373, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 102 ಚದರ ಅಡಿ, (31.15 ಮೀ) ಉತ್ತರದಿಂದ ದಕ್ಷಿಣಕ್ಕೆ 80 ಅಡಿ (24.40 ಮೀಟರ್) ಒಟ್ಟು ವಿಸ್ತೀರ್ಣ 8160 ಚದರ ಅಡಿ (760.06 ಚದರ ಮೀಟರ್) ಪರಿವರ್ತಿತ ಸರ್ವೆ ನಂ. 8/3, 8/6, 13/1, 13/2, 16/2, 28/3, 30(ಪಿ), 31/1, 31/2, 31/3, 31/4, 31/5, 31/6ಎ, 31/6ಬಿ, 31/7, 31/10, 32/1, 32/2, 35/1, 35/2, 35/3, 36/4, 36/7 ಮತ್ತು 39/2 ಮತ್ತು "ರಾಯಲ್ ಕೌಂಟಿ" ಎಂದು ಕರೆಯಲ್ಪಡುವ ಲೇಔಟ್, ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ.194, ಗೊಟ್ಟಿಗೆರೆ, ಬೆಂಗಳೂರಿನ ವ್ಯಾಪ್ತಿಯಲ್ಲಿದೆ, ಮತ್ತು ಎಲ್ಲಾ ಹಕ್ಕುಗಳು ಮತ್ತು ಪರಿಕರಗಳೊಂದಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.386, 387, ಮತ್ತು 388, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.372, ದಕ್ಷಿಣಕ್ಕೆ: ನಿವೇಶನ ನಂ.374. **ಷೆಡ್ಯೂಲ್ 'ಬಿ' ಆಸ್ತಿ :** 366.58 ಚದರ ಅಡಿ. ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿ ಮತ್ತು ಮಾಲೀಕತ್ವವನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ಹೊಂದಿದೆ. **ಷೆಡ್ಯೂಲ್ 'ಸಿ' ಆಸ್ತಿ :** ಎಲ್ಲಾ ವಸತಿ ಅಪಾರ್ಟ್‌ಮೆಂಟ್ ಹೊಂದಿರುವ ಫ್ಲಾಟ್ ನಂ.205 ಇದು 2ನೇ ಮಹಡಿಯಲ್ಲಿರುವ "ಆನಂದ್ ಎನ್‌ಕ್ಲೇವ್" ಎಂದು ಕರೆಯಲ್ಪಡುವ ಬಹುಮಹಡಿ ಕಟ್ಟಡವು 1560 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್ ಅಪ್ ಪ್ರದೇಶದಲ್ಲಿ ನಿರ್ಮಿಸಲಾಗಿದೆ, ಇದು 3 (ಮೂರು) ಮಲಗುವ ಕೋಣೆಗಳು, ಸ್ನಾನಗೃಹಗಳು, ಶೌಚಾಲಯುಗಳು, ಅಡುಗೆಮನೆಯನ್ನು ಒಳಗೊಂಡಿದೆ, ಪ್ಯಾಸೇಜ್‌ಗಳು, ಲಾಬಿಗಳು, ಮೆಟ್ಟಿಲುಗಳು, ಲಿಫ್ಟ್ ಟೆರೇಸ್, ಕಾರಿಡಾರ್‌ಗಳು, ಓವರ್‌ಹೆಡ್ ಟ್ಯಾಂಕ್, ಸಂಪ್ ನೀರು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳು ಮತ್ತು ಒಂದು ಕಾರ್ ಪಾರ್ಕಿಂಗ್ ಪ್ರದೇಶದಂತಹ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಹೊಂದಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ. ಪಶ್ಚಿಮಕ್ಕೆ: ಫ್ಲಾಟ್ ಸಂಖ್ಯೆ.206, ಉತ್ತರಕ್ಕೆ: ಫ್ಲಾಟ್ ಸಂಖ್ಯೆ.204, ದಕ್ಷಿಣಕ್ಕೆ: ಖಾಸಗಿ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್ ಮೊಬೈಲ್ ನಂ. 9916566630 ರವರನ್ನು ಸಂಪರ್ಕಿಸಿ**	30.04.2025 ಎನ್‌ಪಿಎ ದಿನಾಂಕ 03.12.2024	POWER HOME VANILLA BRE Loan A/c No. PHR168802635875 Rs.53,24,160/- ಒಟ್ಟು ಬಾಕಿ ಮೊತ್ತ ರೂ. 47,21,808/– ದಿನಾಂಕ: 30.04.2025 ರಂದು ಇದ್ದಂತೆ
4	**1. ಶ್ರೀಮತಿ ಪ್ರಮೀಳಾ ಎಸ್ ಕೋಂ.** ಶ್ರೀ ಮಾಸಿಲಾಮಣಿ ಸ್ಯಾಮ್ಯುಲ್, 172/ಎ, 6ನೇ ಕ್ರಾಸ್ ಪಿಲ್ಲಣ್ಣ ಗಾರ್ಡನ್, 1ನೇ ಹಂತ ಬೆಂಗಳೂರು ಉತ್ತರ, ಸೇಂಟ್, ಥಾಮಸ್ ಟೌನ್, ಬೆಂಗಳೂರು–560084. **1. ಶ್ರೀಮತಿ ಪ್ರಮೀಳಾ ಎಸ್ ಕೋಂ.** ಶ್ರೀ ಮಾಸಿಲಾಮಣಿ ಸ್ಯಾಮ್ಯುಲ್, **2. ಶ್ರೀ ಮಾಸಿಲಾಮಣಿ ಸ್ಯಾಮ್ಯುಲ್,** ಬಿನ್ ಶ್ರೀ ಮಾಸಿಲಾಮಣಿ ಡೇವಿಡ್ ಸ್ಯಾಮ್ಯುಲ್, **ಇವರಿಬ್ಬರ ವಿಳಾಸ:** 73, 1ನೇ ಕ್ರಾಸ್, ಪಿಲ್ಲಣ್ಣ ಗಾರ್ಡನ್, 1ನೇ ಹಂತ, 1ನೇ ಥಾಮಸ್ ಟೌನ್ ಬೆಂಗಳೂರು–560084. **ಮತ್ತೊಂದು ವಿಳಾಸ:** ಫ್ಲಾಟ್ ಸಂಖ್ಯೆ 438 ಧೀರನ್ ನೆಟ್‌ವರ್ಕ್ಸ್ ಮೆಡೋಸ್, ಸರ್ವೆ ನಂ.292 ಇಗ್ಗಲೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560099.	**ಈ ಆಸ್ತಿಯು ಶ್ರೀಮತಿ ಪ್ರಮೀಳಾ ಎಸ್ & ಶ್ರೀಮತಿ ಮಾಸಿಲಾಮಣಿ ಸ್ಯಾಮ್ಯುಲ್ ರವರಿಗೆ ಸೇರಿದೆ** **ಷೆಡ್ಯೂಲ್ "ಎ" ಆಸ್ತಿ:** (ಇಡೀ ಆಸ್ತಿಯಲ್ಲಿ ನಿರ್ಮಿಸಲಾದ ಅಪಾರ್ಟ್‌ಮೆಂಟ್ ಕಟ್ಟಡ): ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಪರಿವರ್ತಿತ ಭೂಮಿಯ ಸರ್ವೆ ನಂ.29/2 (ಅಧಿಕೃತ ಜ್ಞಾಪಕ ಪತ್ರ ಸಂಖ್ಯೆ BDS.ALN.(A): SR:424/2004-05 ಹೊಂದಿರುವ ಪರಿವರ್ತನೆ ಆದೇಶವನ್ನು ದಿನಾಂಕ 11.02.2005 ರಂದು ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು ಹೊರಡಿಸಿದ್ದಾರೆ), ಇದು ಇಗ್ಗಲೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ, ವಿಸ್ತೀರ್ಣ 1 ಎಕರೆ 26 ಗುಂಟೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಚಂದ್ರ ರೆಡ್ಡಿರವರಿಗೆ ಸೇರಿದ ಜಮೀನು, ಉತ್ತರಕ್ಕೆ : ನಾರಾಯಣಪ್ಪರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ : ತಿಮ್ಮರಾಯ ರೆಡ್ಡಿರವರಿಗೆ ಸೇರಿದ ಜಮೀನು. **ಷೆಡ್ಯೂಲ್ 'ಬಿ' ಆಸ್ತಿ:** (ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾದ ಫ್ಲಾಟ್) : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಎರಡು (2) ಬಿಎಚ್‌ಕೆ, ಬ್ಲಾಕ್ ಬಿ, 3ನೇ ಮಹಡಿಯಲ್ಲಿರುವ ಫ್ಲಾಟ್ ಸಂಖ್ಯೆ 438, 900 ಚದರ ಅಡಿ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿದೆ. ಹಾಗೂ 285 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಭೂಮಿ/ಷೆಡ್ಯೂಲ್ ಎ ಆಸ್ತಿಯಲ್ಲಿ ಹೊಂದಿದೆ. ಸ್ಟಿಲ್ಟ್/ನೆಲಮಾಳಿಗೆಯ ಮಹಡಿಯಲ್ಲಿ ಒಂದು ಕಾರ್ ಪಾರ್ಕಿಂಗ್ ಸ್ಥಳವಿದೆ. ಇದು 'ಧೀರಾನ್ ನ್ಯೂಯಾರ್ಕ್ ಮೆಡೋಸ್' ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ಭಾಗವಾಗಿದೆ. ಇದು ಷೆಡ್ಯೂಲ್ 'ಎ' ಆಸ್ತಿಯ ಮೇಲೆ ಆರ್‌ಸಿಸಿ ಫ್ರೇಮ್ಡ್ ರಚನೆ, ಕಾಂಕ್ರೀಟ್ ಬ್ಲಾಕ್ ಕಲ್ಲು, ಮುಖ್ಯ ಬಾಗಿಲು ಅಮೇರಿಕನ್ ತೇಗದ ಚೌಕಟ್ಟು ಮತ್ತು ಸ್ಟೀಮ್ ಬ್ರೀಚ್ ವೆನಿಯರ್ಡ್ ಫ್ಲಶ್ ಶಟರ್ ಮತ್ತು ಕೋಣೆಯ ಬಾಗಿಲುಗಳು ವಾಟರ್ ಪ್ರೂಫ್ ಫ್ಲಶ್ ಶಟರ್‌ಗಳೊಂದಿಗೆ ಸಾಲ್ ವುಡ್, ಗ್ಲಾಸ್ ಮತ್ತು ಸೇಫ್ಟಿ ಗ್ರಿಲ್‌ಗಳೊಂದಿಗೆ ಪೌಡರ್ ಲೇಪಿತ ಅಲ್ಯೂಮಿನಿಯಂ ಕಿಟಕಿಗಳು, ವಿಟ್ರಿಫೈಡ್ ಫ್ಲೋರಿಂಗ್ ಇತ್ಯಾದಿಗಳನ್ನು ಹೊಂದಿದೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ಡಿಯುಸಿಟಿ & ಫ್ಲಾಟ್ ಸಂಖ್ಯೆ.439, ಪಶ್ಚಿಮಕ್ಕೆ: ಡಿಯುಸಿಟಿ & ಫ್ಲಾಟ್ ಸಂಖ್ಯೆ.437, ಉತ್ತರಕ್ಕೆ: ಕಾರಿಡಾರ್, ದಕ್ಷಿಣಕ್ಕೆ : ಡಿಯುಸಿಟಿ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ನಂ.9916566630 ರವರನ್ನು ಸಂಪರ್ಕಿಸಿ**	30.04.2025 ಎನ್‌ಪಿಎ ದಿನಾಂಕ 01.01.2025	POWER HOME VANILLA BRE Loan A/c No. PHR168804436927 Rs.22,53,500/- ಒಟ್ಟು ಬಾಕಿ ಮೊತ್ತ ರೂ. 13,62,360/– ದಿನಾಂಕ: 30.04.2025 ರಂದು ಇದ್ದಂತೆ
5	**1. ಶ್ರೀ ಸುಭೇಂದು ಘೋಷ್** ಬಿನ್ ಶ್ರೀ ನಕುಲ್ ಚಂದ್ರ ಘೋಷ್ **2. ಶ್ರೀ. ಸುಚಿಸ್ಮಿತಾ ಘೋಷ್** ಕೋಂ. ಶ್ರೀ ಸುಭೇಂದು ಘೋಷ್ **ಇವರಿಬ್ಬರ ವಿಳಾಸ:** ಮನೆ ನಂ.204, ಜೇ ವಿಲ್ಲಾ, ಮುನೇಶ್ವರ ದೇವಸ್ಥಾನದ ಬೀದಿ, ಕೋಡಿಹಳ್ಳಿ ಬೆಂಗಳೂರು, ಕರ್ನಾಟಕ–560008. **ಮತ್ತೊಂದು ವಿಳಾಸ:** ಮನೆ ನಂ.17, ವಿದ್ಯಾಸಾಗರ್ ಪಥ್ ಉಲ್ಯಾನ್ ಕಡ್ಮಾ, ಜಾರ್ಖಂಡ್–831005. **ಮತ್ತೊಂದು ವಿಳಾಸ:** ಫ್ಲಾಟ್ ನಂ– ಡಿ–201, 2ನೇ ಮಹಡಿ, ಸರ್ವೆ ನಂ–53/11, ಕಸವನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು–560034.	**ಈ ಆಸ್ತಿಯು ಶ್ರೀ ಸುಭೇಂದು ಘೋಷ್ ರವರಿಗೆ ಸೇರಿದೆ** **ಷೆಡ್ಯೂಲ್ 'ಎ' ಆಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಸತಿ ಪರಿವರ್ತಿತ ಭೂಮಿಯ ಸರ್ವೆ ನಂ.53/1 ಮತ್ತು 54, ವಿಸ್ತೀರ್ಣ 9 ಎಕರೆಗಳು, ಇದು ಕಸವನಹಳ್ಳಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ (ಹಿಂದೆ ದಕ್ಷಿಣ) ತಾಲ್ಲೂಕಿನಲ್ಲಿದೆ, ವಿಶೇಷ ಜಿಲ್ಲಾಧಿಕಾರಿ ಹೊರಡಿಸಿದ ಅಧಿಕೃತ ಜ್ಞಾಪಕ ಸಂಖ್ಯೆ B.DIS.ALN.SR.(S)270/91-92 ದಿನಾಂಕ 20.04.1992 ರ ಪ್ರಕಾರ ಕೃಷಿಯೇತರ/ವಸತಿಯೇತರ ಉದ್ದೇಶಗಳಿಗಾಗಿ ಸರಿಯಾಗಿ ಪರಿವರ್ತಿಸಲಾಗಿದೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ಸಂಖ್ಯೆ 53/1 ಮತ್ತು 54 ರ ಉಳಿದ ಭಾಗ, ಪಶ್ಚಿಮಕ್ಕೆ: ಮಿಲಿಟರಿಯವರ ಆಸ್ತಿ; ಉತ್ತರಕ್ಕೆ: ರಸ್ತೆ; ಮತ್ತು ದಕ್ಷಿಣಕ್ಕೆ: ಮಿಲಿಟರಿಯವರ ಆಸ್ತಿ. **ಷೆಡ್ಯೂಲ್ 'ಬಿ' ಆಸ್ತಿ:** "ಎವರ್‌ಗ್ರೀನ್ಸ್" ಎಂದು ಕರೆಯಲ್ಪಡುವ ವಸತಿ ಅಪಾರ್ಟ್‌ಮೆಂಟ್ ಸಂಕೀರ್ಣದ ಸಂಖ್ಯೆ ಡಿ 201, ಎರಡನೇ ಮಹಡಿ, ಬ್ಲಾಕ್ ಸಂಖ್ಯೆ ಡಿ ಹೊಂದಿರುವ ಎರಡು ಮಲಗುವ ಕೋಣೆ ಅಪಾರ್ಟ್‌ಮೆಂಟ್, 927 ಚದರ ಅಡಿ ಸೂಪರ್ ಬಿಲ್ಟ್–ಅಪ್ ಪ್ರದೇಶದೊಂದಿಗೆ ಸಾಮಾನ್ಯ ಪ್ರದೇಶಗಳು, ಪ್ಯಾಸೇಜ್‌ಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಇತರ ಸಾಮಾನ್ಯ ಬಳಕೆಯ ಪ್ರದೇಶಗಳಲ್ಲಿ ಅನುಪಾತದ ಪಾಲು ಮತ್ತು 1 ನೇ ಸಂಖ್ಯೆಯ ಮುಚ್ಚಿದ ಕಾರ್ ಪಾರ್ಕ್ ಅನ್ನು ಬಳಸುವ ವಿಶೇಷ ಹಕ್ಕು ಜೊತೆಗೆ ಮೇಲೆ ಪಟ್ಟಿ ಮಾಡಲಾದ ಷೆಡ್ಯೂಲ್ 'ಎ' ನಲ್ಲಿ ವಿವರಿಸಿದ ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು 371 ಚದರ ಅಡಿ ವಿಸ್ತೀರ್ಣದ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಹೊಂದಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್ ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ**	30.04.2025 ಎನ್‌ಪಿಎ ದಿನಾಂಕ 01.01.2025	POWER HOME Loan A/c No. PH0090100214393 Rs.24,86,000/- ಒಟ್ಟು ಬಾಕಿ ಮೊತ್ತ ರೂ. 8,90,868/– ದಿನಾಂಕ: 30.04.2025 ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 21.05.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಅಧಿಕಾರ ಹಸ್ತಾಂತರಿಸಿದ ಅಲೋಕ್ ಮೋಹನ್ | 3 ತಿಂಗಳಲ್ಲಿ ಕಾಯಂಗೊಳಿಸಲು ಚಿಂತನೆ

ಪ್ರಭಾರಿ ಡಿಜಿ-ಐಜಿಪಿಯಾಗಿ ಡಾ.ಸಲೀಂ ಅಧಿಕಾರ

ಬೆಂಗಳೂರು: ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿಐಜಿಪಿ) ಹುದ್ದೆಗೆ ಪ್ರಭಾರಿ ಯಾಗಿ ಸಿಐಡಿ ಡಿಜಿಪಿ ಡಾ.ಎಂ.ಎ.ಸಲೀಂ ಅವರು ನೇಮಕವಾಗಿದ್ದಾರೆ.

ಅಲೋಕ್ ಮೋಹನ್ ಅವರ ನಿವೃತ್ತಿಯಿಂದ ತೆರವಾಗಿದ್ದ ಡಿಜಿ–ಐಜಿಪಿ ಹುದ್ದೆಯನ್ನು ಪ್ರಭಾರಿಯಾಗಿ ಡಾ.ಎಂ.ಎ.ಸಲೀಂ ಅವರು ಬುಧವಾರ ಸಂಜೆ ಅಧಿಕಾರ ವಹಿಸಿಕೊಂಡಿದ್ದಾರೆ. ಕೆಲ ದಿನಗಳ ಮಟ್ಟಿಗೆ ಪ್ರಭಾರಿ ಡಿಜಿ–ಐಜಿಪಿ ಯಾಗಿ ಸಲೀಂ ಅವರನ್ನು ನೇಮಿಸಿದ್ದು, ತದನಂತರ ಕೇಂದ್ರ ಲೋಕಸೇವಾ ಆಯೋಗದ ಸಮ್ಮತಿ ಬಳಿಕ ಅವರನ್ನು ಕಾಯಂಗೊಳಿಸಲು ರಾಜ್ಯ ಸರಕಾರ ಮುಂದಾಗಿದೆ.

ಸೇವಾ ಹಿರಿತನ ಆಧಾರದ ಮೇರೆಗೆ ಡಿಜಿ–ಐಜಿಪಿ ಹುದ್ದೆಗೆ ಅಗ್ನಿಶಾಮಕ ದಳದ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ಸಿಐಡಿ ಡಿಜಿಪಿ ಸಲೀಂ, ಸೈಬರ್ ವಿಭಾಗದ ಡಿಜಿಪಿ ಪ್ರಣವ್ ಮೊಹಂತಿ ಸೇರಿ 7 ಮಂದಿ ಹಿರಿಯ ಐಪಿಎಸ್ ಅಧಿಕಾರಿಗಳಿದ್ದಾರೆ. ಸೇವಾ ಹಿರಿತನದ ಮಾನದಂಡದಲ್ಲಿ ಡಿಜಿ–ಐಜಿಪಿ ಹುದ್ದೆಗೆ ಪ್ರಶಾಂತ್ ಕುಮಾರ್ ಠಾಕೂರ್ ಮುಂಚೂಣಿಯ ಲ್ಲಿದ್ದು, 2ನೇ ಸ್ಥಾನದಲ್ಲಿ ಸಲೀಂ ಅವರಿದ್ದರು. ಸಿಎಂ ಸಿದ್ದರಾಮಯ್ಯ ಅವರ ಒಲವು ಹೊಂದಿದ್ದ ಸಲೀಂ ಅವರು ನೂತನ ಡಿಜಿ–ಐಜಿಪಿ ಹುದ್ದೆಯನ್ನು ಪ್ರಭಾರಿಯಾಗಿ ಅಲಂಕರಿಸಿದ್ದಾರೆ.

ಈಗಾಗಲೇ ನೂತನ ಡಿಜಿ–ಐಜಿಪಿ ಆಯ್ಕೆ ಸಂಬಂಧ 7 ಹಿರಿಯ ಐಪಿಎಸ್ ಅಧಿಕಾರಿಗಳ ಹೆಸರನ್ನು ಕೇಂದ್ರ ಲೋಕಸೇವಾ ಆಯೋಗಕ್ಕೆ ಸರಕಾರ ಶಿಫಾರಸು ಮಾಡಿದೆ. ಆದರೆ ಯುಪಿಎಸ್‌ನಿಂದ ಅನುಮತಿ(ಕ್ಲಿಯರೆನ್ಸ್) ಸಿಗದ ಕಾರಣ ಮೊದಲು 3 ತಿಂಗಳು ಪ್ರಭಾರ ಡಿಜಿ–ಐಜಿಪಿ ನೇಮಕವಾಗಿದೆ. ಯುಪಿಎಸ್‌ಸಿ ಸಮ್ಮತಿ ಬಳಿಕ ಕಾಯಂ ಡಿಜಿ–ಐಜಿಪಿ ಆಗಲಿದ್ದಾರೆ ಎಂದು ಮೂಲಗಳು ಹೇಳಿವೆ. ಕಳೆದ ಏ.30 ರಂದು ಅಲೋಕ್ ಮೋಹನ್ ಅವರು ನಿವೃತ್ತರಾಗಬೇಕಿತ್ತು. ಆದರೆ ಮೇ 21ರವರೆಗೆ ಡಿಜಿಐಜಿಪಿ ಅವರ ಸೇವಾವಧಿ ವಿಸ್ತರಿಸಿದ್ದ ಸರಕಾರ, ಮುಂದಿನ ಡಿಜಿಐಜಿಪಿ ಹುದ್ದೆಗೆ ಸಂಭವನೀಯ ಅಧಿಕಾರಿಗಳ ಪಟ್ಟಿ ಯುಪಿಎಸ್‌ಸಿಗೆ ಕಳುಹಿಸಿತ್ತು. ಹೀಗಾಗಿ ಎರಡು ವರ್ಷಗಳ ಆಡಳಿತ ನಡೆಸಿದ ಹಾಲಿ ಡಿಜಿ–ಐಜಿಪಿ ಅಲೋಕ್ ಮೋಹನ್ ಅವರ ಸೇವಾವಧಿ ಬುಧವಾರಕ್ಕೆ ಮುಕ್ತಾಯವಾಗಿದೆ.

ಡಿಜಿ ಸ್ಥಾನದಿಂದ ನಿವೃತ್ತಿಯಾಗುವ ಕೆಲ ಗಂಟೆಗಳ ಮೊದಲು ಕೆಪಿಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಲೋಕ್ ಮೋಹನ್ ಅವರು ಡಿಜಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಸಲೀಂ ಹಾಗೂ ಪ್ರಶಾಂತ್ ಕುಮಾರ್ ಠಾಕೂರ್ ಅವರಿಗೆ ಹಸ್ತಲಾಘವ ನೀಡಿದ ಕ್ಷಣ.

ಯಾರು ಡಾ.ಎಂ.ಎ. ಸಲೀಂ?

ಜೂನ್ 25, 1966 ರಂದು ಬೆಂಗಳೂರಿನ ಸಮೀಪದ ಚಿಕ್ಕಬಾಣವರದಲ್ಲಿ ಜನಿಸಿದ ಡಾ. ಸಲೀಂ ಪ್ರಭಾವಶಾಲಿ ಶೈಕ್ಷಣಿಕ ಹಿನ್ನೆಲೆ ಹೊಂದಿದ್ದಾರೆ. ಅವರು 1989 ರಲ್ಲಿ ವಾಣಿಜ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ನಂತರ 1993 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪೊಲೀಸ್ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. 2010 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಚಾರ ನಿರ್ವಹಣೆಯಲ್ಲಿ ಡಾಕ್ಟರೇಟ್ ಪಡೆಯುವ ಮೂಲಕ ಅವರು ತಮ್ಮ ಶಿಕ್ಷಣ ಮತ್ತಷ್ಟು ಮುಂದುವರಿಸಿದರು. ಡಾ. ಸಲೀಂ ಯುಪಿಎಸ್ಸಿ ಪರೀಕ್ಷೆಯ ಮೂಲಕ ಆಯ್ಕೆಯಾದರು ಮತ್ತು 1993 ರಲ್ಲಿ ಕರ್ನಾಟಕ ಕೇಡರ್‌ನ ಭಾಗವಾಗಿ ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಸೇರಿದರು. ಪ್ರಸ್ತುತ ಅಪರಾಧ ತನಿಖಾ ಇಲಾಖೆಯ (ಸಿಐಡಿ) ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಅವರು ತಮ್ಮ ವೃತ್ತಿಜೀವನದುದ್ದಕ್ಕೂ ವಿವಿಧ ಮಹತ್ವದ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಕಲಬುರಗಿ, ಕುಶಾಲನಗರ ಮತ್ತು ಸಾಗರ ಉಪವಿಭಾಗಗಳಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ ಹಾಗೂ ಉಡುಪಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿದ ಅನುಭವ ಅವರದು. ಹೆಚ್ಚುವರಿಯಾಗಿ, ಅವರು ಬೆಂಗಳೂರು ನಗರದಲ್ಲಿ ಸಹಾಯಕ ಪೊಲೀಸ್ ಮಹಾನಿರ್ದೇಶಕರಾಗಿ (ಅಪರಾಧ) ಮತ್ತು ಮೈಸೂರು ನಗರದಲ್ಲಿ ಉಪ ಪೊಲೀಸ್ ಆಯುಕ್ತರಾಗಿ ಕೆಲಸ ಮಾಡಿದ್ದಾರೆ.

ಕಾನೂನು ಜಾರಿಯಲ್ಲಿ ಅಪಾರ ಅನುಭವ

ಗಮನಾರ್ಹವಾಗಿ, ಡಾ. ಸಲೀಂ ಮೈಸೂರು ನಗರದಲ್ಲಿ ಪೊಲೀಸ್ ಆಯುಕ್ತರಾಗಿದ್ದಾಗ ಜಾರಿಗೆ ತಂದ ನವೀನ ಸಂಚಾರ ಸುಧಾರಣೆಗಳಿಗಾಗಿ ಗಮನ ಸೆಳೆದಿದ್ದಾರೆ. ಸಂಚಾರ ನಿರ್ವಹಣೆಯಲ್ಲಿನ ಅವರ ಪರಿಣತಿ ಮತ್ತು ಕಾನೂನು ಜಾರಿಯಲ್ಲಿನ ಅವರ ವ್ಯಾಪಕ ಅನುಭವವು, ಕರ್ನಾಟಕ ಪೊಲೀಸ್ ಪಡೆಗಳನ್ನು ಸಾರ್ವಜನಿಕ ಸುರಕ್ಷತೆ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯ ಹೊಸ ಯುಗಕ್ಕೆ ಕೊಂಡೊಯ್ಯಲು ಅವರನ್ನು ಉತ್ತಮ ಸ್ಥಾನದಲ್ಲಿರಿಸಿದೆ.

ಬಿದರಿ ಬಳಿಕ ಕನ್ನಡಿಗ ಸಲೀಂ

ಶಂಕರ್ ಮಹಾದೇವ್ ಬಿದರಿ ಅವರ ಅಧಿಕಾರಾವಧಿಯ ನಂತರ, ಕನ್ನಡಿಗ ಯಾವುದೇ ಐಪಿಎಸ್ ಅಧಿಕಾರಿ ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರಾಗಿಲ್ಲ. ಬಿದರಿ ನಂತರ, ಲಾಲ್‌ರುಖುಮಾ ಪಚೌ, ಓಂ ಪ್ರಕಾಶ್ ರಾವ್, ನೀಲಮಣಿ ರಾಜು, ಆರ್. ಕೆ.ದತ್ತ, ಪ್ರವೀಣ್ ಸೂದ್ ಹಾಗೂ ಅಲೋಕ್ ಮೋಹನ್ ಡಿಜಿ–ಐಜಿಪಿ ಹುದ್ದೆ ಅಲಂಕರಿಸಿದ್ದರು. ಕನ್ನಡಿಗ ಅಧಿಕಾರಿಯೊಬ್ಬರು ಹಲವು ವರ್ಷಗಳ ಬಳಿಕ ರಾಜ್ಯ ಪೊಲೀಸ್ ಮುಖ್ಯಸ್ಥರ ಹುದ್ದೆ ಅಲಂಕರಿಸಿದ್ದು ಗಣನೀಯ ನಿರೀಕ್ಷೆ ಹುಟ್ಟುಹಾಕಿದೆ.

3.5 ಲಕ್ಷ ಮೌಲ್ಯದ ಚಿನ್ನಾಭರಣ ಕಳವು: ಆರೋಪಿ ಬಂಧನ

ಬೆಂಗಳೂರು: ಮದುವೆ ಕಾರ್ಯದಲ್ಲಿ ಎಲ್ಲರೂ ತರಾತುರಿಯ ಸಮಯದಲ್ಲಿದ್ದಾಗ ಕಲ್ಯಾಣ ಮಂಟಪಕ್ಕೆ ನುಗ್ಗಿದ ಕಳ್ಳನೊಬ್ಬ, ನಕಲಿ ಕೀ ಬಳಸಿ ವಧುವಿನ ಕೊಠಡಿ ಪ್ರವೇಶಿಸಿದ್ದಲ್ಲದೇ ಸೂಟ್‌ಕೇಸ್‌ನಲ್ಲಿ ಇಡಲಾಗಿದ್ದ ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ. ಆರೋಪಿಯನ್ನು ಬಂಧಿಸಿರುವ ನೆಲಮಂಗಲ ಟೌನ್ ಪೊಲೀಸರು, ಚಿನ್ನಾಭರಣವನ್ನ ವಾರಸುದಾರರಿಗೆ ವಾಪಸ್ ನೀಡಿದ್ದಾರೆ.

ಬಂಧಿತ ಆರೋಪಿ ದಾವಣಗೆರೆ ಮೂಲದ ಕಿರಣ್ ಅಲಿಯಾಸ್ ಚೌಲ್ಟ್ರಿ ಕಿರಣ್ (25) ಎಂದು ಗುರುತಿಸಲಾಗಿದೆ. ಈ ಬಗ್ಗೆ ನೆಲಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಆರೋಪಿಯನ್ನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಮೇ 14 ಮತ್ತು 15 ರಂದು ನಗರದ ಎಂವಿಎಂ ಕಲ್ಯಾಣ ಮಂಟಪದಲ್ಲಿ ಉದ್ಯಮಿ ವೆಂಕಟೇಶ್ ಅವರ ಮಗಳ ಮದುವೆ ಕಾರ್ಯ ನಡೆದಿತ್ತು. ಮದುವೆ ಸಮಾರಂಭದಲ್ಲಿ ತಮ್ಮನ ಮಗಳು ನಯನಾ ಬಂದಿದ್ದರು. ಮೇ 15ರ ಬೆಳಗ್ಗೆ 11 ಗಂಟೆ ಸಮಯದಲ್ಲಿ ನಯನಾ ಕಲ್ಯಾಣ ಮಂಟಪದಲ್ಲಿನ ಹೆಣ್ಣಿನ ಕೊಠಡಿಯಲ್ಲಿನ ಸೂಟ್ ಕೇಸ್‌ನಲ್ಲಿ ಸಮಾರು 3.5 ಲಕ್ಷ ಮೌಲ್ಯದ 40 ಗ್ರಾಂ ತೂಕದ ಚಿನ್ನದ ಚೈನ್ ಇಟ್ಟು ಮದುವೆ ಕಾರ್ಯದಲ್ಲಿ ಬ್ಯುಸಿಯಾಗಿದ್ದರು. ಮದುವೆ ಮುಗಿದ ನಂತರ ಮನೆಗೆ ಬಂದು ಸೂಟ್ ಕೇಸ್ ಪರಿಶೀಲನೆ ಮಾಡಿದಾಗ ಚಿನ್ನದ ಚೈನ್ ಕಳವಾಗಿರುವುದು ಬೆಳಕಿಗೆ ಬಂದಿತ್ತು. ವೆಂಕಟೇಶ್ ಅವರು ಮೇ 15ರಂದು ಈ ಬಗ್ಗೆ ನೆಲಮಂಗಲ ಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಟೌನ್ ಪೊಲೀಸರು ಮಂಟಪದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಆರೋಪಿಯ ಸುಳಿವು ಸಿಕ್ಕಿದೆ. ನಕಲಿ ಕೀ ಬಳಸಿ ಹೆಣ್ಣಿನ ಕೊಠಡಿಗೆ ಹೋಗಿ ಬರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಪತ್ತೆಯಾಗಿತ್ತು. ಮೇ.16 ರಂದು ಆರಕ್ಷಕ ನಿರೀಕ್ಷಕ ಭರತ್ ಗೌಡ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಎಎಸ್‌ಐ ರಘು ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಮಿಂಚಿನ ಕಾರ್ಯಾಚರಣೆ ನಡೆಸಿ ದಾವಣಗೆರೆಯಲ್ಲಿ ಕುಖ್ಯಾತ ಕಳ್ಳ ಕಿರಣ್ ಅಲಿಯಾಸ್ ಚೌಲ್ಟ್ರಿ ಕಿರಣ್‌ನನ್ನು ಬಂಧಿಸಿದೆ. ಬಂಧಿತನಿಂದ 3.5 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

ಮೋಜು ಮಸ್ತಿಗಾಗಿ ಕಳ್ಳತನ

ಆರೋಪಿ ಕಿರಣ್ ಮೋಜು ಮಸ್ತಿಗಾಗಿ ಕಳ್ಳತನ ನಡೆಸುತ್ತಿರುವುದು ತನಿಖೆಯಿಂದ ತಿಳಿದುಬಂದಿದೆ. ಅಂದು ಕಲ್ಯಾಣ ಮಂಟಪದ ವಧುವಿನ ಕೊಠಡಿಯಲ್ಲಿಟ್ಟಿದ್ದ ಬೆಲೆ ಬಾಳುವ ಚಿನ್ನಾಭರಣಗಳನ್ನ ಕದ್ದು ಮಾರಾಟ ಮಾಡಿದ್ದ ಕಿರಣ್, ಅದರಿಂದ ಬಂದ ಹಣದಲ್ಲಿ ಮೋಜು ಮಸ್ತಿ ಮಾಡಿದ್ದ. ಮೋಜು ಮಸ್ತಿ ಕಾರಣಕ್ಕಾಗಿ ಈತನ ಹೆಸರು ಕಿರಣ್ ಅಲಿಯಾಸ್ ಚೌಲ್ಟ್ರಿ ಕಿರಣ್ ಎಂಬ ಕುಖ್ಯಾತಿಗೆ ಪಾತ್ರನಾಗಿದ್ದ. ಅಲ್ಲದೇ ಆರೋಪಿಯು ದಾವಣಗೆರೆ, ಹುಬ್ಬಳ್ಳಿ ಸೇರಿದಂತೆ ವಿವಿಧ ಪೊಲೀಸ್ ಠಾಣೆಯಲ್ಲಿ ಕಳವು, ದರೋಡೆ, ಮನೆಕಳ್ಳತನ ಸೇರಿದಂತೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂಬುದು ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

169ನೇ ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿ ಸಭೆ

ಬೆಂಗಳೂರು: ರಾಜ್ಯದ 169ನೇ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ಸಭೆಯನ್ನು ವಿಧಾನಸೌಧದಲ್ಲಿ ಬುಧವಾರ ಯಶಸ್ವಿಯಾಗಿ ನಡೆಸಲಾಯಿತು.

2025–26 ನೇ ಸಾಲಿನ ವಾರ್ಷಿಕ ಕ್ರೆಡಿಟ್ ಯೋಜನೆಯ ಔಪಚಾರಿಕ ಉದ್ಘಾಟನೆಯೊಂದಿಗೆ ಹೊಂದಿಕೆಯಾಯಿತು. ಸಭೆಯ ಅಧ್ಯಕ್ಷತೆಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಾದ ಉಮಾ ಮಹಾದೇವನ್ ವಹಿಸಿದ್ದರು. ಬಳಿಕ ಮಾತನಾಡಿದ ಅವರು, ರಾಜ್ಯ ಸರಕಾರ, ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಂತಹ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಸಾರ್ವತ್ರಿಕ ವ್ಯಾಪ್ತಿಗೆ ತರುವುದು ಅಗತ್ಯ. ಕರ್ನಾಟಕದಾದ್ಯಂತ ಸಾಲ ಗುರಿ ಗಳನ್ನು ಸಾಧಿಸಲು ಮತ್ತು ಸಮಗ್ರ ಮತ್ತು ಸಮಾನ ಬೆಳವಣಿಗೆಯನ್ನು ಉತ್ತೇಜಿ ಸಲು ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅವರು ಪ್ರೋತ್ಸಾಹಿಸಿದರು. ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಎಸ್. ಕೆ. ಮಜುಂದಾರ್ ಮಾತನಾಡಿ, ಸರಕಾರಿ ಪ್ರಾಯೋಜಿತ ಯೋಜನೆಗಳ ಬಾಕಿ ಇರುವ ಅರ್ಜಿಗಳನ್ನು ನಿರ್ದಿಷ್ಟ ಸಮಯದೊಳಗೆ ವಿಲೇವಾರಿ ಮಾಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಹಣಕಾಸು ಇಲಾಖೆಯ ಸರಕಾರದ ಕಾರ್ಯದರ್ಶಿ ಡಾ. ವಿಶಾಲ್ ಅವರು ಜನಸುರಕ್ಷಾ ಯೋಜನೆಗಳ ವ್ಯಾಪ್ತಿಯಲ್ಲಿ ಎಲ್ಲಾ ಅರ್ಹ ಜನಸಂಖ್ಯೆಯ ವ್ಯಾಪ್ತಿಯ ಮಹತ್ವವನ್ನು ಹೇಳಿದರು.

- 2025–26ನೇ ಸಾಲಿನ ಒಟ್ಟು ಸಾಲ ಯೋಜನೆಯ ವೆಚ್ಚ 11,88,986 ಕೋಟಿ ರು.ಗೆ ನಿಗದಿ
- ಆದ್ಯತಾ ವಲಯದ ಕ್ರೆಡಿಟ್: 4,38,016 ಕೋಟಿ ರು. (ಒಟ್ಟು ಸಾಲದ 36.84%)
- ಕೃಷಿ ಸಾಲ: 2,22,204 ಕೋಟಿ ರು. (ಆದ್ಯತಾ ವಲಯ ಸಾಲದ 50.73%)
- ಬೆಳೆ ಉತ್ಪಾದನಾ ಸಾಲಗಳು: 1,40,108 ಕೋಟಿ ರು.
- ಎಂಎಸ್ಎಂಇ ಸಾಲ: 1,90,891 ಕೋಟಿ ರು.
- ಶಿಕ್ಷಣ ಸಾಲ: 2,222 ಕೋಟಿರು.
- ವಸತಿ ಸಾಲ: 11,678 ಕೋಟಿ ರು.
- ಇತರೆ ವಲಯಗಳು: 11,022 ಕೋಟಿ ರು.

ರೇಣುಕಾಸ್ವಾಮಿ ಕೊಲೆ: ದರ್ಶನ್, ಪವಿತ್ರಾಗೆ ತಾತ್ಕಾಲಿಕ ರಿಲೀಫ್



ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್, ಪವಿತ್ರಾ ಗೌಡಗೆ ಸುಪ್ರೀಂಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ರೇಣುಕಾಸ್ವಾಮಿ ಬರ್ಬರ ಹತ್ಯೆ ಪ್ರಕರಣದಲ್ಲಿ ದರ್ಶನ್ ಮತ್ತು ಗ್ಯಾಂಗ್ ಬಂಧನಕ್ಕೆ ಒಳಗಾಗಿತ್ತು. ಆರು ತಿಂಗಳ ಕಾಲ ಇವರು ಜೈಲಿನಲ್ಲಿ ಇದ್ದರು. 2014ರಲ್ಲಿ ಪ್ರಕರಣದ ಎಲ್ಲಾ ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿದೆ. ಆದರೆ, ಪ್ರಕರಣದ ಪ್ರಮುಖ ಏಳು ಆರೋಪಿಗಳಿಗೆ ಜಾಮೀನು ನೀಡಿದ್ದನ್ನು ಬೆಂಗಳೂರು ಪೊಲೀಸರು ಪ್ರಶ್ನೆ ಮಾಡಿದ್ದರು. ದರ್ಶನ್ ಜಾಮೀನು ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಮುಂದೂಡಿಕೆ ಆಗಿದೆ. ಸುಪ್ರೀಂಕೋರ್ಟ್‌ಗೆ ಬೇಸಿಗೆ ರಜೆ ಇದೆ. ಜುಲೈ 14ಕ್ಕೆ ಬೇಸಿಗೆ ರಜೆ ಅಂತ್ಯವಾಗಲಿದೆ. ಇದಾದ ಬಳಿಕ ವಿಚಾರಣೆ ನಡೆಸುವುದಾಗಿ ಸುಪ್ರೀಂಕೋರ್ಟ್ ಹೇಳಿದೆ. ವಿಚಾರಣೆ ದಿನಾಂಕ ಮುಂದಿನ ದಿನಗಳಲ್ಲಿ ಪ್ರಕಟ ಆಗಲಿದೆ.

ಸಹಕಾರ ಇಲಾಖೆ

ವಸೂಲಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ, ನಂ.146, "ಸಹಕಾರ ಸೌಧ" ಮಲ್ಲೇಶ್ವರಂ, 2ನೇ ಮಹಡಿ, 8ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರೂಲ್ 38(2)(ಡಿ) ರ ಅನ್ವಯ
ಬಾಕಿದಾರನಿಗೆ ಮತ್ತು ಡಿಕ್ರಿ ಹೊಂದಿದವರಿಗೆ ಮಾರಾಟದ ನೋಟೀಸ್

ಫಾರಂ ನಂ.9

ಅಮಲ್ಜಾರಿ ಸಂಖ್ಯೆ: ಎಆರ್‌ಬಿ–2/45/ಸಿಇಪಿ/27/2024–25
ದಾವಾದೇಶ ಸಂಖ್ಯೆ : ಯುಬಿಸಿ–3/ಡಿಐಎಸ್/2240/2023–24

ಪೂಜಾ ಮಹಿಳಾ ಪತ್ತಿನ ಸಹಕಾರ ಸಂಘ ನಿಯಮಿತ, ನಂ. 40/1, ಮಾಡೆಲ್ ಹೌಸ್ ಸ್ಟ್ರೀಟ್, ಬಸವನಗುಡಿ, ಬೆಂಗಳೂರು–560004, ಈ ಡಿಕ್ರಿ ಹೋಲ್ಡರ್, ಸಹಕಾರ ಸಂಘಕ್ಕೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು–560003 ಇವರ ನ್ಯಾಯಾಲಯದ ದಾವಾದೇಶ ಸಂಖ್ಯೆ: ಯುಬಿಸಿ–3/ಡಿಐಎಸ್/2240/2023–24 ದಿನಾಂಕ: 08–08–2024 ರಂತೆ ತೀರ್ಪುಋಣಿಗಳಾದ (1) ಶ್ರೀಮತಿ. ಚೆನ್ನಮ್ಮ ಕೋಂ ಕುಳ್ಳಯಪ್ಪ, ನಂ. 84, 1ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಜೆ.ಜೆ.ಆರ್ ನಗರ, ಬೆಂಗಳೂರು–560018. 2) ಶ್ರೀ. ಪ್ರಸನ್ನ ಕೆ ನಂ. 84, 1ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಜೆ.ಜೆ.ಆರ್ ನಗರ, ಬೆಂಗಳೂರು–560018. ರವರಿಂದ ದಿನಾಂಕ: 31–03–2025ರ ಅಂತ್ಯಕ್ಕೆ ರೂ. 34,22,648/– ಗಳ ಸಾಲವನ್ನು ಅಸಲಿನ ಮೇಲೆ ಶೇಕಡ 16.5% ರ ಬಡ್ಡಿ ಮತ್ತು ಕೋರ್ಟ್ ಫೀ ಹಾಗೂ ಇತರೆ ವೆಚ್ಚಗಳು ವಸೂಲಾಗಬೇಕಿದ್ದು, ದಾವಾದೇಶದಂತೆ ಈ ಬಾಕಿ ವಸೂಲಾತಿಗಾಗಿ ಸಾಲ ಪಡೆಯುವಾಗ ಡಿಕ್ರಿ ಹೋಲ್ಡರ್ ಸಂಘಕ್ಕೆ ಮಾಡಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ಥಿರ ಸ್ವತ್ತನ್ನು ದಿನಾಂಕ: 23–05–2025 ರಂದು ಶುಕ್ರವಾರ ಅಥವಾ ಸದರಿ ಹರಾಜು ಬೇರೆ ಯಾವ ತಾರೀಖಿಗೆ ಮುಂದುವರೆಸಿ ಇಡಲ್ಪಡುತ್ತದೋ ಆ ದಿವಸದಲ್ಲಿ ಬಹಿರಂಗ ಹರಾಜು ಮೂಲಕ ಈ ಕೆಳಕಂಡ ಸೂಚನೆಗಳನ್ವಯ ಮಾರಾಟ ಮಾಡಲಾಗುವುದು ಎಂದು ಈ ಬಹಿರಂಗ ಹರಾಜು ಪ್ರಕಟಣೆ ಹೊರಡಿಸಲಾಗಿದೆ. ಸದರಿ ಪ್ರಕಟಣೆಯನ್ನು ಲಗತ್ತಿಸಿದೆ. ಬಾಕಿದಾರನಿಗೆ ಮತ್ತು ತೀರ್ಪುಋಣಿಯವರಿಗೆ ಹಾಗೂ ಡಿಕ್ರಿ ಹೊಂದಿದ ಸಂಘಕ್ಕೆ ಈ ಮೂಲಕ ಮಾರಾಟದ ನೋಟೀಸನ್ನು ನೀಡಲಾಗಿದೆ.

ಸೂಚನೆಗಳು: 1) ಸಾರ್ವಜನಿಕ ಹರಾಜಿನ ಮೂಲಕ ಅತ್ಯಂತ ಹೆಚ್ಚು ಸವಾಲು ಕೂಗಿದವನಿಗೆ ಸ್ವತ್ತನ್ನು ಮಾರಾಟ ಮಾಡಲಾಗುವುದು, ಹರಾಜಿನಲ್ಲಿ ಬಂದ ಬೆಲೆಯು ಅತ್ಯಂತ ಕಡಿಮೆ ಎಂದು ಕಂಡುಬಂದಲ್ಲಿ ಅಥವಾ ಇತರೆ ಕಾರಣಗಳಿಗಾಗಿ ಅತ್ಯಂತ ಹೆಚ್ಚಿನ ಸವಾಲನ್ನು ನಿರಾಕರಿಸುವುದು ಮಾರಾಟಾಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ.

2) ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚಿತವಾಗಿ ರೂ. 20,000.00 (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಪ್ರಾರಂಭಿಕ ಠೇವಣಿಯನ್ನು ಪಾವತಿಸತಕ್ಕದ್ದು. ಈ ಹಣವನ್ನು ನಗದಾಗಿ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಸಲ್ಲಿಸುವ ಮೂಲಕ ಪಾವತಿಸುವುದು.

3) ಯಶಸ್ವಿಯಾದ ಬಿಡ್ಡುದಾರರು ಹರಾಜಿನಲ್ಲಿ ಖರೀದಿಸಲಾದ ಸ್ಥಿರ ಸ್ವತ್ತಿನ ಬೆಲೆಯ ಶೇ 15% ರಷ್ಟು ಹಣವನ್ನು ಖರೀದಿ ಸಮಯದಲ್ಲಿ ಖರೀದಿದಾರನ್ನು ಸಂದಾಯ ಮಾಡತಕ್ಕದ್ದು ಖರೀದಿ ಹಣದ ಉಳಿದ ಭಾಗವನ್ನು ಮತ್ತು ಮಾರಾಟ ಪ್ರಮಾಣ ಪತ್ರಕ್ಕೆ ಸಾಮಾನ್ಯ ಸ್ಟಾಂಪು ಅಂಟಿಸಲು ಅಗತ್ಯವಾದ ಮೊಬಲಗನ್ನು ಮಾರಾಟದ ದಿನಾಂಕದಿಂದ 45 ದಿವಸಗಳೊಳಗೆ ಸಂದಾಯ ಮಾಡತಕ್ಕದ್ದು. ಮೇಲೆ ನಮೂದಿಸಿರುವ ಅವಧಿಯೊಳಗೆ ಖರೀದಿ ಹಣದ ಉಳಿದ ಭಾಗವನ್ನು ಸಂದಾಯ ಮಾಡಲು ತಪ್ಪಿದಲ್ಲಿ ಆ ಠೇವಣಿಯನ್ನು ಮಾರಾಟದ ವೆಚ್ಚಗಳನ್ನು ಭರಿಸಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸಂದಾಯ ಮಾಡಲು ತಪ್ಪಿದ ಖರೀದಿದಾರನು ಆ ಸ್ವತ್ತಿಗೆ ಅಥವಾ ಅದನ್ನು ಆ ತರುವಾಯ ಮಾರಾಟ ಮಾಡಬಹುದಾದ ಹಣದ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಹೊಂದಿರುವ ಎಲ್ಲಾ ಕ್ಲೈಮ್‌ಗಳನ್ನು ಕಳೆದುಕೊಳ್ಳುವನ್ನು.

4) ಮಾರಾಟಕ್ಕೆ ಮೊದಲು ತೀರ್ಪುಋಣಿಯ ಅಥವಾ ಅವನ ಪರವಾಗಿ ವರ್ತಿಸುವ ಯಾವುದೇ ವ್ಯಕ್ತಿಯು ಅಥವಾ ಮಾರಾಟ ಮಾಡಲು ಉದ್ದೇಶಿಸಿದ ಸ್ವತ್ತಿನಲ್ಲಿ ಹಿತಾಸಕ್ತಿಯನ್ನು ಕ್ಲೈಮ್ ಮಾಡುವ ಯಾವುದೇ ವ್ಯಕ್ತಿಯು, ಬಾಕಿ ಇರುವ ಪೂರ್ಣ ಮೊಬಲಗನ್ನು ಅಸಲು, ಬಡ್ಡಿ, ಸ್ವತ್ತನ್ನು ಮಾರಾಟಕ್ಕೆ ತರುವಲ್ಲಿ ತಗುಲಿದ ವೆಚ್ಚಗಳೂ, ಜಪ್ತಿಯ ವೆಚ್ಚಗಳು ಸಹಿತ ಸಂದಾಯ ಮಾಡಿದಲ್ಲಿ ಹರಾಜನ್ನು ನಿಲ್ಲಿಸಲಾಗುವುದು.

5) ಸ್ಥಿರ ಸ್ವತ್ತನ್ನು ಮಾರಾಟ ಮಾಡುವಾಗ, ಅಂತಹ ಸ್ವತ್ತಿನ ಒಡೆತನ ಹೊಂದಿರುವ ಅಥವಾ ಅಂಥಹ ಮಾರಾಟಕ್ಕಡೆ ಮೊದಲು ಅರ್ಜಿಸಿದ ಹಕ್ಕಿನ ಮೂಲಕ ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿಯು ವಸೂಲಾಧಿಕಾರಿಗಳ ಬಳಿಯಲ್ಲಿ ಖರೀದಿ ಹಣದ ಶೇ.5 ರಷ್ಟು ಮೊತ್ತವನ್ನು ಖರೀದಿದಾರನಿಗೆ ಸಂದಾಯ ಮಾಡುವುದಕ್ಕಾಗಿ ಮತ್ತು ಡಿಕ್ರಿದಾರನಿಗೆ ಸಂದಾಯ ಮಾಡುವುದಕ್ಕಾಗಿ ಮಾರಾಟದ ಘೋಷಣೆಯಲ್ಲಿ ನಿರ್ದಿಷ್ಟಪಡಿಸಲಾದ ಬಾಕಿಗಳ ಮೊಬಲಗನ್ನು ಅಂದರೆ, ಯಾವ ಮೊಬಲಗಿನ ವಸೂಲಾತಿಯ ಸಲುವಾಗಿ ಮಾರಾಟಕ್ಕಾಗಿ ಆದೇಶ ಮಾಡಲಾಗಿದೆಯೋ ಆ ಮೊಬಲಗು ಮತ್ತು ಅದರ ಮೇಲಿನ ಬಡ್ಡಿ, ಜಪ್ತಿಯ ವೆಚ್ಚಗಳು ಮತ್ತು ಅಂತಹ ಮೊಬಲಗಿಗೆ ಸಂಬಧಪಟ್ಟಂತೆ ಬಾಕಿ ಇರುವ ಮಾರಾಟದ ಮತ್ತು ಇತರೆ ವೆಚ್ಚಗಳನ್ನು ಒಳಗೊಂಡಂತೆ, ಇವುಗಳನ್ನು ಅಂತಹ ಘೋಷಣೆಯ ದಿನಾಂಕದಿಂದ ಡಿಕ್ರಿದಾರನು ಸ್ವೀಕರಿಸಿದ ಮೊಬಲಗನ್ನು ಕಳೆದು ಉಳಿದ ಹಣವನ್ನು ಮಾರಾಟದ 30 ದಿನಗಳ ಒಳಗಾಗಿ ಠೇವಣಿ ಇಟ್ಟು ಮಾರಾಟವನ್ನು ರದ್ದುಗೊಳಿಸತಕ್ಕದೆಂದು ಕೋರಿ ಅರ್ಜಿಯನ್ನು ಅಲ್ಲಿಸಬಹುದು.

6) ಹರಾಜು ಸಮಯದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಸ್ವಂತಕ್ಕಾಗಿ ಬಿಡ್ಡು ಮಾಡುತ್ತಿದ್ದಾರೆಯೋ ಅಥವಾ ಅನ್ಯರ ಪರವಾಗಿ ಮಾಡುತ್ತಿದ್ದಾರೆಯೋ ಎಂಬ ಎಂಬ ಬಗ್ಗೆ ಮಾಹಿತಿಯನ್ನು ಮಾರಾಟಾಧಿಕಾರಿಗಳು ಅಪೇಕ್ಷಿಸಲ್ಪಡಬಹುದು, ಅನ್ಯರ ನಿಮಿತ್ತ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಅನ್ಯರಿಂದ ಈ ಬಗ್ಗೆ ಅವರ ಅನುಮತಿಯನ್ನು ತಾವು ಪಡೆದುಕೊಂಡಿರುವ ಬಗ್ಗೆ ಅಧಿಕಾರ ಪತ್ರವನ್ನು ಹಾಜರು ಪಡಿಸುವುದು. ಈ ಪ್ರಕಾರ ಹಾಜರುಪಡಿಸದಿದ್ದರೆ ಅವರು ಬಿಡ್ಡಿನಲ್ಲಿ ಭಾಗವಹಿಸಲು ಅವಕಾಶವಿಲ್ಲ.

7) ಈ ಹರಾಜು ವಸೂಲಾಧಿಕಾರಿ / ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸ್ಥಿರೀಕರಣ ಮಾಡುವವರೆಗೆ ಖಾಯಂ ಆಗುವುದಿಲ್ಲ. ಸ್ಥಿರೀಕರಣ ಸಮಯದಲ್ಲಿ ಅಪೇಕ್ಷಿಸುವ ಮಾಹಿತಿ, ದಾಖಲಾತಿಗಳನ್ನು ಒದಗಿಸಿದರೆ ವಸೂಲಾಧಿಕಾರಿಗಳ / ಸಹಕಾರ ಸಂಘಗಳ ಸಹಾಯಕ ನಿಬಂಧಕರ ಸಹಿ ಮತ್ತು ಮೊಹರಿನೊಂದಿಗೆ ಮಾರಾಟವನ್ನು ಸ್ಥಿರೀಕರಣಗೊಳಿಸಿ, ಮಾರಾಟ ಪ್ರಮಾಣ ಪತ್ರವನ್ನು ಕೊಡುವರು.

8) ಸ್ವತ್ತಿನ ವಿವರಣೆ ಅಥವಾ ಅವುಗಳ ಅಂದಾಜು ಮಾಡಲಾಗಿರುವ ವಿಸ್ತೀರ್ಣದ ವಿಷಯದಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಇರುವ ತಪ್ಪುಗಳಿಗೆ ಈ ನ್ಯಾಯಾಲಯ ಜವಾಬ್ದಾರಿಯಲ್ಲ. ಸ್ವತ್ತು ಯಾವ ಸ್ಥಳದಲ್ಲಿ, ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಇದನ್ನು ಬಿಡ್ಡುದಾರರು ಮೊದಲೇ ಅರಿತು ಬಿಡ್ಡಿನಲ್ಲಿ ಭಾಗವಹಿಸುವುದು.

9) ವಸೂಲಾಧಿಕಾರಿ/ ಮಾರಾಟಾಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಈ ಹರಾಜು ಪ್ರಕ್ರಿಯೆಯನ್ನು ಯಾವುದೇ ಮುನ್ಸೂಚನೆಯಿಲ್ಲದೇ ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು.

10) ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು ಸಂಪರ್ಕಿಸಬಹುದು.

ಹರಾಜು ಮಾಡುವ ಸ್ಥಳ : ಸ್ವತ್ತಿನ ಆವರಣ, ಹರಾಜು ಸಮಯ : ಬೆಳಗ್ಗೆ 11–00 ಗಂಟೆಗೆ, ಹರಾಜಿನ ದಿನಾಂಕ : 23–05–2025 ಶುಕ್ರವಾರ

ಮಾರಾಟ ಮಾಡುವ ಸ್ಥಿರ ಸ್ವತ್ತಿನ ಷೆಡ್ಯೂಲ್ ವಿವರ

SCHEDULE - 'B'

All that part and parcel of the property immovable property together with dwelling and structure thereon bearing site No.84/5, Old No.84, situated at 7th Cross, J.J.R Nagar, Bangalore, measuring East to West : 20 feet and North to South : 25 feet, totally measuring 500 square feet formerly B.B.M.P Ward No.44, Byrasandra, Bangalore, comes now under the administrative and Territorial Jurisdiction of B.B.M.P. Ward No.44, J.J.R Nagar, Bangalore, together with dwelling and structure thereon and bounded on :
East by : Site No. 85, **West by :** Site No. 83, **North By :** Corporation Property, **South by :** Road.

ಸ್ವತ್ತಿನ ಗೈಡೆನ್ಸ್ ವ್ಯಾಲ್ಯೂ	ಅಂದಾಜು ಚಾಲ್ತಿ ಮಾರುಕಟ್ಟೆ ದರ
ನಿವೇಶನ/ಬಿಲ್ಡಿಂಗ್ ಬೆಲೆ ರೂ.27,15,050/– (ಇಪ್ಪತ್ತೇಳು ಲಕ್ಷದ ಹದಿನೈದು ಸಾವಿರದ ಐವತ್ತು ರೂಪಾಯಿಗಳು ಮಾತ್ರ	**ನಿವೇಶನ/ಬಿಲ್ಡಿಂಗ್ ಬೆಲೆ ರೂ. 38,74,750/–** (ಮೂವತ್ತೆಂಟು ಲಕ್ಷದ ಎಪ್ಪತ್ತ ನಾಲ್ಕು ಸಾವಿರದ ಏಳು ನೂರ ಐವತ್ತು ರೂಪಾಯಿಗಳು ಮಾತ್ರ

ಸ್ಥಳ: ಬೆಂಗಳೂರು
ದಿನಾಂಕ: 21/05/2025

ಸಹಿ/–
ವಸೂಲಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
2ನೇ ವಲಯ, ಬೆಂಗಳೂರು ನಗರ ಜಿಲ್ಲೆ,

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 237/2025

ಅರ್ಜಿದಾರರು: ಶ್ರೀಮತಿ ಭದ್ರಮ್ಮ ಕೋಂ ಭದ್ರಗಿರಿಯಯ್ಯ ವಯಸ್ಸು 68 ವರ್ಷ ವಾಸ: #58B ಪೋಲೀಸ್ ಕ್ವಾಟ್ರಸ್ ಹತ್ತಿರ ವಿನಾಯಕ ನಗರ ರಾಮನಗರ ಟೌನ್ – 562159 ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ಗುತ್ತಲಹುಣಸೆ ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1, 6, 11ನೇ ಅರ್ಜಿದಾರರ ಅತ್ತೆ, 2 ರಿಂದ 5, 7, 12 ರಿಂದ 16ನೇ ಅರ್ಜಿದಾರರ ಅಜ್ಜಿ, 8 ರಿಂಧ 10ನೇ ಅರ್ಜಿದಾರರ ಅಜ್ಜಿಯ ತಾಯಿ (ಮುತ್ತಜ್ಜಿ) ಮತ್ತು 17ನೇ ಅರ್ಜಿದಾರರ ತಾಯಿ ರವರು ಆದ ಶ್ರೀಮತಿ ವೆಂಕಟಮ್ಮ ಕೋಂ ಲೇಟ್ ಭದ್ರಗಿರಿ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಗುತ್ತಲಹುಣಸೆ ಗ್ರಾಮದಲ್ಲಿ ದಿನಾಂಕ 10–03–1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28/06/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಮೇ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 236/2025

ಅರ್ಜಿದಾರರು: ಶ್ರೀಮತಿ ಭದ್ರಮ್ಮ ಕೋಂ ಭದ್ರಗಿರಿಯಯ್ಯ ವಯಸ್ಸು 68 ವರ್ಷ ವಾಸ: #58B ಪೋಲೀಸ್ ಕ್ವಾಟ್ರಸ್ ಹತ್ತಿರ ವಿನಾಯಕ ನಗರ ರಾಮನಗರ ಟೌನ್ – 562159 ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ಗುತ್ತಲಹುಣಸೆ ವೃತ್ತ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1, 6, 11ನೇ ಅರ್ಜಿದಾರರ ಮಾವ, 2 ರಿಂದ 5, 7, 12 ರಿಂದ 16ನೇ ಅರ್ಜಿದಾರರ ತಾತ, 8 ರಿಂಧ 10ನೇ ಅರ್ಜಿದಾರರ ಮುತ್ತಾತ ಮತ್ತು 17ನೇ ಅರ್ಜಿದಾರರ ತಂದೆ ರವರು ಆದ ಶ್ರೀ ಭದ್ರಗಿರಿ ಬಿನ್ ಲೇಟ್ ಕೆಂಪಯ್ಯ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಗುತ್ತಲಹುಣಸೆ ಗ್ರಾಮದಲ್ಲಿ ದಿನಾಂಕ 05–02–1963 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28/06/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಮೇ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಸ್ಥಳದಲ್ಲಿಯೇ ಅಧಿಕಾರಿಗಳಿಗೆ ತರಾಟೆ | ಜನರಿಂದ ಅಹವಾಲು ಸ್ವೀಕಾರ | ಸಂತ್ರಸ್ತರಿಗೆ ಪರಿಹಾರ ಒದಗಿಸಲು ಸೂಚನೆ

ಮಳೆ ಹಾನಿ: ಸಿಎಂ, ಡಿಸಿಎಂ ಸಿಟಿ ರೌಂಡ್ಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಮೂರು ದಿನಗಳಿಂದ ರಾಜಧಾನಿಯಲ್ಲಿ ಸುರಿದ ಮಳೆಯಿಂದಾಗಿರುವ ಅನಾಹುತ ಹಾಗೂ ಸಂಕಷ್ಟಕ್ಕೆ ಸಿಲುಕಿರುವ ಸಾರ್ವಜನಿಕರಿಂದ ಸಮಸ್ಯೆ ಆಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ 'ಸಿಟಿ ರೌಂಡ್ಸ್' ನಡೆಸಿದರು. ಕೆಲ ಭಾಗದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದ ಆರೋಪ ಕೇಳಿಬಂದಿದ್ದರಿಂದ, ಸ್ಥಳದಲ್ಲಿಯೇ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು.

ಪರಿಶೀಲನೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರವಾಹಪೀಡಿತ ಪ್ರದೇಶದಲ್ಲಿ ಅಪಾರ್ಟ್‌ಮೆಂಟ್‌ಗಳ ಬೇಸ್‌ಮೆಂಟ್‌ಗಳಲ್ಲಿ ನೀರು ನಿಂತು, ವಾಹನಗಳಿಗೆ ಭಾರಿ ಸಮಸ್ಯೆಯಾಗಿರುವ ಆರೋಪ ಕೇಳಿಬಂದಿದೆ. ಆದ್ದರಿಂದ ಬಾದಿತ ಪ್ರದೇಶಗಳಲ್ಲಿ ಬೇಸ್‌ಮೆಂಟ್ ಪಾರ್ಕಿಂಗ್, ಕೆಳ ಹಂತದಲ್ಲಿ ಮನೆ ನಿರ್ಮಾಣಕ್ಕೆ ಅವಕಾಶ ನೀಡದಂತೆ ಟೌನ್ ಪ್ಲಾನ್‌ನಲ್ಲಿ ಬದಲಾವಣೆ ತರಲು ಸೂಚನೆ ನೀಡಲಾಗಿದೆ ಎಂದರು.

ನಗರದಲ್ಲಿ ರಾಜಕಾಲುವೆ ಒತ್ತುವರಿಯನ್ನು ಎಷ್ಟೇ ಪ್ರಭಾವಿಗಳು ಮಾಡಿದ್ದರು ಕೂಡಾ ಮುಲಾಜಿಲ್ಲದೆ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಬೆಂಗಳೂರಿನಲ್ಲಿ ನೆರೆ ನೀರು ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಕೊಳ್ಳುವ ನಿಟ್ಟಿನಲ್ಲಿ ರಾಜಕಾಲುವೆ ಅಭಿವೃದ್ಧಿಯಂತಹ ಮೂಲಸೌಕರ್ಯ ಅಭಿವೃದ್ಧಿಗೆ ಸರಕಾರ ಯೋಜನೆಗಳನ್ನು ರೂಪಿಸಿ ಕಾಮಗಾರಿಗಳನ್ನು ಕೈಗೊಂಡಿದೆ. ರಾಜಕಾಲುವೆ ಸುಮಾರು 860 ಕಿಮೀ ಇದೆ. 491 ಕಿಮೀ ರಾಜಕಾಲುವೆಯಲ್ಲಿ ಲೈನಿಂಗ್ ಕೆಲಸ ಮುಗಿದಿದೆ. 125 ಕಿಮೀ ರಾಜಕಾಲುವೆ ಕಾಮಗಾರಿ ನಡೆಯುತ್ತಿದ್ದು, ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಲಾಗುವುದು. ಇನ್ನುಳಿದ 173 ಕಿಮೀ ರಾಜಕಾಲುವೆ ಅಭಿವೃದ್ಧಿಗೆ ವಿಶ್ವಬ್ಯಾಂಕ್‌ನಿಂದ 2 ಸಾವಿರ ಕೋಟಿ ರು. ಸಾಲ ಪಡೆದು ಕಾಮಗಾರಿಗೆ ಕೈಗೊಂಡಿದೆ. ಇದರ ಟೆಂಡರ್ ಮುಗಿದಿದ್ದು, ಮೂರು ವರ್ಷಗಳ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಲು ತಿಳಿಸಿದ್ದೇವೆ ಎಂದು ಹೇಳಿದರು.

ಕೂಡಲೇ ಪರಿಹಾರ: ಮನೆಗಳಿಗೆ ನೀರು ನುಗ್ಗಿ ಹಾನಿ ಸಂಭವಿಸಿರುವ ಎಲ್ಲಾ ಸಂತ್ರಸ್ತರಿಗೆ ತಕ್ಷಣ ಪರಿಹಾರ ಒದಗಿಸಲಾಗುವುದು. ಹಾನಿ ಕುರಿತು ಕೂಡಲೇ ಸಮೀಕ್ಷೆ ನಡೆಸಿ ಪರಿಹಾರ ಒದಗಿಸಲು ಸೂಚನೆ ನೀಡಿದ್ದೇನೆ. ತಗ್ಗು ಪ್ರದೇಶಗಳಲ್ಲಿ ಬೇಸ್‌ಮೆಂಟ್‌ಗಳಲ್ಲಿ ನಿರ್ಮಾಣಕ್ಕೆ ಇನ್ನು ಮುಂದೆ ಅನುಮತಿ ನೀಡದಂತೆ ಸಂಬಂಧಿತ ಪ್ರಾಧಿಕಾರಗಳಿಗೆ ಸೂಚನೆ ನೀಡಿದ್ದೇನೆ. 166 ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ತಗ್ಗು ಪ್ರದೇಶಗಳೆಂದು ಗುರುತಿಸಿ ಮುಂಜಾಗರೂಕತಾ ಕ್ರಮ ಕೈಗೊಳ್ಳಲಾಗಿದೆ. ಮಾನ್ಯತಾ ಟೆಕ್‌ಪಾರ್ಕ್ ಬಳಿ ರಾಜಕಾಲುವೆ ಪರಿಶೀಲನೆ ನಡೆಸಿದ್ದು ಅಲ್ಲಿ ರಾಜಕಾಲುವೆ ಒತ್ತುವರಿ ಗಮನಿಸಲಾಗಿದೆ. ಒತ್ತುವರಿಯನ್ನು ಕೂಡಲೇ ತೆರವುಗೊಳಿಸಲು ಸೂಚನೆ ನೀಡಿದ್ದೇನೆ. ಮಾನ್ಯತಾ ಟೆಕ್ ಪಾರ್ಕ್ ಸಿಇಒ ಅವರು ಸ್ವಂತ ರಸ್ತೆಯಲ್ಲಿ 90 ಅಡಿಗಳಲ್ಲಿ ಚರಂಡಿ ನಿರ್ಮಿಸಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಎಚ್‌ಬಿಆರ್ ಬಡಾವಣೆಯ ಐದನೇ ಹಂತದ ರಾಜಕಾಲುವೆ ಸಮಸ್ಯೆಯಿದ್ದು, ಅಲ್ಲಿನ ಮನೆಗಳಿಗೆ ನೀರು ನುಗ್ಗಿದೆ. ರಾಜಕಾಲುವೆಗೆ ಅಲ್ಲಿ ತಡೆಗೋಡೆ ನಿರ್ಮಾಣವಾಗುತ್ತಿದೆ. ಈ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಸೂಚನೆ ನೀಡಿದ್ದೇವೆ. ಚರಂಡಿಗೆ ಕಸ ಹಾಕುವವರ ವಿರುದ್ಧ ಕಠಿಣ ಕ್ರಮ ಸೂಚನೆ ನೀಡಿದ್ದೇವೆ ಎಂದರು.

ಸಾಯಿ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಸ್ಯೆ ಆಲಿಸಿ, ಮನವಿ ಸ್ವೀಕರಿಸಿದರು.

ಮಾನ್ಯತಾ ಟೆಕ್‌ಪಾರ್ಕ್ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೆ.ಜೆ.ಜಾರ್ಜ್ ರಾಜಕಾಲುವೆ ಪರಿಶೀಲನೆ ನಡೆಸಿದರು.

ಸಿಟಿ ರೌಂಡ್ಸ್‌ನಲ್ಲಿ ಏನಾಯ್ತು?

ಯಲಹಂಕ

ಯಲಹಂಕದಲ್ಲಿ ರಾಜ ಕಾಲುವೆ ಒತ್ತುವರಿ ಸ್ಥಳ ಪರಿಶೀಲಿಸಿದ ಮುಖ್ಯಮಂತ್ರಿಗಳು ಮುಲಾಜಿಲ್ಲದೆ ಒತ್ತುವರಿ ತೆರವುಗೊಳಿಸುವಂತೆ ಸೂಚಿಸಿದರು. ಮಾನ್ಯತಾ ಟೆಕ್, ಇಬ್ಬು, ಮ್ಯಾನ್ ಫೋ ಹಾಗೂ ಕಾರ್ಲೆ ಖಾಸಗಿ ಬಿಲ್ಡರ್‌ಗಳು ರಾಜಕಾಲುವೆ ಒತ್ತುವರಿ ಮಾಡಿರುವುದನ್ನು ಅಧಿಕಾರಿಗಳು ವಿವರಿಸಿದರು. ಈ ವೇಳೆ ನೋಟಿಸ್ ಕೊಟ್ಟಿಲ್ಲವೇ, ಒತ್ತುವರಿ ಆಗಿರುವುದನ್ನು ನೋಡಿಕೊಂಡು ಕುಳಿತಿದ್ದೀರಾ ಎಂದು ಸಿಎಂ ಖಾರವಾಗಿ ಪ್ರಶ್ನಿಸಿದರು. ಬಳಿಕ ಎಷ್ಟೇ ದೊಡ್ಡ ಬಿಲ್ಡರ್‌ಗಳಾಗಿದ್ದರೂ ಮುಲಾಜು ನೋಡ ಬೇಡಿ, ರಾಜ ಕಾಲುವೆ ಒತ್ತುವರಿ ತೆರವುಗೊಳಿಸಿ ಎಂದು ಸೂಚನೆ ನೀಡಿದರು.

ವಡ್ಡರಪಾಳ್ಯ ಲೇಔಟ್, ಗೆದ್ದಲಹಳ್ಳಿ

ರಾಜಕಾಲುವೆ ವಿಸ್ತೀರ್ಣ 29 ಮೀಟರ್. ಆದರೆ ಗೆದ್ದಲಹಳ್ಳಿಯ ಕಾಲುವೆ ಬಾಟಲ್ ನೆಕ್‌ಯಿದ್ದು ಕೇವಲ ಎಂಟು ಮೀಟರ್‌ಇದೆ. ಆದ್ದರಿಂದ ಮೇಲಿನಿಂದ ರಾಜಕಾಲುವೆಯಲ್ಲಿ ಹರಿದು ಬರುವ ನೀರು ಈ ಬಾಟಲ್ ನೆಕ್‌ನಲ್ಲಿ ನೀರು ಹೊರಬಂದು, ಸಾಯಿ ಲೇಔಟ್‌ಗೆ ನುಗ್ಗುತ್ತದೆ ಎನ್ನುವುದು ಸಮಸ್ಯೆ. ಆದ್ದರಿಂದ 8 ಮೀಟರ್ ಬಾಟಲ್ ನೆಕ್‌ಯಿರುವ ರೈಲ್ವೇ ವೆಂಟ್ ಅನ್ನು ವಿಸ್ತರಿಸಲು ಸೂಚನೆ ನೀಡಲಾಯಿತು.

ಎಚ್‌ಬಿಆರ್ ಲೇಔಟ್

ಎಚ್‌ಬಿಆರ್ ಲೇಔಟ್, ತುಂಬಿ ಹರಿಯುತ್ತಿರುವ ರಾಜಕಾಲುವೆ ಪ್ರದೇಶ ವೀಕ್ಷಣೆ ಮಾಡಿದ ಸಿಎಂ, ರಾಜಕಾಲುವೆಯ ಹರಿವಿನ ಹಾದಿಯಲ್ಲಿ ರೈಲ್ವೇ ಟ್ರ್ಯಾಕ್ ಇರುವ ಕಡೆ ಆಗಿರುವ ಬಾಟಲ್ ನೆಕ್ ಸರಿಪಡಿಸಲು, ವಿಸ್ತರಿಸಲು ಸೂಚನೆ ನೀಡಿದರು. ಬಾದಿತ ಪ್ರದೇಶಗಳಲ್ಲಿ ಬೇಸ್‌ಮೆಂಟ್ ಪಾರ್ಕಿಂಗ್, ಕೆಳ ಹಂತದಲ್ಲಿ ಮನೆ ನಿರ್ಮಾಣಕ್ಕೆ ಅವಕಾಶ ನೀಡದಂತೆ ಟೌನ್ ಪ್ಲಾನ್‌ನಲ್ಲಿ ಬದಲಾವಣೆ ತರಲು ಸೂಚನೆ ನೀಡಿದರು.

ಸಾಯಿ ಲೇಔಟ್

ಮಳೆ ಮತ್ತು ಪ್ರವಾಹ ಪೀಡಿತ ಸ್ಥಳ ವೀಕ್ಷಿಸಿದ ಮುಖ್ಯಮಂತ್ರಿಗಳು, ಸಾಯಿ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರಿಂದ ಸಮಸ್ಯೆ ಆಲಿಸಿ, ಮನವಿ ಸ್ವೀಕರಿಸಿದರು. ಬಳಿಕ ಮನವಿಯಲ್ಲಿರುವ ಸಮಸ್ಯೆಗಳ ಬಗ್ಗೆ ಗಂಭೀರ ಗಮನ ಹರಿಸಿ ತಕ್ಷಣಕ್ಕೆ ಸಾಧ್ಯವಿರುವ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

> ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನಾಲ್ಕು ಕಡೆಗಳಿಂದ ನೀರು ಬರುತ್ತಿದ್ದು, ಅಲ್ಲಿಂದ ಎಲ್ಲಾ ನೀರು ಎಚ್‌ಎಸ್‌ಆರ್ ಲೇಔಟ್ ಕಡೆ ಹರಿದು ಬರುತ್ತದೆ. ಮೆಟ್ರೋ, ಬಿಬಿಎಂಪಿ ಮತ್ತು ರಾಷ್ಟ್ರೀಯ ಹೆದ್ದಾರಿ ಸಮನ್ವಯದಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಈ ಮೂರು ವಿಭಾಗಗಳು ಈ ಕುರಿತು ಯೋಜನೆ ರೂಪಿಸಲು ಸೂಚನೆ ನೀಡಿದ್ದೇನೆ. ಬೆಂಗಳೂರಿನಲ್ಲಿ 2022ರಲ್ಲಿ 299ಮಿಮೀ ಮಳೆಯಾಗಿತ್ತು. 10 ವರ್ಷಗಳಲ್ಲಿ ಇದು ಎರಡನೇ ಬಾರಿ ಹೆಚ್ಚಿನ ಮಳೆಯಾಗಿದೆ. ಮೇ. 19 ರಂದು ಮಧ್ಯರಾತ್ರಿ 132 ಮಿಮೀ ಮಳೆ ದಾಖಲಾಗಿದೆ.
>
> – ಸಿದ್ದರಾಮಯ್ಯ, ಮುಖ್ಯಮಂತ್ರಿ

> ಎಲ್ಲೆಲ್ಲಿ ಬಿಜೆಪಿ ಶಾಸಕರಿದ್ದಾರೋ ಆ ಪ್ರದೇಶಗಳಲ್ಲಿ ಮಾತ್ರ ಇಂತಹ ಸಮಸ್ಯೆ ಎದುರಾಗಿದೆ. ಅವರು ಯಾವುದೇ ಕೆಲಸ ಮಾಡಿಲ್ಲ ಎಂಬುದಕ್ಕೆ ಸಾಕ್ಷಿ. ಕಾಂಗ್ರೆಸ್ ಶಾಸಕರು ಕಾಮಗಾರಿಗಳನ್ನು ಬೇಗ ಮುಗಿಸಿ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆ ಬಗೆಹರಿಸಿದ್ದಾರೆ. ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಕ್ಷೇತ್ರದಲ್ಲೂ ಪರಿಶೀಲನೆ ಮಾಡಿದ್ದೇವೆ. ಅವರು ಈ ಭಾಗದ ರಸ್ತೆ ಅಗಲೀಕರಣ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಈ ವಿಚಾರವಾಗಿ ಎಲ್ಲೆಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಸಮಸ್ಯೆಯಾಗಿದೆ, ಆ ಜಾಗಗಳ ಫೋಟೊ, ವಿಡಿಯೊ ಮಾಡಿಕೊಂಡು ತುರ್ತು ವರದಿ ಸಲ್ಲಿಕೆ ಮಾಡುವಂತೆ ತಿಳಿಸಿದ್ದೇನೆ.
>
> – ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪಣತ್ತೂರ್ ರೈಲ್ವೇ ಬ್ರಿಡ್ಜ್

ಮಹದೇವಪುರ ವಿಧಾನಸಭಾ ಕ್ಷೇತ್ರದ ಪಣತ್ತೂರ್ ರೈಲ್ವೇ ಬ್ರಿಡ್ಜ್‌ನಲ್ಲಿ ಸಾರ್ವಜನಿಕರ ಮತ್ತು ಸ್ಥಳೀಯ ನಿವಾಸಿಗಳ ಜತೆ ಮುಖ್ಯಮಂತ್ರಿಗಳು ಚರ್ಚೆ ನಡೆಸಿದರು. ಸಮಸ್ಯೆ ಬಗ್ಗೆ ಅಧಿಕಾರಿಗಳ ಜತೆ ಸಮಗ್ರ ಚರ್ಚೆ ನಡೆಸಿದ ಮುಖ್ಯಮಂತ್ರಿಗಳು, 350 ಮೀಟರ್ ಉದ್ದದ ಒಳಚರಂಡಿಯನ್ನು ನಿರ್ಮಿಸಿ ರಾಜಕಾಲುವೆಗೆ ಸಂಪರ್ಕ ಕೊಡಬೇಕು, ರೈಲ್ವೇ ಇಲಾಖೆ 3 ತಿಂಗಳ ಒಳಗೆ ಕಾಮಗಾರಿ ಮುಗಿಸುವ ರೀತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಮಹಾದೇವಪುರದ ಪಣತ್ತೂರು ಗಾರ್ಡನ್‌ನಲ್ಲಿ ನೀರು ಸರಾಗವಾಗಿ ಹರಿದು ಹೋಗದೆ ಪ್ರತಿ ವರ್ಷ ಸಮಸ್ಯೆ. ರೈಲ್ವೆ ಲೈನ್ ಕೆಳಗಡೆ ಅಗಲ ಬಹಳ ಕಡಿಮೆಯಿದೆ. ಇದನ್ನು ವಿಸ್ತರಿಸಲು ಹಾಗೂ ರಸ್ತೆ ಅಗಲೀಕರಣ ಕಾರ್ಯ ಈಗಾಗಲೇ ನಡೆಯುತ್ತಿದ್ದು, ಶೇ.20ರಷ್ಟು ಕಾಮಗಾರಿ ಬಾಕಿಯಿದೆ. ಇಲ್ಲಿ ಟ್ರೆಂಚ್‌ಲೆಸ್ ತಾಂತ್ರಿಕತೆ ಬಳಸಿ ಕೆಲಸ ಮಾಡುತ್ತಿದ್ದು, 45ದಿನಗಳ ಒಳಗಾಗಿ ಉಳಿದಿರುವ ಎಲ್ಲಾ ಕಾಮಗಾರಿ ಮುಗಿಸಲು ಸೂಚನೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರು ಪ್ರದಕ್ಷಿಣೆ ಮಾಡಿ ನಗರದ ಹಲವು ಪ್ರದೇಶಗಳಲ್ಲಿ ಮಳೆಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ಅವಲೋಕಿಸಿದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಬೆಂಗಳೂರಿನ ಶಾಸಕರು ಉಪಸ್ಥಿತರಿದ್ದರು.

ಪಣತೂರು ರಸ್ತೆ ಸಮಸ್ಯೆ ಪರಿಹಾರಕ್ಕೆ ಮನವಿ

ಬೆಂಗಳೂರು: ಮಳೆಬಾಧಿತ ಪ್ರದೇಶಗಳಿಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ ಭೇಟಿಯಾಗಿ, ಪರಿಸ್ಥಿತಿಯನ್ನು ವಿವರಿಸಿದರು.

ಪ್ರಮುಖವಾಗಿ ಮಹದೇವಪುರ ಭಾಗದಲ್ಲಿ ಪ್ರತಿವರ್ಷ ಪ್ರವಾಹಕ್ಕೆ ತುತ್ತಾಗುವ ಪಣತೂರು 'ಎಸ್' ಕ್ರಾಸ್ ಮತ್ತು ಪಣತೂರು ರೈಲ್ವೇ ಕೆಳಸೇತುವೆಯ ನಿರ್ಮಾಣದ ಸ್ಥಳ ಪರಿವೀಕ್ಷಣೆ ನಡೆಸಿ, ಈ ಕಾಮಗಾರಿಯಲ್ಲಿರುವ ಅಡೆತಡೆಗಳ ಬಗ್ಗೆ ಕಾಮಗಾರಿಯು ಕುಂಠಿತವಾಗಿರುವ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ ವಿಸ್ತೃತವಾಗಿ ಅರವಿಂದ ಲಿಂಬಾವಳಿ ವಿವರಿಸಿದರು. ಈ ವೇಳೆ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಈ ಕಾಮಗಾರಿಗಳನ್ನು ತ್ವರಿತವಾಗಿ ಮಾಡಿಕೊಳ್ಳಲು ಅಗತ್ಯ ಕ್ರಮ ಕೈ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 22 ಪ್ರವಾಹ ಪ್ರದೇಶಗಳನ್ನು ಗುರುತಿಸಲಾಗಿದ್ದು, ಇದನ್ನು ಅವರ ಗಮನಕ್ಕೆ ತರಲಾಯಿತು. ಪಣತೂರು 150 ಅಡಿ ರಸ್ತೆಯಲ್ಲಿ ಕೆಪಿಟಿಸಿಎಲ್ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಸಮಸ್ಯೆಯಿದ್ದು, ಅದಕ್ಕೆ ಈಗ ಅನುಮತಿ ದೊರೆತಿದ್ದು, ರಸ್ತೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದು ವಿವರಿಸಲಾಯಿತು.



ಮಳೆಬಾಧಿತ ಪ್ರದೇಶಗಳಿಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ ಭೇಟಿಯಾಗಿ, ಪರಿಸ್ಥಿತಿಯನ್ನು ವಿವರಿಸಿದರು.

ಈ ವೇಳೆ ಇಂಧನ ಸಚಿವ ಕೆ. ಜೆ. ಜಾರ್ಜ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ನಗರ ಮಂಡಲದ ಅಧ್ಯಕ್ಷ ಎನ್. ಆರ್. ಶ್ರೀಧರ್ ರೆಡ್ಡಿ, ರಾಜೇಶ್ ಸೇರಿದಂತೆ ಅಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ನಗರದಲ್ಲಿ ಮಳೆಯಿಂದ ಹಲವು ಅವಾಂತರ

ಬೆಂಗಳೂರು: ನಗರದಲ್ಲಿ ಮೂರು ದಿನಗಳಿಂದ ಸುರಿಯುತ್ತಿದ್ದ ಮಳೆ ಸದ್ಯ ಬಿಡುವು ನೀಡಿದ್ದು, ಮಂಗಳವಾರವಿಡೀ ಸುರಿದ ಮಳೆಯಿಂದ ನಗರದಲ್ಲಿ ಹಲವು ಸಮಸ್ಯೆಗಳುಂಟಾಗಿದೆ. ನಗರದಲ್ಲಿ ಭಾರಿ ಮಳೆಗೆ ಅನೇಕ ಕಡೆಗಳಲ್ಲಿ ರಸ್ತೆಗಳು ಜಲಾವೃತಗೊಂಡು ಸಂಚಾರಕ್ಕೆ ಅಡ್ಡಿಯಾಗಿದ್ದರೆ, ಇನ್ನು ಅನೇಕ ರಸ್ತೆಗಳಲ್ಲಿ ಮರಗಳು ಬಿದ್ದ ಪರಿಣಾಮ ಸಂಚಾರಕ್ಕೆ ಸಮಸ್ಯೆಯಾಗಿದೆ. ಬಿಬಿಎಂಪಿ ಹಾಗೂ ಬೆಂಗಳೂರು ಸಂಚಾರ ಪೊಲೀಸರು ತ್ವರಿತಗತಿಯಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದರೂ ಅನೇಕ ರಸ್ತೆಗಳಲ್ಲಿ ಬುಧವಾರ ಮುಂಜಾನೆಯೂ ನಿಧಾನಗತಿಯ ಸಂಚಾರ ಮುಂದುವರಿದಿದೆ. ನಮನ ಜಂಕ್ಷನ್ ಹತ್ತಿರ ಮರಬಿದ್ದಿರುವುದರಿಂದ ಕೋಡಿಚಿಕ್ಕನಹಳ್ಳಿ ಕಡೆಗೆ ನಿಧಾನಗತಿಯ ಸಂಚಾರವಿರುತ್ತದೆ. ಟೋಲ್ ಗೇಟ್ ಎಂಸಿ ಸರ್ಕಲ್ ಹತ್ತಿರ ಮರಬಿದ್ದಿರುವುದರಿಂದ ಚೋಳರಪಾಳ್ಯ ಕಡೆಗೆ ನಿಧಾನಗತಿಯ ಸಂಚಾರವಿರುತ್ತದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಮಳೆ ಸಮಸ್ಯೆಗೆ ಶಾಶ್ವತ ಪರಿಹಾರ: ಡಿಸಿಎಂ

ಸುದ್ದಿಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಮಳೆಯಿಂದ ಬೆಂಗಳೂರಿಗೆ ಆಗುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಲಾಗುವುದು. ಬಿಜೆಪಿ ಸರಕಾರದ ಅವಧಿಯಲ್ಲಿ ಈ ಸಮಸ್ಯೆಗೆ ಪರಿಹಾರ ನೀಡುವ ಕೆಲಸವಾಗಿಲ್ಲ. ಆದರೂ ವಿರೋಧ ಪಕ್ಷದವರು ಟೀಕೆ ಮಾಡಲಿ, ನಾವು ನಮ್ಮ ಕೆಲಸ ಮಾಡುತ್ತೇವೆ. ಅಂತಿಮವಾಗಿ ಟೀಕೆಗಳು ಸಾಯುತ್ತವೆ ಕೆಲಸಗಳು ಮಾತ್ರ ಉಳಿಯುತ್ತವೆ ಎಂದರು.

ಬೆಂಗಳೂರಿನಲ್ಲಿ ಮಳೆಯಿಂದಾಗಿರುವ ತೊಂದರೆ ಬಗ್ಗೆ ಬಿಜೆಪಿಯವರು ಟೀಕೆ ಮಾಡುತ್ತಿದ್ದಾರೆ. ಒತ್ತುವರಿ ವಿಚಾರದಲ್ಲಿ ಅವರ ಕಾಲದಲ್ಲಿ ಏನು ಕೆಲಸ ಮಾಡುತ್ತಿದ್ದರು. ಒತ್ತುವರಿ ಮಾಡಿಕೊಂಡವರು ನ್ಯಾಯಲಯಗಳಿಂದ ತಡೆಯಾಜ್ಞೆ ತಂದಿದ್ದಾರೆ. ಆದರೂ ನಾನು ಒತ್ತುವರಿಗಳನ್ನು ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮಳೆನೀರಿನಿಂದ ತೊಂದರೆಗೆ ಒಳಗಾಗುತ್ತಿದ್ದ 211 ಪ್ರದೇಶಗಳನ್ನು ಗುರುತಿಸಿ 166 ಕ್ಕೆ ಇಳಿಸಿದ್ದೇವೆ. 44 ಕೆಲಸ ಬಾಕಿಯಿದ್ದು, ಇದರಲ್ಲಿ 24 ಕಡೆ ಕಾರ್ಯಪ್ರಗತಿಯಲ್ಲಿದೆ. ಮೊದಲಿಗಿಂತ ಈಗ ಸಮಸ್ಯೆಗಳನ್ನು ಎದುರಿಸುತ್ತಿರುವ ಪ್ರದೇಶಗಳ ಪ್ರಮಾಣ ಕಡಿಮೆಯಾಗಿದೆ. ಬೆಂಗಳೂರು ನಾಗರಿಕರ ರಕ್ಷಣೆ ಮಾಡಲಾಗುವುದು. ಯಾರೂ ಆತಂಕಪಡುವ ಅಗತ್ಯವಿಲ್ಲ. ನಾವು ಬೆಂಗಳೂರಿಗೆ ಹೊಸ ರೂಪ ನೀಡುತ್ತಿದ್ದೇವೆ. ನಮ್ಮ ಸರಕಾರ ಹಾಗೂ ಅಧಿಕಾರಿಗಳ ತಂಡ ಇದನ್ನು ಸರಿ ಮಾಡುತ್ತೇವೆ ಎಂದು ಹೇಳಿದರು.

ಎಲ್ಲೆಲ್ಲಿ ಬಿಜೆಪಿ ಶಾಸಕರಿದ್ದಾರೋ ಆ ಪ್ರದೇಶಗಳಲ್ಲಿ ಮಾತ್ರ ಇಂತಹ ಸಮಸ್ಯೆ ಎದುರಾಗಿದೆ. ಅವರು ಯಾವುದೇ ಕೆಲಸ ಮಾಡಿಲ್ಲ ಎಂಬುದಕ್ಕೆ ಸಾಕ್ಷಿ. ಕಾಂಗ್ರೆಸ್ ಶಾಸಕರು ಕಾಮಗಾರಿಗಳನ್ನು ಬೇಗ ಮುಗಿಸಿ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆ ಬಗೆಹರಿಸಿದ್ದಾರೆ ಎಂದು ತಿಳಿಸಿದರು. ಮುಖ್ಯಮಂತ್ರಿಗಳು ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧಿಕಾರಿಗಳ ಜತೆ ಚರ್ಚೆ ಮಾಡಿ ಮುಂದಿನ ದಿನಗಳಲ್ಲಿ ತಳ ಮಟ್ಟದ ಪ್ರದೇಶಗಳಲ್ಲಿ ಬೇಸ್ ಮೆಂಟ್ ಪಾರ್ಕಿಂಗ್ ವ್ಯವಸ್ಥೆಗೆ ಅವಕಾಶ ನೀಡದಿರಲು ನೀತಿ ರೂಪಿಸಲಾಗುವುದು. ಬೇಸ್ ಮೆಂಟ್ ನಿಂದ ನೀರನ್ನು ಪಂಪ್ ಮೂಲಕ ಹೊರಗೆ ಹಾಕುವಾಗ ದುರ್ಘಟನೆ ನಡೆದು ಜೀವಹಾನಿಯಾಗಿದೆ ಎಂದು ತಿಳಿಸಿದರು.

ನಿರಂತರ ಮಳೆಗೆ ನೆಲಕಚ್ಚಿದ ವ್ಯಾಪಾರ ವಹಿವಾಟು

ಬೆಂಗಳೂರು: ನಗರದಲ್ಲಿ ಪೂರ್ವ ಮುಂಗಾರಿನ ಅಬ್ಬರ ಹೆಚ್ಚಾಗಿದ್ದು, ಕಳೆದ ಮೂರು ದಿನಗಳ ಕಾಲ ಸುರಿದ ಮಳೆಗೆ ವ್ಯಾಪಾರ ವಹಿವಾಟು ನೆಲಕಚ್ಚಿದ್ದು, ವರ್ತಕರು ಭಾರೀ ನಷ್ಟವನ್ನು ಅನುಭವಿಸಿದೆ.

ನಗರದಲ್ಲಿ ಸುರಿದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದ್ದು, ಅನೇಕ ಕಡೆಗಳಲ್ಲಿ ರಸ್ತೆಗಳು ಜಲಾವೃತವಾಗಿದ್ದರೆ ಇನ್ನೂ ಕೆಲವೆಡೆ ಮನೆಗೆ ನೀರು ನುಗ್ಗಿ ಭಾರಿ ಸಮಸ್ಯೆಯಾಗಿದೆ. ಜತೆಗೆ ಮಳೆಯಿಂದ ವ್ಯಾಪಾರ ವಹಿವಾಟು ಕೂಡ ನೆಲಕಚ್ಚಿದೆ. ಕೆ ಆರ್ ಮಾರುಕಟ್ಟೆ, ಯಶವಂಪುರ ಮಾರ್ಕೆಟ್‌ಗಳಲ್ಲಿ ವ್ಯಾಪಾರ ವಹಿವಾಟು ಮಳೆಯಿಂದ ಬಂದ್ ಆಗಿದ್ದು, ಹೂವು, ಹಣ್ಣು, ತರಕಾರಿ ಖರೀದಿಗೆ ಮಾರುಕಟ್ಟೆಗೆ ಬರುತ್ತಿದ್ದ ಜನರು ಮಳೆಯ ಭಯಕ್ಕೆ ಮನೆಯಿಂದ ಹೊರ ಬರುತ್ತಿಲ್ಲ. ಇತ್ತ ಗ್ರಾಹಕರು ಇಲ್ಲದೆ ಮಳೆಯಲ್ಲಿ ವ್ಯಾಪರವೂ ಆಗದೆ ವ್ಯಾಪಾರಿಗಳು ಕಂಗಲಾಗಿದ್ದಾರೆ.

ಬೆಂಗಳೂರು ಮಳೆಯಿಂದ ಆಟೋ ಚಾಲಕರಿಗೂ ದೊಡ್ಡ ಸಂಕಷ್ಟ ಎದುರಾಗಿದೆ. ರಸ್ತೆಗಳ ಮೇಲೆ ನೀರು ತುಂಬಿರುವುದರಿಂದ ಆಟೋ ಓಡಿಸುವುದು ಕಷ್ಟವಾಗುತ್ತಿದೆ. ಜತೆಗೆ ಬುಕ್ಕಿಂಗ್ ಪ್ರಮಾಣ ಕೂಡಾ ತುಂಬಾ ಕಡಿಮೆಯಾಗಿದೆ. ಮಳೆಯ ಕಾರಣ ಜನರು ಮನೆಯಿಂದ ಹೊರ ಬರುತ್ತಿಲ್ಲ ಎಂದು ಆಟೋ ಚಾಲಕರು ಹೇಳಿದ್ದಾರೆ.

ಚಿಕ್ಕಪೇಟೆಯಲ್ಲಿ ವ್ಯಾಪಾರ ಡಲ್

ಸದಾ ಜನರಿಂದ ತುಂಬಿರುತ್ತಿದ್ದ, ಬೆಂಗಳೂರಿನ ವಾಣಿಜ್ಯ ವಹಿವಾಟಿನ ಪ್ರಮುಖ ಕೇಂದ್ರ ಚಿಕ್ಕಪೇಟೆಯಲ್ಲಿಯೂ ವ್ಯಾಪಾರ ವಹಿವಾಟು ಕುಸಿತಗೊಂಡಿದೆ. ಹಿಂದಿನ ಒಂದು ವಾರ ಭಾರತ ಹಾಗೂ ಪಾಕಿಸ್ತಾನ ಸಂಘರ್ಷದ ಹಿನ್ನಲೆ ಕೊಂಚ ವ್ಯಾಪರ ಡಲ್ ಆಗಿತ್ತು. ಈಗ ಕಳೆದ ಎರಡು ದಿನಗಳಿಂದ ಮಳೆ ಬರುತ್ತಿರುವುದರಿಂದ ಜನರು ಬರುತ್ತಿಲ್ಲ. ವ್ಯಾಪರ ಕುಸಿತವಾಗಿದೆ ಎಂದು ಚಿಕ್ಕಪೇಟೆ ವರ್ತಕರ ಸಂಘಟನೆಯ ಸಜ್ಜನ್ ರಾವ್ ತಿಳಿಸಿದ್ದಾರೆ.

ಬೆಂಗಳೂರಲ್ಲಿ ಡೆಂಘೀ ತಡೆಗಟ್ಟಲು ಕ್ರಮ | 240 ಆರೋಗ್ಯ ಅಧಿಕಾರಿಗಳ ನೇಮಕ

ಡೆಂಘೀ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ಅಭಿಯಾನ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಘೀ ತಡೆಗಟ್ಟಲು ಹೆಚ್ಚಿನ ಮುನ್ನೆಚ್ಚರಿಕಾ ಕ್ರಮ ವಹಿಸಲು 700 ಸ್ವಯಂ ಸೇವಕರು ಹಾಗೂ 240 ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಪುರಭವನದಲ್ಲಿ ಆಯೋಜಿಸಲಾದ ರಾಜ್ಯ ಮಟ್ಟದ ರಾಷ್ಟ್ರೀಯ ಡೆಂಘೀ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ನಗರದಲ್ಲಿ ಶೇ. 40 ರಿಂದ 50 ರಷ್ಟು ಡೆಂಘೀ ಪ್ರಕರಣಗಳು ಕಂಡುಬರುತ್ತಿದ್ದು, ನಾಗರಿಕರು ಕೂಡ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುವುದು ಅಗತ್ಯವಾಗಿದೆ. ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ ಎಂಬ ಘೋಷವಾಕ್ಯದೊಂದಿಗೆ ಡೆಂಘೀ ಸೋಲಿಸುವ ಅಭಿಯಾನವನ್ನು ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಪ್ರಾರಂಭಿಸಲಾಗಿದ್ದು, ಸಾರ್ವಜನಿಕ ಸ್ಥಳಗಳು, ನೀರು ನಿಲ್ಲುವ ಪ್ರದೇಶಗಳಲ್ಲಿ ಡೆಂಘೀ ತರುವ ಸೊಳ್ಳೆಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದರು.

ವಿಶೇಷವಾಗಿ ಸಾರ್ವಜನಿಕರು ಸ್ವಯಂ ಸ್ವಚ್ಚತೆಗೆ ಆದ್ಯತೆ ನೀಡಿ, ಸುರಕ್ಷತಾ ಕ್ರಮಗಳನ್ನು ಕೈಗೊಂಡಾಗ ಮಾತ್ರ ಡೆಂಘೀ ನಿಯಂತ್ರಣ ಮಾಡಲು ಸಾಧ್ಯ. ಬೆಂಗಳೂರನ್ನು ಡೆಂಘೀ ಮುಕ್ತ ನಗರವನ್ನಾಗಿ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಸ್ವಯಂ ಸೇವಕರು, ಆಶಾ ಕಾರ್ಯಕರ್ತೆಯರು ಆರೋಗ್ಯ ಸಿಬ್ಬಂದಿಗಳು, ಎಲ್ಲರೂ ಸೇರಿ ಉತ್ತಮ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್ ಮಾತನಾಡಿ, ಡೆಂಘೀ ಹರಡದಂತೆ ಮಕ್ಕಳು ಅತಿ ಜಾಗರೂಕತೆಯಿಂದ ಆರೋಗ್ಯವಂತರಾಗಿ ಇರಬೇಕು. ಉತ್ತಮ ಆಹಾರವನ್ನು ಸೇವಿಸಿ ಪ್ರತಿಯೊಬ್ಬರೂ ವ್ಯಾಯಾಮಗಳನ್ನು ರೂಢಿಸಿಕೊಳ್ಳಬೇಕು ಎಂದರು.

ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಶಿವಕುಮಾರ್ ಕೆ.ಬಿ, ಎನ್ ಸಿವಿಬಿಡಿಸಿ ನಿರ್ದೇಶಕಿ ಡಾ. ತನು ಜೈನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕಿ ಡಾ. ತ್ರಿವೇಣಿ ಎಂ, ಜೆಎನ್ ಸಿವಿಬಿಡಿಸಿ ಸಹ ನಿರ್ದೇಶಕಿ ಡಾ.ರಜನಿ. ಎಂ, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಎಸ್.ಎಸ್.ಮದನಿ ಹಾಗೂ ಅಧಿಕಾರಿಗಳು, ಶಾಲಾ ಮಕ್ಕಳು ಮತ್ತಿತರರು ಇದ್ದರು.

> ಪ್ರತಿಯೊಬ್ಬ ನಾಗರಿಕನೂ ಡೆಂಘೀ ನಿಯಂತ್ರಣ ಕಾರ್ಯದಲ್ಲಿ ಕೈಜೋಡಿಸಿದಲ್ಲಿ ಮಾತ್ರ ಡೆಂಘೀ ನಿಯಂತ್ರಣ ಸಾಧ್ಯವಾಗುತ್ತದೆ. ಬೆಂಗಳೂರು ನಗರದ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಹೆಚ್ಚು ಡೆಂಘೀ ಪ್ರಕರಣಗಳು ಕಂಡು ಬರುವ ಪ್ರದೇಶಗಳಲ್ಲಿ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.
>
> – ಸುರಳ್ಕರ್ ವಿಕಾಸ್ ಕಿಶೋರ್, ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ

ಡೆಂಘೀ ನಿಯಂತ್ರಣದ ಕುರಿತು ನಾಗರಿಕರಲ್ಲಿ ಜಾಗೃತಿ

ಸಚಿವ ದಿನೇಶ್ ಗುಂಡೂರಾವ್ ಅವರು ಚಿಕ್ಕಪೇಟೆ ವ್ಯಾಪ್ತಿಯ ಕುಂಬಾರಗುಂಡಿ ಪ್ರದೇಶದಲ್ಲಿ ಮನೆ ಮನೆಗೆ ತೆರಳಿ ಡೆಂಘೀ ವಿರುದ್ಧ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಡೆಂಘೀ ಲಾರ್ವಾ ಉತ್ಪತ್ತಿ ತಾಣವಾದ ಶುದ್ಧ ನೀರಿನ ಘಟಕಗಳಾದ ನೀರಿನ ಟ್ಯಾಂಕ್, ಮನೆಯಲ್ಲಿನ ಬಿಂದಿಗೆ, ಹಳೆಯ ಟೈರ್‌ಗಳು, ತೆಂಗಿನ ಚಿಪ್ಪುಗಳಲ್ಲಿ ಈಡಿಸ್ ಸೊಳ್ಳೆ ಲಾರ್ವಾಗಳನ್ನು ಉತ್ಪಿಸುತ್ತದೆ. ಸಾಧ್ಯವಾದಷ್ಟು ಈ ಎಲ್ಲಾ ತಾಣಗಳನ್ನು ಶುಚಿತ್ವ ಕಾಪಾಡಿ ಕೊಂಡರೆ ನಾವು ಡೆಂಘೀ ಸಂಪೂರ್ಣ ಹತೋಟಿಗೆ ತರಲು ಸಾಧ್ಯವಾಗುತ್ತದೆ ಎಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಸಮಾಚಾರ ಸಣ್ಣದಲ್ಲ

ಒಳಮೀಸಲು ಸಮೀಕ್ಷೆ: ತರಬೇತಿದಾರರ ನೇಮಕ

ಬೆಂಗಳೂರು: ಒಳಮಿಸಲಾತಿ ಸಮೀಕ್ಷೆಯ ಸಮಯದಲ್ಲಿ ಸಾರ್ವಜನಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಮಾಸ್ಟರ್ ತರಬೇತಿದಾರರನ್ನು ನೇಮಿಸಲಾಗಿದೆ. ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಏಕ ಸದಸ್ಯ ಆಯೋಗದ ವರದಿಯ ಪ್ರಕಾರ ಪರಿಶಿಷ್ಟ ಜಾತಿಯ/ಉಪ ಜಾತಿಗಳ ಒಳ ಮೀಸಲಾತಿ ಕುರಿತು ಸಮೀಕ್ಷೆಯು ಚಾಲ್ತಿಯಲ್ಲಿದ್ದು, ಈ ಸಂಬಂಧ ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಾರ್ವಜನಿಕರ ಸಮಸ್ಯೆ ಪರಿಹಾರಕ್ಕಾಗಿ ಮಾಸ್ಟರ್ ತರಬೇತಿದಾರರನ್ನು ನೋಡಲ್ ಅಧಿಕಾರಿಯಗಳನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ. ಕೇಂದ್ರ ಕಚೇರಿಯ ಕಂಟ್ರೋಲ್ ರೂಮ್‌ನಲ್ಲಿ ಮಾಸ್ಟರ್ ತರಬೇತಿದಾರರು ಕಾರ್ಯನಿರ್ವಹಿಸಲಿದ್ದಾರೆ. ಸಾರ್ವಜನಿಕರು ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯ ಬಗ್ಗೆ ಯಾವುದೇ ಮಾಹಿತಿ ಬೇಕಾದಲ್ಲಿ ಬಿಬಿಎಂಪಿ ಸಹಾಯವಾಣಿ ಸಂಖ್ಯೆ 1533 ಕ್ಕೆ ಕರೆ ಮಾಡಿದ್ದಲ್ಲಿ ಅವರು ಮಾಹಿತಿ ನೀಡಲಿದ್ದಾರೆ, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕಿದೆ ಎಂದು ಪಾಲಿಕೆ ಆಡಳಿತ ವಿಭಾಗದ ವಿಶೇಷ ಆಯುಕ್ತ ನವೀನ್ ಕುಮಾರ್ ರಾಜು ತಿಳಿಸಿದರು.

ಅಮಿತ್ ಮಾಳವೀಯ ವಿರುದ್ಧ ಎಫ್‌ಐಆರ್

ಬೆಂಗಳೂರು: ಟರ್ಕಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ನೋಂದಾಯಿತ ಕಚೇರಿ ಹೊಂದಿದೆ ಎಂದು ಸುದ್ದಿ ಪ್ರಸಾರ ಮಾಡಿದ್ದ ರಾಷ್ಟ್ರೀಯ ಸುದ್ದಿ ವಾಹಿನಿಯೊಂದರ ಪ್ರಧಾನ ಸಂಪಾದಕ ಹಾಗೂ ಅದನ್ನು ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದ ಭಾರತೀಯ ಜನತಾ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಯುವ ಕಾಂಗ್ರೆಸ್‌ನ ಕಾನೂನು ಘಟಕದ ಮುಖ್ಯಸ್ಥ ಬಿ.ಎನ್.ಶ್ರೀಕಾಂತ್ ಸ್ವರೂಪ್ ನೀಡಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಟರ್ಕಿಯ ಇಸ್ತಾಂಬುಲ್‌ನಲ್ಲಿರುವ ಕಾಂಗ್ರೆಸ್ ಸೆಂಟರ್‌ನ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕಚೇರಿ ಎಂದು ರಾಷ್ಟ್ರೀಯ ಸುದ್ದಿ ವಾಹಿನಿಯೊಂದು ಸುಳ್ಳು ಸುದ್ದಿ ಪ್ರಸಾರ ಮಾಡಿತ್ತು. ಸುದ್ದಿಯ ವಿಡಿಯೊವನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಅಮಿತ್ ಮಾಳವೀಯ ಹಂಚಿಕೊಂಡಿದ್ದಾರೆ. ಇದು ಭಾರತದ ರಾಷ್ಟ್ರೀಯ ಪಕ್ಷವೊಂದರ ಕುರಿತು ದೇಶದ ಪ್ರಜೆಗಳಲ್ಲಿ ತಪ್ಪು ಭಾವನೆ ಮೂಡಿಸುವ ಸಂಚಿನ ಭಾಗವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರಿನನ್ವಯ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 192 (ಗಲಭೆ ಸೃಷ್ಟಿಸುವ ಉದ್ದೇಶದಿಂದ ಪ್ರಚೋದನೆ ನೀಡುವುದು) ಮತ್ತು 352 (ಶಾಂತಿಭಂಗಕ್ಕೆ ಪ್ರಚೋದನೆ) ಆರೋಪದಡಿ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದತ್ತಿನಿಧಿ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಕೂ.ಗಿ.ಗಿರಿಯಪ್ಪ ಮತ್ತು ಲಕ್ಷ್ಮಿದೇವಮ್ಮ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಶುಕ್ರವಾರ ಸಂಜೆ 5 ಗಂಟೆಗೆ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯಲಿದೆ. ಸಮಾರಂಭದಲ್ಲಿ 2024ನೇ ಸಾಲಿನ ಜಾನಪದ ಕ್ಷೇತ್ರದಲ್ಲಿ ಶಿವರುದ್ರಪ್ಪ, ಸಾಹಿತ್ಯ ಕ್ಷೇತ್ರದಲ್ಲಿ ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಮತ್ತು 2025ನೆಯ ಸಾಲಿನ ಕೃಷಿ ಕ್ಷೇತ್ರದಲ್ಲಿ ಕೆ.ವಿ.ರವಿಕುಮಾರ್, ಶಿಕ್ಷಣ ಕ್ಷೇತ್ರದಲ್ಲಿ ಪೂರ್ಣಚಂದ್ರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಬೆಂಗಳೂರು ಕೃಷಿ ವಿವಿ ಉಪಕುಲಪತಿ ಡಾ.ಎಸ್.ವಿ.ಸುರೇಶ, ಕಸಾಪ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ, ಕನಕಪುರದ ನೇಗಿಲುಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಪಿ.ಕಾಡೇಗೌಡ ಗಬ್ಬಾಡಿ, ದತ್ತಿ ದಾನಿಗಳಾದ ಕೂ.ಗಿ.ಗಿರಿಯಪ್ಪ ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮರಸೂರು-ಮಡಿವಾಳ ಆಕಾರ್ ಬಂದ್ ಲಭ್ಯ

ಆನೇಕಲ್: ಮರಸೂರು ಮತ್ತು ಮಡಿವಾಳ ಗ್ರಾಮಗಳ ಸರ್ವೆ ದಾಖಲೆಗಳಾದ ಆಕಾರ್ ಬಂದ್ ಇನ್ನು ಮುಂದೆ ಆನೇಕಲ್ ಕಚೇರಿಯಲ್ಲಿಯೇ ಲಭ್ಯ

ಎಂದು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ಮಂಜುನಾಥ್ ತಿಳಿಸಿದರು. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಹಾಗೂ ತಮಿಳುನಾಡಿನ ನಡುವೆ ಭಾಷಾವಾರು ಪ್ರಾಂತ್ಯ ಹಾಗೂ ಗಡಿ ಗುರುತಿಸುವ ವೇಳೆ, ಮರಸೂರು ಮತ್ತು ಮಡಿವಾಳ ಗ್ರಾಮಗಳ ಆಕಾರ ಬಂದ್ ದಾಖಲೆ ತಮಿಳುನಾಡಿನಿಂದ ಆನೇಕಲ್ ಕಂದಾಯ ವಿಭಾಗಕ್ಕೆ ವರ್ಗಾವಣೆ ಗೊಂಡಿರಲಿಲ್ಲ. ಇದರಿಂದಾಗಿ ಈ ಗ್ರಾಮಗಳ ರೈತರು ಆಸ್ತಿ ವಿಭಾಗ, ಖರೀದಿ, ವ್ಯವಹಾರ ನಡೆಸಲು ಅಗತ್ಯವಾಗಿ ಬೇಕಾಗಿದ್ದ 11ಇ ನಕ್ಷೆಗಳು ಸರ್ವೆ ಇಲಾಖೆ ಮೂಲಕ ಪಡೆಯಲು ಸಾಧ್ಯವಾಗದೇ ತೊಂದರೆ ಅನುಭವಿಸುತ್ತಿದ್ದರು. ಎರಡು ದಶಕಗಳಿಂದ ಬೇರುಬಿಟ್ಟಿದ್ದ ಜ್ವಲಂತ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ದಿಟ್ಟ ನಿರ್ಧಾರ ಕೈಗೊಂಡು, ಅನುಭವಿ ಅಧಿಕಾರಿಗಳ ತಂಡಕ್ಕೆ ಸೂಚನೆ ನೀಡಿ ಹಾಲಿ ಲಭ್ಯ ಇರುವ ಇತರ ದಾಖಲೆಗಳನ್ನ ಅಭ್ಯಸಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು. ಅದರಂತೆ ಜಂಟಿ ನಿರ್ದೇಶಕ ಎಸ್. ನಿಜಾರ ಅಹಮದ್, ಉಪ ನಿರ್ದೇಶಕಿ ಪಿ. ಕುಸುಮಲತಾ, ಸಹಾಯಕ ನಿರ್ದೇಶಕ ಸಿ.ಮದನ್ ತಂಡದ ಸತತ ಪರಿಶ್ರಮದಿಂದಾಗಿ ಎರಡು ದಶಕಗಳ ಸಮಸ್ಯೆಗೆ ಈಗ ಶಾಶ್ವತ ಪರಿಹಾರ ಸಿಕ್ಕಿದೆ. ಅವರ ಈ ಪರಿಶ್ರಮಕ್ಕೆ ಅಭಿನಂದಿಸುತ್ತೇನೆ ಎಂದು ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

ಸ್ಮಾರ್ಟ್ ಮೀಟರ್ ಹಗರಣ: ಬಿಜೆಪಿ ನಾಯಕರಿಂದ ರಾಜ್ಯಪಾಲರ ಭೇಟಿ

ಸರಕಾರದ ವಿರುದ್ಧ ಬಿಜೆಪಿ ನಿಯೋಗ ದೂರು

ಬೆಂಗಳೂರು: ವಿದ್ಯುತ್ ಸ್ಮಾರ್ಟ್ ಮೀಟರ್ ಮೂಲಕ ಹಗಲು ದರೋಡೆ ಮಾತ್ರವಲ್ಲದೆ, ಗ್ರಾಹಕರಿಗೆ ಅನ್ಯಾಯವಾಗುತ್ತಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಟೀಕಿಸಿದ್ದಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ ಮತ್ತು ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅವರ ನೇತೃತ್ವದ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಸ್ಮಾರ್ಟ್ ಮೀಟರ್ ಕುರಿತು ರಾಜ್ಯಪಾಲರ ಜತೆ ಚರ್ಚೆ ಮಾಡಿದೆ. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಶ್ವತ್ಥನಾರಾಯಣ್, ಈ ಹಗರಣದಲ್ಲಿ ಗ್ರಾಹಕರಿಗೆ ಅನ್ಯಾಯವಾಗುತ್ತಿದೆ. ಸಾವಿರಾರು ಕೋಟಿ ಲೂಟಿ ನಡೆಯುತ್ತಿದೆ. ರಾಜ್ಯ ಸರಕಾರ, ಇಂಧನ ಇಲಾಖೆ ಹಾಗೂ ಅಧಿಕಾರಿಗಳು ಇದರಲ್ಲಿ ಭಾಗಿ ಆಗಿರುವುದಾಗಿ ರಾಜ್ಯಪಾಲರ ಗಮನ ಸೆಳೆದಿರುವುದಾಗಿ ಹೇಳಿದರು. ಈ ಕುರಿತ ದಾಖಲೆಗಳೊಂದಿಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದೇವೆ. ಇದುವರೆಗೂ ಎಫ್ಐಆರ್ ದಾಖಲಾಗಿಲ್ಲ. ಈ ಸಂಬಂಧ ಲೋಕಾಯುಕ್ತಕ್ಕೆ ಮತ್ತೊಮ್ಮೆ ನೆನಪೋಲೆ ಕೊಡಲಾಗಿದೆ ಎಂದರು.

ಅಧಿಕಾರ ದುರ್ಬಳಕೆ ಮಾಡಿದ ಇಂಧನ ಸಚಿವರು, ಇತರ ಅಧಿಕಾರಿಗಳು, ಗುತ್ತಿಗೆ ಕೊಟ್ಟು ಕಾನೂನಿನ ಉಲ್ಲಂಘನೆ ಮಾಡಿದ್ದಾರೆ. ಅಧಿಕಾರ ದುರ್ಬಳಕೆ, ಹಗಲು ದರೋಡೆ ಮಾಡಿದ ಸ್ಮಾರ್ಟ್ ಮೀಟರ್ ಹಗರಣವನ್ನು ತಾರ್ಕಿಕ ಅಂತ್ಯ ಕಾಣಿಸಲು ಯೋಜಿಸಿದ್ದೇವೆ ಎಂದರು. ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ಮತ್ತು ಕೇಂದ್ರ ವಿದ್ಯುತ್ ಆಯೋಗದ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡುತ್ತಿರುವುದು ಪ್ರಥಮ ಉಲ್ಲಂಘನೆ. ಇಲ್ಲಿ ದುಬಾರಿ ದರ ಇದೆ. ಅರ್ಹತೆ ಇಲ್ಲದ ಗುತ್ತಿಗೆದಾರರಿಗೆ ಗುತ್ತಿಗೆ ಕೊಡಲಾಗಿದೆ. ಕಾನೂನಿನ ಉಲ್ಲಂಘನೆ, ಅಧಿಕಾರ ದುರ್ಬಳಕೆ ಮಾಡಿದ ಕುರಿತು ರಾಜ್ಯಪಾಲರ ಗಮನಕ್ಕೆ ತಂದಿದ್ದಾಗಿ ವಿವರಿಸಿದರು. ಶಾಸಕರಾದ ಕೆ.ಗೋಪಾಲಯ್ಯ, ಧೀರಜ್ ಮುನಿರಾಜು, ಪಕ್ಷದ ಪ್ರಮುಖರು ಈ ನಿಯೋಗದಲ್ಲಿದ್ದರು.



ಪ್ರತಿಪಕ್ಷ ನಾಯಕ ಆರ್.ಅಶೋಕ, ಡಾ.ಸಿ.ಎನ್.ಅಶ್ವತ್ಥನಾರಾಯಣ್ ನೇತೃತ್ವದ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಸ್ಮಾರ್ಟ್ ಮೀಟರ್ ಕುರಿತು ರಾಜ್ಯಪಾಲರ ಜತೆ ಚರ್ಚೆ ಮಾಡಿತು.

ಸರಕಾರದ ಬೆಂಗಳೂರು ನಗರ ಪ್ರವಾಸ ಕೇವಲ ನಾಟಕವಾಗಿದೆ. ಮಳೆಯಿಂದ ಈ ಪರಿಸ್ಥಿತಿ ನಿರ್ಮಾಣವಾಗಲು ಇವರ ಕೆಟ್ಟ ಆಡಳಿತ- ಅವ್ಯವಸ್ಥೆಯೇ ಕಾರಣ. ಯಾವ ಕ್ರಮವನ್ನೂ ವಹಿಸಿಲ್ಲ. ಜನರ ರಕ್ಷಣೆಗೆ ಬಂದಿಲ್ಲ. ಹೂಳೆತ್ತುವ ಕಾರ್ಯವೇ ಆಗಿಲ್ಲ. ಅಭಿವೃದ್ಧಿಗೆ ಹಣ ಕೊಟ್ಟಿಲ್ಲ. ಈ ರೀತಿಯ ದುಸ್ಥಿತಿಗೆ ಬೆಂಗಳೂರಿನ ಮುಳುಗಡೆ, ಹಲವಾರು ಜನರು ಪ್ರಾಣ ಕಳಕೊಂಡಿದ್ದು, ಎಲ್ಲೆಡೆ ಅಸ್ತವ್ಯಸ್ತ ಬದುಕಿಗೆ ಈ ರಾಜ್ಯ ಸರಕಾರ, ಇವರ ಆಡಳಿತವೇ ಮುಖ್ಯ ಕಾರಣ. ಕಾಂಗ್ರೆಸ್ ಸರಕಾರದಿಂದ ನಗರಕ್ಕೆ ಏನೂ ಪರಿಹಾರ ಸಿಗುವುದಿಲ್ಲ.

- ಡಾ.ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಉಪಮುಖ್ಯಮಂತ್ರಿ

ರಾಜ್ಯಪಾಲರಿಗೆ ಬಿಜೆಪಿ ದೂರು ಕೊಟ್ಟಿದ್ದೇನು?

- ವಿದ್ಯುತ್ ಕಾನೂನು ಉಲ್ಲಂಘಿಸಿ ಸ್ಮಾರ್ಟ್ ಮೀಟರ್ ಕಡ್ಡಾಯ
- ಸ್ಮಾರ್ಟ್ ಮೀಟರ್ ಮೂಲಕ ಜನರ ಹಗಲು ದರೋಡೆ
- ರಾಜ್ಯ ಸರಕಾರ, ಇಂಧನ ಇಲಾಖೆ ಕೋಟಿ ಕೋಟಿ ಲೂಟಿ
- ಲೋಕಾಯುಕ್ತಕ್ಕೆ ದೂರು ಕೊಟ್ಟರು ಎಫ್ಐಆರ್ ಆಗಿಲ್ಲ
- ಸ್ಮಾರ್ಟ್ ಮೀಟರ್ ಹಗರಣ ತಾರ್ಕಿಕ ಅಂತ್ಯಕ್ಕೆ ಸಿದ್ಧತೆ

ಕೈದಿಗಳ ಮಾರಾಮಾರಿ 1 ಲಕ್ಷ ರುಪಾಯಿ ನಷ್ಟ

ಮಂಗಳೂರು: ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಮಂಗಳವಾರ ಕೈದಿಗಳಿಂದ ಹಲ್ಲೆ ನಡೆದು, ಸರಕಾರಿ ಆಸ್ತಿಗೆ ಹಾನಿ ಮಾಡಿದ ಘಟನೆ ನಡೆದಿದೆ.

ಕಾರಾಗೃಹದ ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ವಿಚಾರಣಾ ಕೈದಿಗಳ ಮೇಲೆ ಎ ಬ್ಯಾರಕ್‌ನ ಕೆಲವು ಕೈದಿಗಳು ಹಲ್ಲೆ ನಡೆಸಿದ್ದಾರೆ ಎಂದು ಕಾರಾಗೃಹದ ಅಧೀಕ್ಷಕ ಬಿ. ಸುರೇಶ್ ಅವರಿಗೆ ಸಿಬ್ಬಂದಿಗಳಿಂದ ಮಾಹಿತಿ ದೊರೆತಿದೆ. ಅಧೀಕ್ಷಕರು ಘಟನಾ ಸ್ಥಳಕ್ಕೆ ಭೇಟಿ ನೀಡಿ ವಿಚಾರಿಸಿದಾಗ, ಎ ಬ್ಯಾರಕ್‌ನ ವಿಚಾರಣಾ ಕೈದಿಗಳು ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ಇತರ ವಿಚಾರಣಾ ಕೈದಿಗಳಿಗೆ ದೈಹಿಕವಾಗಿ ಹಲ್ಲೆ ಮಾಡಿರುವುದು ದೃಢಪಟ್ಟಿದೆ. ಈ ಘಟನೆಯ ವಿಷಯ ತಿಳಿದ ಬಿ ಬ್ಯಾರಕ್‌ನ ಕೈದಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಏರು ಧ್ವನಿಯಲ್ಲಿ ಕೂಗಾಡಿದ್ದಾರೆ. ಇದರ ಜತೆಗೆ, ಅವರು ಬಿ ಬ್ಯಾರಕ್‌ನ ಕಬ್ಬಿಣದ ಬಾಗಿಲನ್ನು ಮುರಿಯಲು ಪ್ರಯತ್ನಿಸಿದ್ದಾರೆ. 10 ಸಂಖ್ಯೆಯ ಸಿಸಿಟಿವಿ ಕ್ಯಾಮೆರಾಗಳನ್ನು ಹಾನಿಗೊಳಿಸಿದ್ದಾರೆ. ಅವುಗಳ ತಂತಿಗಳನ್ನು ಕಿತ್ತು ಹಾಕಿದ್ದಾರೆ, ಮತ್ತು ಮೊಬೈಲ್ ಜಾಮರ್ ಆಂಟೆನಾ ಧ್ವಂಸಗೊಳಿಸಿದ್ದಾರೆ. ಈ ಘಟನೆಯಿಂದ ಸರಕಾರಿ ಆಸ್ತಿಗೆ ಸುಮಾರು 1,00,000 ರು. ಹಾನಿಯಾಗಿರುವುದು ಅಂದಾಜಿಸಲಾಗಿದೆ. ಹಲ್ಲೆಗೊಳಗಾದ ವಿಚಾರಣಾ ಕೈದಿಗಳಿಗೆ ಸಾಧಾರಣ ಸ್ವರೂಪದ ಗಾಯಗಳಾಗಿದ್ದು, ಸರಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಕಾರಾಗೃಹದ ಅಧೀಕ್ಷಕ ಬಿ. ಸುರೇಶ್ ಅವರು ಈ ಘಟನೆಯ ಬಗ್ಗೆ ಮೇಲಧಿಕಾರಿಗಳೊಂದಿಗೆ ಚರ್ಚಿಸಿ, ಮಂಗಳೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಗೂಗಲ್ ಮ್ಯಾಪ್: ಗದ್ದೆಗೆ ಬಂದ ಟಿಟಿ

ಚಿಕ್ಕಮಗಳೂರು: ಗೂಗಲ್ ಮ್ಯಾಪ್ ನಂಬಿ ಬಂದಿದ್ದ ಪ್ರವಾಸಿಗರು, ವಾಹನವನ್ನು ಗದ್ದೆಗೆ ಇಳಿಸಿಕೊಂಡು ಪರದಾಡಿದ ಘಟನೆ ಆಲ್ದೂರು ಬಳಿ ನಡೆದಿದೆ. ಬೆಂಗಳೂರು ಮೂಲದ ಪ್ರವಾಸಿಗರು ಬಾಳೆಹೊನ್ನೂರು ಕಡೆಯಿಂದ ಮೂಡಿಗೆರೆಗೆ ತೆರಳುತ್ತಿದ್ದರು. ಈ ವೇಳೆ, ಗೂಗಲ್ ಮ್ಯಾಪ್ ಕೈ ಕೊಟ್ಟಿದ್ದು, ವಾಹನ ಗದ್ದೆ ಬಳಿ ಹೋಗಿ ಸಿಕ್ಕಿ ಹಾಕಿಕೊಂಡಿದೆ. ಇದರಿಂದ ವಾಹನ ವಾಪಸ್ ತೆಗೆಯಲಾಗದೆ ಪ್ರವಾಸಿಗರು ಕೆಲವು ಕಾಲ ಅಲ್ಲೇ ಪರದಾಡಿದ್ದಾರೆ. ಪ್ರವಾಸಿಗರ ಪರದಾಟ ನೋಡಿ, ಸ್ಥಳೀಯರು ಟ್ರ್ಯಾಕ್ಟರ್‌ಗೆ ಟಿಟಿಯನ್ನು ಕಟ್ಟಿ, ರಸ್ತೆಯ ಬಳಿ ತಂದು ಬಿಟ್ಟಿದ್ದಾರೆ. ಬಳಿಕ ಸ್ಥಳೀಯರಿಂದ ರಸ್ತೆಯ ಬಗ್ಗೆ ಮಾಹಿತಿ ಪಡೆದು, ಗೂಗಲ್ ಮ್ಯಾಪ್ ಆಫ್ ಮಾಡಿ ಪ್ರವಾಸಿಗರು ಅಲ್ಲಿಂದ ತೆರಳಿದ್ದಾರೆ.

ಕ್ರಿಕೆಟಿಗನಿಗೆ 24 ಲಕ್ಷ ರು. ವಂಚನೆ

ಚಿಕ್ಕೋಡಿ: ರಾಜಸ್ಥಾನ ರಾಯಲ್ಸ್ ತಂಡಕ್ಕೆ ಸೇರಿಸೋದಾಗಿ ಚಿಕ್ಕೋಡಿಯ ರಾಜ್ಯ ಮಟ್ಟದ ಕ್ರಿಕೆಟಿಗನಿಗೆ ಸೈಬರ್ ವಂಚಕರು 24 ಲಕ್ಷ ರು. ವಂಚಿಸಿರುವುದು ಬೆಳಕಿಗೆ ಬಂದಿದೆ. ಚಿಕ್ಕೋಡಿ ತಾಲೂಕಿನ ಚಿಂಚಣಿ ಗ್ರಾಮದ ರಾಕೇಶ್ ಯಡೂರು (19) ವಂಚನೆಗೊಳಗಾದ ಯುವಕ. ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ ಆಡುತ್ತಿದ್ದ ಯುವಕನನ್ನು, ವಂಚಕರು ಇನ್ಸ್ಟಾಗ್ರಾಮ್‌ನಲ್ಲಿ ಸಂಪರ್ಕಿಸಿದ್ದಾರೆ. ರಾಜಸ್ಥಾನ ತಂಡಕ್ಕೆ ಸೇರಿಸುತ್ತೇವೆ ಎಂದು ನಂಬಿಸಿದ್ದಾರೆ.ತಂಡಕ್ಕೆ ಸೇರಿಸಲು, 24 ಲಕ್ಷ ರು. ನೀಡುವಂತೆ ಯುವಕನಿಗೆ ವಂಚಕರು ಹೇಳಿದ್ದರು. ಅದರಂತೆ ವಂಚಕರ ಭರವಸೆ ನಂಬಿ ಯುವಕ ಹಣವನ್ನು ಅವರ ಖಾತೆಗೆ ವರ್ಗಾಯಿಸಿದ್ದಾನೆ. ಹಣ ನೀಡಿದರೂ ಯಾವುದೇ ತಂಡಕ್ಕೂ ಆಯ್ಕೆಯಾಗದೆ ಇದ್ದಿದ್ದರಿಂದ ಪೊಲೀಸರ ಮೊರೆ ಹೋಗಿದ್ದಾನೆ.

ಧರ್ಮಸ್ಥಳಕ್ಕೆ ತೆರಳಿದ್ದ ಒಂದೇ ಕುಟುಂಬದ ನಾಲ್ವರು ಸಾವು

ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

ಬಸವನಬಾಗೇವಾಡಿ: ಭೀಕರ ರಸ್ತೆ ಅಪಘಾತದಲ್ಲಿ 6 ಮಂದಿ ಮೃತಪಟ್ಟಿರುವ ಘಟನೆ ವಿಜಯಪುರ ಬಸವನ ಬಾಗೇವಾಡಿ ತಾಲೂಕಿನ ಮನಗೂಳಿ ಬಳಿ ನಡೆದಿದೆ.

ಬುಧವಾರ ಬೆಳಗಿನ ಜಾವ ಖಾಸಗಿ ಬಸ್, ಕಂಟೇನರ್ ಹಾಗೂ ಕಾರಿನ ನಡುವೆ ಸರಣಿ ಅಪಘಾತ ನಡೆದಿದ್ದು, ಕಾರಿನಲ್ಲಿದ್ದ 4 ಮಂದಿ ಉಸಿರು ಚೆಲ್ಲಿದ್ದಾರೆ. ಕಾರಿನಲ್ಲಿ ಧರ್ಮಸ್ಥಳಕ್ಕೆ ತೆರಳಿದ್ದ ಒಂದೇ ಕುಟುಂಬದ 4 ಮಂದಿ ದುರಂತ ಅಂತ್ಯ ಕಂಡಿದ್ದಾರೆ. ಕಾರು ಚಾಲಕ ವಿಕಾಸ ಶಿವಪ್ಪ ಮಕನಿ (30), ಕೆನರಾ ಬ್ಯಾಂಕ್ ಮ್ಯಾನೇಜರ್ ಟಿ.ಭಾಸ್ಕರನ್ ಮಲಕಂಠನ್,(36) ಪತ್ನಿ ಪವಿತ್ರಾ, (34) ಮಗ ಅಭಿರಾಮ,(14) ಮಗಳು ಜೋಸ್ನಾ(12) ಮೃತಪಟ್ಟಿದ್ದಾರೆ. ಪ್ರವೀಣ ತೇಜ ಗಂಭೀರ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ನಿಯಂತ್ರಣ ತಪ್ಪಿದ ಕಾರು ಏಕಾಏಕಿ ಡಿವೈಡರ್‌ಗೆ ಡಿಕ್ಕಿ ಹೊಡೆದು ಎದುರು ಬರುತ್ತಿದ್ದ ಖಾಸಗಿ ಬಸ್‌ಗೆ ಡಿಕ್ಕಿ ಹೊಡೆದಿದೆ. ಕಾರು ಡಿಕ್ಕಿ ಹೊಡೆದ ಪರಿಣಾಮ ಡ್ರೈವರ್ ಸೇರಿ ಕಾರಿನಲ್ಲಿದ್ದ 5 ಮಂದಿ ಹಾಗೂ ಖಾಸಗಿ ಬಸ್ ಚಾಲಕ ಲಕ್ಕಪ್ಪ ಲಮಾಣಿ ಮೃತಪಟ್ಟಿದ್ದಾರೆ. ಆಂಧ್ರ ಮೂಲದವರಾಗಿದ್ದ ಭಾಸ್ಕರ್ ಕಳೆದ 15 ದಿನದ ಹಿಂದೆ ಹೊರ್ತಿಗೆ ಮ್ಯಾನೇಜರ್ ಆಗಿ ಬಂದಿದ್ದರು ಎನ್ನಲಾಗಿದೆ. ದೇವರ ದರ್ಶನ ಪಡೆದು ಧರ್ಮಸ್ಥಳದಿಂದ ವಾಪಸ್ ಬರುವ ವೇಳೆ ದುರಂತ ಸಂಭವಿಸಿದೆ. ಘಟನಾ ಸ್ಥಳಕ್ಕೆ ಎಸ್ಪಿ ಲಕ್ಷ್ಮಣ ನಿಂಬರಗಿ, ಅಡಿಷನಲ್ ಎಸ್ಪಿ ಶಂಕರ ಮಾರಿಹಾಳ ಹಾಗೂ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಕೈಗೊಂಡಿದ್ದಾರೆ ಮನಗೂಳಿ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಪರೀಕ್ಷೆ ಫೇಲ್: ವಿದ್ಯಾರ್ಥಿ ಆತ್ಮಹತ್ಯೆ

ಗದಗ: ಇತ್ತೀಚೆಗೆ ಪ್ರಕಟವಾದ ಎಸ್ಎಸ್ಎಲ್‌ಸಿ ಪರೀಕ್ಷೆ-1 ರಲ್ಲಿ ಅನುತ್ತೀರ್ಣ ಆದ ಕಾರಣಕ್ಕೆ ಪಟ್ಟಣದ ಅನ್ನದಾನೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿ ರಾಕೇಶ್ ನಾಗೇಶಪ್ಪ ಮಣ್ಣೊಡ್ಡರ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ನಡೆದಿದೆ. ಕನ್ನಡ(60), ಇಂಗ್ಲಿಷಷ್(48) ವಿಷಯಗಳಲ್ಲಿ ಪಾಸಾಗಿದ್ದು, ಉಳಿದ ಹಿಂದಿ (34), ಗಣಿತ (34), ವಿಜ್ಞಾನ (35), ಸಮಾಜ ವಿಜ್ಞಾನ (27) ವಿಷಯಗಳಲ್ಲಿ ಫೇಲಾಗಿದ್ದಾನೆ. ಫಲಿತಾಂಶ ಪ್ರಕಟವಾದ ದಿನದಿಂದ ಮನಸ್ಸಿಗೆ ತೆಗೆದುಕೊಂಡಿದ್ದ ವಿದ್ಯಾರ್ಥಿಯು ಅದನ್ನೇ ಹೆಚ್ಚಾಗಿ ವಿಚಾರ ಮಾಡುತ್ತಿದ್ದ. ಇದೇ ವಿಷಯಕ್ಕೆ ಮನನೊಂದು ನರೇಗಲ್ ಬಸ್ ನಿಲ್ದಾಣದ ಎದುರಿಗೆ ಇರುವ ಸರಕಾರಿ ಶಾಲೆಯ ಆವರಣದಲ್ಲಿನ ಗಿಡಕ್ಕೆ ನೇಣು ಬಿಗಿದುಕೊಂಡಿದ್ದಾನೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಮೃತ ವಿದ್ಯಾರ್ಥಿಯ ತಂದೆ ಮನೆ ಹಾಗೂ ಕಟ್ಟಡಗಳನ್ನು ಕಟ್ಟುವ ಕೆಲಸ ಮಾಡುತ್ತಾರೆ. ಅವರಿಗೆ ಇಬ್ಬರು ಗಂಡುಮಕ್ಕಳಿದ್ದು ರಾಕೇಶ್ ಕಿರಿಯ ಮಗನಾಗಿದ್ದಾನೆ. ಈ ಕುರಿತು ನರೇಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಟ್ಟುನಿಂತ ಬಸ್ ತಳ್ಳಿದ ಮಹಿಳೆಯರು

ಬಳ್ಳಾರಿ: ಹೈವೇಯಲ್ಲಿ ನಿಂತ ಸಾರಿಗೆ ಬಸ್ಸನ್ನು ಮಹಿಳೆಯರೇ ತಳ್ಳಿದ ಘಟನೆ ವಿಜಯನಗರ ಜಿಲ್ಲೆಯ ಹೊಸಪೇಟೆಯ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ನಡೆದಿದೆ. ಮಂಗಳವಾರ ಹೊಸಪೇಟೆಯಲ್ಲಿ ನಡೆದ ಕಾಂಗ್ರೆಸ್ ಸಾಧನಾ ಸಮಾವೇಶಕ್ಕೆ ಬಸ್ಸಿನಲ್ಲಿ ಮಹಿಳೆಯರು ಬಂದಿದ್ದರು. ಕಾರ್ಯಕ್ರಮ ಮುಗಿದ ಬಳಿಕ ತಮ್ಮೂರಿಗೆ ತೆರಳುವ ಬಸ್ಸು ಹತ್ತಿದ್ದಾರೆ. ಆದರೆ ಚಾಲಕ ಸಾಕಷ್ಟು ಬಾರಿ ಪ್ರಯತ್ನ ಪಟ್ಟರೂ ಬಸ್ಸು ಚಾಲನೆ ಆಗಿಲ್ಲ. ಕೊನೆಗೆ ಬಸ್ಸಿನಿಂದ ಇಳಿದ ಮಹಿಳೆಯರು ಹಿಂದಿನಿಂದ ತಳ್ಳಿದ್ದಾರೆ. ಮಹಿಳೆಯರು ಬಸ್ಸು ತಳ್ಳುತ್ತಿರುವ ವಿಡಿಯೋ ಫುಲ್ ವೈರಲ್ ವೈರಲ್ ಆಗಿದೆ.



ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧರಣಾ ಸೇವೆಗಳು)
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು, ಶಿವಮೊಗ್ಗ.
Ph:08182-295502 Email:-cpsmg.prisons@ka.gov.in

ಪ್ರಕಟಣೆ

2025-26 ನೇ ಸಾಲಿಗೆ
1. ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆ ಇ-ದರಖಾಸ್ತು ಸಂಖ್ಯೆ: PCSD/2025-26/SE0014, ಇ.ಎಂ.ಡಿ. ಮೊತ್ತ.40,856-00, ಟೆಂಡರ್ ಕರೆದ ದಿನಾಂಕ: 17/05/2025. ಕೊನೆಯ ದಿನಾಂಕ: 18/06/2025
ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ಈ ದರಖಾಸ್ತಿನ ಕುರಿತು ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ www.eproc.karnataka.gov.in ನಲ್ಲಿ ಪಡೆಯಲು ತಿಳಿಸಿದೆ. ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ.
ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ, ಶಿವಮೊಗ್ಗ, ಪಿನ್ ಕೋಡ್: 577222
PhNo.: 08182-295502 / 9845460040
ಸಹಿ/- ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25-26/134/05/292

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ.
ದೂರವಾಣಿ : 0831-2498100 ಫ್ಯಾಕ್ಸ್ : 0831-2405467.
ಸಂಖ್ಯೆ : ವಿ.ತಾ.ವಿ./ಬೆ./ಸ್ಥಾ.ಅ./2025-26/ಐ.ಎಫ್.ಟಿ. ನಂ. 23/797
ದಿನಾಂಕ : 20-05-2025

ಟೆಂಡರ್ ಪ್ರಕಟಣೆ
ದ್ವಿ-ಲಕೋಟೆ ಪದ್ಧತಿ (ಇ-ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿ.ತಾ.ವಿ., ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ.
ಕಾಮಗಾರಿ ಹೆಸರು : ವಿ.ತಾ.ವಿ.ಯ. ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಹೊಸ ತರಗತಿಯ ಸಂಕೀರ್ಣದಲ್ಲಿ ಸೆಮಿನಾರ ಹಾಲ್ ನಿರ್ಮಾಣ ಮಾಡುವ ಕಾಮಗಾರಿ ಮೊತ್ತ ರೂ. 1,40,17,570/- (ತೆರಿಗೆ ರಹಿತ) ಇದೇ ತೆರನಾದ ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : 22-05-2025 ರಿಂದ ಪಡೆದುಕೊಳ್ಳಬಹುದು.
ಸಹಿ/- ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/292/ಮಣಿಪಾಲ್/2025-26

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ-571 401
(Autonomous Medical Institution, Government of Karnataka)
(Fax & Phone : 08232-231001, 222086,
E-mail: mimsmandya@gmail.com) Website: www.mimsmandya.org

ಇ-ಟೆಂಡರ್ ಪ್ರಕಟಣೆ
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಭದ್ರತಾ ಸಿಬ್ಬಂದಿಗಳನ್ನು ಸೇವಾ ಗುತ್ತಿಗೆ (Services Contract) ಮೂಲಕ ಪಡೆಯಲು ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ : 01. ಟೆಂಡರ್ ಪ್ರಕಟಣೆ ಸಂಖ್ಯೆ : No.MIMS/O.S/Security Guard/ tender/E-tender/04/2024-25Date: 17.05.2025. ಟೆಂಡರ್ ವಿವರ : ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಭದ್ರತಾ ಸಿಬ್ಬಂದಿಗಳನ್ನು ಸೇವಾ ಗುತ್ತಿಗೆ ಮೂಲಕ ಪಡೆಯಲು ಇ-ಟೆಂಡರ್ ಆಹ್ವಾನಿಸುವ ಬಗ್ಗೆ. ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) : ರೂ.280.00 ಲಕ್ಷಗಳು(ರೂ.ಎರಡು ನೂರ ಎಂಭತ್ತು ಲಕ್ಷಗಳು ಮಾತ್ರ). ಇಎಂಡಿ ಮೊತ್ತ ರೂ. : 1.5% ಇ-ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https//kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ(ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.
ಸಹಿ/-ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್ಎಂಸಿ&ಎ/114/2025-26

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು -570010
ದೂರವಾಣಿ: 0821-2424673/74 ಇಮೇಲ್: commr_amh@yahoo.in
ಟೆಂಡರ್ ಅಧಿಸೂಚನೆ ಸಂಖ್ಯೆ:ಆ.ಪು.ಸಂ.ಪ/ಸಂ.ವಿ/ಟೆಂ-9/2025-26 ದಿನಾಂಕ: 17.05.2025
ಟೆಂಡರ್ ಅಧಿಸೂಚನೆ
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಕೆಡಬ್ಲ್ಯೂ-3 ರೀತ್ಯಾ ಪುರಾತನ ಸ್ಮಾರಕಗಳ/ದೇವಾಲಯದ ಸಂರಕ್ಷಣೆ 01 ಕಾಮಗಾರಿ DAMH/2025-26:OW/WORK_INDENT-127(call-2) ಟೆಂಡರ್‌ಗಿಟ್ಟ ಮೊತ್ತ ರೂ.100.00 ಲಕ್ಷಗಳು ಈ ಕಾಮಗಾರಿಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕುಮೆಂಟ್‌ನಲ್ಲಿನ ಷರತ್ತಿಗಳಿಗೆ ಅನುಗುಣವಾಗಿ ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನಿಗಧಿಪಡಿಸಿರುವ ವರ್ಗಗಳ ಅನುಸಾರ ಈ ಕಾಮಗಾರಿಗಳ ಟೆಂಡರ್‌ಗೆ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪೋರ್ಟಲ್‌ನಲ್ಲಿ **ದಿನಾಂಕ 19.05.2025** ರಿಂದ ಪಡೆಯಬಹುದು.

ಟೆಂಡರ್‌ನ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	28.05.2025, 17.00 ಗಂಟೆ
ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	03.06.2025, 16.00 ಗಂಟೆ
ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	05.06.2025, 16.30 ಗಂಟೆ
ಟೆಂಡರ್ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	09.06.2025, 11.00 ಗಂಟೆ

ಸಹಿ/- ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
DIPR/MYS/KAVITA/228/2025-26

SANT GADAGEBABA MULTI STATE COOPERATIVE CREDIT SOCIETY LTD
Shahu Nagar Majalgaon, Tq. Majalgaon, District. Beed, Maharashtra Pin — 431131
Regd No:MSCS/CR/708/2012
Notice of Annual General Meeting (Only for Members)
Honourable Members.
This is to inform all the members of the society that the 13th Annual General Meeting of Sant Gadagebaba Multi State Co-operative Credit Society Ltd. for the year 2025-2026 has been organized on Tuesday, dated 27th May 2025 at 11.00 am sharp in the hall of the society at Saikrupa Bhavan, 3rd Floor, Kharalwadi, Pimpri, Pune - 411018 for the following business. However, all the members are requested to attend and cooperate on time.
- AGENDA OF THE MEETING -
1) Read out and confirm the proceedings of previous Special General Meeting held on 12/10/2019
2) Approve the annual report, balance sheet and profit and loss account for the year 2019-20, 2020-21, 2021-22, 2022-23, 2023-24 and 2024-25.
3)Sanction the appropriation of profit as recommended by the Board of Directors for the year March 31st, 2025.
4)Read and take note of the audit report for the year 2019-20, 2020-21, 2021-22, 2022-23,2023-24 and 2024-25. 5)Appoint the Statutory Auditor for the year 2025-26 and decide his remuneration. 6) Approve the resignation and appointment of new members on Board 7) Election of Board of Directors of the Society.8)To approve the absence of members. 9)To discuss and make decisions on the issues that arise from time to time with the permission of the Honorably Chairman.
Note:1)If the meeting is adjourned due to lack of quorum, the meeting will be held on the" Same day at the same place for after half an hour to discuss the same issues and the quorum rule will not apply to such adjourned meeting.
Place: Pune. Date: 7/5/2025
Board of Directors Sd/-

VISHWAVANI TV SPECIAL ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಾಮರಾಜನಗರ ವಿಭಾಗ, ಚಾಮರಾಜನಗರ-571313 ದೂರವಾಣಿ/ಪ್ಯಾಕ್ಸ್ ಸಂಖ್ಯೆ: 08226-222027
ಇ-ಮೇಲ್: eecnr@kpwd.gov.in/pwdeechngr@gmail.com
ಸಂಖ್ಯೆ /ಕಾ.ಪಾ.ಅ/ಚಾ.ವಿ.ಚಾ/ಟೆಂಡರ್/2025-26 ದಿನಾಂಕ:17.05.2025
(ಎರಡು ಲಕೋಟೆ), ಅಲ್ಪಾವಧಿ ಟೆಂಡರ್
ಅಧಿಸೂಚನೆ ಸಂಖ್ಯೆ 04/2025-26 ದಿನಾಂಕ 17.05.2025 (2ನೇ ಕರೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟಾಂಡರ್ಡ್ ಟೆಂಡರ್ ಡಾಂಕುಮೆಂಟ್) ಹಾಗೂ KTTP Act 1999 and KTTP rule 2000 ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಲೆ.ಶಿ:5054-03-337-0-17-160 ರಾಜ್ಯ ಹೆದ್ದಾರಿ ರಸ್ತೆ ನವೀಕರಣ ಅಡಿಯಲ್ಲಿ ಗರಿಷ್ಠ : ಅಂದಾಜು ಮೊತ್ತ ರೂ 65.00 ಲಕ್ಷಗಳ 1 ಕಾಮಗಾರಿಗೆ, ಟೆಂಡರ್ ಆಹ್ವಾನಿಸಲಾಗಿದೆ, ಆನ್‌ಲೈನ್‌ನಲ್ಲಿ ಡೌನ್ ಲೋಡ್ ಮಾಡಬಹುದಾದ ದಿನಾಂಕ 17.05.2025 ರಿಂದ 26.05.2025 ಸಂಜೆ 16.00 ಗಂಟೆಯವರೆಗೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 26.05.2025 ಸಂಜೆ 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 27.05.2025 ಸಂಜೆ 16.30 ಗಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.05.2025 ಹಾಗೂ ಇನ್ನೂ ಮುಂದೆ ಈ ನೋಟಿಫಿಕೇಷನ್‌ಗೆ ಸಂಬಂಧ ಪಟ್ಟ ಬದಲಾವಣೆಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಹೆಚ್ಚಿನ ಮಾಹಿತಿ/ವಿರಗಳನ್ನು https://www.Kppp.karnataka.gov.in ಜಾಲದಲ್ಲಿ ಹಾಗೂ ಕೆಳಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ಚಾಮರಾಜನಗರ ಚಾಮರಾಜನಗರ.
ಸಂ:ವಾಸಾಸಂಇ:ಚಾನಗರ:87:2025-26

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ, ಇಂಡಿಯಾ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in
ಸಂಖ್ಯೆ: ಕೆಎಸ್‌ಪಿಸಿಬಿ/20/ಎಸ್‌ಎಸ್/2024-25/249 ದಿನಾಂಕ: 17.05.2025
ಟೆಂಡರ್‌ಗಾಗಿ ಆಹ್ವಾನ (1ನೇ ಕರೆ)
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಮಂಡಳಿಯ ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ದಾರರು ಟೆಂಡರ್ ಡಾಕ್ಯುಮೆಂಟ್‌ನ ಅವಶ್ಯಕತೆಯ ವಿಭಾಗ V ರ ಕೋಷ್ಟಕದಲ್ಲಿ ಉಲ್ಲೇಖಿಸಿರುವ ಭದ್ರತಾ ಸಿಬ್ಬಂದಿಗಳಿಗೆ ಸೇವಾ ಶುಲ್ಕವನ್ನು ಶೇಕಡವಾರು ಉಲ್ಲೇಖಿಸಬೇಕು. ಟೆಂಡರ್‌ದಾರರು ಟೆಂಡರ್ ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿದ ತಾಂತ್ರಿಕ ಹಾಗೂ ಅರ್ಹತಾ ಮಾನದಂಡಗಳನ್ನು ಪೂರೈಸಬೇಕಾಗುತ್ತದೆ ಹಾಗೂ ಇದನ್ನು ಅರ್ಹತೆ ಪಡೆಯಲು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ 19.05.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ನಿಗಧಿತ ಇ.ಎಂ.ಡಿ ಮೊತ್ತ **ರೂ.5,32,400/-** ಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಪಾವತಿಸಬೇಕು.
ಟೆಂಡರ್‌ನ ಪೂರ್ವಭಾವಿ ಸಭೆಯನ್ನು **ದಿನಾಂಕ 09.06.2025 ರ 11.30 ಗಂಟೆಗೆ** ನಿಗಧಿಪಡಿಸಲಾಗಿದೆ ಮತ್ತು **ದಿನಾಂಕ 19.06.2025 ರ 17.00 ಗಂಟೆಯವರೆಗೂ** ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಟೆಂಡರ್ ಬಿಡ್‌ನ್ನು ಪರಾಮರ್ಶಿಸಬಹುದಾಗಿದೆ.
ಸೇವೆಗಳ ಹೆಸರು: ಕ.ರಾ.ಮಾ.ನಿ.ಮಂ. ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರ ಆಯ್ಕೆ. **ಸೇವೆಗಳ ಅಂದಾಜು ಮೌಲ್ಯ (ಲಕ್ಷಗಳಲ್ಲಿ) :** ರೂ.355 ಲಕ್ಷಗಳು, **ನಿಗಧಿತ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) :** ರೂ.5,32,400/-, **ದಾಖಲೆಯ ಬೆಲೆ (ರೂ.ಗಳಲ್ಲಿ):** ಇ-ಪೋರ್ಟಲ್ ಪ್ರಕಾರ.
ಸಹಿ/- ಸದಸ್ಯ ಕಾರ್ಯದರ್ಶಿ
ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ
ವಾಸಸಂಇ/ವಾಪ್ರ/774/ಎಸ್‌ಎಸ್‌ಸಿ/2025-26

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಯೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ.
CIN:U4010KA2002SGC030436 E-mail:eeetpgescom@gmail.com Website:gescom.in
ಸಂಖ್ಯೆ:-ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ-1(ತಾ)/ಸಇಂ-1(ತಾ)/2025-26/10629-650
ದಿನಾಂಕ: 19-05-2025
:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ) ::
ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದಂತೆ "ಕಾ ಮತ್ತು ಪಾ ವಿಭಾಗ ಕಲಬುರಗಿ ವಿಭಾಗ-1 (Bid Enq no:TP-090 /GK&WS /2025-26 /Kalaburagi Division-1 and Approximate amount put to tender: **Rs. 896.84 Lakhs)** ಹಾಗೂ ಸೇಡಂ (Bid Enq no:TP-091/GK&WS /2025-26 /Sedam Division and Approximate amount put to tender: **Rs. 299.93 Lakhs)** ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲ ಸೌಕರ್ಯಗಳ ರಚನೆ ಪಿಟಿಕೆ ರೇಟ್ ಕಾಟ್ರಾಂಕ್ಟ್" ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು ದಿನಾಂಕ: 22.05.2025 ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್‌ಆನ್ ಮಾಡಲು ಕೋರಲಾಗಿದೆ. www.kppp.karnataka.gov.in
ಸಹಿ/- ಮುಖ್ಯ ಇಂಜಿನಿಯರ್(ವಿ), ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/133/ಕೆ.ಎಸ್.ಎಂ.ಸಿ.&ಎ/2025-26

Norican Group Shaping Industry
ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055. ಫೋನ್: +91 80 22496700, ಫ್ಯಾಕ್ಸ್: +91 80 2249 6750. ಇ-ಮೇಲ್: bangalore@noricangroup.com www.disagroup.com
CIN No: L85110KA1984PLC006116

ಮಾರ್ಚ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ
(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಸ್ವತಂತ್ರ			ಕ್ರೋಢೀಕರಿಸಿದ		
	31.03.2025ಕ್ಕೆ ಕೊನೆಗೊಂಡ 3 ತಿಂಗಳು	31.03.2025 ವರ್ಷದಿಂದ ಇಲ್ಲಿಯವರೆಗೆ	ಹಿಂದಿನ ವರ್ಷಕ್ಕೆ ಅನುಗುಣವಾಗಿ 31.03.2024ಕ್ಕೆ ಕೊನೆಗೊಂಡ 3 ತಿಂಗಳು	31.03.2025ಕ್ಕೆ ಕೊನೆಗೊಂಡ 3 ತಿಂಗಳು	31.03.2025 ವರ್ಷದಿಂದ ಇಲ್ಲಿಯವರೆಗೆ	ಹಿಂದಿನ ವರ್ಷಕ್ಕೆ ಅನುಗುಣವಾಗಿ 31.03.2024ಕ್ಕೆ ಕೊನೆಗೊಂಡ 3 ತಿಂಗಳು
	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ
ವಹಿವಾಟಿನಿಂದ ಬಂದ ಆದಾಯ	1,077.8	3,846.9	946.7	1,083.3	3,903.4	963.7
ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು)	221.9	734.5	173.6	220.0	741.4	178.4
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ)	221.9	721.9	173.6	178.1	686.9	178.4
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	166.9	537.4	128.1	127.2	504.2	131.6
ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ)	158.9	531.4	124.3	119.4	498.2	127.7
ಈಕ್ವಿಟಿ ಷೇರು ಬಂಡವಾಳ	14.5	14.5	14.5	14.5	14.5	14.5
ಇತರ ಇಕ್ವಿಟಿ (ಮರು-ಮೌಲ್ಯಮಾಪನ ಮೀಸಲು ಹೊರತುಪಡಿಸಿ ವರ್ಷಾಂತ್ಯದಲ್ಲಿ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ)	–	2,616.8	–	–	2,652.0	–
ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/- ಪ್ರತಿ) ಮೂಲ : ರೂ.	114.77	369.55	88.08	87.47	346.72	90.50
ನಿಸಾರಗೊಂಡದ್ದು: ರೂ.	114.77	369.55	88.08	87.47	346.72	90.50

ಟಿಪ್ಪಣಿ:
ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕ/ವಾರ್ಷಿಕ ಲೆಕ್ಕಪರಿಶೋಧನೆಗೊಂಡ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ. ಪೂರ್ಣ ವಿವರವು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disagroup.com ನಲ್ಲಿ ಕೂಡ ಲಭ್ಯವಿದೆ.
ಸ್ಥಳ : ಬೆಂಗಳೂರು
ದಿನಾಂಕ : ಮೇ 21, 2025
ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಲೋಕೇಶ್ ಸಕ್ಸೇನ, ವ್ಯವಸ್ಥಾಪಕ ನಿರ್ದೇಶಕರು.

ಸಮಾಚಾರ ಸಣ್ಣದಲ್ಲ

ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಸಾವು

ತುಮಕೂರು: ನಗರ ಹೊರವಲಯದ ವಸಂತನರ ಸಾಪುರ ಕೈಗಾರಿಕಾ ಪ್ರದೇಶದಲ್ಲಿ ಬುಧವಾರ ಕಾರ್ಖಾನೆಯ ಸಂಪ್ ಸ್ವಚ್ಛಗೊಳಿಸುವಾಗ ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಮತ್ತಿಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಮಧುಗಿರಿ ತಾಲೂಕಿನ ಮಾಗೋಡು ಗ್ರಾಮದ ಪ್ರತಾಪ್ (23), ಶಿರಾ ತಾಲೂಕಿನ ಕಳ್ಳಂಬೆಳ್ಳ ಹೋಬಳಿ ತರೂರು ಗ್ರಾಮದ ವೆಂಕಟೇಶ್ (32) ಮೃತರು. ತರೂರಿನ ಮಂಜಣ್ಣ (42), ಯುವರಾಜ್ (32) ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ. ರಾಸಾಯನಿಕ ಪದಾರ್ಥ ತಯಾರಿಸುವ ಲಾರಸ್ ಬಯೋ' ಎಂಬ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿದ್ದರು. ರಾಸಾಯನಿಕ ಸಂಗ್ರಹಿಸುವ ಸಂಪ್ ಸ್ವಚ್ಛತೆಗಾಗಿ ನಾಲ್ವರು ಸಂಪ್ ಒಳಗೆ ಇಳಿದಿದ್ದರು. ಈ ವೇಳೆ ಉಸಿರುಗಟ್ಟಿ ಅಸ್ವಸ್ಥರಾಗಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಇಬ್ಬರು ಸಾವನ್ನಪ್ಪಿದ್ದಾರೆ. ಮತ್ತಿಬ್ಬರಿಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ತುಮಕೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಿಸ್ ಫೈರಿಂಗ್: ಯುವಕ ಸಾವು

ಶಿವಮೊಗ್ಗ: ಬೇಟೆಗೆ ಹೊಡೆಯುವ ಗುಂಡು ಗುರಿ ತಪ್ಪಿ ಬಿದ್ದು ಯುವಕ ಮೃತಪಟ್ಟಿರುವ ಘಟನೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಕಟ್ಟೆಹಕ್ಲು ಗ್ರಾಮದಲ್ಲಿ ನಡೆದಿದೆ. ಗೌತಮ್ (25) ಮೃತಪಟ್ಟ ಯುವಕ. ಮೃತ ಗೌತಮ್ ಬೇಟೆಗೆ ಹೋಗಿದ್ದ ಸಂದರ್ಭದಲ್ಲಿ ಬೇಟೆಗೆ ಹೊಡೆಯಲು ಹೋಗಿ ಗನ್‌ನಿಂದ ಮಿಸ್‌ಫೈಯರ್ ಆಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆ ಯೇನು..?

- ಬೆಳಗಾವಿ ನಗರದ ಬಡಕಲ್ ಗಲ್ಲಿಯಲ್ಲಿ ತಗ್ಗು ಬಿದ್ದಿರುವ ಬಗ್ಗೆ
- **ಪರಿಹಾರ:** ಬೆಳಗಾವಿ ಮಹಾ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಡಕಲ್ ಗಲ್ಲಿಯಲ್ಲಿ ಸದರಿ ತಗ್ಗು ಬಿದ್ದಿರುವುದನ್ನು ಜೆಸಿಬಿ ಮುಖಾಂತರ ಮಣ್ಣು ಹಾಕಿ ಸಮತಟ್ಟು ಮಾಡಲಾಗಿದ್ದು, ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಡಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
20.05.2025
ಸಂಜೆ: 06.55 ರಿಂದ 08.05 ರವರೆಗೆ



ಮಂಗಳವಾರದ ಅತಿಥಿ
ಶ್ರೀ ಶ್ರೀಧರ್ ಮೂರ್ತಿ
ವಿಷಯ
ಭಾರತೀಯ ಖಗೋಳಶಾಸ್ತ್ರಜ್ಞರು
vishwavani.news

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಪ್ರಧಾನಿ narendramodi ಅವರ ಮಹತ್ವಾಕಾಂಕ್ಷೆಯ ಯೋಜನೆಗಳು ಕನ್ನಡಿಗರಿಗೆ ಸಿಗದಂತೆ ಮಾಡಲು ಭ್ರಷ್ಟ INCKarnataka ಷಡ್ಯಂತ್ರ ರೂಪಿಸಿದೆ. ರಾಜ್ಯದ ಸರಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಮಳಿಗೆಗಳನ್ನು siddaramaiah ಸರಕಾರ ತೆರವು ಮಾಡಲು ಆದೇಶ ನೀಡಿದೆ. ಕೇಂದ್ರ ಸರಕಾರದ ಯೋಜನೆಗಳು ರಾಜ್ಯದ ಜನರಿಗೆ ಸಿಗದಂತೆ ಮಾಡುತ್ತಿರುವ ಕಾಂಗ್ರೆಸ್, ಇದೀಗ ಅನಾರೋಗ್ಯ ಸಚಿವ dineshgrao ರೋಗಿಗಳಿಗೂ ಕಡಿಮೆ ದರದ ಔಷಧಿಗಳು ಸಿಗದಂತೆ ಮಾಡಿದ್ದಾರೆ.

ವಿಕುಂತ್

ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಎಲ್ಲಾ ಔಷದಿಗಳ ದರ ಕಡಿಮೆಯೇ ಆಗಿತ್ತು. ನಮಗೆ ಜ್ವರ, ನೆಗಡಿ ಬಂದಿದೆಯೆಂದರೆ 10-12 ರು. ನಲ್ಲಿಯೇ ಟ್ಯಾಬ್ಲೆಟ್ ಸಿಗ್ತಾ ಇತ್ತು. ಮೋದಿ ಬಂದ ಬಳಿಕ ಔಷಧಿ ಬೆಲೆ ಸಿಕ್ಕಾಪಟ್ಟೆ ಏರಿಸಿ, ಈಗ ಜನೌಷಧಿ ಮೂಲಕ ಸ್ವಲ್ಪ ಕಡಿಮೆ ಮಾಡುವುದು. ಇದ್ಯಾವ ರೀತಿಯ ಜನಸೇವೆ ಮಾರಾಯ್ರೆ?.

ಕನ್ನಡ ಸಾಹಿತ್ಯ ಲೋಕಕ್ಕೆ ಜಾಗತಿಕ ಮಟ್ಟದ ಗೌರವ | ಕನ್ನಡ ಲೇಖಕಿಯ ಪುಸ್ತಕಕ್ಕೆ ಬುಕರ್ ಪ್ರಶಸ್ತಿ

ಬುಕರ್ ಪ್ರಶಸ್ತಿಯ ದೀಪಾ ಬೆಳಗಿದ ಮಡಿಕೇರಿ ಲೇಖಕಿ

ಅನಿಲ್ ಎಚ್.ಟಿ., ಮಡಿಕೇರಿ:

ದೀಪಾಭಾಸ್ತಿ ತಾಯಿ ಸುಧಾ ಮತ್ತು ತಂದೆ ಪ್ರಕಾಶ್ ಮಗಳ ಸಾಧನೆಗೆ ಸಿಹಿ ಹಂಚಿಕೊಂಡು ಸಂಭ್ರಮಿಸಿದರು.

ದೀಪಾಳಿಗೆ ಇಂಥ ಪ್ರತಿಷ್ಠಿತ ಪ್ರಶಸ್ತಿ ಸಿಗಬಹುದೆಂದು ನಿರೀಕ್ಷೆಯೇ ಮಾಡಿರಲಿಲ್ಲ. ಆದರೆ ಆಕೆಯ ಕಠಿಣ ಶ್ರಮಕ್ಕೆ ಕೊನೆಗೂ ಪ್ರತಿಫಲ ಸಂದಿದೆ ಎಂದು ದೀಪಾ ಭಾಸ್ತಿಯ ತಾಯಿ ಸುಧಾಭಾಸ್ತಿ ಹೆಮ್ಮೆ ವ್ಯಕ್ತಪಡಿಸಿದರು.

ನಗರದ ರೈಫಲ್ ರೇಂಜ್‌ನಲ್ಲಿರುವ ಮಿನುಗುತಾರೆಯಲ್ಲಿ ಬುಧವಾರ ಸಂಭ್ರಮದ ವಾತಾವರಣ ಕಂಡುಬಂತು. ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕಥೆಯನ್ನು ಒಳಗೊಂಡ ಹಸೀನಾ ಮತ್ತು ಇತರೆ ಕಥೆಗಳು ಕೃತಿಯನ್ನು ಇಂಗ್ಲಿಷ್‌ಗೆ 'ಹಾರ್ಟ್‌ಲ್ಯಾಂಪ್' ಹೆಸರಿನಲ್ಲಿ ಅನುವಾದಿಸಿದ ದೀಪಾಭಾಸ್ತಿಗೆ ಇಂಗ್ಲೆಂಡಿನ ಬುಕರ್ ಪ್ರಶಸ್ತಿ ಲಭಿಸಿದೆ. ಭಾರತದ ಅನುವಾದಕಿಯೊಬ್ಬರಿಗೆ ಸಂದ ಮೊದಲ 'ಬುಕರ್ ಪ್ರಶಸ್ತಿ' ಎಂಬ ಹೆಗ್ಗಳಿಕೆ ದೀಪಾ ಅವರದ್ದಾಗಿದೆ.

ಬೆಳಗಿನ ಜಾವ 2:30ಕ್ಕೆ ಪ್ರಶಸ್ತಿ ಘೋಷಣೆ: ಸಾಹಿತ್ಯ ಲೋಕದ ಅತ್ಯುತ್ತಮ ಪುಸ್ತಕಗಳಿಗೆ ಕೊಡಮಾಡುವ ಜಾಗತಿಕ ಮಟ್ಟದ ಪ್ರಶಸ್ತಿ ಬುಕರ್. ಬುಕರ್ ಪ್ರಶಸ್ತಿಗೆ ಹಲವು ದೇಶಗಳ ನಾನಾ ಭಾಷೆಗಳ 153 ಪುಸ್ತಕಗಳು ಪ್ರಕಟಿತ ಬುಕರ್ ಪ್ರಶಸ್ತಿಗೆ ಸ್ಪರ್ಧೆಯೊಡ್ಡಿದ್ದವು. ಈ ಪೈಕಿ 13 ಕೃತಿಗಳು ಕೃತಿಯ ಮಾನದಂಡದ ಎಲ್ಲ ಅರ್ಹತೆ ಪಡೆದಿದ್ದವು. 6 ಕೃತಿಗಳು ಮಾತ್ರ ಫೈನಲ್‌ಗೆ ಬಂದಿದ್ದವು. ಇಂಗ್ಲೆಂಡ್ ದೇಶದ ಲಂಡನ್‌ನಲ್ಲಿರುವ ಟೇಟ್ ಮಾಡ್ರನ್ ಸಭಾಂಗಣದಲ್ಲಿ ಭಾರತೀಯ ಕಾಲಮಾನದ ಬೆಳಗಿನ ಜಾವ 2.30ಕ್ಕೆ ಪ್ರಶಸ್ತಿ ಘೋಷಿಸಲಾಗಿದೆ. 50 ಸಾವಿರ ಪೌಂಡ್ ಅಂದರೆ ಭಾರತೀಯ ಮೌಲ್ಯದಲ್ಲಿ 57 ಲಕ್ಷ ರು. ಪ್ರಶಸ್ತಿ ಜತೆಗೆ ಲಭಿಸಿದ್ದು, ಈ ಹಣವನ್ನು ಇವರಿಬ್ಬರೂ ಸಮನಾಗಿ ಹಂಚಿಕೊಳ್ಳಲಿದ್ದಾರೆ.

ಓದುಗರ ಮನ್ನಣೆಗಳಿಸಿದ್ದ ಲೇಖನಗಳು: ದೀಪಾ ಮಡಿಕೇರಿಯ ಡಾ.ನಂಜುಂಡೇಶ್ವರ ಇವರ ಮೊಮ್ಮಗಳಾಗಿದ್ದು, ಪ್ರಕಾಶ್ ಮತ್ತು ಸುಧಾ ದಂಪತಿ ಪುತ್ರಿಯಾಗಿದ್ದಾರೆ. ದೀಪಾ ಮಾದಾಪುರದಲ್ಲಿನ ಕಾಫಿ ಬೆಳೆಗಾರ ಚೆಟ್ಟೀರ ನಾಣಯ್ಯ ಅವರನ್ನು ವಿವಾಹವಾಗಿದ್ದಾರೆ. ಕಾಲೇಜು ದಿನಗಳಿಂದ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದ ದೀಪಾ ಕೊಡಗು ವಿದ್ಯಾಲಯ, ಮಂಗಳೂರಿನ ಮಂಗಳ ಗಂಗೋತ್ರಿ ವಿವಿಯಲ್ಲಿ ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದಾರೆ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಉದ್ಯೋಗದಲ್ಲಿದ್ದರು. ನಂತರ 'ದಿ ಹಿಂದೂ' ಪತ್ರಿಕೆಗೂ ಹವ್ಯಾಸಿ ಪತ್ರಕರ್ತರಾಗಿದ್ದರು.

ಜಾಗತಿಕ ಪ್ರಶಸ್ತಿ ಲಭಿಸಿದ್ದು ಹೆಮ್ಮೆ ತಂದಿದೆ: 'ಜಗತ್ತಿನ ಹತ್ತಾರು ಪತ್ರಿಕೆಗಳಲ್ಲಿ ದೀಪಾ ಬರೆದ ಲೇಖನಗಳು ಓದುಗರಿಂದ ಮನ್ನಣೆ ಗಳಿಸಿವೆ. ಶಿವರಾಮ ಕಾರಂತರ ಕೃತಿಗಳು ಮತ್ತು ಕೊಡಗಿನ ಗೌರಮ್ಮ ಅವರ ಕೃತಿಗಳನ್ನು ದೀಪಾಭಾಸ್ತಿ ಈ ಮೊದಲು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದರು. ದೀಪಾ ಸಾಕಷ್ಟು ಶ್ರಮ ಪಟ್ಟಿದ್ದಾಳೆ. ಅನೇಕ ದಿನಗಳು ಮಧ್ಯರಾತ್ರಿಯಾದರೂ ನಿದ್ದೆ ಮಾಡದೇ ಅನುವಾದದಲ್ಲಿ ಆಕೆ ತೊಡಗಿಸಿಕೊಂಡಿದ್ದಳು. ಕೊನೆಗೂ ಮಗಳ ಶ್ರಮಕ್ಕೆ ಜಾಗತಿಕ ಪ್ರಶಸ್ತಿ ಲಭಿಸಿದ್ದು ಹೆಮ್ಮೆ ತಂದಿದೆ' ಎಂದು ತಾಯಿ ಸುಧಾ ಭಾಸ್ತಿ 'ವಿಶ್ವವಾಣಿ'ಯೊಂದಿಗೆ ಸಂತಸ ವ್ಯಕ್ತಪಡಿಸಿದರು.

ಮುಷ್ತಾಕ್ ಅವರ ಕಥೆಗಳನ್ನು ಗಮನಿಸಿದ್ದ ದೀಪಾ, ತಾನಾಗಿಯೇ ಈ ಕಥೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಕೃತಿಗೆ ಜಾಗತಿಕ ಮನ್ನಣೆ ಲಭಿಸಿದಂತಾಗಿದೆ. ಪ್ರಶಸ್ತಿ ಪಡೆದ ಬಳಿಕ ಮುಂಜಾನೆಯೇ ದೀಪಾ ಲಂಡನ್‌ನಿಂದ ಕರೆ ಮಾಡಿ ಸಂತಸ ಹಂಚಿಕೊಂಡಳು. ಇಷ್ಟು ದೊಡ್ಡ ಪ್ರಶಸ್ತಿ ಬರುತ್ತದೆ ಎಂದು ಆಕೆ ನಿರೀಕ್ಷೆ ಮಾಡಿರಲಿಲ್ಲ. ಹೀಗಾಗಿ ಪ್ರಶಸ್ತಿ ಪಡೆಯುವಾಗ ಭಾವುಕ ಕ್ಷಣ ಅವಳ ಪಾಲಿನದ್ದಾಗಿತ್ತು. ಹಳದಿ ಸೀರೆಯುಟ್ಟು ಭಾರತೀಯ ಸಂಪ್ರದಾಯ ಮೆರೆದು ದೀಪಾ ಮತ್ತು ಬಾನುಮುಷ್ತಾಕ್ ಭಾರತೀಯರ ಹೆಮ್ಮೆಗೆ ಕಾರಣರಾದರು.

ಬಾನು ಮುಷ್ತಾಕ್‌ರ 12 ಕಥೆಗಳ ಅನುವಾದಿತ ಕೃತಿ ಹಾರ್ಟ್ ಲ್ಯಾಂಪ್

ಬಾನುಮುಷ್ತಾಕ್ ಅವರು ಬರೆದ 50 ಕಥೆಗಳ ಪೈಕಿ 12 ಕಥೆಗಳನ್ನು ಆಯ್ಕೆ ಮಾಡಿಕೊಂಡು ಇಂಗ್ಲಿಷ್‌ಗೆ ಅನುವಾದಿಸಿದ 'ಹಾರ್ಟ್ ಲ್ಯಾಂಪ್' ಪುಸ್ತಕವಾಗಿ ಮುದ್ರಿತವಾಗಿತ್ತು. 1990 ಹಾಗೂ 2023ರ ನಡುವೆ ಪ್ರಕಟವಾಗಿದ್ದ 12 ಕತೆಗಳನ್ನು ಒಳಗೊಂಡಿದೆ. ಬುಕರ್ ಪ್ರಶಸ್ತಿಯ ಅಂತಿಮ ಹಂತದಲ್ಲಿದ್ದ 6 ಇಂಗ್ಲಿಷ್ ಅನುವಾದಿತ ಕೃತಿಗಳಲ್ಲಿ 2 ಫ್ರೆಂಚ್ ಮತ್ತು ಡ್ಯಾನಿಶ್, ಇಟಾಲಿಯನ್, ಕನ್ನಡ ಮತ್ತು ಜಪಾನೀ ಭಾಷೆಯ ತಲಾ ಒಂದು ಕೃತಿಗಳಿದ್ದವು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ದೀಪಾ ಲಂಡನ್‌ಗೆ ತೆರಳಿದ್ದು, ಮಾಸಾಂತ್ಯ ಭಾರತಕ್ಕೆ ಹಿಂದಿರುಗಲಿದ್ದಾರೆ.

ಬಾನು ಮುಷ್ತಾಕ್ ಅವರ ಎದೆಯ ಹಣತೆ ಎಂಬ ಕಥಾ ಸಂಕಲನ ಪ್ರತಿಷ್ಠಿತ ಬುಕರ್ ಪ್ರಶಸ್ತಿಗೆ ಭಾಜನವಾಗಿದೆ. ಅಲ್ಪಸಂಖ್ಯಾತ ಜನಾಂಗದ ಪ್ರತಿನಿಧಿಯಾಗಿ ಮಹಿಳೆಯರ ಬವಣೆಗಳನ್ನು ತಮ್ಮ ಸಾಹಿತ್ಯದ ಮೂಲಕ ಜಗತ್ತಿನ ಮುಂದೆ ತೆರೆದಿಟ್ಟ ಬಾನು ಮುಷ್ತಾಕ್ ಈ ಪ್ರಶಸ್ತಿಗೆ ಭಾಜನರಾದ ಮೊಟ್ಟ ಮೊದಲ ಕನ್ನಡದ ಲೇಖಕಿಯಾಗಿದ್ದಾರೆ. ಅವರ ಈ ಸಾಧನೆಗೆ ಅಭಿನಂದನೆ ಸಲ್ಲಿಸುತ್ತೇನೆ. ಕನ್ನಡದ ಈ ಕಥೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದು ಪ್ರಶಸ್ತಿಗೆ ಕಾರಣರಾದ ಅನುವಾದಕಿ ದೀಪಾ ಭಾಸ್ತಿ ಅವರು ಸಹ ಅಭಿನಂದನೆಗೆ ಅರ್ಹರು.

-ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆದ ಕನ್ನಡದ ಹಿರಿಯ ಲೇಖಕಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಬಾಸ್ತಿ ಅವರಿಗೆ ಅಭಿನಂದನೆ. ಈ ಪ್ರಶಸ್ತಿ ಸಮಸ್ತ ಕನ್ನಡಿಗರಿಗೆ ಸಂದ ಗೌರವ. ಈ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.ವಿಶ್ವ ಮಾನವತೆಯ ಸದಾಶಯವನ್ನು ಎತ್ತಿ ಹಿಡಿಯುವ ಭಾನು ಮುಷ್ತಾಕ್ ಅವರ ಕತೆಗಳು ವಿಶ್ವದ ಎಲ್ಲಾ ಭಾಷೆಗಳಿಗೂ ಅನುವಾದಗೊಳ್ಳಬೇಕು.

-ಜಮೀರ್ ಅಹ್ಮದ್, ಸಚಿವ

- ಸಾಹಿತ್ಯ ಕ್ಷೇತ್ರಕ್ಕೆ ನೀಡುವ ಜಾಗತಿಕ ಮಟ್ಟದ ಪ್ರಶಸ್ತಿ
- ಪ್ರಶಸ್ತಿಯ ಒಟ್ಟು ಮೌಲ್ಯ 50 ಸಾವಿರ ಪೌಂಡ್
- ಭಾರತೀಯ ಕರೆನ್ಸಿ ಪ್ರಕಾರ 53 ಲಕ್ಷ ರುಪಾಯಿ
- ಅಂತಿಮ ಹಂತಕ್ಕೆ 6 ಪುಸ್ತಕಗಳು ಸ್ಪರ್ಧೆ
- ಈ ಪೈಕಿ ಹಾರ್ಟ್‌ಲ್ಯಾಂಪ್ ಕೃತಿಗೆ ಬುಕರ್ ಪ್ರಶಸ್ತಿ

ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್ ಅವರಿಗೆ ಹಾರ್ದಿಕ ಅಭಿನಂದನೆ. ಈ ಪ್ರಶಸ್ತಿ ಇಡೀ ನಾಡಿಗೆ ಗೌರವದ ನವಿಲು ಗರಿ. 1997ರಲ್ಲಿ ಅರುಂಧತಿ ರಾಯ್ ಅವರ ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್ ಕಾದಂಬರಿ ಬುಕರ್ ಪ್ರಶಸ್ತಿ ಪಡೆದ ತರುವಾಯ ಭಾರತದ ಒಬ್ಬ ಲೇಖಕಿಗೆ ಈ ಪುರಸ್ಕಾರ ಸಂದಿರುವುದು ಅರ್ಥ ಪೂರ್ಣವಾಗಿದೆ. ಹೆಮ್ಮೆಯ ಬಾನು ಕುರಿತು- ಬಾನಲ್ಲು ನೀನೇ, ಬುವಿಯಲ್ಲಿ ನೀನೇ ಎಂದು ಹಾಡಲು ಖುಷಿ ಆಗುತ್ತದೆ, ಕನ್ನಡಕ್ಕೆ ಇಂದಿನ ಬೆಳಗ್ಗೆ ಬರಿ ಬೆಳಗಲ್ಲೊ ಅಣ್ಣ, ಇದು ಬುಕರ್ ಪ್ರಶಸ್ತಿಯ ಹೊಂಗಿರಣ ಹೊಮ್ಮಿದ ಹೆಮ್ಮೆಯ ಸುದಿನ.

-ಹಂಪನಾ, ಹಿರಿಯ ಸಾಹಿತಿ

ಬುಕರ್ ವೇದಿಕೆಯಲ್ಲಿ ಕನ್ನಡದ ಸಾಹಿತ್ಯದ ಹಿರಿಮೆಯನ್ನು ಎತ್ತಿ ಹಿಡಿದ ಲೇಖಕಿ, ಕತೆಗಾರ್ತಿ ಭಾನು ಮುಷ್ತಾಕ್ ಅವರಿಗೆ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಲಭಿಸಿರುವುದು ಅವರ ಕತೆಗಳಲ್ಲಿ ಬೆಸೆದಿರುವ ಭಾರತೀಯತೆಯ ಬೆಸುಗೆಗೆ ಸಿಕ್ಕಿರುವ ಅಂತಾರಾಷ್ಟ್ರೀಯ ಮನ್ನಣೆ. ತಮ್ಮ ಲೇಖನ, ಭಾಷಣ ಮತ್ತು ಕತೆಗಳಲ್ಲಿ ನಮ್ಮ ನೆಲದ ಮೂಲ ಸತ್ವ ಮತ್ತು ಮೂಲ ತತ್ವ ಆಗಿರುವ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಮೌಲ್ಯವನ್ನು ಮತ್ತು ಜಾತ್ಯತೀತತೆಯನ್ನು ಬೆಸೆಯುವ ಕಾರ್ಯ ಮಾಡುತ್ತಲೇ ಬರುತ್ತಿದ್ದಾರೆ. ವಿಶ್ವ ಮಾನವತೆಯ ಸದಾಶಯವನ್ನು ಎತ್ತಿ ಹಿಡಿಯುವ ಭಾನು ಮುಷ್ತಾಕ್ ಅವರ ಕತೆಗಳು ವಿಶ್ವದ ಎಲ್ಲಾ ಭಾಷೆಗಳಿಗೂ ಅನುವಾದಗೊಳ್ಳಬೇಕು.

-ಕೆ.ವಿ. ಪ್ರಭಾಕರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ

ಕನ್ನಡದ ಸಂವೇದನಾಶೀಲ ಲೇಖಕಿ ಭಾನು ಮುಷ್ತಾಕ್ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿಗೆ ಭಾಜನರಾಗಿರುವುದು ಭಾರತೀಯರಿಗೆ ಅದರಲ್ಲಿಯೂ ವಿಶೇಷವಾಗಿ ಸಮಸ್ತ ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ಸಂಗತಿ. ಕಳೆದ ವಾರದಷ್ಟೇ ಕನ್ನಡ ಪುಸ್ತಕ ಪ್ರಾಧಿಕಾರ ಭಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು ಕೃತಿ ಕುರಿತ ಹಾಗೆ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮ ಆಯೋಜನೆ ಮಾಡಿ ಅವರಿಗೆ ಬುಕರ್ ಪ್ರಶಸ್ತಿ ಬರಲೆಂದು ಹಾರೈಸಿತ್ತು. ಅದೇ ಕಥಾ ಸಂಕಲನದಲ್ಲಿರುವ ಎದೆಯ ಹಣತೆ ಎಂಬ ಕಥೆ ಈ ಪ್ರತಿಷ್ಠಿತ ಪ್ರಶಸ್ತಿಗೆ ಪರಿಗಣಿಸಲ್ಪಟ್ಟಿದೆ. ನಮ್ಮ ಹಾರೈಕೆ ಈಡೇರಿದೆ. ಇದು ಅತ್ಯಂತ ಸಂತೋಷದ ಸಂಗತಿ.

-ಡಾ.ಮಾನಸ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ

ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರಿಗೆ 2025ನೇ ಸಾಲಿನ ಪ್ರತಿಷ್ಠಿತ ಬುಕರ್ ಪ್ರಶಸ್ತಿ ಬಂದಿದ್ದು, ಇದು ಪ್ರತಿಯೊಬ್ಬ ಕನ್ನಡಿಗ ಮಹಿಳೆಯರಿಗೆ ಡಬಲ್ ಗೆಲುವು. ಲೇಖಕಿ, ಸಾಮಾಜಿಕ ಕಾರ್ಯಕರ್ತೆ ಮತ್ತು ವಕೀಲೆ ಬಾನು ಮುಷ್ತಾಕ್ ಅವರ ಸಣ್ಣ ಕಥಾ ಸಂಕಲನ 'ಹಾರ್ಟ್ ಲ್ಯಾಂಪ್' ಲಂಡನ್‌ನಲ್ಲಿ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಗೆದ್ದಿದ್ದು, ಇದು ಕನ್ನಡಕ್ಕೆ ಸಿಕ್ಕ ಮೊದಲ ಪ್ರಶಸ್ತಿಯಾಗಿದೆ. ನನಗೆ ತುಂಬಾ ಸಂತೋಷವಾಗುತ್ತಿದೆ. ಅವರು ಒಬ್ಬ ಮಹಾನ್ ಬರಹಗಾರ್ತಿ ಮತ್ತು ಇದು ಒಂದು ಉತ್ತಮ ಆರಂಭ. ಅವರಂತಹ ಅನೇಕ ಜನರು ವಿವಿಧ ಭಾಷೆಗಳಲ್ಲಿ ಬುಕರ್ ಪ್ರಶಸ್ತಿಯನ್ನು ಪಡೆಯಲಿ.

ಡಾ. ಸುಧಾ ಮೂರ್ತಿ, ರಾಜ್ಯಸಭಾ ಸದಸ್ಯೆ

ಹಾರ್ಟ್‌ಲ್ಯಾಂಪ್ ಎಂಬ ಕೃತಿಯ ಮೂಲಕ ಕನ್ನಡಕ್ಕೆ ಮೊದಲ ಪ್ರತಿಷ್ಠಿತ ಬುಕರ್ ಪ್ರಶಸ್ತಿ ತಂದು ಕೊಟ್ಟ ಲೇಖಕಿ ಬಾನು ಮುಷ್ತಾಕ್ ಮತ್ತು ಈ ಕೃತಿಯನ್ನು ಸಮರ್ಥವಾಗಿ ಇಂಗ್ಲಿಷ್ ಗೆ ಅನುವಾದಿಸಿ ಪುರಸ್ಕಾರ ಬರಲು ಕಾರಣಕರ್ತರಾದ ಅನುವಾದಕಿ ದೀಪಾ ಭಾಸ್ತಿ ಅವರನ್ನು ಅಭಿನಂದಿಸುತ್ತೇನೆ. ಈ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. ಅನುವಾದದ ಮಹತ್ವವೂ ರುಜುವಾತಾಗಿದೆ. ಕನ್ನಡದ ಅನೇಕ ಕೃತಿಗಳು ಇಂಗ್ಲಿಷ್‌ಗೆ ಸಮರ್ಥವಾಗಿ ಅನುವಾದವಾಗಿದ್ದರೆ ನೊಬೆಲ್ ಪುರಸ್ಕಾರಕ್ಕೆ ಖಂಡಿತ ಅರ್ಹವಾಗಿದ್ದವು. ಈ ಕುರಿತು ಯೋಚಿಸಲು ಇದು ಸಕಾಲವಾಗಿದೆ.

-ನಾಡೋಜ ಡಾ.ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

ರಾಜ್ಯ ಸರಕಾರ ಕೋಮಾ ಸ್ಥಿತಿಯಲ್ಲಿದೆ: ಶ್ರೀರಾಮುಲು ಕಿಡಿ

ಕಾಂಗ್ರೆಸ್ಸಿಗರ ನಾಲಗೆ, ತಲೆಗೆ ಲಿಂಕ್ ಇಲ್ಲ

ಹುಬ್ಬಳ್ಳಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಏನಾದರೂ ಗುಪ್ತಚರ ಇಲಾಖೆ ಮುಖ್ಯಸ್ಥರಾಗಿದ್ದರಾ? ಭಯೋತ್ಪಾದಕ ದಾಳಿ ಬಗ್ಗೆ ಪ್ರಧಾನಿಗೆ ಮೊದಲೇ ಗೊತ್ತಿದ್ದರೆ ಅವರನ್ನು ಕೆಡವಿ ಹಾಕಿ ಹೊಡೆಯುತ್ತಿದ್ದರು ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಕುಟುಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಗ್ರರ ದಾಳಿ ಬಗ್ಗೆ ಮೋದಿಯವರಿಗೆ ಮೊದಲೇ ಗೊತ್ತಿದ್ದರೆ ಸುಮ್ಮನೆ ಬಿಡುತ್ತಿದ್ದರೆ. ಕಾಂಗ್ರೆಸ್‌ನವರು ಏನು ಬೇಕಾದರು ಮಾತನಾಡುತ್ತಾರೆ. ಅವರ ನಾಲಿಗೆ ಮತ್ತು ತಲೆಗೆ ಲಿಂಕ್ ಇಲ್ಲ. ನಮ್ಮ ಸೈನಿಕರು ಪಹಲ್ಗಾಮ್ ದಾಳಿಕೋರರ ಅಡಗು ತಾಣಗಳನ್ನು ನಾಶ ಮಾಡಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಅಲುಗಾಡುತ್ತಿದೆ. ಸಾಧನೆಯ ಸಮಾವೇಶದಲ್ಲಿ ಹಳೆ ರೆಡಿಯೋ ತರ ಹೇಳಿದ್ದನ್ನು ಹೇಳಿದರು. ಕೇಂದ್ರ ಸರಕಾರ ಅನುದಾನ ನೀಡಿಲ್ಲ ಅಂತ ಸುಳ್ಳು ಹೇಳುತ್ತಾರೆ. ಸಿಎಂ ಭಾಷಣ ಸುಳ್ಳುನಿಂದ ಕೂಡಿದೆ. ಅವರದ್ದು ಬರೀ ಗಾನಾ ಭಜನಾ ಕೆಲಸ. ಅಭಿವೃದ್ಧಿ ಕೆಲಸಗಳು ಸಂಪೂರ್ಣ ನಿಂತು ಹೋಗಿವೆ. ಎರಡು ವರ್ಷದಿಂದ ಶಾಸಕರಿಗೆ ಅನುದಾನ ಬಂದಿಲ್ಲ ಎಂದು ಹರಿಹಾಯ್ದರು.

ಬೆಲೆ ಏರಿಕೆ, ಮಳೆಹಾನಿಯಿಂದ ರಾಜ್ಯದ ಜನತೆ ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರಕಾರ ಕೋಮಾ ಸ್ಥಿತಿಗೆ ತಲುಪಿದೆ. ಕೇವಲ ಗ್ಯಾರಂಟಿ ಹೆಸರು ಹೇಳಿಕೊಂಡು ಓಡಾಡುತ್ತಿದ್ದಾರೆ. ಅತಿವೃಷ್ಟಿ ಹಾನಿ ಸ್ಥಳಗಳಿಗೆ ಯಾವುದೇ ಸಚಿವರು ಭೇಟಿ ನೀಡುತ್ತಿಲ್ಲ. ವಸೂಲಿ ಮಾಡುವುದರಲ್ಲಿ ಕಾಂಗ್ರೆಸ್ ನಿಪುಣತೆ ಪಡೆದಿದೆ. ಹುಟ್ಟುವುದರಿಂದ ಹಿಡಿದು ಸಾಯುವತನಕ ಎಲ್ಲರಿಂದ ವಸೂಲಿ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಜಾಹೀರಾತು ಸರಕಾರವಿದೆ. ಜನರಿಗೆ ಈ ಕಾಂಗ್ರೆಸ್ ಸರಕಾರ ಶಾಪವಾಗಿ ಪರಿಣಮಿಸಿದೆ.

-ಬಿ. ಶ್ರೀರಾಮುಲು, ಮಾಜಿ ಸಚಿವ

ರುಂಡ-ಮುಂಡ ಕತ್ತರಿಸಿದ ಸ್ಥಿತಿಯಲ್ಲಿ ರೈಲ್ವೆ ಹಳಿ ಬಳಿ ಪತ್ತೆ | ಸಾರ್ವಜನಿಕರಲ್ಲಿ ಆತಂಕ

ಸೂಟ್‌ಕೇಸ್‌ನಲ್ಲಿ 10 ವರ್ಷದ ಬಾಲಕಿ ಶವ ಪತ್ತೆ

ಬೆಂಗಳೂರು: ನಗರದ ಹೊರವಲಯ ಆನೇಕಲ್ ತಾಲೂಕಿನ ಹಳೆ ಚಂದಾಪುರದ ರೈಲ್ವೆ ಬ್ರಿಡ್ಜ್ ಬಳಿ ಅನುಮಾನಾಸ್ಪದ ಸೂಟ್‌ಕೇಸ್‌ವೊಂದರಲ್ಲಿ ಸುಮಾರು 10 ವರ್ಷದ ಅಪರಿಚಿತ ಬಾಲಕಿಯ ಶವ ಪತ್ತೆಯಾಗಿದೆ.

ಕರ್ನಾಟಕ ಮತ್ತು ತಮಿಳುನಾಡು ಗಡಿಭಾಗದ ಹೊಸೂರು ಮುಖ್ಯರಸ್ತೆಗೆ ಈ ಸೇತುವೆ ಹೊಂದಿಕೊಂಡಿದ್ದು, ಜನರು ಸಂಚರಿಸುವ ಪ್ರದೇಶವಾಗಿದೆ. ಸ್ಥಳೀಯ ನಿವಾಸಿಗಳು ಶಂಕಿತ ಸೂಟ್‌ಕೇಸ್ ಕಂಡು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸೂರ್ಯನಗರ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಸೂಟ್ಕೇಸ್ ತೆರೆದು ನೋಡಿದಾಗ ಬಾಲಕಿ ಶವ ಪತ್ತೆಯಾಗಿದೆ. ಇನ್ನು ಪೊಲೀಸರು ಹಾಗೂ ಸಾರ್ವಜನಿಕರು ಚಲಿಸುವ ರೈಲಿನಿಂದ ಈ ಸೂಟ್‌ಕೇಸ್ ಎಸೆದಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಅಲ್ಲದೆ ಬಾಲಕಿ ಪ್ರಾಣ ಬಿಟ್ಟ ಬಳಿಕ ಶವವನ್ನು ಎಸೆದಿರಬಹುದು ಎಂದು ಶಂಕಿಸಲಾಗಿದೆ.

ಪೊಲೀಸರು ಪರಿಶೀಲನೆ ಮಾಡಿದ ಬಳಿಕ ಸೂಟ್‌ಕೇಸ್ ಹಾಗೂ ಶವದ ಮೇಲಿನ ಸಮಗ್ರ ಪರಿಶೀಲನೆ ಕೈಗೆತ್ತಿಕೊಳ್ಳಲಾಗುವುದು. ಈ ಘಟನೆ ಆನೇಕಲ್ ಭಾಗದಲ್ಲಿ ಆತಂಕದ ವಾತಾವರಣವನ್ನು ಉಂಟುಮಾಡಿದ್ದು, ಸಾರ್ವಜನಿಕರು ಇಲ್ಲಿ ಆತಂಕದಿಂದಲೇ ಸಂಚರಿಸುವಂತಾಗಿದೆ. ಜತೆಗೆ, ಸೂಟ್‌ಕೇಸ್‌ನಲ್ಲಿ ಶವವಾಗಿ ಸಿಕ್ಕಿರುವ ಬಾಲಕಿ ಯಾರು? ಇಲ್ಲಿಗೆ ಹೇಗೆ ಈ ಸ್ಥಿತಿಗೆ ಬಂತು? ಯಾರು ಇದನ್ನು ನಡೆಸಿದ್ದಾರೆ? ಎಂಬ ಪ್ರಶ್ನೆಗಳು ಉಂಟಾಗಿವೆ.

ಸೂಟ್‌ಕೇಸ್ ಅನ್ನು ಚಲಿಸುತ್ತಿದ್ದ ರೈಲಿನಿಂದ ಎಸೆದಂತೆ ಕಾಣುತ್ತಿದೆ. ಸಾಮಾನ್ಯವಾಗಿ ಇಂತಹ ಪ್ರಕರಣಗಳು ರೈಲ್ವೆ ಪೊಲೀಸರ ವ್ಯಾಪ್ತಿಗೆ ಬರುತ್ತವೆ. ಆದರೆ ಇದು ನಮ್ಮ ವ್ಯಾಪ್ತಿಯಲ್ಲೂ ಬರುವುದರಿಂದ ನಾವು ಕೂಡ ತನಿಖೆ ನಡೆಸುತ್ತಿದ್ದೇವೆ. ಯಾವುದೇ ಗುರುತಿನ ಚೀಟಿ ಇಲ್ಲದ ಕಾರಣ ಮೃತಳ ಗುರುತು ಇನ್ನೂ ಪತ್ತೆಯಾಗಿಲ್ಲ.

ಸಿ.ಕೆ. ಬಾಬಾ, ಎಸ್‌ಪಿ ಬೆಂಗಳೂರು ಗ್ರಾಮಾಂತರ

ಅನುಮಾನಾಸ್ಪದವಾಗಿ ಯುವತಿಯ ಶವ ಪತ್ತೆ

ಮೈಸೂರು: ನಗರದ ಹೊರವಲಯದ ಕಾಲೇಜೊಂದರ ಬಳಿ ಯುವತಿಯೊಬ್ಬಳ ಶವ ಅನುಮಾನಾಸ್ಪದವಾಗಿ ಪತ್ತೆಯಾಗಿದ್ದು, ಅತ್ಯಾಚಾರವೆಸಗಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಮೃತ ಯುವತಿ ಕಳೆದ ಮೂರು ವರ್ಷಗಳಿಂದ ಮಕ್ಕಳ ಡೇ ಕೇರ್ ಒಂದರಲ್ಲಿ ಕೆಲಸ ಮಾಡುತ್ತಿದ್ದಳು. ಮಂಗಳವಾರ ಕೆ.ಆರ್ ಆಸ್ಪತ್ರೆಗೆ ಹೋಗಿ ಬರುತ್ತೇನೆಂದು ಡೇ ಕೇರ್‌ನಿಂದ ತೆರಳಿದ್ದಳು. ಆಸ್ಪತ್ರೆಯಿಂದ ಹೊರಡುವಾಗ ತಂದೆಗೆ ಕರೆ ಮಾಡಿದ್ದಳು. ಈ ವೇಳೆ, ಮಳೆ ಬರುತ್ತಿದೆ ಆಟೋದಲ್ಲಿ ಹೋಗುವಂತೆ ತಂದೆ ತಿಳಿಸಿದ್ದರು. ಆದರೆ ಆಕೆ ಮನೆಗೆ ವಾಪಸ್ ಆಗಿರಲಿಲ್ಲ. ಬುಧವಾರಯುವತಿಯ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಡಿಸಿಪಿ ಮುತ್ತುರಾಜ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಈ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಸದ ರಾಶಿ ಮೇಲೆ ಸಿಕ್ಕ ನವಜಾತ ಶಿಶು

ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಕಸದ ರಾಶಿ ಮೇಲೆ ಬುಧವಾರ ನವಜಾತ ಶಿಶುವೊಂದು ಪತ್ತೆಯಾಗಿದೆ. ಯಾರೋ ಮಾದನಾಯಕನಹಳ್ಳಿ ರಸ್ತೆಪಕ್ಕದಲ್ಲಿನ ಕಸದ ರಾಶಿ ಮೇಲೆ ನಜಾತ ಶಿಶುವನ್ನು ಬಿಸಾಡಿ ತೆರಳಿದ್ದಾರೆ. ಮಗು ಅಳುತ್ತಿದ್ದಿದ್ದನ್ನ ಗಮನಿಸಿದ ಸ್ಥಳೀಯರು ಮಾದನಾಯಕನಹಳ್ಳಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೆ ಇನ್ಸ್‌ಪೆಕ್ಟರ್ ಮುರುಳಿ ನೇತೃತ್ವದ ತಂಡ ಸ್ಥಳಕ್ಕೆ ಆಗಮಿಸಿ, ಮಗುವನ್ನ ರಕ್ಷಿಸಿ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿದೆ.

ದರ್ಶನ್ ಪುಟ್ಟಣ್ಣಯ್ಯ ರೈತರ ಪರವಾಗಿ ಬಂದು ಚರ್ಚೆ ಮಾಡಲಿ

ಕಾವೇರಿ ಆರತಿಗೆ ರೈತಸಂಘ ವಿರೋಧ: ಚರ್ಚೆಗೆ ಸಿದ್ಧ

ಮಂಡ್ಯ: ಕೆ.ಆರ್.ಎಸ್ ಅಣೆಕಟ್ಟೆ ಬಳಿ ಕೈಗೊಳ್ಳಲಿರುವ ಅಮ್ಯೂಸ್ಮೆಂಟ್ ಪಾರ್ಕ್ ಮತ್ತು ಕಾವೇರಿ ಆರತಿ ಯೋಜನೆಗಳಿಗೆ ಏಕೆ ವಿರೋಧ ವ್ಯಕ್ತವಾಗುತ್ತಿದೆ ಎಂಬುದು ಗೊತ್ತಿಲ್ಲ. ಚರ್ಚೆಗೆ ನಾವು ಸಿದ್ಧರಿದ್ದು, ಸಮಸ್ಯೆಯನ್ನು ನಮಗೆ ಮನದಟ್ಟು ಮಾಡಿಕೊಡಲಿ. ನಿಜವಾಗಿಯೂ ಸಮಸ್ಯೆ ಇದ್ದರೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹೇಳಿ, ಯೋಜನೆ ನಿಲ್ಲಿಸುವ ತೀರ್ಮಾನ ಮಾಡೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಈ ಯೋಜನೆಗಳಿಂದ ಆರ್ಥಿಕತೆ ವೃದ್ಧಿ, ಉದ್ಯೋಗ ಸೃಷ್ಟಿ ಆಗುತ್ತದೆ ಎಂಬುದನ್ನು ರೈತಸಂಘದವರು ಅರ್ಥ ಮಾಡಿಕೊಳ್ಳಲಿ. ಅವರಿಗೆ ಪ್ರತಿಭಟನೆ ನಡೆಸುವ ಹಕ್ಕು ಇದೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಕೂಡ ರೈತರ ಪರವಾಗಿ ಬಂದು ಚರ್ಚೆ ಮಾಡಲಿ ಎಂದರು.

ಬೆಂಗಳೂರಿನಲ್ಲಿ ಮಳೆ ಅವಾಂತರಕ್ಕೆ ಪ್ರತಿಕ್ರಿಯಿಸಿ, ಬ್ರ್ಯಾಂಡ್ ಬೆಂಗಳೂರು ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಮತ್ತು ಆರ್. ಅಶೋಕ್ ಟೀಕಿಸುತ್ತಾರೆ. ಈ ಹಿಂದೆ ಅವರೇ ಅಧಿಕಾರದಲ್ಲಿದ್ದಾಗ ಬ್ರ್ಯಾಂಡ್ ಬೆಂಗಳೂರು ಮಾಡಿದ್ದರೆ ಈ ತೊಂದರೆಯೇ ಬರುತ್ತಿರಲಿಲ್ಲ. ಈಗ ಟೀಕೆ ಮಾಡುವವರು ಅಧಿಕಾರದಲ್ಲಿದ್ದಾಗ ನಿದ್ದೆ ಮಾಡ್ತಿದ್ರಾ? ಎಂದು ಕಿಡಿಕಾರಿದರು.

ಚುಟುಪುಟ್ ಯುದ್ಧ ಹೇಳಿಕೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಟೀಕೆ

ಮಲ್ಲಿಕಾರ್ಜುನ್ ಖರ್ಗೆ ಸಹ ಪಪ್ಪು ರೀತಿ ಆಗಿದ್ದಾರೆ

ಮೈಸೂರು: 'ಚುಟುಪುಟ್ ಯುದ್ಧ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಮಾಜಿ ಸಂಸದ ಪ್ರತಾಪ್ ಸಿಂಹ, ರಾಹುಲ್ ಗಾಂಧಿ ಜತೆ ಇದ್ದು ಅವರು ಸಹ ಪಪ್ಪು ರೀತಿ ಮಾತನಾಡುತ್ತಿದ್ದಾರೆ ಎಂದು ಕಟುವಾಗಿ ಟೀಕಿಸಿದರು.

ಖರ್ಗೆ ಅವರ ಬಾಯಲ್ಲಿ ಅಪರೇಷನ್ ಸಿಂದೂರ ಬಗ್ಗೆ ಬಹಳ ಹಗುರವಾದ ಮಾತು ಬಂದಿರುವುದು ಆಶ್ಚರ್ಯ ತಂದಿದೆ. ಖರ್ಗೆಯ ವರು ಯಾಕೆ ಅವರ ಮಗನ ರೀತಿ ಮಾತನಾಡು ತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಚುಟುಪುಟು ದಾಳಿಯ ನಂತರ ಚೀನಾದ ಕ್ಷಿಪಣಿ ಮಾರ್ಕೆಟ್ ಶೇ.10 ಬಿದ್ದು ಹೋಗಿದೆ.ಅವರ ಆಯುಧಗಳನ್ನು ಖರೀದಿ ಮಾಡಲು ಯಾರೂ ಮುಂದೆ ಬರುತ್ತಿಲ್ಲ. ಈ ಚುಟುಪುಟು ದಾಳಿಯ ನಂತರ ಭಾರತದ ಬ್ರಹ್ಮೋಸ್ ಗೆ 18 ದೇಶಗಳಿಂದ ಬೇಡಿಕೆ ಬಂದಿದೆ ಎಂದು ಹೇಳಿದರು.

ಕದನ ವಿರಾಮದ ಬಗ್ಗೆ ಪಾಕಿಸ್ತಾನದ ಡಿಜಿಎಂಒ ಕರೆ ಮಾಡಿರುವ ಬಗ್ಗೆ ಪಾಕಿಸ್ತಾನದವರೇ ಸ್ಪಷ್ಟಪಡಿಸಿದ್ದಾರೆ. ಪಾಕಿಸ್ತಾನದ ಪ್ರಧಾನಿ ಸಹ ಭಾರತದ ದಾಳಿಯ ಬಗ್ಗೆ ಮಾತನಾಡಿದ್ದಾರೆ. ಮುಂಬೈ ದಾಳಿಗೆ ಪ್ರತಿಯಾಗಿ ಚುಟುಪುಟ್ ದಾಳಿಯನ್ನೂ ನಡೆಸಲಿಲ್ಲ. ಮೋದಿ ಮೇಲಿನ ಮತ್ಸರಕ್ಕೆ ಸೈನ್ಯದ ಬಗ್ಗೆ ಮಾತನಾಡಬೇಡಿ. ಮೋದಿ ಅವರು ಬಂದ ಮೇಲೆ ಸೇನೆಯ ಕಾರ್ಯಕ್ಷಮತೆ ಹೆಚ್ಚಾಗಿದೆ ಎಂದು ಹೇಳಿದರು.

ಕಾಡಾನೆ ದಾಳಿಗೆ ಕಾರ್ಮಿಕ ಸಾವು

ಮಡಿಕೇರಿ: ಮಡಿಕೇರಿಯಲ್ಲಿ ಕಾಡಾನೆ ದಾಳಿಗೆ ಎಸ್ಟೇಟ್ ಕಾರ್ಮಿಕ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಮಡಿಕೇರಿಯ ದಕ್ಷಿಣ ಕೊಡಗಿನ ದೇವರಪುರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಎಸ್ಟೇಟ್ ಕಾರ್ಮಿಕ ಅಣ್ಣಯ್ಯ (41) ಎಂಬಾತ ಕಾಡಾನೆ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ ಗ್ರಾಮದಲ್ಲಿ 'ಬೇಡು ನಮ್ಮೆ' ಎಂಬ ವಿಶಿಷ್ಟ ಹಬ್ಬವನ್ನು ಆಚರಿಸಲು ಸಿದ್ಧತೆ ನಡೆಸುತ್ತಿದ್ದಾಗ ಕಾಡಾನೆ ದಾಳಿ ಮಾಡಿದೆ ಎನ್ನಲಾಗಿದೆ. ಗ್ರಾಮಸ್ಥರು ಅಯ್ಯಪ್ಪ ದೇವಸ್ಥಾನದ ಬಳಿ ಉತ್ಸವವನ್ನು ಪ್ರಾರಂಭಿಸಲು ಸೇರಿದ್ದರು. ಈ ವೇಳೆ ದೇವಾಲಯದ ಆವರಣದ ಬಳಿ ಈ ದಾಳಿ ನಡೆದಿದೆ. ಎಂದಿನಂತೆ ಎಸ್ಟೇಟ್ ಕಾರ್ಮಿಕ ಅಣ್ಣಯ್ಯ ಖಾಸಗಿ ಎಸ್ಟೇಟ್‌ನಲ್ಲಿ ಕೆಲಸ ಮಾಡಲು ಮನೆಯಿಂದ ಹೊರಟಿದ್ದರು. ದಾರಿಯಲ್ಲಿ, ಕಾಡಾನೆ ಜೊತೆ ಮುಖಾಮುಖಿಯಾಗಿದ್ದಾರೆ. ಈ ವೇಳೆ ಅಣ್ಣಯ ಆನೆ ದಾಳಿಯಿಂದ ತಪ್ಪಿಸಿಕೊಳ್ಳಲು ಓಡಲು ಪ್ರಯತ್ನಿಸಿದ್ದಾರೆ. ಈ ವೇಳೆ ಆನೆ ಅಣ್ಣಯ್ಯ ಅವರನ್ನು ಅಟ್ಟಾಡಿಸಿದೆ. ಕಾಡಿನ ಅಂಚಿನ ಕಿರಿದಾದ ಹಾದಿಯಲ್ಲಿ ದಾರಿ ಕಾಣದೆ ಅಣ್ಣಯ್ಯ ಆನೆ ಕೈಗೆ ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಆನೆ ಅವರನ್ನು ತುಳಿದು ಕೊಂದು ಹಾಕಿದೆ.

ರಾಜ್ಯ ಸರಕಾರದ ವೈಫಲ್ಯ ಮರೆಮಾಚಲು ಕೇಂದ್ರ ದೂಷಣೆ

ಮಂಗಳೂರು: ರಾಜ್ಯ ಸರಕಾರದ ತಪ್ಪುಗಳನ್ನು ಮರೆ ಮಾಚಲು ಸಮಾವೇಶದ ಮೂಲಕ ರಾಜ್ಯದ ಜನರಿಗೆ ಕಾಂಗ್ರೆಸ್ ಸರಕಾರ ಸುಳ್ಳು ಸಂದೇಶ ಕೊಡುತ್ತಿದೆ, ಚಾರ್ಜ್‌ಶೀಟ್ ಮೂಲಕ ವಾಸ್ತವ ಏನೆಂದು ಅರ್ಥ ಮಾಡಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಮಂಗಳೂರಿನಲ್ಲಿ ರಾಜ್ಯ ಸರಕಾರ ಆಡಳಿತ ವೈಫಲ್ಯಗಳ ಚಾರ್ಜ್‌ಶೀಟ್ ಬಿಡುಗಡೆ ಮಾಡಿ ಸುದ್ದಿಗೋಷ್ಠಿ ನಡೆಸಿದ ಅವರು, ತನ್ನ ವೈಫಲ್ಯ ಮರೆಮಾಚಲು ರಾಜ್ಯ ಸರಕಾರ ಕೇಂದ್ರವನ್ನು ದೂಷಿಸುತ್ತಿದೆ, ಒಂದೆಡೆ ಪಾಕ್ ಮೇಲಿನ ದಾಳಿ ವಿಚಾರವಾಗಿ ಸೈನಿಕರನ್ನು ಅಪಮಾನ ಮಾಡಲಾಗುತ್ತಿದೆ.ಜತೆಗೆ ಕಾಶ್ಮೀರದ ಪಹಲ್ಗಾಮ್ ನಲ್ಲಿ ನಡೆದ ಉಗ್ರರ ದಾಳಿಯನ್ನು ಭದ್ರತಾ ವೈಫಲ್ಯ ಎಂದು ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯ ಸರಕಾರದ ಆಡಳಿತ ವ್ಯವಸ್ಥೆ ಬಗ್ಗೆ ಯಾರೇ ಪ್ರಶ್ನೆ ಮಾಡಿದರೂ ಎಫ್‌ಐಆರ್ ಹಾಕುತ್ತಾರೆ ಮಾಜಿ ಕಾರ್ಪೊರೇಟರ್ ಶ್ವೇತಾ ಪೂಜಾರಿ ಮೇಲೆ ಎಫ್‌ಐಆರ್ ಹಾಕಿದ್ದಾರೆ, ಭಾರತಿ ಶೆಟ್ಟಿ, ಅರುಣ್ ಉಳ್ಳಾಲ್, ಪುನೀತ್ ಕೆರೆಹಳ್ಳಿ, ಶಾಸಕರಾದ ಕಾಮತ್, ಭರತ್ ಶೆಟ್ಟಿ, ಹರೀಶ್ ಪೂಂಜ, ಯಶಪಾಲ್, ಹಿಂದೂಮುಖಂಡರಾದ ಶರಣ್, ಶ್ರೀಕಾಂತ್ ಶೆಟ್ಟಿ ಎಲ್ಲರ ಮೇಲೂ ಎಫ್‌ಐಆರ್ ಹಾಕಿದ್ದಾರೆ. ಸರಕಾರವನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ.

ಕೋಟ ಶ್ರೀನಿವಾಸ ಪೂಜಾರಿ, ಸಂಸದ

ವಿಶ್ವವಾಣಿ

ಸಂಪಾದಕೀಯ

ಕನ್ನಡದ ಕಂಪು ಜಗದಗಲ

ಖ್ಯಾತ ಕನ್ನಡ ಲೇಖಕಿ ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕತೆಗಳು' ಕಥಾಸಂಕಲನದ ಇಂಗ್ಲಿಷ್ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್' ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದೆ. ಈ ಪ್ರಶಸ್ತಿ ಪಡೆದ ಮೊದಲ ಕನ್ನಡ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ನೆಲದ ಸೌಹಾರ್ದತೆ, ಜಾತ್ಯತೀತತೆ ಮತ್ತು ಸೋದರತ್ವದ ನಿಜ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬರೆಯುತ್ತಿರುವ ಬಾನು ಮುಸ್ತಾಕ್ ಅವರು ಕನ್ನಡದ ಹಿರಿಮೆಯ ಬಾವುಟವನ್ನು ಅಂತಾರರಾಷ್ಟ್ರೀಯ ಮಟ್ಟದಲ್ಲಿ ಹಾರಿಸುವ ಮೂಲಕ ಈ ನಾಡಿಗೆ ಗೌರವ ತಂದುಕೊಟ್ಟಿದ್ದಾರೆ. ನಿಜಕ್ಕೂ ಇದು ಕನ್ನಡ, ಕನ್ನಡಿಗ ಮತ್ತು ಕರ್ನಾಟಕಕ್ಕೇ ಸಂಭ್ರಮದ ಹೊತ್ತು. ಹಾರ್ಟ್ ಲ್ಯಾಂಪ್ 1990 ಮತ್ತು 2023 ರ ನಡುವೆ ಬಾನು ಮುಷ್ತಾಕ್ ಅವರು ಬರೆದ 12 ಕಥೆಗಳ ಸಂಗ್ರಹವಾಗಿದ್ದು, ದೀಪಾ ಭಾಸ್ತಿ ಅವರು ಇದನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸುವ ಮೂಲಕ ಅಂತಾರಾಷ್ಟ್ರೀಯ ಗೌರವ ತಂದುಕೊಟ್ಟಿದ್ದಾರೆ. ಈ ಪುಸ್ತಕದಲ್ಲಿನ ಕಥೆಗಳು ದಕ್ಷಿಣ ಭಾರತದ ಮುಸ್ಲಿಂ ಸಮುದಾಯಗಳ ಮಹಿಳೆಯರ ದೈನಂದಿನ ಜೀವನದ ಅನುಭವಗಳನ್ನು, ವಿಶೇಷವಾಗಿ ಅವರ ಸ್ಥಿತಿಸ್ಥಾಪಕತ್ವ, ಪ್ರತಿರೋಧ ಮತ್ತು ಸಹೋದರತ್ವವನ್ನು ಎತ್ತಿ ತೋರಿಸುತ್ತವೆ. ಬಾನು ಮುಷ್ತಾಕ್ ಅವರು ತಮ್ಮ ಬರಹಗಳ ಮೂಲಕ ಧರ್ಮ, ಸಮಾಜ ಮತ್ತು ರಾಜಕೀಯವು ಮಹಿಳೆಯರ ಮೇಲೆ ಹೇಗೆ ನಿರ್ಬಂಧಗಳನ್ನು ಹೇರುತ್ತವೆ ಎಂಬುದನ್ನು ಚಿತ್ರಿಸುತ್ತಾರೆ. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಅನೇಕ ಮುಸ್ಲಿಂ ಲೇಖಕರು ವ್ಯಾಪಕವಾಗಿ ಬರೆಯುತ್ತಿದ್ದರೂ, ಅವರು ತಮ್ಮದೇ ಆದ ಧರ್ಮವನ್ನು ಟೀಕಿಸುವಲ್ಲಿ ಧೈರ್ಯಶಾಲಿಗಳಾಗಿಲ್ಲ. ಆದರೆ, ಬಾನು ಅವರು ಪ್ರಗತಿಪರ ಸಮಾಜಕ್ಕಾಗಿ ಕೆಲಸ ಮಾಡುತ್ತಾರೆ ಎಂಬುದನ್ನು ಸಾಬೀತು ಮಾಡಿದ್ದಾರೆ. ಮುಸ್ಲಿಂ ಮಹಿಳಾ ಬರಹಗಾರರು ಹೆಚ್ಚಾಗಿ ಇರುವ ಉರ್ದು ಭಾಷೆಯಲ್ಲಿ ಬರೆದಿದ್ದಾರೆ. ಆದರೆ, ಕನ್ನಡ ಸಾಹಿತ್ಯವು ಕರ್ನಾಟಕಕ್ಕೆ ಸೀಮಿತವಾಗಿದೆ. ಆದರೆ, ಬಾನು ಅವರು ಈ ಕೃತಿಯ ಮೂಲಕ ರಾಜ್ಯ ಮಾತ್ರವಲ್ಲದೇ ದೇಶ ಮತ್ತು ಜಗತ್ತಿಗೆ ಮುಸ್ಲಿಂ ಮಹಿಳೆಯರ ಜೀವನವನ್ನು ಪರಿಚಯಿಸಿದ್ದಾರೆ. ಬಾನು ಮುಷ್ತಾಕ್ ಅವರು ಇನ್ನಷ್ಟು ಕಾಲ ಸತ್ವಯುತವಾಗಿ ಬರೆಯುತ್ತಾ ಕನ್ನಡದ ಕಂಪನ್ನು ಜಗದಗಲಕ್ಕೆ ಪಸರಿಸಲಿ.

ಸೊಂಪಾದಕೀಯ

ಮಾಮೂಲಿ ವಿಷ್ಯ

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಬ್ಬರ ಹೆಸರು ಮತ್ತು ಫೋಟೋ ಬಳಸಿಕೊಂಡು ನಕಲಿ ಖಾತೆ ತೆರೆದು ಅವರ ಸ್ನೇಹಿತರ ಬಳಿ ಹಣ ಕೇಳುವುದು ಸರ್ವೇಸಾಮಾನ್ಯವಾಗಿದೆ. ಫೇಸ್‌ಬುಕ್‌ನಲ್ಲಂತೂ ಇದು ಎಲ್ಲರಿಗೂ ಗೊತ್ತಾಗಿ, ಯಾರೂ ಇಂಥವರಿಗೆ ದುಡ್ಡು ಕೊಡದೇ ಇದ್ದರೂ ಈ ಟ್ರೆಂಡ್ ಮಾತ್ರ ಇನ್ನೂ ಚಾಲ್ತಿಯಲ್ಲಿದೆ. ತೀರಾ ಯಾರೋ ಸಾಮಾನ್ಯರ ಹೆಸರಲ್ಲಿ ನಕಲಿ ಖಾತೆ ತೆಗೆದು ನಗದು ಕೇಳಿದರೆ ಓಕೆ. ಆದರೆ ತೀರಾ ಪ್ರಭಾವಿಗಳ ಹೆಸರಲ್ಲಿ ಖಾತೆ ತೆರೆದು ಅವರ ಹೆಸರಲ್ಲಿ 5 ಸಾವಿರ, 10 ಸಾವಿರ ದುಡ್ಡು ಕೇಳಿದಾಗ ಅದು ಅನುಮಾನಕ್ಕೆ ಆಸ್ಪದ ಕೊಡುವುದರ ಜತೆಗೆ ಹಾಸ್ಯಾಸ್ಪದವೂ ಆಗುತ್ತದೆ. ವರ್ಷಗಳ ಹಿಂದೆ ಸ್ಯಾಂಡಲ್‌ವುಡ್ ನಿರ್ಮಾಪಕರೊಬ್ಬರ ಹೆಸರಲ್ಲಿ ಫೇಕ್ ಅಕೌಂಟ್ ಮಾಡಿ 10 ಸಾವಿರ ಕೇಳಿದಾಗ, ಸ್ವತಃ ಆ ನಿರ್ಮಾಪಕರು, ''ನನ್ನ ಹೆಸರಿಗೆ ಕಳಂಕ ತರ್ತಾ ಇದ್ದಾರೆ. ನನ್ ಫೇಕ್ ಅಕೌಂಟ್ ಮಾಡ್ಲಿ; ಆದ್ರೆ ನನ್ನ ಹೆಸರಲ್ಲಿ ಐದು, ಹತ್ತು ಸಾವಿರ ಕೇಳೋದಾ, ಅಟ್‌ಲೀಸ್ಟ್ ಒಂದ್ ಐದು, ಹತ್ತು ಲಕ್ಷನಾದ್ರೂ ಕೇಳ್ಬೇಕು ತಾನೇ?!'' ಅಂತ ತಮಾಷೆ ಮಾಡಿದ್ದರು. ಈ ಸೈಬರ್ ಖದೀಮರು ಬೆಳಗಾವಿಯ ಎಸ್.ಪಿ. ಅವರ ಹೆಸರಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಫೇಕ್ ಅಕೌಂಟ್ ಕ್ರಿಯೇಟ್ ಮಾಡಿ ಇದೇ ರಾಗ ಶುರುಮಾಡಿದ್ದರಂತೆ. ಆದರೆ ಪೊಲೀಸರ ಹೆಸರಿನ ಅಕೌಂಟಿನಿಂದ ಹಣದ ಕೋರಿಕೆ ಬಂದಿದ್ದು ನೋಡಿ ಅವರ ಫಾಲೋವರ್ಸ್ ಗಾಬರಿಯಾಗಿದ್ದಾರೆ. ಪೊಲೀಸರು ಎದುರಿಗೆ ಸಿಕ್ಕಾಗ ಹಣ ವಸೂಲಿ ಮಾಡೋದು ಮಾಮೂಲಿ. ಆದ್ರೆ ಆನ್‌ಲೈನಲ್ಲೂ ಮಾಮೂಲಿ ಕೇಳ್ತಾರಾ ಅಂತ ಜನ ಅನುಮಾನಗೊಂಡಿದ್ದಾರೆ. ಅಲ್ಲದೆ ಪೊಲೀಸರು ''ಅರ್ಜೆಂಟ್ ದುಡ್ಡು ಬೇಕಿತ್ತು, ನಾಳೆ ಕೊಡ್ತೀನಿ ಅಂತೆಲ್ಲಾ ಸಾಲ ಕೇಳಲ್ವಲ್ಲ, ಅವರದ್ದೇನಿದ್ದರೂ ಇಷ್ಟು ಇಟ್ಟು ರೈಟ್ ಹೇಳು ಅನ್ನೋ ಪಾಲಿಸಿ ಅಲ್ವಾ'' ಅಂತಲೂ ಕನ್‌ಫ್ಯೂಸ್ ಆಗಿದ್ದಾರೆ. ಆದರೆ, ಇದನ್ನು ಗಂಭೀರವಾಗಿ ತೆಗೆದುಕೊಂಡರೆ ಈ ಆನ್‌ಲೈನ್ ಚೋರರಿಗೆ ಪೊಲೀಸರ ಭಯವೂ ಇಲ್ಲ ಅನ್ನೋದು ಸ್ಪಷ್ಟವಾಗುತ್ತದೆ. ಹಾಗಾಗಿ ಇದಕ್ಕೆ ಸೈಬರ್ ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ಲ್ಯಾಂಡಿಂಗ್ ಮಾಡುವಾಗ ಕಾಣದಿದ್ದರೆ?

ಒಮ್ಮೆ ನಾನು ಫ್ರಾನ್ಸಿನ ಟುಲೂಸ್‌ನಿಂದ ಪ್ಯಾರಿಸ್ಸಿಗೆ ವಿಮಾನದಲ್ಲಿ ಆಗಮಿಸುತ್ತಿದ್ದೆ. ವಿಮಾನ ಪ್ಯಾರಿಸ್ಸಿನ ಚಾರ್ಲ್ಸ್ ಡಿಗಾಲ್ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ವಿಮಾನ ಲ್ಯಾಂಡ್ ಆಗುವ ಸುಮಾರು 20 ನಿಮಿಷ ಮುನ್ನ ದಟ್ಟವಾದ ಕಪ್ಪು ಮೋಡದಲ್ಲಿ ಸುಮಾರು ಏಳೆಂಟು ನಿಮಿಷ ಹಾದುಹೋಗುತ್ತಿದ್ದರೂ, ಶುಭ್ರ ಆಗಸ ಕಾಣುತ್ತಿರಲಿಲ್ಲ. ಪೈಲಟ್ ವಿಮಾನವನ್ನು ಕೆಳಕ್ಕಿಳಿಸುತ್ತಿದ್ದರೂ, ಭೂಮಿ ಕಾಣುತ್ತಿರಲಿಲ್ಲ. ಅಷ್ಟರಲ್ಲಿ ಒಳಗಿದ್ದ ವಿಮಾನದ ಚಕ್ರಗಳು ತೆರೆದುಕೊಂಡವು. ಪೈಲಟ್ ಒಂದೇ ಸಮನೆ ವಿಮಾನವನ್ನು ಕೆಳಕ್ಕಿಳಿಸುತ್ತಿದ್ದ. ಆದರೂ ಭೂಮಿ ಗೋಚರಿಸುತ್ತಿರಲಿಲ್ಲ. ಇನ್ನೂ ವಿಮಾನ ದಟ್ಟ ಮೋಡದಿಂದ ಹೊರಬಂದಿರಲಿಲ್ಲ. ಪೈಲಟ್‌ಗೆ ಮುಂದೆ ಏನೂ ಕಾಣಿಸುತ್ತಿರಲಿಲ್ಲ. ಆದರೂ ಆತ ವಿಮಾನವನ್ನು ಲ್ಯಾಂಡ್ ಮಾಡಲು ನಿರ್ಧರಿಸಿದ್ದ. ಇದು ಹೇಗೆ ಸಾಧ್ಯ? ಇಂಥ ಸಂದರ್ಭದಲ್ಲಿ ವಿಮಾನವನ್ನು ಇಳಿಸಲು ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ (ILS) ಸಹಾಯಕ್ಕೆ ಬರುತ್ತದೆ. ಇದು ವಿಮಾನವನ್ನು ನಿಖರವಾಗಿ, ಸುರಕ್ಷಿತವಾಗಿ ಮತ್ತು ನಿಯಂತ್ರಿತವಾಗಿ ನಿಲ್ದಾಣದಲ್ಲಿ ಇಳಿಸಲು ಸಹಾಯ ಮಾಡುವ ತಂತ್ರಜ್ಞಾನ. ಇದು ಹವಾಮಾನ ಪರಿಸ್ಥಿತಿ ಅನನುಕೂಲಕರವಾಗಿದ್ದರೂ, ಪೈಲಟ್‌ಗಳಿಗೆ ಸ್ಪಷ್ಟ ಮಾರ್ಗ ಗೋಚರಿಸದಿದ್ದರೂ, ವಿಮಾನವನ್ನು ಸುರಕ್ಷಿತವಾಗಿ ಇಳಿಸಲು ಪೈಲಟ್‌ಗಳಿಗೆ ಮಾರ್ಗದರ್ಶನ ನೀಡುತ್ತದೆ. ಐಎಲ್‌ಎಸ್ ಸಿಸ್ಟಮ್ ಅನ್ನು ದೊಡ್ಡ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಬಳಸಲಾಗುತ್ತದೆ. ಈ ಸಿಸ್ಟಮ್‌ನಲ್ಲಿ ಲೋಕಲೈಜರ್ ಸಿಗ್ನಲ್ ಮತ್ತು ಗ್ಲೈಡ್ ಸ್ಲೋಪ್ ಸಿಗ್ನಲ್ ಎಂಬ 2 ಪ್ರಮುಖ ವ್ಯವಸ್ಥೆಗಳಿರುತ್ತವೆ. ಅವು ವಿಮಾನವು ಹಾರಾಟ ಮಾರ್ಗದಿಂದ ನಿಲ್ದಾಣದ ರನ್‌ವೇ (Runway)ಗೆ ಸರಿಯಾದ ದಿಕ್ಕಿನಲ್ಲಿ ಇಳಿಯಲು ಗೈಡ್ ಮಾಡುತ್ತವೆ. ಲೋಕಲೈಜರ್ ಆಂಟೆನಾಗಳು ನಿಲ್ದಾಣದ ರನ್‌ವೇ ಮಧ್ಯದಲ್ಲಿ ಮುಂಭಾಗದಲ್ಲಿ ಸ್ಥಾಪಿತವಾಗಿರುತ್ತವೆ. ಇದು ವಿಮಾನದ ಡ್ಯಾಶ್‌ಬೋರ್ಡ್ ಮೇಲೆ ಡಿಜಿಟಲ್/ವಿಜುವಲ್ ಸೂಚನೆಗಳನ್ನು ನೀಡುತ್ತವೆ. ಇದು ಪೈಲಟ್‌ಗಳು ತಮ್ಮ ವಿಮಾನವು ರನ್‌ವೇನ ಮಧ್ಯ ಬಿಂದುದಲ್ಲಿ ಇಳಿಯಲು ಸಹಾಯಮಾಡುತ್ತವೆ. ಐಎಲ್‌ಎಸ್ ಸಿಸ್ಟಮ್ ನಲ್ಲಿರುವ ಗ್ಲೈಡ್ ಪಾತ್ (Glide Path) ವಿಮಾನವು ಸರಿಯಾದ ಕೋನದಲ್ಲಿ ಇಳಿಯಲು ಸಹಾಯಮಾಡುತ್ತದೆ. ವಿಮಾನವು ರನ್‌ವೇಯಲ್ಲಿ ಇಳಿಯಲು ತಂತ್ರಜ್ಞಾನದ ಮೂಲಕ ನಿಖರವಾದ ಡೇಟಾವನ್ನು ಒದಗಿಸುತ್ತದೆ. ಐಎಲ್‌ಎಸ್ ಸಿಸ್ಟಮ್ ಬಳಸುವ ಸಂದರ್ಭದಲ್ಲಿ, ಪೈಲಟ್‌ಗಳು ತಮ್ಮ ಪ್ಯಾನಲ್‌ನಲ್ಲಿ ರೇಡಿಯೋ ಫ್ರೀಕ್ವೆನ್ಸಿಯನ್ನು ಸರಿಹೊಂದಿಸುತ್ತಾರೆ. ಈ ವ್ಯವಸ್ಥೆಯು ಪೈಲಟ್‌ಗಳಿಗೆ 'ಲ್ಯಾಟರಲ್' (Lateral) ಮತ್ತು 'ವರ್ಟಿಕಲ್' (Vertical) ಮಾರ್ಗದರ್ಶನ ನೀಡುತ್ತದೆ. ಐಎಲ್‌ಎಸ್ ಸಿಸ್ಟಮ್ ಬಳಸುವ ಪೈಲಟ್‌ಗಳು ತಮ್ಮ ವಿಮಾನವನ್ನು 'ಆಟೋಮ್ಯಾಟಿಕ್ ಲ್ಯಾಂಡಿಂಗ್' ಅಥವಾ 'ಮ್ಯಾನ್ಯುಯಲ್ ಲ್ಯಾಂಡಿಂಗ್' ಮೂಲಕವೂ ಇಳಿಸ ಬಹುದು. ಹವಾಮಾನ ಸಮಸ್ಯೆ ಅಥವಾ ಕಪ್ಪು ದಟ್ಟಮಂಜು ಇದ್ದಾಗ, ಈ ತಂತ್ರಜ್ಞಾನವು ದೋಷರಹಿತ ಸೂಚನೆಯನ್ನು ಪೈಲಟ್‌ಗಳಿಗೆ ನೀಡುವುದರಿಂದ ಅವರು ಸರಿಯಾಗಿ ವಿಮಾನವನ್ನು ಇಳಿಸಲು ಸಹಾಯಕವಾಗುತ್ತದೆ. ಅತಿ ದಟ್ಟ ಮಂಜು ಅಥವಾ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಪೈಲಟ್‌ಗಳು ದೃಶ್ಯ ಸ್ಪಷ್ಟತೆಯ ಕೊರತೆಯಿಂದ ವಿಮಾನವನ್ನು ನಿಖರವಾಗಿ ನೋಡಲು ಸಾಧ್ಯವಾಗದಾಗ, ಐಎಲ್‌ಎಸ್ ಸಿಸ್ಟಮ್ ನೆರವಿಗೆ ಬರುತ್ತದೆ. ವಿಮಾನಗಳು ತ್ವರಿತವಾಗಿ ಇಳಿಯಲೂ ಈ ವ್ಯವಸ್ಥೆಯು ಅನುಕೂಲ ಮಾಡುತ್ತದೆ. ಇದರಿಂದ ವಿಮಾನಗಳು ಬೇಗನೆ ರನ್‌ವೇಯನ್ನು ಬಿಡಬಹುದು ಮತ್ತು ಇತರ ವಿಮಾನಗಳು ಸರಿಯಾಗಿ ಇಳಿಯಲು ಅನುವು ಮಾಡಿಕೊಡಬಹುದು. ಇದು ವಿಮಾನಯಾನ ಕ್ಷೇತ್ರದಲ್ಲಿ ಪೈಲಟ್‌ಗಳಿಗೆ ಅನುಕೂಲ ಮತ್ತು ಸುರಕ್ಷಾ ಮಟ್ಟವನ್ನು ಹೆಚ್ಚಿಸುತ್ತದೆ. ಪ್ರತಿಕೂಲ ಹವಾಮಾನದಿಂದ ಪೈಲಟ್‌ಗೆ ಮುಂದೆ ಏನೇನೂ ಕಾಣದಿದ್ದಾಗ, ಒಂಥರಾ ಕಣ್ಣಿಗೆ ಕಪ್ಪುಬಟ್ಟೆ ಕಟ್ಟಿದಂಥ ಸ್ಥಿತಿ ಉದ್ಭವಿಸಿದಾಗ, ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ ಅನ್ನು ಅನ್ವಯಿಸಲಾಗುತ್ತದೆ. ಮಳೆಗಾಲ ಅಥವಾ ಚಳಿಗಾಲದಲ್ಲಿ ರಾತ್ರಿ ವೇಳೆಯಲ್ಲಿ ದಟ್ಟ ಮೋಡದಿಂದ ಹತ್ತಿರ ಆಗಮಿಸಿದರೂ ಪೈಲಟ್‌ಗೆ ರನ್‌ವೇ ಕಾಣದಿದ್ದಾಗ ಈ ತಂತ್ರಜ್ಞಾನದ ಸಹಾಯ ಅಪೇಕ್ಷಿಸಲಾಗುತ್ತದೆ.

ಆಸ್ಪತ್ರೆಯಲ್ಲಿದ್ದ ಕ್ಲಿಯರ್‌ಗೆ ಮನೋಬಲವೆಂಬ ಬೆಳಕಿನ ಕಿಡಿ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಅಂದು ಹೈಸ್ಕೂಲಿನಲ್ಲಿ ಅವನ ಕೊನೆಯ ದಿನ. ಕ್ಲಾಸ್‌ಮೇಟ್ ಬೀಸಿದ ಬೇಸ್ ಬಾಲ್ ಬ್ಯಾಟ್ ಕೈತಪ್ಪಿ ಅವನ ಮುಖಕ್ಕೆ ಬಲವಾಗಿ ಬಂದು ಬಡಿಯಿತು. ಬ್ಯಾಟ್ ಬಂದು ನೇರವಾಗಿ ಎರಡು ಕಣ್ಣುಗಳ ಮಧ್ಯೆ, ಮೂಗು ಮತ್ತು ಹಣೆಗೆ ಹೊಡೆಯಿತು. ಅದೊಂದೇ ಗೊತ್ತು, ಮುಂದೇನಾಯಿತು ಎಂಬುದು ಅವನಿಗೆ ಗೊತ್ತಾಗಲೇ ಇಲ್ಲ.

ಬ್ಯಾಟ್ ಬಂದು ಬಡಿದ ವೇಗ ಅದೆಷ್ಟು ಜೋರಾಗಿತ್ತೆಂದರೆ, ಮೂಗಿನ ಮೂಳೆ ಮುರಿದುಹೋಗಿತ್ತು. ಮೂಗಿನಿಂದ ಮಿದುಳಿಗೆ ಹೋಗುವ ನರ ತುಂಡಾಗಿತ್ತು. ಬ್ಯಾಟ್ ಬಡಿದ ಹೊಡೆತಕ್ಕೆ ಹಣೆಗೂ ಪೆಟ್ಟಾಗಿತ್ತು. ಇಡೀ ತಲೆಬುರುಡೆ 'ದಿಮ್' ಎನ್ನುತ್ತಿತ್ತು. ನೋಡನೋಡುತ್ತಿದಂತೆ, ಅವನ ಮೂಗಿನಿಂದ ಧಾರಾಕಾರವಾಗಿ ರಕ್ತ ಹರಿಯಲಾರಂಭಿಸಿತು. ರಕ್ತ ನೋಡುತ್ತಿದ್ದಂತೆ ಆತ ವಿಚಲಿತನಾದ. ಕೆಲವೇ ಕ್ಷಣಗಳಲ್ಲಿ ಗೊತ್ತಾಗಿದ್ದೇನೆಂದರೆ, ಅವನ ಮೂಗು ಮುರಿದಿದೆ, ತಲೆಬುರಡೆಗೆ ಏಟು ಬಿದ್ದಿದೆ ಮತ್ತು ಕಣ್ಣು ಗುಡ್ಡೆಗಳೆರಡಕ್ಕೂ ಧಕ್ಕೆಯಾಗಿವೆ ಎಂದು. ಅದನ್ನು ನೋಡಿ ಸುತ್ತಲಿದ್ದವರೆಲ್ಲಾ ಕಂಗಾಲಾದರು. ಯಾರೋ ತನ್ನ ಅಂಗಿ ಬಿಚ್ಚಿಕೊಟ್ಟ. ಅದನ್ನು ಆತ ತನ್ನ ಮೂಗಿಗೆ ಹಿಡಿದ. ಆದರೂ ರಕ್ತ ಹರಿಯುವುದು ನಿಲ್ಲಲಿಲ್ಲ. ಅವನಿಗೆ ಏನು ನಡೆಯುತ್ತಿದೆಯೆಂಬುದೇ ಗೊತ್ತಾಗಲಿಲ್ಲ.

ಈ ವಿಷಯ ಟೀಚರ್‌ಗೆ ಗೊತ್ತಾಯಿತು. ಅಲ್ಲಿ ಇದ್ದವರೆಲ್ಲ ಸುತ್ತಲೂ ಜಮಾಯಿಸಿದರು. ಆತನಿಗೆ ಪ್ರಜ್ಞೆ ಇರಲಿಲ್ಲ. ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಲು ನಿರ್ಧರಿಸಿದರು. ನಾಲ್ಕಾರು ಜನ ಅವನನ್ನು ಹಿಡಿದು ಮೇಲೆತ್ತಿದ್ದರು. ಒಂದೊಂದು ಕ್ಷಣವೂ ಅಮೂಲ್ಯವಾಗಿತ್ತು. ಕಾರಣ ಕ್ಷಣಕ್ಷಣಕ್ಕೂ ಮುಖ ನೀಲಿಗಟ್ಟಿ ಊದಿಕೊಳ್ಳಲು ಆರಂಭಿಸಿತ್ತು. ಆಸ್ಪತ್ರೆಗೆ ಆಗಮಿಸುತ್ತಿದ್ದಂತೆ, ನರ್ಸ್ ಹತ್ತಾರು ಪ್ರಶ್ನೆಗಳನ್ನು ಕೇಳಿದಳು. 'ಇದು ಯಾವ ಇಸವಿ?' ಎಂದು ಕೇಳಿದಳು. ಆತ ಹೇಳಿದ – '1998' ಆದರೆ ಅದು 2002 ಆಗಿತ್ತು. 'ಅಮೆರಿಕದ ಅಧ್ಯಕ್ಷ ಯಾರು?' ಎಂದು ಕೇಳಿದಳು. ಆತ ಹೇಳಿದ – 'ಬಿಲ್ ಕ್ಲಿಂಟನ್'. ಸರಿ ಉತ್ತರ ಜಾರ್ಜ್ ಡಬ್ಲ್ಯು ಬುಷ್. ಮುಂದಿನ ಪ್ರಶ್ನೆ – 'ನಿನ್ನ ತಾಯಿಯ ಹೆಸರೇನು?' ಅದಕ್ಕೆ ಉತ್ತರಿಸಲು ಆತ ತಡಬಡಿಸಿದ. ಸರಿಯಾದ ಉತ್ತರ ಹೇಳಲು ಹತ್ತು ನಿಮಿಷ ತೆಗೆದುಕೊಂಡ. ಆತನಿಗೆ ನೆನಪಿದ್ದಿದ್ದು ಅದೇ ಕೊನೆ ಪ್ರಶ್ನೆ. ಮುಂದೇನಾಯಿತು ಗೊತ್ತಾಗಲಿಲ್ಲ. ಅಷ್ಟೊತ್ತಿಗೆ ಕಣ್ಣುಗುಡ್ಡೆ ಊದಿಕೊಳ್ಳಲಾರಂಭಿಸಿತು. ತಲೆಬುರುಡೆ ಅಸಾಧ್ಯವಾಗಿ ಶಳಿಯುತ್ತಿತ್ತು. ಆಂಬುಲೆನ್ಸ್ ಬರುವುದಕ್ಕಿಂತ ಮುನ್ನವೇ ಆತ ಪ್ರಜ್ಞಾಹೀನನಾಗಿ ಬಿದ್ದುಬಿಟ್ಟ. ಅಲ್ಲಿಂದ ಮತ್ತೊಂದು ಆಸ್ಪತ್ರೆಗೆ ಸಾಗಿಸಲು ನಿರ್ಧರಿಸಿದರು.

ಆಸ್ಪತ್ರೆಗೆ ಬರುತ್ತಿದ್ದಂತೆ, ಆತನ ದೇಹದ ಚಲನೆಗಳು ಕ್ಷೀಣವಾಗತೊಡಗಿದವು. ಎಂಜಲು ನುಂಗಲು ಮತ್ತು ಸರಾಗವಾಗಿ ಉಸಿರಾಡಲು ಅವನಿಗೆ ಕಷ್ಟವಾಗತೊಡಗಿತು. ಕ್ಷಣಾರ್ಧದಲ್ಲಿ ಆತ ಹೆಚ್ಚು ಕಮ್ಮಿ ಉಸಿರಾಡುವುದನ್ನು ನಿಲ್ಲಿಸಿಬಿಟ್ಟ. ವೈದ್ಯರು ಬಿರಬಿರನೆ ಅವನಿಗೆ ವೆಂಟಿಲೇಟರ್ ಮೂಲಕ ಕೃತಕ ಉಸಿರಾಟಕ್ಕೆ ಅನುವು ಮಾಡಿಕೊಟ್ಟರು. ಆತನ ದೇಹದಲ್ಲಾಗುತ್ತಿರುವ ಏರುಪೇರುಗಳನ್ನು ಗಮನಿಸಿದ ವೈದ್ಯರು, ಸಿನ್ಸಿನಾಟಿಯಲ್ಲಿರುವ ಆಧುನಿಕ ಸಲಕರಣೆ – ಸವಲತ್ತುಗಳಿರುವ ಬೇರೆ ಆಸ್ಪತ್ರೆಗೆ ಹೆಲಿಕಾಪ್ಟರಿನಲ್ಲಿ ಕೊಂಡೊಯ್ಯಲು ನಿರ್ಧರಿಸಿದರು. ಅಲ್ಲಿಂದ ಅವನ ದೇಹವನ್ನು ಸುತ್ತಿ ಹೆಲಿಪ್ಯಾಡ್ ತನಕ ಸ್ಟ್ರೆಚರಿನಲ್ಲಿ ಸಾಗಿಸಿದರು. ಆಗ ನರ್ಸುಗಳು ಅವನಿಗೆ ಉಸಿರಾಟಕ್ಕೆ ನೆರವಾಗಲು ಸ್ಟ್ರೆಚರನ್ನು ಸುತ್ತುವರಿದು ಅದರ ಹಿಂದೆಯೇ ಓಡುತ್ತಿದ್ದರು. ಅಷ್ಟೊತ್ತಿಗೆ ಅವನ ತಾಯಿ ಹೆಲಿಪ್ಯಾಡಿಗೆ ಆಗಮಿಸಿದಳು. ಅವನಿಗೆ ಪ್ರಜ್ಞೆ ಇರಲಿಲ್ಲ. ಹೆಲಿಕಾಪ್ಟರಿನಲ್ಲಿ ದುಃಖತಪ್ತ ತಾಯಿ ಪಕ್ಕದಲ್ಲಿ ಕುಳಿತಿದ್ದಳು.

ಅಷ್ಟೊತ್ತಿಗೆ ಅವನ ತಂದೆಗೆ ಈ ವಿಷಯ ಗೊತ್ತಾಯಿತು. ಆತ ಮನೆ-ಮಂದಿಗೆಲ್ಲಾ ಈ ವಿಷಯ ತಿಳಿಸಿದ. ಅವನ ತಂದೆ ಕಾರಿನಲ್ಲಿ ಸಿನ್ಸಿನಾಟಿಗೆ ಹೊರಟರು. ಅಂದೇ ಅವನ ಸಹೋದರಿಯ ಗ್ರಾಜುಯೇಷನ್ ಡೇ ಇತ್ತು. ಹೆಲಿಕಾಪ್ಟರ್ ಭೂಸ್ಪರ್ಶವಾಗುತ್ತಿದ್ದಂತೆ, ಅಲ್ಲಿಗೆ ಸುಮಾರು ಇಪ್ಪತ್ತು ವೈದ್ಯರು ಮತ್ತು ನರ್ಸುಗಳು ಧಾವಿಸಿ ಅವನನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ಕರೆದುಕೊಂಡು ಹೋದರು. ಅಷ್ಟೊತ್ತಿಗೆ ಅವನ ಮುಖ ಕುಂಬಳಕಾಯಿಯಂತೆ ಊದಿಕೊಂಡಿತ್ತು. ತಲೆಶಕೆ ಸಹಿಸಲಸಾಧ್ಯವಾಗಿತ್ತು. ಅವನ ಮುರಿದ ಮೂಗಿನ ಮೂಳೆಗಳನ್ನು ಸರಿಪಡಿಸಬೇಕಿತ್ತು. ಅದಕ್ಕೆ ಸರ್ಜರಿ ಮಾಡಲೇಬೇಕಿತ್ತು. ಆತ ಕೋಮಾಕ್ಕೆ ಜಾರಿದಾಗ, ಅವನ ತಂದೆ – ತಾಯಿಯನ್ನು ಸಮಾಧಾನಪಡಿಸಲು, ಆಸ್ಪತ್ರೆಯ ಅಧಿಕಾರಿಗಳು ಚರ್ಚಿನ ಧರ್ಮಗುರುಗಳು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಕರೆಯಿಸಿದರು. ಹತ್ತು ವರ್ಷಗಳ ಹಿಂದೆ, ವೈದರು ಅವನ ಸಹೋದರಿಗೆ ಕ್ಯಾನ್ಸರ್ ಎಂದು ಹೇಳಿದಾಗಲೂ ಅದೇ ಧರ್ಮಗುರುಗಳು ಮತ್ತು ಕಾರ್ಯಕರ್ತರು ಆಗಮಿಸಿದ್ದರು.



ಅಕ್ಷರಶಃ ಆತ ಮಷೀನುಗಳಿಂದ ಸುತ್ತುವರಿದಿದ್ದ. ಆ ಯಂತ್ರಗಳೇ ಅವನನ್ನು ಬದುಕಿಸಿಟ್ಟಿದ್ದವು. ಅವನ ತಂದೆ-ತಾಯಿಗಳು ಮಗನ ಪಾಡನ್ನು ನೋಡಲಾಗದೇ, ಬಳಲಿ ಕೆಯಿಂದ ನಿತ್ರಾಣಗೊಂಡಿದ್ದರು.

ನಾಲ್ಕೈದು ದಿನಗಳ ನಂತರ, ಆತ ಚಿಕಿತ್ಸೆಗೆ ಸ್ಪಂದಿಸಲಾರಂಭಿಸಿದ. ಆಶ್ಚರ್ಯಕರ ರೀತಿಯಲ್ಲಿ ಅವನಿಗೆ ಪ್ರಜ್ಞೆ ಮರಳಿತು. ಅವನಿಗೆ ವಾಸನಾಶಕ್ತಿ ಹೊರಟು ಹೋಗಿತ್ತು. ಕೆಲವು ದಿನಗಳಲ್ಲಿ ಅದು ಸರಿಹೋಗುತ್ತದೆ ಎಂದು ವೈದ್ಯರು ಹೇಳಿದರು. ಮುರಿದ ಮೂಗಿನ ಮೂಳೆಗಳಿಂದ ಉಸಿರಾಡುವುದು ಕಷ್ಟವಾಗಿತ್ತು. ಉಬ್ಬಿದ ಕಣ್ಣುಗುಡ್ಡೆಗಳು ನಿಧಾನವಾಗಿ ಸಹಜ ಸ್ಥಿತಿಗೆ ಬರುವ ಸೂಚನೆಗಳು ಕಾಣಲಾರಂಭಿಸಿದವು. ತಲೆಶೂಲ ಕಮ್ಮಿಯಾಗಿತ್ತು. ಅವನ ಕಣ್ಣುಗಳು ಕ್ರಮೇಣ ಮೊದಲಿನ ಸ್ಥಾನದಲ್ಲಿ ಕುಳಿತುಕೊಳ್ಳಲಿವೆ ಎಂದು ನೇತ್ರತಜ್ಞರು ಹೇಳಿದರು. ಒಂದು ವಾರದ ನಂತರ ಇನ್ನೊಂದು ಸರ್ಜರಿ ಮಾಡಬೇಕು, ಅದು ಗುಣವಾಗಲು ಹತ್ತು ದಿನಗಳಾದರೂ ಬೇಕು ಎಂದು ವೈದ್ಯರು ಹೇಳಿದರು. ಅವನನ್ನು ನೋಡಿದರೆ, ಬಾಕ್ಸಿಂಗ್ ಪಂದ್ಯದಲ್ಲಿ ಪೆಟ್ಟು ತಿಂದು ಬ್ಯಾಂಡೇಜ್ ಹಾಕಿಸಿಕೊಂಡವನಂತಿದ್ದ. ಆಗಾಗ ಆಸ್ಪತ್ರೆಗೆ ಬರಬೇಕಾಗುತ್ತದೆಯೆಂದು ತಿಳಿಸಿದ ವೈದ್ಯರು, ಇನ್ನು ಎರಡು-ಮೂರು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವಂತೆ ಸೂಚಿಸಿ ಡಿಸ್ಚಾರ್ಜ್ ಮಾಡಿದರು.

ಮುಂದಿನ ಮೂರು ತಿಂಗಳು ಭಯಾನಕವಾಗಿದ್ದವು. ಆತ ಮಾಂಸದ ಮುದ್ದೆಯಂತೆ ಹಾಸಿಗೆಯಲ್ಲಿ ಮಲಗಿದ್ದ. ಅವನ ಜೀವನದ ಎಲ್ಲಾ ಚಟುವಟಿಕೆಗಳು ಸ್ತಬ್ದವಾಗಿದ್ದವು. ಆತನಿಗೆ ನೇರವಾಗಿ ನೋಡಲು ಆಗುತ್ತಿರಲಿಲ್ಲ, ನೆಗಡಿಯಾದಾಗ ಮೂಗು ವಿಪರೀತ ನೋಯುತ್ತಿತ್ತು. ಹತ್ತು ನಿಮಿಷಕ್ಕಿಂತ ಹೆಚ್ಚು ಕಾಲ ಓದಲು ಆಗುತ್ತಿರಲಿಲ್ಲ, ಎರಡೆರಡು ಇಮೇಜುಗಳು ಕಾಣುತ್ತಿದ್ದವು. ಫಿಸಿಯೋ ಥೆರಪಿ ತಜ್ಞರು ದಿನವೂ ಮನೆಗೆ ಬಂದು ಆರೈಕೆ ಮಾಡುತ್ತಿದ್ದರು. ಜೀವನ ಮುಗಿದೇ ಹೋಯಿತು ಎಂದು ಭಾವಿಸಿದ್ದ ಅವನ ಬದುಕಿನಲ್ಲಿ ಕಾಮನಬಿಲ್ಲು ಮೂಡಲಾರಂಭಿಸಿತ್ತು.

ಬೇಸ್ ಬಾಲ್ ಅವನ ಜೀವನದ ಅವಿಭಾಜ್ಯ ಅಂಗವಾಗಿತ್ತು. ಅವನ ತಂದೆಯೂ ಲೀಗ್ ಪಂದ್ಯಗಳಲ್ಲಿ ಆಡಿದ್ದರು. ಅವನಿಗೂ ವೃತ್ತಿಪರ ಬೇಸ್ ಬಾಲ್ ಆಟಗಾರ ನಾಗಬೇಕು ಎಂಬ ಆಸೆಯಿತ್ತು. ಆದರೆ ಇಂಥ ಪರಿಸ್ಥಿತಿಯಲ್ಲಿ, ಆಟಗಾರನಾಗುವುದು ಬೇರೆ ಮಾತಾಯಿತು, ಮೊದಲಿನಂತೆ ಓಡಾಡಲು ಸಾಧ್ಯವಾದರೆ ಅದೇ ದೊಡ್ಡದಾಗಿತ್ತು. ಅಷ್ಟಕ್ಕೂ ಆತ ಬದುಕಿದ್ದುದೇ ಒಂದು ಪವಾಡ. ಜೀವನದಲ್ಲಿ ಮೊದಲಿನಂತೆ ತಾನು ಫೀಲ್ಡಿಗೆ ಇಳಿಯಬೇಕು, ಮೊದಲಿನ ಕಸುವು, ಚಮಕ್, ಕ್ರಿಯಾಶೀಲತೆಯನ್ನು ತನ್ನದಾಗಿಸಿಕೊಳ್ಳಬೇಕು ಎಂದು ಆತ ಪ್ರತಿದಿನ ಅಂದುಕೊಳ್ಳಲಾರಂಭಿಸಿದ. ಅದಕ್ಕೆ ಪೂರಕವಾಗಿ ಅಭ್ಯಾಸವನ್ನೂ ಮಾಡಲಾರಂಭಿಸಿದ. ದಿನದಿಂದ ದಿನಕ್ಕೆ ಪ್ರಾಕ್ಟೀಸ್ ಅವಧಿಯನ್ನು ಹೆಚ್ಚಿಸಿಕೊಳ್ಳುತ್ತಾ ಹೋದ.

ಒಂದೂವರೆ ವರ್ಷದ ನಂತರ...

ಬೇಸ್ ಬಾಲ್ ಫೀಲ್ಡಿಗೆ ಮರಳಿ ಬಂದ! ಆತ ಜೀವನದಲ್ಲೆಂದೂ ಬೇಸ್ ಬಾಲ್ ಆಡಲಾರ ಎಂದು ಅಂದುಕೊಂಡವರೂ ಅಚ್ಚರಿಪಟ್ಟರು. ಆತನಿಗೆ ತನ್ನ ವಯೋಮಾನದವರ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಆಗಲಿಲ್ಲ, ಜೂನಿಯರ್ ತಂಡದಲ್ಲಿ ಆಡುವಂತೆ ಹೇಳಿದಾಗ ಆತ ಗೋಳೋ ಎಂದು ಅತ್ತುಬಿಟ್ಟ, ಆದರೆ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ, ತನ್ನಲ್ಲಿ ಭರವಸೆಯನ್ನು ತುಂಬಿಕೊಳ್ಳದೇ, ಬದುಕಿನಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು ಆಗುವುದಿಲ್ಲ ಎಂಬುದು ಅವನಿಗೆ ಖಾತ್ರಿಯಾಯಿತು. ಮತ್ತೊಂದು ವರ್ಷ ಸತತ ಪ್ರಾಕ್ಟೀಸ್ ಮಾಡಿದ. ಕೊನೆಗೆ, ಯುನಿವರ್ಸಿಟಿ ಸೀನಿಯರ್ ತಂಡದಲ್ಲಿ ಆಡುವ ಅವಕಾಶ ಒದಗಿ ಬಂದಿತು. ಇದು ಅವನ ಜೀವನದ ಕನಸಾಗಿತ್ತು. ಕಾರಣ ಇಲ್ಲಿ ಅತ್ಯುತ್ತಮ ಸಾಧನೆ ಮೆರೆದರೆ, ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಬಹುದಿತ್ತು. ಎರಡು ವರ್ಷಗಳ ನಂತರ ಆತ ಡೆನಿಸನ್ ಯುನಿವರ್ಸಿಟಿಯನ್ನು ಸೇರಿದ. ಯಾವುದೇ ಅಭ್ಯಾಸವನ್ನು ಸ್ವಲ್ಪ ಸ್ವಲ್ಪ ದಿನೇ ದಿನೆ ಮಾಡುತ್ತಾ, ಮಾಡುತ್ತಾ, ಅದರಲ್ಲಿ ಪ್ರಗತಿ ಸಾಧಿಸಿದರೆ, ಮುಂದೊಂದು ದಿನ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದು ಅವನಿಗೆ ಅರಿವಾಗುತ್ತಾ ಹೋಯಿತು.

ಡೆನಿಸನ್ ಸೇರಿದ್ದು ಅವನ ಜೀವನವನ್ನೇ ಬದಲಿಸಿತು. ಬೇಸ್ ಬಾಲ್ ಜತೆಗೆ ಯುನಿವರ್ಸಿಟಿಯ ಅಥ್ಲೀಟ್ ಆಗಿ ಕೂಡ ಆತ ಆಯ್ಕೆಯಾದ. ಆತನ ಸ್ನೇಹಿತರು ವಿಡಿಯೊ ಗೇಮ್ಸ್ ಆಡುವುದರಲ್ಲಿ ನಿರತರಾಗಿದ್ದರೆ, ಆತ ಯಾರೂ ಊಹಿಸಲಾರದ ಸಾಧನೆಗೆ ಅಣಿಯಾಗುತ್ತಿದ್ದ. ಇದು ಅವನಲ್ಲಿ ಅದಮ್ಯ ಜೀವನೋತ್ಸಾಹವನ್ನು ತುಂಬಿತು. ಬದುಕಿನಲ್ಲಿ ದಿನಾ ಹತ್ತು ಹೆಜ್ಜೆಗಳನ್ನು ಇಡುತ್ತಾ, ಎವರೆಸ್ಟ್ ಶಿಖರವನ್ನಾದರೂ ಏರುವುದು ಕಷ್ಟವಲ್ಲ, ಆದರೆ ಏನೇ ಆದರೂ ಏರುವುದನ್ನು ಬಿಡಬಾರದು ಎಂಬುದು ಅವನಿಗೆ ಮನವರಿಕೆಯಾಯಿತು. ಆತ ತನ್ನೆಲ್ಲ ಸಾಧನೆಯ ಜತೆಗೆ ವೇಟ್ ಲಿಫ್ಟಿಂಗ್ ಅಭ್ಯಾಸವನ್ನೂ ಮಾಡಲಾರಂಭಿಸಿದ. ಆತನ ದೇಹದಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳ ಲಾರಂಭಿಸಿದವು. ಬೇಸ್ ಬಾಲ್ ಬ್ಯಾಟ್‌ನಿಂದ ಪೆಟ್ಟು ತಿಂದು ಗುಣಮುಖನಾದ ನಂತರ ಊಟ, ನಿದ್ದೆ, ಬಿಡುವು, ಓದು, ಆಟದಲ್ಲಿ ಆತ ಒಂದು ಶಿಸ್ತನ್ನು ರೂಢಿಸಿಕೊಂಡಿದ್ದ. ಅದು ಈಗ ಫಲ ನೀಡಲಾರಂಭಿಸಿದವು.

ಆರು ವರ್ಷಗಳ ನಂತರ ಆತ ಡೆನಿಸನ್ ಯುನಿವರ್ಸಿಟಿಯ ಟಾಪ್ ಅಥ್ಲೀಟ್ ಪ್ರಶಸ್ತಿಗೆ ಪಾತ್ರನಾದ. ಅಲ್ಲದೇ ಎಎಸ್ಪಿಎನ್ ಅಕಾಡೆಮಿಕ್ ಆಲ್ ಅಮೆರಿಕ ಟೀಮ್ ಗೆ ಆಯ್ಕೆಯಾದ. ಇಡೀ ಅಮೆರಿಕದಲ್ಲಿ ಮೂವತ್ತೂರು ಆಟಗಾರರು ಮಾತ್ರ ಆ ತಂಡಕ್ಕೆ ಆಯ್ಕೆಯಾಗುತ್ತಾರೆ. ಅದೇ ವರ್ಷ ಆತನಿಗೆ ಅಕಾಡೆಮಿಕ್ ಚಟುವಟಿಕೆಗಳಲ್ಲೂ ಪ್ರೆಸಿಡೆಂಟ್ ಮೆಡಲ್ ಬಂತು. ತಾನು ಏನೇ ಮಾಡಿದರೂ ಅದರಲ್ಲಿ ಸಾಧನೆ ಮಾಡಬಹುದಾದ ಶಿಸ್ತು, ಶ್ರದ್ಧೆ ಮತ್ತು ಅಚ್ಚುಕಟ್ಟುತನ ತನ್ನಲ್ಲಿದೆ ಎಂಬುದು ಅವನಿಗೆ ಮನವರಿಕೆಯಾಯಿತು. ಜೀವನದಲ್ಲಿ ಎಲ್ಲಾರೂ ಬೀಳುತ್ತಾರೆ. ಎಲ್ಲರೂ ಬೇಸ್ ಬಾಲ್ ಬ್ಯಾಟ್‌ನಿಂದ ಅಲ್ಲವಾದರೂ, ಬೇರೆ ರೀತಿಯಲ್ಲಿ ಪೆಟ್ಟು ತಿನ್ನುತ್ತಾರೆ. ಆದರೆ ಅದರಿಂದ ಗುಣಮುಖರಾಗಿ, ಸಣ್ಣ ಸಣ್ಣ ಪ್ರಯತ್ನಗಳಿಂದ, ಉತ್ತಮ ಅಭ್ಯಾಸ ಬಲದಿಂದ ಅಸಾಧಾರಣವಾದುದನ್ನು ಸಾಧಿಸಬಹುದು ಎಂಬುದು ಅವನಿಗೆ ಮನದಟ್ಟಾಗುತ್ತಾ ಹೋಯಿತು. ರಾತ್ರಿ ಬೆಳಗಾಗುವುದರೊಳಗೆ ಅಸಾಮಾನ್ಯ ಸಾಧನೆ ಮಾಡಿದವರು ಯಾರೂ ಇಲ್ಲ, ಲಾಟರಿಯಲ್ಲಿ ಬಹುಮಾನ ಗಿಟ್ಟಿಸಿದವರನ್ನು ಬಿಟ್ಟು. ಪ್ರಜ್ಞಾಶೂನ್ಯನಾಗಿ ಬಿದ್ದು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದವ, 'ಅಕಾಡೆಮಿಕ್ ಆಲ್ ಅಮೆರಿಕನ್' ಆಗುವ ತನಕ ಅವನನ್ನು ಕೈಹಿಡಿದು ಬೆಳೆಸಿದ್ದು ಅವನ ಅಭ್ಯಾಸ ಬಲ ಅಂದರೆ ಹ್ಯಾಬಿಟ್. ಒಳ್ಳೆಯ ಹ್ಯಾಬಿಟ್ ಬೆಳೆಸಿಕೊಂಡರೆ, ಅದನ್ನೇ ರೂಢಿ ಮಾಡಿಕೊಂಡರೆ, ಅಸಾಧ್ಯವಾದುದನ್ನು ಸಾಧ್ಯ ಮಾಡಿ ತೋರಿಸಬಹುದು.

ಆತ ತನ್ನ ಅನುಭವಗಳನ್ನೇ ಆಗಾಗ ಟಿಪ್ಪಣಿ ಮಾಡಿಕೊಳ್ಳಲಾರಂಭಿಸಿದ. ಅದನ್ನೇ ಬ್ಲಾಗ್ ರೂಪದಲ್ಲಿ ಪೋಸ್ಟ್ ಮಾಡಲಾರಂಭಿಸಿದ. ಪ್ರತಿ ಸೋಮವಾರ ಮತ್ತು ಗುರುವಾರ ಲೇಖನ ಬರೆದು ತನ್ನ ವೆಬ್ ಸೈಟಿನಲ್ಲಿ ಪೋಸ್ಟ್ ಮಾಡುತ್ತಿದ್ದ. ಒಂದು ವಾರದಲ್ಲಿ ಅವನಿಗೆ ಸಾವಿರಾರು ಇಮೇಲ್ ಚಂದಾದಾರರಾದರು. ಆರು ತಿಂಗಳಲ್ಲಿ ಚಂದಾದಾರರ ಸಂಖ್ಯೆ ಒಂದು ಲಕ್ಷವನ್ನು ದಾಟಿತು. ಮುಂದಿನ ಮೂರು ತಿಂಗಳಲ್ಲಿ ಇದು ಎರಡು ಲಕ್ಷ ದಾಟಿತು. ಈ ಮಧ್ಯೆ ಟೈಮ್, ಫೋರ್ಬ್ಸ್ ಮುಂತಾದ ಪ್ರತಿಷ್ಠಿತ ಪತ್ರಿಕೆಗಳು ಲೇಖನಗಳನ್ನು ಬರೆದುಕೊಡುವಂತೆ ಹೇಳಿದವು. ಆತ ಆ ಪತ್ರಿಕೆಗಳಿಗೆ ಬರೆಯಲಾರಂಭಿಸಿದ. ಇವನ್ನೆಲ್ಲಾ ಗಮನಿಸಿದ ಪೆಂಗ್ವಿನ್ ರಾಂಡಮ್ ಹೌಸ್ ಪ್ರಕಾಶನ ಸಂಸ್ಥೆ ಅವನಿಗೆ ಒಂದು ಪುಸ್ತಕ ಬರೆದುಕೊಡುವಂತೆ ಹೇಳಿತು. ಆತ ಒಂದು ಚೆಂದದ ಪುಸ್ತಕ ಬರೆದುಕೊಟ್ಟ. ಅದರ ಹೆಸರು Atomic Habits : Tiny Changes, Remarkable Results.

ಅಂದ ಹಾಗೆ ಇಲ್ಲಿ ತನಕ ಆತ, ಅವನು ಎಂದೆಲ್ಲಾ ಹೇಳಿದೆನಲ್ಲ, ಅವನ ಹೆಸರು ಜೇಮ್ಸ್ ಕ್ಲಿಯರ್!

'ನ್ಯೂಯಾರ್ಕ್ ಟೈಮ್ಸ್' ನಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ 'ಟಾಪ್ ಟೆನ್' ಪುಸ್ತಕ ಪಟ್ಟಿಯಲ್ಲಿದ್ದ ಈ ಪುಸ್ತಕದ ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ಜಗತ್ತಿನ ಐವತ್ತಕ್ಕೂ ಹೆಚ್ಚು ಭಾಷೆಗಳಿಗೆ ಇದು ಅನುವಾದವಾಗಿದೆ. ಹತ್ತು ಲಕ್ಷ ಜನ ಇಮೇಲ್ ಚಂದಾದಾರರನ್ನು ಹೊಂದಿರುವ ಜೇಮ್ಸ್ ಕ್ಲಿಯರ್‌ನ ವೆಬ್‌ಸೈಟಿಗೆ ವಾರ್ಷಿಕ ಒಂದು ಕೋಟಿಗಿಂತ ಹೆಚ್ಚು ಜನ ಭೇಟಿ ನೀಡುತ್ತಾರೆ. ಆತ ಜಗತ್ತಿನ ಇಪ್ಪತ್ತೈದು ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರಿಗೆ 'ಅಭ್ಯಾಸಬಲ ಮನಶ್ಶಾಸ್ತ್ರ'ದ ಬಗ್ಗೆ ಉಪನ್ಯಾಸ ನೀಡುತ್ತಾನೆ. ನಮ್ಮ ಬದುಕಿನಲ್ಲಿ ಸಣ್ಣ ಪುಟ್ಟ ಮಾರ್ಪಾಟುಗಳನ್ನು ಮಾಡಿಕೊಳ್ಳುವ ಮೂಲಕ ಅಸಾಧಾರಣ ಬದಲಾವಣೆಗಳನ್ನು ತರಬಹುದು ಎಂಬುದನ್ನು ಹತ್ತಾರು ನಿದರ್ಶನಗಳ ಮೂಲಕ ಹೇಳುವ ಜೇಮ್ಸ್ ಕ್ಲಿಯರನ ಪುಸ್ತಕ ಓದಿ ಕೋಟ್ಯಂತರ ಜನ ತಮ್ಮ ಬದುಕನ್ನು ಚೆಂದವಾಗಿಸಿಕೊಂಡಿದ್ದಾರೆ.

ಜೀವನದಲ್ಲಿ ಬದಲಾವಣೆಯನ್ನು ತರಲು ಮಹಾನ್ ಕನಸು ಕಾಣಬೇಕಿಲ್ಲ, ಅದರ ಬದಲು ಚಿಕ್ಕ ಚಿಕ್ಕ ಹತ್ತಾರು ನಿರ್ಧಾರಗಳನ್ನು ತೆಗೆದುಕೊಳ್ಳಿ, ಪ್ರತಿದಿನ ಐದು ನಿಮಿಷ ಮುಂಚೆ ಏಳಿ, ಎರಡು ಪುಟ ಜಾಸ್ತಿ ಓದಿ, ಹತ್ತು ನಿಮಿಷ ಹೆಚ್ಚು ವ್ಯಾಯಾಮ ಮಾಡಿ , ಪ್ರತಿದಿನ ಒಂದು ಸಿಗರೇಟು ಕಡಿಮೆ ಸೇದುತ್ತಾ ಹೋಗಿ, ದಿನವೂ ನೂರು ಮೀಟರ್ ಜಾಸ್ತಿ ನಡೆಯಿರಿ... ಇದನ್ನೇ 'ಅಟಾಮಿಕ್ ಹ್ಯಾಬಿಟ್ಸ್' ಅಂತಾರೆ. ಒಂದು ವರ್ಷದ ನಂತರ ನೋಡುತ್ತಿರಿ... ನಿಮ್ಮೊಳಗಿದ್ದ ಬೀಜ ಹೆಮ್ಮರವಾಗಿ ಬೆಳೆದಿರುತ್ತದೆ.

ಅಶ್ವಿನ್, ರೋಹಿತ್, ಕೊಹ್ಲಿ-ಸಿ&ಬಿ ಗಂಭೀರ್!



ಕ್ರಿಕೆಟಾಯಣ

ರವೀ ಸಜಂಗದ್ದೆ
vveditoped@gmail.com

ಅದು ಆಸ್ಟ್ರೇಲಿಯಾದ ಮೆಲ್ಬೋರ್ನ್ ಕ್ರಿಕೆಟ್ ಕ್ರೀಡಾಂಗಣ. ಅಂದು 18 ಡಿಸೆಂಬರ್ 2024. ಬಾರ್ಡರ್-ಗವಾಸ್ಕರ್ ಟ್ರೋಫಿಯ ಐದು ಪಂದ್ಯಗಳ ಸರಣಿಯ ಮೂರನೆಯ ಪಂದ್ಯ ಡ್ರಾ ಆಗಿತ್ತು. ಈ ಪಂದ್ಯದ ಆಡುವ ಹನ್ನೊಂದರ ಬಳಗದಲ್ಲಿ ರವಿಚಂದ್ರನ್ ಅಶ್ವಿನ್ ಇರಲಿಲ್ಲ. ಅಂದು ಸಂಜೆ ದಿಢೀರ್ ಪತ್ರಿಕಾಗೋಷ್ಠಿ ಕರೆದು ರವಿಚಂದ್ರನ್ ಅಶ್ವಿನ್ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಈ ನಿರ್ಧಾರ ಸ್ವತಃ ತಂಡದ ಬಳಗದವರಿಗೆ ಗೊತ್ತಿರಲಿಲ್ಲ. ಎಲ್ಲರೂ ಅಶ್ವಿನ್ ಅವರು ಸರಣಿಯ ಮಧ್ಯದಲ್ಲಿ ತೆಗೆದುಕೊಂಡ ಈ ನಿರ್ಧಾರಕ್ಕೆ ಸಖೇದಾಶ್ಚರ್ಯ ವ್ಯಕ್ತಪಡಿಸಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ 537 ವಿಕೆಟ್ ಪಡೆದ, ತ್ವರಿತವಾಗಿ 500 ವಿಕೆಟ್ ಪಡೆದವರ ಸಾಲಿನಲ್ಲಿ ಎರಡನೆಯ ಸ್ಥಾನದಲ್ಲಿರುವ, ಒಟ್ಟು 37 ಬಾರಿ ಇನ್ನಿಂಗ್ಸ್ ಒಂದರಲ್ಲಿ ಐದಕ್ಕಿಂತ ಹೆಚ್ಚು ವಿಕೆಟ್ ಗಳಿಸಿದ ಸಾಧನೆ ಮಾಡಿದ, ಬ್ಯಾಟಿಂಗ್ ವಿಭಾಗದಲ್ಲೂ ಹಲವಾರು ಇನ್ನಿಂಗ್ಸ್ ಗಳಲ್ಲಿ ನಿರ್ಣಾಯಕ ಆಟ ಆಡಿದ, ದೇಶ ಕಂಡ ಮಹಾನ್ ಸ್ಪಿನ್ನರ್ ಹೀಗೆ ಹಠಾತ್ ನೇಪಥ್ಯಕ್ಕೆ ಸರಿದರು. ಅಶ್ವಿನ್ ಅವರಲ್ಲಿ ಇನ್ನೂ ಎರಡು ಮೂರು ವರ್ಷಗಳ ಕಾಲ ದೇಶಕ್ಕಾಗಿ ಆಡುವ ಸಾಮರ್ಥ್ಯ ಇತ್ತು. ಯಾವುದೋ ವಿಚಾರಕ್ಕೆ, ಯಾರದೋ ಮಾತು, ನಡವಳಿಕೆ ಮತ್ತು ನಿರ್ಧಾರಗಳಿಂದ ನೊಂದು ನಿವೃತ್ತಿಯಾದರು ಎನ್ನುವ ಸುದ್ದಿ ಹರಿದಾಡಿತು. ಅಶ್ವಿನ್ ತಂದೆ ಕೂಡ ಅದೇ ಧಾಟಿಯಲ್ಲಿ ಮಾತನಾಡಿ 'ಭಾರತ ತಂಡದಲ್ಲಿ ಅಶ್ವಿನ್'ಗೆ ಆಗಾಗ ಅವಮಾನ ಆಗುತ್ತಲೇ ಇತ್ತು. ಎಷ್ಟು ದಿನ ಇದನ್ನೆಲ್ಲ ಸಹಿಸಿಕೊಳ್ಳುವುದು? ಹಾಗಾಗಿ ನಿವೃತ್ತಿ ಘೋಷಿಸಿದ್ದಾನೆ' ಎಂದಾಗ ಬೇಸರ, ಆಕ್ರೋಶ ಎರಡೂ ಅವರಲ್ಲಿ ಮಿಳಿತವಾಗಿತ್ತು. ಯಾರೋ ಒತ್ತಡ ತಂದು ಟೆಸ್ಟ್ ಸರಣಿಯ ಮಧ್ಯದಲ್ಲಿ ಅಶ್ವಿನ್ ನಿವೃತ್ತಿಯಾಗುವಂತೆ ಮಾಡಿದರು ಎನ್ನುವ ಅಷ್ಟೇನೂ 'ಗಂಭೀರ'ವಲ್ಲದ ವಿಚಾರವು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಲ್ಲಿ ಪ್ರಚಾರ ಪಡೆಯಿತು.

ಅದೇ ಟೆಸ್ಟ್ ಸರಣಿಗೆ ಭಾರತ ತಂಡದ ಕಪ್ತಾನನಾಗಿ ರೋಹಿತ್ ಶರ್ಮಾ ತಂಡದಲ್ಲಿದ್ದರು. ಮೊದಲ ಮೂರು ಪಂದ್ಯಗಳಲ್ಲಿ ರೋಹಿತ್ ನಿರೀಕ್ಷಿತ ಮಟ್ಟದಲ್ಲಿ ಬ್ಯಾಟಿಂಗ್ ಮಾಡಲೇ ಇಲ್ಲ. ದೊಡ್ಡ ಮೊತ್ತದ, ದೀರ್ಘ ಇನ್ನಿಂಗ್ಸ್ ನಿರೀಕ್ಷಿಸಿದ್ದ, ತಂಡದ ಆಧಾರವಾಗಿ ಆಡಬೇಕಾಗಿದ್ದ ರೋಹಿತ್ ಶರ್ಮಾ ಆಯ್ಕೆ ಮಂಡಳಿ ಮತ್ತು ಭಾರತದ ಕ್ರಿಕೆಟ್ ಪ್ರೇಮಿಗಳಿಗೆ ಕಳಪೆ ಪ್ರದರ್ಶನದ ಮೂಲಕ ನಿರಾಸೆ ಮೂಡಿಸಿದರು. ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡು, ಕಪ್ತಾನ ರೋಹಿತ್ ನಾಲ್ಕನೆಯ ಟೆಸ್ಟ್ ಪಂದ್ಯದಿಂದ ಹೊರಗೆ ಉಳಿಯಬೇಕಾಯಿತು, ಅನಿವಾರ್ಯವಾಗಿ ಬೆಂಚು ಬಿಸಿ ಮಾಡಬೇಕಾಯಿತು. ಆಗಲೇ ಆತನ ನಿವೃತ್ತಿಯ ಬಗ್ಗೆ ಊಹಾಪೋಹಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ಕತೆಗಳು ಮತ್ತು ಮೀಮ್ಸ್‌ಗಳು ಹರಿದಾಡಿದವು. ಕಳಪೆ ಫಾರ್ಮ್ ಕಳಚಿ ಮತ್ತೆ ಲಯ ಕಂಡುಕೊಳ್ಳುವ ಆತ್ಮವಿಶ್ವಾಸ ರೋಹಿತ್ ಮತ್ತು ಕ್ರಿಕೆಟ್ ಪ್ರೇಮಿಗಳಿಗಿಲ್ಲಿತ್ತು. ಆರು ತಿಂಗಳ ಟೆಸ್ಟ್ ಕ್ರಿಕೆಟ್ ವಿರಾಮದ ಸಮಯದ ಬಳಿಕ ರೋಹಿತ್ ಮತ್ತೆ ನಾಯಕನಾಗಿ ಕಣಕ್ಕಿಳಿದು ರನ್ ಪೇರಿಸುವ ಮೂಲಕ ತಂಡವನ್ನು ಸಮರ್ಥವಾಗಿ ಮುನ್ನಡೆಸುವುದನ್ನು ಪ್ರೇಕ್ಷಕರು ಕಾತರದಿಂದ ಎದುರು ನೋಡುತ್ತಿದ್ದರು. 'ಇನ್ನೂ ಕೆಲವು ಸಮಯ ಭಾರತ ತಂಡದ ಪರವಾಗಿ ನಾನು ಟೆಸ್ಟ್ ಆಡಲಿದ್ದೇನೆ' ಎಂದು ಕೆಲ ತಿಂಗಳ ಹಿಂದೆ ಹೇಳಿದ್ದ ಅದೇ ರೋಹಿತ್ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೆ ಒಂದೆರಡು ವಾರಗಳಿರುವಾಗ ಹಠಾತ್ ನಿವೃತ್ತಿ ಘೋಷಿಸಿ ಎಲ್ಲರನ್ನೂ ಚಕಿತಗೊಳಿಸಿದರು! ಇಂಗ್ಲೆಂಡಿನಲ್ಲಿ ಕೊನೆಯ ಬಾರಿ ಟೆಸ್ಟ್ ಆಡಿ, ಭಾರತ ತಂಡವನ್ನು ಮುನ್ನಡೆಸಲು ಬಯಸಿದ್ದ ರೋಹಿತ್‌ಗೆ ಆಯ್ಕೆ ಸಮಿತಿಯ ಸದಸ್ಯರೊಬ್ಬರ ಮೂಲಕ 'ಇಂಗ್ಲೆಂಡ್ ಪ್ರವಾಸದ ಭಾರತ ತಂಡದಲ್ಲಿ ನಿಮಗೆ ಸ್ಥಾನ ಇಲ್ಲ' ಎನ್ನುವ ಸಂದೇಶ ರವಾನಿಸಲಾಗುತ್ತದೆ. ಅವಮಾನದ, ಅಗೌರವದ ಮುನ್ಸೂಚನೆ ಸಿಕ್ಕಿದ ಕೂಡಲೇ ರೋಹಿತ್ ಶರ್ಮಾ ನಿವೃತ್ತಿ ಘೋಷಿಸುತ್ತಾರೆ. ಅಲ್ಲಿಗೆ ಅಶ್ವಿನ್ ನಂತರ, ಭಾರತ ತಂಡದ ಎರಡನೆಯ ಬಲಿಷ್ಠ ವಿಕೆಟ್ ಪತನವಾಗಿ ನೇಪಥ್ಯಕ್ಕೆ ಸರಿಯುತ್ತದೆ.

ಕಿಂಗ್ ಕೊಹ್ಲಿಯ ಕಥೆಯೂ ಇದಕ್ಕಿಂತ ಹೆಚ್ಚು ಭಿನ್ನವಾಗಿಲ್ಲ. ಖಂಡಿತವಾಗಿಯೂ ಇನ್ನೂ ಎರಡರಿಂದ ಮೂರು ವರ್ಷಗಳ ಕಾಲ ಅಥವಾ 2027ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ವರೆಗಾದರೂ ಆಡುವ ಕ್ಷಮತೆ ಹೊಂದಿರುವ, ಕ್ರಿಕೆಟ್ ಅಂಗಣದಲ್ಲಿ ಎಲ್ಲ ಸಾಮರ್ಥ್ಯವನ್ನೂ ಧಾರೆ ಎರೆವ ತುಡಿತವಿರುವ ಅಪರೂಪದ ಆಟಗಾರ ವಿರಾಟ್ ಕೊಹ್ಲಿ, ಇಂಗ್ಲೆಂಡ್ ತಂಡದ ವಿರುದ್ಧ ಟೆಸ್ಟ್ ಆಡಲು ಮಾನಸಿಕ, ದೈಹಿಕ ಕ್ಷಮತೆಯ ತಯಾರಿಯನ್ನು ಕೊಹ್ಲಿ ನಡೆಸುತ್ತಿದ್ದರು. ಆ ಯೋಜನೆಯ ವಿಸ್ತೃತ ಭಾಗವಾಗಿ ತನ್ನ ಬ್ಯಾಟಿಂಗ್ ಲಯ ಕಂಡುಕೊಳ್ಳಲು, ಆಫ್ ಸ್ಟಂಪಿನ ಹೊರಗಡೆಯ ಎಸೆತವನ್ನು ಆಡಲು ಎಡವುತ್ತಿದ್ದ ಕೊಹ್ಲಿ ಅದರ ಅಭ್ಯಾಸವನ್ನು ನೆಟ್ಸ್ ನಲ್ಲಿ ಮಾಡುತ್ತಿದ್ದರು. ಇತ್ತೀಚೆಗೆ ದೆಹಲಿ ತಂಡದ ಪರ ರಣಜಿ ಪಂದ್ಯವನ್ನು ಆಡಿದರು. 'ಇಂಗ್ಲೆಂಡ್ ಟೆಸ್ಟ್ ಸರಣಿಗೂ ಮೊದಲು, ಅಲ್ಲಿನ ವಾತಾವರಣ ಮತ್ತು ಪಿಚ್‌ಗೆ ಒಂದಷ್ಟು ಹೊಂದಿಕೊಳ್ಳುವ ಆಲೋಚನೆಯಿಂದ ಭಾರತ 'ಎ' ತಂಡದ ಭಾಗವಾಗಿ ಇಂಗ್ಲೆಂಡಿನಲ್ಲಿ ಎರಡು ಅಭ್ಯಾಸ ಪಂದ್ಯಗಳನ್ನು ಆಡಲು ಉತ್ಸುಕನಾಗಿದ್ದೇನೆ' ಎಂದು ತನ್ನ ಆತ್ಮೀಯರೊಂದಿಗೆ ಮತ್ತು ಕೋಚ್ ಶರಣದೀಪ್ ಸಿಂಗ್ ಅವರಲ್ಲಿ ವಿರಾಟ್ ಹೇಳಿದ್ದರು.

ಯಾವಾಗ 'ಇಂಗ್ಲೆಂಡ್ ಟೆಸ್ಟ್ ಸರಣಿಯ ಬಳಿಕ ನಿಮ್ಮನ್ನು ಟೆಸ್ಟ್ ತಂಡಕ್ಕೆ ಪರಿಗಣಿಸಲಾಗುವುದಿಲ್ಲ; ಹಾಗಾಗಿ ಸೂಕ್ತ ಸಮಯದಲ್ಲಿ ನಿವೃತ್ತಿ ಘೋಷಿಸಿ' ಎನ್ನುವ ಒತ್ತಡವನ್ನು ಕೊಹ್ಲಿ ಮೇಲೆ ಹಾಕಲಾಯಿತೋ, ಆಗ ಮೈದಾನದಲ್ಲಿ ಎದುರಾಳಿಯೆದುರು ಕೆರಳುವಷ್ಟೇ ಭೀಕರವಾಗಿ ಕೆರಳಿಬಿಟ್ಟರು. ಅಪ್ಪಟವಾದ ಸ್ವಂತಿಕೆ ಮತ್ತು ಸ್ವಾಭಿಮಾನವನ್ನು ಪ್ರತಿಪಾದಿಸುವ ಕೊಹ್ಲಿ, 'ಇಷ್ಟು ವರ್ಷಗಳ ಕಾಲ ಉತ್ತಮ ಕ್ರಿಕೆಟ್ ಆಡಿರುವ ನನ್ನ ಕ್ರಿಕೆಟ್ ಭವಿಷ್ಯವನ್ನು ಮತ್ತು ನಿವೃತ್ತಿಯನ್ನು ಯಾರ್‍ಯಾರೋ ನಿರ್ಧರಿಸುವುದು ಎಂದರೆ ಅದು ಹೇಗೆ?' ಎಂದು ಗೌತಮ ಬುದ್ಧನ ರೀತಿಯಲ್ಲಿ ಆಲೋಚಿಸಿದರು. ಸಂಸಾರ ಮತ್ತು ಆತ್ಮೀಯರಲ್ಲಿ ಚರ್ಚಿಸಿ, ವಾಸ್ತವ ಅರಗಿಸಿಕೊಳ್ಳಲಾಗದಿದ್ದರೂ 'ಇನ್ಮುಂದೆ ಬಿಳಿ ದಿರಿಸು ಧರಿಸಿ ಭಾರತವನ್ನು ನಾನು ಪ್ರತಿನಿಧಿಸುವುದನ್ನು ನೀವು ನೋಡಲಾರಿರಿ, ಗುಡ್ ಬೈ' ಎಂದು ಹೇಳಿ ಪಂದ್ಯಶ್ರೇಷ್ಠ ಎನಿಸಿಕೊಂಡರು. ಅತ್ಯಂತ ಗರಿಷ್ಠ ಫಾರ್ಮಿನಲ್ಲಿರುವ ಭಾರತ ತಂಡದ ಮೂರನೆಯ ವಿಕೆಟ್ ಪತನವಾಯಿತು. ಕ್ರಿಕೆಟ್ ಲೋಕದ ಹಲವರ ಮುಖದಲ್ಲಿ ಅಂದುಕೊಂಡಿದ್ದನ್ನು ಸಾಧ್ಯವಾಗಿಸಿದ ಗಂಭೀರ ಮುಗುಳುನಗು!

ಈ ಎಲ್ಲಾ ಅಹಿತಕರ, ಅಷ್ಟೇನೂ ಸಮಂಜಸವಲ್ಲದ ಬೆಳವಣಿಗೆಗಳು ಯಾಕೆ ಆದವು? ಇದರ ಹಿಂದಿರುವ ಕಾಣದ ಕೈಗಳು ಯಾರದ್ದು? ಯಾರು ಶಕ್ತಿ-ಪ್ರಭಾವ ಬೀರಿದರು ಎನ್ನುವುದು ಯಕ್ಷಪ್ರಶ್ನೆ! ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ರಾಕೆಟ್ ಸೈನ್ಸ್ ಕಲಿತಿರಬೇಕು ಎಂದೇನು ಇಲ್ಲ; ಬದಲಾಗಿ ಒಂದಷ್ಟು ಕಾಮನ್‌ಸೆನ್ಸ್ ಉಪಯೋಗಿಸಿದರೆ ಅಷ್ಟೇ ಸಾಕು. ಉತ್ತರ ಸುಲಭ ಮತ್ತು ಸರಳ! ರವಿಚಂದ್ರನ್ ಅಶ್ವಿನ್, ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿಯ ಅನಿರೀಕ್ಷಿತ, ಅನಪೇಕ್ಷಿತ ಮತ್ತು ಅಚ್ಚರಿಯ 'ಟೆಸ್ಟ್ ಕ್ರಿಕೆಟಿನಿಂದ ನಿವೃತ್ತಿ ನಿರ್ಧಾರ'ದ ಹಿಂದಿರುವ ವ್ಯಕ್ತಿ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಎಂದೇ ವಿಶ್ಲೇಷಿಸಲಾಗುತ್ತಿದೆ.

ಹೀಗೆಲ್ಲ ಯಾಕಾಯಿತು ಎಂದು ನೋಡುತ್ತಾ ಹೋದರೆ, 2027ರ ಏಕದಿನ ವಿಶ್ವಕಪ್ ವರೆಗೆ ಗೌತಮ್ ಗಂಭೀರ್ ಜೊತೆಗೆ ಬಿಸಿಸಿಐ ಒಪ್ಪಂದ ಮಾಡಿಕೊಂಡಿದೆ. ಅಲ್ಲಿಯವರೆಗೆ ನಡೆಯುವ ಸರಣಿಗಳು ಮತ್ತು ಚಾಂಪಿಯನ್‌ಶಿಪ್ ಪಂದ್ಯಾವಳಿಗಳಲ್ಲಿ ಮುಖ್ಯ ಕೋಚ್ ಆಗಿ ಅವರು ಯಶ ಕಾಣಬಹುದು ಅಥವಾ ವಿಫಲರಾಗಬಹುದು. ಶಕ್ತಿಯಿಂದ ಮತ್ತು ಆಟಗಾರರ ಸಾಮರ್ಥ್ಯದ ಆಧಾರದ ಮೇಲೆ ತಂಡವನ್ನು ಕಟ್ಟಿ ಗೆಲ್ಲಿಸಿಕೊಂಡು ಬರುವ ಹೊಣೆ ಹೊರಬೇಕಾದ ಗಂಭೀರ್ ಅವರಲ್ಲಿ ಈ ಸದ್ಗುಣಗಳು ಕಾಣಿಸುತ್ತಿಲ್ಲ! ಒಬ್ಬ ವ್ಯಕ್ತಿಯಾಗಿ, ಮುಖ್ಯ ಕೋಚ್ ಆಗಿ ಮೆಚ್ಚಿಕೊಳ್ಳಬಹುದಾದ, ಅನುಸರಿಸಬಹುದಾದ ಗುಣಗಳು ಅವರಲ್ಲಿ ಇಲ್ಲ ಎನ್ನುವುದು ಖರೇ. ಕ್ರಿಕೆಟ್ ಜಗತ್ತಿನ ಅಷ್ಟೂ 'ಅಹಂ'ಗಳನ್ನು, 'ಇಸಂ'ಗಳನ್ನು ತನ್ನೊಳಗೆ ತುಂಬಿಕೊಂಡಿರುವ ವ್ಯಕ್ತಿಯಂತೆ ಗಂಭೀರ್ ಭಾಸವಾಗುತ್ತಿದ್ದಾರೆ. ತನ್ನ ಯೋಚನೆ-ಯೋಜನೆಗಳಿಗೆ ಅಡ್ಡಿಯಾಗಿರುವ, ಸಹಮತ ನೀಡದ ಮೂವರನ್ನೂ ನಿವಾಳಿಸಿಯಾಗಿದೆ. ಹಿರಿಯ ಮತ್ತು ಅನುಭವಿ ಆಟಗಾರರು ತಂಡದ ಭಾಗವಾಗಿರುವುದರಿಂದ ತನ್ನ ನೆಚ್ಚಿನ ಆಟಗಾರರನ್ನು ತಂಡದಲ್ಲಿ ಆಡಿಸಲು ಗಂಭೀರ್‌ಗೆ ಸಾಧ್ಯವಾದಂತೆ ಕಾಣುತ್ತಿಲ್ಲ. ಇದರ ಪರಿಣಾಮ ನಮ್ಮೆಲ್ಲರ ಕಣ್ಣ ಮುಂದೆ ಕಾಣುತ್ತಿರುವ ಮೂವರ ನಿವೃತ್ತಿ ಕಥನಗಳು.

ಕಾರಣಗಳು ಏನೇ ಇರಲಿ, ಈ ಮೂವರ ಟೆಸ್ಟ್ ನಿವೃತ್ತಿ ತುಂಬಾ ಸಮಯದವರೆಗೆ ನೆನಪಿನಲ್ಲುಳಿದು ಕ್ರಿಕೆಟ್ ಅಭಿಮಾನಿಗಳನ್ನು ಕಾಡಲಿದೆ. ಕಾರಣ, ಇಡೀ ಕ್ರಿಕೆಟ್ ಜಗತ್ತೇ ಅಶ್ವಿನ್, ರೋಹಿತ್ ಮತ್ತು ಕೊಹ್ಲಿ ಇನ್ನಷ್ಟು ಕಾಲ ಟೆಸ್ಟ್ ಕ್ರಿಕೆಟ್ ಆಡುವುದನ್ನು ಬಯಸಿತ್ತು. ದಿಗ್ಗಜರೆನಿಸಿಕೊಂಡವರ ಇಂತಹ ಅಸಹನೀಯ, ಅಸಮ್ಮತ ನಿವೃತ್ತಿ ಭಾರತೀಯ ಕ್ರಿಕೆಟಿನಲ್ಲಿ ಕಾಣಲು ಸಿಗುವುದು ವಿರಳಾತಿ ವಿರಳ.

'ನಿನಗೆ ವಯಸ್ಸಾಯಿತು, ನಿನ್ನ ಕೈಯಲ್ಲಿ ಇನ್ನು ಮೊದಲಿನಂತೆ ಆಡಲಾಗದು, ನಿನ್ನ ಆಟವನ್ನು ನಿಲ್ಲಿಸು' ಎಂದು ಹೇಳಿಸಿಕೊಂಡು ತಂಡ ಮತ್ತು ಮೈದಾನದಿಂದ ಶಾಶ್ವತವಾಗಿ ನೇಪಥ್ಯಕ್ಕೆ ಸರಿಯುವುದಕ್ಕೆ ಮತ್ತು 'ನೀನು ಉತ್ಕೃಷ್ಟ ಫಾರ್ಮಿನಲ್ಲಿರುವೆ. ನೀನಿನ್ನೂ ಭಾರತಕ್ಕಾಗಿ ಆಡಿ ತಂಡವನ್ನು ಗೆಲ್ಲಿಸಬೇಕು' ಎಂಬ ಧ್ವನಿ ಸ್ಪಷ್ಟವಾಗಿ ಮಾರ್ದನಿಸುತ್ತಿರುವಾಗ ಯುವ ಪ್ರತಿಭಾನ್ವಿತ ಆಟಗಾರರಿಗೆ ಅವಕಾಶ ಕಲ್ಪಿಸುವ ಸಲುವಾಗಿ ನಿವೃತ್ತಿಯಾಗುವುದಕ್ಕೆ ಬಹಳ ವ್ಯತ್ಯಾಸವಿದೆ. ಸದ್ಯದ ಸಂದರ್ಭದಲ್ಲಿ ಗಂಭೀರ್ ದುರಾಲೋಚನೆ/ದೂರಾಲೋಚನೆ ಗೆದ್ದಿರಬಹುದು. ಹಾಗೆಂದು ಈ ಮೂವರು ಹಿರಿಯರ ಅನುಪಸ್ಥಿತಿಯಲ್ಲಿ, ತನ್ನ ನೆಚ್ಚಿನ ಆಟಗಾರರನ್ನು ಆಡುವ ಬಳಗದಲ್ಲಿ ಹಾಕಿಸಿಕೊಂಡು ಪಂದ್ಯ, ಪಂದ್ಯಾವಳಿ ಗೆಲ್ಲುವುದು ಸುಲಭದ ಮಾತಲ್ಲ! ನಿಜ ಆಟ ಇನ್ನೂ ಬಾಕಿಯಿದೆ – ಭಾರತ ಕ್ರಿಕೆಟ್ 'ಗಂಭೀರ ಮನ್ವಂತರದ ಹಾದಿ'ಯಲ್ಲಿದೆ. R Ashwin, R Sharm, V Kohli & caught bowled Gambhir. ಹೀಗಾಗಬಾರದಿತ್ತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆತ್ಮಾಭಿಮಾನ ಮುಖ್ಯ

ಪಶ್ಚಿಮ ದೇಶಗಳ ಪ್ರಶಸ್ತಿಗಳು ಬರಲಿ ಬಿಡಲಿ. ಮಹಾಕವಿ ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿವಿಜಿ, ದ.ರಾ. ಬೇಂದ್ರೆ, ಕೆ.ಎಸ್. ನರಸಿಂಹ ಸ್ವಾಮಿ, ಗೋಪಾಲಕೃಷ್ಣ ಅಡಿಗ, ಪೂರ್ಣಚಂದ್ರ ತೇಜಸ್ವಿ, ಎಸ್.ಎಲ್. ಭೈರಪ್ಪ ಆಧುನಿಕ ಕನ್ನಡ ಸಾಹಿತ್ಯದ ನವರತ್ನಗಳು, ಕನ್ನಡ ಜನಮನದಲ್ಲಿ ಇವರಿಗೆ ನಿತ್ಯ ಪ್ರಶಸ್ತಿ ಇದೆ. ಇವರಿಗೆ ಪಶ್ಚಿಮದ ಮನ್ನಣೆ ಬರಲಿಲ್ಲವಲ್ಲ ಎಂದು ನಾವು ಕೊರಗಬೇಕಾದದ್ದಿಲ್ಲ; ಅಮೆರಿಕದ ಯಾವ ಸಾಹಿತಿಯೂ ತನಗೆ ಪಂಪ ಪ್ರಶಸ್ತಿ ಬರಲಿಲ್ಲವಲ್ಲ ಎಂದು ಕೊರಗುವುದಿಲ್ಲ.

ಅರ್ಥಪ್ರಪಂಚ, ವಿಜ್ಞಾನಪ್ರಪಂಚಗಳಲ್ಲಷ್ಟೇ ಇಂಗ್ಲಿಷ್ ಮತ್ತು ಪಶ್ಚಿಮದ ಮೇಲುಗೈ. ಸಾಹಿತ್ಯ ಸಂಸ್ಕೃತಿಗಳಿಗೆ ಬಂದಾಗ ಕನ್ನಡ ಜನಮನದ ಪ್ರಶಸ್ತಿಯೇ ನಿಜವಾದ ಪ್ರಶಸ್ತಿ. ಇಂಗ್ಲಿಷ್ ನ ಅತಿ ಪ್ರತಿಷ್ಠಿತ ವಿಶ್ವಕೋಶವಾದ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕದಲ್ಲಿ ಗಿರೀಶ್ ಕಾರ್ನಾಡ್ ಬಗ್ಗೆ ಲೇಖನ ಇದೆ; ಕುವೆಂಪು,ಮಾಸ್ತಿ ಬಗ್ಗೆ ಮಾಹಿತಿ ಇಲ್ಲ! ಈ ಸಂಗತಿ ಏನನ್ನು ಕಾಣಿಸುತ್ತಿದೆ? ನೊಬೆಲ್ ನವರು ಕುವೆಂಪುರಂತಹ ಮಹಾಕವಿಯನ್ನು ಗೌರವಿಸದಿದ್ದ ಮೇಲೆ ನಾವೇಕೆ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ಅಷ್ಟೊಂದು ಲೆಕ್ಕಕ್ಕಿಟ್ಟುಕೊಳ್ಳಬೇಕು? ಸಂಸ್ಕೃತಿಯ ವಿಷಯ ಬಂದಾಗ ಆತ್ಮಾಭಿಮಾನ ಮುಖ್ಯ.

– ಜಿ.ಎಲ್. ಕೃಷ್ಣ ಬೆಂಗಳೂರು

ಕನ್ನಡಕ್ಕೆ ಕೀರ್ತಿ ಬಾನಿಗೆ

ಕನ್ನಡ ಭಾಷೆಗೆ ಇದೇ ಮೊದಲ ಬಾರಿಗೆ 2025ರ, ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿಗೆ ಭಾಜನರಾದ ನಮ್ಮ ಕನ್ನಡದ ಲೇಖಕಿ ಹಾಸನದ ಬಾನು ಮುಷ್ತಾಕ್, ಕನ್ನಡ ಭಾಷೆಗೆ ಮತ್ತು ಕರ್ನಾಟಕಕ್ಕೆ ಗೌರವ ತಂದುಕೊಟ್ಟಿದ್ದಾರೆ. ಬಾನು ಮುಷ್ತಾಕ್ ಅವರ ಸಣ್ಣ ಕತೆಗಳ ಅನುವಾದ ಸಂಕಲನ 'ಹಾರ್ಟ್ ಲ್ಯಾಂಪ್'ಗೆ ಬುಕರ್ ಪ್ರಶಸ್ತಿ ಸಂದಿದೆ.

ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳು ತಮ್ಮ ಬದುಕಿನಲ್ಲಿ, ಅನುಭವಿಸುವ ನೋವುಗಳನ್ನು ಅನಾವರಣಗೊಳಿಸುವ ಈ ಸಣ್ಣ ಕತೆಗಳ ಸಂಕಲನ ಇಂದು ಅಂತಾರಾಷ್ಟ್ರೀಯ ಮಟ್ಟದ ಬುಕರ್ ಪ್ರಶಸ್ತಿಗೆ ಭಾಜನವಾಗಿದೆ. 80ರ ದಶಕದಲ್ಲಿ ಪತ್ರಿಕೋದ್ಯಮದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನೇ ತಂದ ಪಿ.ಲಂಕೇಶ್ ಅವರ ಲಂಕೇಶ್ ಪತ್ರಿಕೆಯಲ್ಲಿ ದಿಟ್ಟ ವರದಿಗಾರ್ತಿಯಾಗಿ ಹಾಗೂ ಲೇಖಕಿಯಾಗಿ ಪರಿಚಿತ ಗೊಂಡವರು, ಹಾಸನದ ಕಾಂಟ್ರ್ಯಾಕ್ಟರ್‌ಗಳು ಸರ್ಕಾರಕ್ಕೆ ಮಾಡುತ್ತಿದ್ದ ಮೋಸವನ್ನು ಸಾರ್ವಜನಿಕವಾಗಿ ಬಯಲು ಮಾಡಿದವರು. 80 ರ ದಶಕದಲ್ಲೇ ಅವರ ಸಣ್ಣ ಕತೆಗಳು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಸಣ್ಣ ಕತೆಗಳಿಗೂ ಅಂತಾರಾಷ್ಟ್ರೀಯ ಮಟ್ಟದ ಬುಕರ್ ಪ್ರಶಸ್ತಿ ಲಭಿಸುತ್ತದೆ ಎಂಬುದನ್ನು ಬಾನು ಮುಷ್ತಾಕ್ ಸಾದರಪಡಿಸಿದ್ದಾರೆ. ಇವರಿಗೆ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳು.

ಬೂಕನಕೆರೆ ವಿಜೇಂದ್ರ, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಕೆಲವರು ಕರೋನಾ ಸಂದರ್ಭದಲ್ಲಿ ಧರಿಸಿದಂತೆ, ಈಗಲೂ ಮಾಸ್ಕನ್ನು ಧರಿಸುತ್ತಾರಲ್ಲ?
  – **ಸಾಲಗಾರರಿಂದ ತಪ್ಪಿಸಿಕೊಳ್ಳಲು ಇದಕ್ಕಿಂತ ಬೇರೆ ಉಪಾಯ ಯಾವುದಿದೆ?!**

- **ಪುಷ್ಪಾ ಮೋಹನ, ಪಾಪರೆಡ್ಡಿಪಾಳ್ಯ**
  ಭಟ್ರೇ, ನನ್ನ ಗಂಡ ಸುಳ್ಳು ಬರೀತಾರೆ ಅಂತ ಗೊತ್ತಿರುತ್ತದೆ, ಆದರೂ ಓದಬೇಕು ಅನಿಸುತ್ತದಲ್ಲ?
  – **ದಿನಭವಿಷ್ಯ ಬರೆಯುವವರನ್ನು ಮದುವೆಯಾದರೆ ಇದೇ ಸಮಸ್ಯೆ !**

- **ಸುಂದರೇಶ ಮಣ್ಣೂರು, ಹುಬ್ಬಳ್ಳಿ**
  ಭಟ್ರೇ, ನನ್ನವಳಿಗೆ 'ಭಟ್ಟರ ಸ್ಕಾಚ್' ದಿನವೂ ಬೇಕಂತೆ, ಏನು ಮಾಡಲಿ?
  – **ಹೆಂಗಸರ ಆಸೆಯನ್ನು ಈಡೇರಿಸದೇ ಇರಬಾರದು !**

- **ಸೋಮಶೇಖರ ಬಡವಾಳು, ಮೈಸೂರು**
  ಭಟ್ರೇ, ಮನಸು ಕೋಮಲ ಆದರೆ ನೋಟ ಬಿರುಸು, ಏನು ಮಾಡಲಿ?
  – **ಅದು ಮೊಡವೆಯುಳ್ಳ ಪ್ರೇಯಸಿಯ ಬಣ್ಣನೆ!**

- **ಮಧುಕೇಶ್ ಶೆಟ್ಟಿ, ಉಡುಪಿ**
  ಹುಡುಗರ ಪ್ರೀತಿಗೂ, ಹುಡುಗಿಯರ ಪ್ರೀತಿಗೂ ಏನು ವ್ಯತ್ಯಾಸ?
  – **ಹುಡುಗಿಯರು ಪ್ರೀತಿಸುವಾಗ ಕಣ್ಣು ಮುಚ್ಚುತ್ತಾರೆ, ಹುಡುಗರು ಮಿದುಳನ್ನು ಮುಚ್ಚಿರುತ್ತಾರೆ!**

- **ವಿನೋದ ಬಸವಪ್ಪ, ಮುಂಡರಗಿ**
  ಭಟ್ರೇ, ಹೆಂಡ್ತಿ ಯಾಕೆ ಯಾವಾಗಲೂ ಎಲ್ಲಾದಕ್ಕೂ ಡೌಟ್ ಪಡ್ತಾಳೆ?
  – **ಗಂಡನ ಸ್ವಭಾವ ಗೊತ್ತಿದ್ದೂ ಹಾಗೆ ಡೌಟ್ ಪಡದಿದ್ದರೆ ಅವಳು ಹೆಂಡತಿ ಹೇಗಾಗ್ತಾಳೆ?!**

- **ಸಮರ್ಥ ಕೆ.ಕೆ., ಬೆಂಗಳೂರು**
  ಭಟ್ರೇ, ಭಟ್ಟರ ಸ್ಕಾಚ್ ನಲ್ಲಿ ಪ್ರಶ್ನೆ ಕೇಳಲು ಅರ್ಹತೆ ಏನು ?
  – **ಬಾಯಲ್ಲಿ ಬೆರಳನ್ನು ಹಾಕಿಕೊಳ್ಳೋದನ್ನು ಬಿಟ್ಟವರು ಪ್ರಶ್ನೆ ಕೇಳಬಹುದು!**

- **ಮೌನೇಶ ವಿಶ್ವಕರ್ಮ, ಮಸ್ಕಿ**
  ಭಟ್ರೇ, ನಾವು ಸಾಯುವುದು ಮೊದಲೇ ಗೊತ್ತಾಗುವಂತಿದ್ದರೆ ಹೇಗಿರುತ್ತಿತ್ತು?
  – **ಸಾವಿನ ಕೈಗೆ ಸಿಗಬಾರದು ಎಂದು ಏನೇನೋ ಉಪಾಯ ಮಾಡುತ್ತಿದ್ದರು!**

- **ಅರುಣ್ ವಿದ್ಯಾಸಾಗರ, ಮೈಸೂರು**
  ಭಟ್ರೇ, ದೇವರು ಮೇಲೆಯೇ ಏಕೆ ಇರ್ತಾನೆ?
  – **ಕೆಳಗೆ ಬಂದ್ರೆ ಜನ ಬಿಡ್ತಾರಾ ಹೇಳು!**

ಬೆಂಗಳೂರಿನ ಮಳೆಗೊಂದು ಫಿಲಾಸಫಿ

ನೀನು ಬೆಂಗಳೂರಿನ ಪ್ರಜೆಯಾದರೆ, ಮಳೆಗಾಲದಲ್ಲಿ ಸಂಜೆ ಮನೆಗೆ ಮರಳುತ್ತೇನೆ ಎಂಬ ಯಾವ ಆಸೆಯನ್ನೂ ಇಟ್ಟುಕೊಳ್ಳಬೇಡ. ಸಾಯುವ ನಾನಾ ವಿಧಾನಗಳಲ್ಲಿ, ಜೋರು ಮಳೆ ಬರುತ್ತಿರುವಾಗ ಬೆಂಗಳೂರಿನಲ್ಲಿ ಅಡ್ಡಾಡುವುದೂ ಒಂದು. ಸುಮ್ಮನೇ ದಾರಿ ಬದಿ ನಿಂತಿದ್ದರೂ ಮೇಲಿನ ಮರದ ಕೊಂಬೆ ಲಟಕ್ಕನೇ ಮುರಿದು ತಲೆ ಮೇಲೆ ಬೀಳಬಹುದು.



ಕಾಡುದಾರಿ
ಹರೀಶ್ ಕೇರ
vveditoped@gmail.com

ಪ್ರಿಯ ತಮ್ಮ,

ಬೆಂಗಳೂರಿಗೆ ಬಂದು ನೆಲೆಸುತ್ತೇನೆ ಎಂದು ನೀನು ಹೇಳುವಾಗ ನಾನು 'ನೋ' ಎನ್ನಲಿಲ್ಲ. ಕಾರಣ, ಬದುಕು. ಭಾರತದ ಯಾವ ಪ್ರಜೆಯೂ ಎಲ್ಲಿಗೂ ಹೋಗಿ ವಾಸಿಸಬಹುದು, ದುಡಿಯಬಹುದು– ಅದು ನನಗೆ ಗೊತ್ತಿಲ್ಲದ್ದೇನಲ್ಲ. ಜೊತೆಗೊಂದು ಸಣ್ಣ ಅಂಕಿ ಅಂಶ ನೋಡು. ವರ್ಲ್ಡ್ ಪಾಪ್ಯುಲೇಷನ್ ರಿವ್ಯೂ ಪ್ರಕಾರ, ಬೆಂಗಳೂರಿನ ಜನಸಂಖ್ಯೆ 2024ರಲ್ಲಿ 1.40 ಕೋಟಿ. 2025ರಲ್ಲಿ ನಗರದ ಜನಸಂಖ್ಯೆ 1.80 ಕೋಟಿ ತಲುಪಬಹುದು ಎಂದು ಅದು ಭವಿಷ್ಯ ಹೇಳಿದೆ. ಅಂದರೆ ವರ್ಷದಲ್ಲಿ 40 ಲಕ್ಷ ಜನ ಇಲ್ಲಿಗೆ ಬರುತ್ತಿದ್ದಾರೆ ಅಥವಾ ಹುಟ್ಟುತ್ತಿದ್ದಾರೆ. ಹಾಗೇ ಇದನ್ನು ಭಾಗಿಸಿ ನೋಡಿದರೆ ಪ್ರತಿದಿನ 10,959 ಜನ ಸಿಟಿ ಪ್ರವೇಶಿಸುತ್ತಿದ್ದಾರೆ ಎಂದಾಯಿತು. ಇವರೆಲ್ಲ ಎಲ್ಲಿ ಇರುತ್ತಾರೆ ಮತ್ತು ಹೇಗೆ ಬದುಕುತ್ತಾರೆ ಎಂದು ಯಾರೂ ಆಲೋಚಿಸುವುದಿಲ್ಲ. ಎಲ್ಲೋ ಹೇಗೋ ಬದುಕು ಕಟ್ಟಿಕೊಳ್ಳುತ್ತಾರೆ. ಅವರ ಜೊತೆ ನೀನೂ ಒಬ್ಬನಾಗುತ್ತಿ. ಅದಲ್ಲ ವಿಷಯ. ನಿನ್ನ ಹಾಗೇ ನಾನೂ ದಶಕದ ಹಿಂದೆ ಬೆಂಗಳೂರಿಗೆ ಬಂದವನು. ಇಂದು ನನಗೆ ನನ್ನೂರಿಗಿಂತ ಬೆಂಗಳೂರು, ಇಲ್ಲಿನ ಬದುಕು ಪ್ರಿಯವಾಗಿದೆ. ನಾವಿರುವ ಊರೇ ನಮ್ಮದಾಗಬೇಕಲ್ಲವೇ.

ಈ ವಾರದಲ್ಲಿ ಮಳೆಯಿಂದ ಬೆಂಗಳೂರಿನಲ್ಲಿ ಆದ ಅನಾಹುತ ನೋಡಿ ಇದನ್ನು ಬರೆಯಬೇಕೆನಿಸಿತು. 'ಬೆಂಗಳೂರಿಗೆ ಬರುವುದಾದರೆ ಕಾರು ತರಬೇಡ, ಒಂದು ದೋಣಿ ತಾ' ಎಂದು ತಮಾಷೆ ಮಾಡಿದೆ ನಿಜ; ಆ ತಮಾಷೆ ನಿಜವೂ ಆಗಬಹುದು ಎಂಬುದು ನಿನಗೆ ಗೊತ್ತಿರಲಿ. ಕೆಲವು ವರ್ಷಗಳ ಹಿಂದೆ ನಾನು ಇರುವ ತಗ್ಗು ಪ್ರದೇಶದಲ್ಲಿ ರಾಜಕಾಲುವೆಯ ಒಂದು ತಡೆಗೋಡೆ ಒಡೆದು ನೀರು ನುಗ್ಗಿಬಿಟ್ಟಿತ್ತು. ಮನೆಗಳ ತುಂಬಾ ಎರಡಡಿ ಎತ್ತರಕ್ಕೆ ನೀರು. ವಾಹನ ಓಡಾಡುವ ರಸ್ತೆಗಳಲ್ಲಿ ನಿಂತ ನೀರಿನ ಮೇಲೆ ಬೋಟುಗಳು ಓಡಾಡಿದವು. ಮನೆಗಳಲ್ಲಿ ಸಿಕ್ಕಿಬಿದ್ದವರು ಅವುಗಳಲ್ಲಿ ಏರಿಕೊಂಡು ಪಾರಾದರು. ಮನೆ ತುಂಬಾ ಕೊಳಚೆ ಜಲ, ಕೆಸರು ಮಣ್ಣು– ಪರಿಸ್ಥಿತಿ ಊಹಿಸಿಕೋ. ಬೇಸ್‌ಮೆಂಟ್ ಮತ್ತು ಗ್ರೌಂಡ್ ಫ್ಲೋರ್‌ನಲ್ಲಿದ್ದ ಸಾಮಗ್ರಿಗಳೆಲ್ಲಾ ಎಂದೂ ಸರಿಪಡಿಸಲಾಗದಂತೆ ಹಾಳಾದವು. ಹಾವುಗಳು ಬಂದು ಸೇರಿಕೊಂಡವು. ಮರುದಿನ ಬಂದ ಮುಖ್ಯಮಂತ್ರಿ, ಸಚಿವರು ಪರಿಹಾರ ಕೊಡುವ ಮಾತಾಡಿದರು. ಬೆನ್ನು ಹತ್ತಿ ಹೋದವರಿಗೆ ಅಷ್ಟಿಷ್ಟು ಸಿಕ್ಕಿತು. ಆದರೆ ಮಳೆಯ ಬಗ್ಗೆ ದೊಡ್ಡದೊಂದು ಭಯ ಮನದಲ್ಲಿ ಕುಳಿತಿತು. ಭೂಮಿಗೆ ಬೀಳುವ ಮಳೆ ಮನಸ್ಸನ್ನೂ ಆರ್ದ್ರಗೊಳಿಸಬೇಕು, ಆದರೆ ಇಂಥ ಅನುಭವ ಆದವರಿಗೆ ಅದು ಅಳಿಸಲಾಗದ ಆತಂಕವನ್ನು ಬಿತ್ತಿತು. ಹೀಗಾಗಿ ಈಗ ಜೋರು ಮಳೆ ಬಿದ್ದರೆ ಎದೆ ಢವಢವ ಎನ್ನುತ್ತದೆ. ಹೀಗಾಗಿ ಮೊನ್ನೆ ಮುಳುಗಿದ ಏರಿಯಾಗಳ ಜನರ ಪರಿಸ್ಥಿತಿಯನ್ನು ನಾನು ಊಹಿಸಿಕೊಳ್ಳಬಲ್ಲೆ.

ನೀನು ಬೆಂಗಳೂರಿಗೆ ಬರುವುದಾದರೆ ಬಾ; ಆದರೆ ಮಲೆನಾಡಿನ ಧೋ ಮಳೆಗಾಲವನ್ನೋ ಬಯಲುನಾಡಿನ ಸೋನೆ ಮಳೆಯನ್ನೋ ನಿರೀಕ್ಷೆಯಿಟ್ಟುಕೊಂಡು ಬರಬೇಡ. ಇಲ್ಲಿನ ಮಳೆಗಾಲ, ಮೇ ತಿಂಗಳ ಬಿಸಿಲಲ್ಲಿ ಬೆಂದವರಿಗೆ ಮೊದಲು ಶಿವಕರುಣೆಯಂತೆ ಕಾಣಬಹುದು. ಆದರೆ ಅದು ರುದ್ರವಿಲಾಸ ಎಂದು ಗೊತ್ತಾಗುವುದು ನಂತರ. ಮೋರಿಗಳು ನಾವೇ ಎಸೆದ ಕಸದಿಂದ ಕಟ್ಟಿಕೊಂಡಿರುವುದರಿಂದ ನೀರೆಲ್ಲ ರಸ್ತೆಯ ಮೇಲೆ ಬರುತ್ತದೆ. ಜೊತೆಗೆ ಕಸವೂ. ಮ್ಯಾನ್‌ಹೋಲ್‌ಗಳ ಮುಚ್ಚಳಗಳು ಎದ್ದು ನೀರಿನಲ್ಲಿ ತೇಲಿಹೋಗುತ್ತವೆ. ಅದರ ಮೇಲೆ ಹಾದುಹೋಗುವ ದ್ವಿಚಕ್ರಗಳು ಗುಳುಂ ಮುಳುಗಿ ಹೋಗಿ ರಾಜಕಾಲುವೆ ಸೇರಬಹುದು. ರಾಜಕಾಲುವೆಗಳು ಅಕ್ಕಪಕ್ಕದ ಬಡಾವಣೆಗಳಿಗೆ ನುಗ್ಗುತ್ತವೆ. ಕೆರೆಗಳು ಉಕ್ಕಿ ಪಕ್ಕದಲ್ಲಿರುವ ಕಟ್ಟಡಗಳ ಬೇಸ್‌ಮೆಂಟ್‌ಗಳನ್ನೂ ವ್ಯಾಪಿಸಿ ನಾನು ಇಲ್ಲೂ ಇದ್ದೆ ಎಂದು ನೆನಪಿಸುತ್ತದೆ.

ನೀನು ಬೆಂಗಳೂರಿನ ಪ್ರಜೆಯಾದರೆ, ಮಳೆಗಾಲದಲ್ಲಿ ಸಂಜೆ ಮನೆಗೆ ಮರಳುತ್ತೇನೆ ಎಂಬ ಯಾವ ಆಸೆಯನ್ನೂ ಇಟ್ಟುಕೊಳ್ಳಬೇಡ. ಸಾಯುವ ನಾನಾ ವಿಧಾನಗಳಲ್ಲಿ, ಜೋರು ಮಳೆ ಬರುತ್ತಿರುವಾಗ ಬೆಂಗಳೂರಿನಲ್ಲಿ ಅಡ್ಡಾಡುವುದೂ ಒಂದು. ಸುಮ್ಮನೇ ದಾರಿ ಬದಿ ನಿಂತಿದ್ದರೂ ಮೇಲಿನ ಮರದ ಕೊಂಬೆ ಲಟಕ್ಕನೇ ಮುರಿದು ತಲೆ ಮೇಲೆ ಬೀಳಬಹುದು. ಈ ಮೊದಲೇ ಹೇಳಿದಂತೆ ಮ್ಯಾನ್‌ಹೋಲ್ ಬಾಯಿ ತೆರೆದು ನಿನ್ನನ್ನೂ ನಿನ್ನ ದ್ವಿಚಕ್ರವನ್ನೂ ನುಂಗಬಹುದು. ಪಾದಚಾರಿ ಮಾರ್ಗದಲ್ಲಿ (ಇದು ಇರುವುದೇ ಅಪರೂಪ) ನಡೆಯುತ್ತಿರುವಾಗ ಯಾವುದೋ ಮುಚ್ಚಳ ತೆರೆದ ಟ್ರಾನ್ಸ್‌ಫಾರ್ಮರ್ ಶಾರ್ಟ್ ಆಗಿ ನಿನ್ನನ್ನು ಸುಟ್ಟುಹಾಕಬಹುದು. ಬೇಸ್‌ಮೆಂಟ್‌ನಲ್ಲಿ ನಿಂತ ನೀರು ತೆರವು ಮಾಡಲು ಹೋಗಿ ಕರೆಂಟ್ ಹೊಡೆಯಬಹುದು. ಅಥವಾ ಕಾಲು ಜಾರಿ ಬಿದ್ದದ್ದೇ ನೆವವಾಗಿ ರಾಜಕಾಲುವೆ ಸೆಳೆದುಕೊಂಡು ಬಿಡಬಹುದು. ಮಳೆಗೆ ನೆನೆದುಹೋದ ಪಕ್ಕದ ಬಹುಮಹಡಿ ಕಟ್ಟಡ ನೀನಿರುವ ಶೀಟ್‌ನ ಮನೆಯ ಮೇಲೆ ಕುಸಿದು ಅಪ್ಪಚ್ಚಿ ಮಾಡಬಹುದು. ಇಲ್ಲಿ ಏನೂ ಆಗಬಹುದು. ಮಳೆಗಾಲದ ಬಗ್ಗೆ ರಮ್ಯ ಯೋಚನೆಗಳು ಇದ್ದರೆ ಅದನ್ನು ನಾಶಪಡಿಸುವುದಕ್ಕೇ ಇರುವುದು ಇಲ್ಲಿನ ಮುಂಗಾರು. ನಿನ್ನಲ್ಲಿ ಈ ಬದುಕಿನ ಕ್ಷಣಿಕತೆಯ ಬಗ್ಗೆ ಅರಿವು ಮೂಡಿಸಿ ಫಿಲಾಸಫರ್ ಆಗಿಸುವ ಅಪಾಯವೂ ಇದೆ.

ಜಯಂತ ಕಾಯ್ಕಿಣಿ ಒಂದೆಡೆ ಹೇಳಿದ್ದರು– ಮುಂಬಯಿಯಲ್ಲಿ ರೈಲು ಬಾಂಬ್ ಸ್ಫೋಟ, ಮಳೆ ಅನಾಹುತ ಹೀಗೆ ಏನೇ ಆದರೂ ಬದುಕು ಹಳಿ ತಪ್ಪುತ್ತದೆ, ಆದರೆ ದಿನಾರ್ಧದಲ್ಲಿ ಬದುಕು ಮತ್ತೆ ಹಳಿಗೆ ಬರುತ್ತದೆ. ಕಾರಣ, ಹಳಿಗೆ ಬರದೆ ಬೇರೆ ದಾರಿಯೇ ಇಲ್ಲವಲ್ಲ! ಇದು ಬೆಂಗಳೂರಿನ ಮಟ್ಟಿಗೂ ನಿಜವಾಗುತ್ತಿದೆ. ಎಲ್ಲ ನಗರಗಳ ಫಿಲಾಸಫಿ ಅವುಗಳ ದುರ್ಬಲ ಪಾಯಿಂಟ್‌ನಲ್ಲಿರುತ್ತದೆ. ನಾಲ್ಕೈದು ದಶಕಗಳ ಹಿಂದೆ ಈ ಊರಿನ ಫಿಲಾಸಫಿಯಲ್ಲಿ ಶಾಂತತೆ, ನೆಮ್ಮದಿ ಪ್ರಧಾನವಾಗಿತ್ತು. ನಿವೃತ್ತರು ತುಂಬ ಶಾಂತವಾಗಿ ಏನನ್ನೋ ಯೋಚಿಸುತ್ತ ರಸ್ತೆ ದಾಟಬಹುದಿತ್ತು. ಎರಡು ದಶಕಗಳ ಹಿಂದೆ ಅದು ಇದ್ದಕ್ಕಿದ್ದಂತೆ ಹಗಲು ರಾತ್ರಿ ಭೇದವೆಣಿಸದ ದುಡಿಮೆಯ ಕಡೆಗೆ ತಿರುಗಿತು. ಅಂದರೆ ಬದುಕಿನ ಅರ್ಥ ಅಂಥ ದುಡಿಮೆಯಲ್ಲಿರುತ್ತದೆ ಎಂದು ಹೇಳಲಾಗುತ್ತಿತ್ತು. ಇಂದು ಆ ತಾತ್ವಿಕತೆಯೂ ಹಳತಾಗಿದೆ. ಕಷ್ಟಪಟ್ಟು ದುಡಿ, ಆದರೆ ಅದರ ಫಲ ಉಣ್ಣಲು ನೀನಿರುತ್ತಿ ಅಂತ ತಿಳಿದುಕೊಳ್ಳಬೇಡ ಎಂಬ ಫಿಲಾಸಫಿ ಇಂದಿನ ಬೆಂಗಳೂರಿನದ್ದಾಗಿದೆ.

ಇದಕ್ಕೆ ಉದಾಹರಣೆಗಳನ್ನು ನೋಡು. ಜೀವಮಾನದ ದುಡಿಮೆಯನ್ನೆಲ್ಲ ಸುರಿದು ಒಂದು ಸೈಟು ಕೊಂಡು ಮನೆ ಕಟ್ಟಿಸುವ ಯೋಚನೆಯಲ್ಲಿರುತ್ತಿ. ಒಂದು ದುರದೃಷ್ಟದ ಮುಂಜಾನೆ ಇನ್ಯಾರೋ ಬಂದು ಈ ಸೈಟು ನನಗೆ ಸೇರಿದ್ದು ಎಂದುಬಿಡುತ್ತಾನೆ. ಮುಂದಿನ ನಿನ್ನ ಜೀವನವೆಲ್ಲ ಕೋರ್ಟಿಗೆ ಅಲೆಯುವುದಾಗಿರುತ್ತದೆ. ಶ್ರಮಪಟ್ಟು ಒಂದು ಮನೆ ಕಟ್ಟಿಸಿರುತ್ತಿ. ಒಂದು ಸಂಜೆ ಜೆಸಿಬಿಗಳು ಬಂದು ಕೆಡವಿಬಿಡುತ್ತವೆ. ಬೆವರು ಬಸಿದು ಒಂದು ಕಾರು ಕೊಂಡಿರುತ್ತಿ. ಮೈಸೂರು ರೋಡಿನಲ್ಲಿ ಒಂದು ಟ್ರಕ್ಕಿನವನು ಕುಟ್ಟಿ ಜಜ್ಜಿಬಜ್ಜಿ ಮಾಡಿ ಹೋಗಿರುತ್ತಾನೆ. ನೀನು ಜೀವಸಹಿತ ಉಳಿದದ್ದೇ ಪವಾಡವಾಗಿರುತ್ತದೆ. ಸಂಜೆ ಮನೆಗೆ ಹೋಗಿ ಬಿಸಿ ಕಾಫಿ ಕುಡಿಯಬಹುದು ಎಂದುಕೊಂಡಿರುತ್ತೀಯ. ಆ ಸಂಜೆ ಮಳೆಯಲ್ಲಿ ನಿನ್ನ ಟೂವೀಲರ್ ಚರಂಡಿ ಪಾಲಾಗಿರುತ್ತದೆ. ನಿನ್ನ ಪಾಡಿಗೆ ನೀನು ರಸ್ತೆಯಲ್ಲಿ ದ್ವಿಚಕ್ರ ಚಲಾಯಿಸುತ್ತಿರುತ್ತೀಯ. ಯಾರೋ ಇನ್ನೂ ಮೀಸೆ ಮೊಳೆಯದ ರೌಡಿ ವ್ಹೀಲಿಂಗ್ ಮಾಡುತ್ತ ಪಕ್ಕದಲ್ಲೇ ಹೋಗುತ್ತಾನೆ. ನೀನು ಗಾಬರಿಬಿದ್ದು ಗಾಡಿ ಬೀಳಿಸಿ ತರಚಿ ಮೈ ಕೈಯೆಲ್ಲ ಗಾಯವಾಗಿ ಆಸ್ಪತ್ರೆ ಪಾಲಾಗುತ್ತಿ. ವರ್ಷಗಟ್ಟಲೆ ದುಡಿದು ಒತ್ತಡ ತಡೆದುಕೊಂಡು ಮನೆ ಮಕ್ಕಳು ಆಯ್ತು ಇನ್ನು ಆರಾಮಾಗಿರೋಣ ಎಂದುಕೊಂಡರೆ ಒಂದು ರಾತ್ರಿ ಎದೆನೋವು ಶುರುವಾಗಿ ಆಂಬ್ಯುಲೆನ್ಸ್ ಬರುತ್ತದೆ. ಒಂದು ವಾರ ಐಸಿಯು ವಾಸ. ಇಪ್ಪತ್ತು ಲಕ್ಷ ಆಸ್ಪತ್ರೆ ಪಾಲಾಗಿರುತ್ತದೆ.

ಇದನ್ನೆಲ್ಲ ನಿನ್ನನ್ನು ಹೆದರಿಸಲು ಹೇಳುತ್ತಿಲ್ಲ. ಇದೇ ಇಂದಿನ ಬೆಂಗಳೂರು ಜೀವನ. ಇದಕ್ಕೆ ಯಾರು ಹೊಣೆ ಎಂಬ ಪ್ರಶ್ನೆಯನ್ನು ನಾನೂ ನೀನೂ ಕೇಳಬಹುದು. ಕೇಳಿ ಏನು ಫಲ? ಉತ್ತರಿಸಬೇಕಾದವರು ನನಗೂ ನಿನಗೂ ಸಿಗುವವರಲ್ಲ. ಸುಲಭವಾಗಿ ನಾವೇ ಉತ್ತರಿಸಿಕೊಳ್ಳಬಹುದು. ಬೆಂಗಳೂರನ್ನು ಪ್ರೀತಿಸದವರೇ ಇಂಥ ಸ್ಥಿತಿಗೆ ಹೊಣೆ. ಹೊರಗಿನಿಂದ ಎಷ್ಟು ಮಂದಿಯೇ ಬಂದಿರಲಿ, ಈ ಊರನ್ನು ನನ್ನ ಊರು ಎಂದುಕೊಂಡರೆ ಮಾತ್ರ ಇದನ್ನು ಚೆಂದವಾಗಿಡಲು, ಹಾಗಿಟ್ಟುಕೊಂಡು ಮುಂದಿನ ಪೀಳಿಗೆಗೂ ದಾಟಿಸಿ ತೆರಳಲು ಸಾಧ್ಯವಿದೆ. ಇಲ್ಲವಾದರೆ ಇದೇ ಕತೆ. ಬೆಳಗ್ಗೆದ್ದು ಕಸವನ್ನು ಪಕ್ಕದ ಸೈಟಿಗೋ ರಸ್ತೆಬದಿಗೋ ಎಸೆದು ಬರುವವನು, ರಾಜಕಾಲುವೆಗೆ ಡಿಸ್ಕಸ್ ತ್ರೋ ಮಾಡುವವನು, ಖಾಲಿ ಮಾಡಿದ ಬಿಯರ್ ಬಾಟಲಿಯನ್ನು ಪಾದಚಾರಿ ಮಾರ್ಗಕ್ಕೆ ಅಪ್ಪಳಿಸಿ ಚೂರು ಮಾಡಿ ಗಹಗಹಿಸಿ ನಗುವವನು ಇಲ್ಲಿಯವನಾಗಿರಲು ಸಾಧ್ಯವಿಲ್ಲ. ಇಲ್ಲಿಗೆ ಬಂದು ಹತ್ತು ವರ್ಷವಾಗಿದ್ದರೂ ಒಂದಕ್ಷರ ಕನ್ನಡ ಮಾತನಾಡದ, ಸ್ಥಳೀಯ ಜನತೆಯ ಭಾಷೆಯ ಬಗ್ಗೆ ಕಿಂಚಿತ್ ಕುತೂಹಲವಿಲ್ಲದವನೂ ಇಲ್ಲಿಯವನಾಗಲಾರ. ಇಂಥವರು ನಮ್ಮ ಸಿಟಿಯನ್ನು ಚೆನ್ನಾಗಿಟ್ಟುಕೊಳ್ಳಬಹುದು ಎಂದು ಹೇಗೆ ನಿರೀಕ್ಷಿಸಲು ಸಾಧ್ಯ? ಹೆಚ್ಚೆಂದರೆ ತನ್ನ ಮನೆಯ ಗಲೀಜನ್ನು ಬೀದಿಗೆ ತಂದು ಇಡಬಹುದಷ್ಟೆ.

ಹೊರಗಿನಿಂದ ಬಂದು ಅಪ್ಪಟ ಬೆಂಗಳೂರಿನವರಾಗಿರುವ, ಈ ನಗರವನ್ನು ತುಂಬ ಚೆಂದವಾಗಿ ಕಟ್ಟಿ ಬೆಳೆಸಿದ ಹಲವರನ್ನು ನೋಡು. ಕಬ್ಬನ್ ಪಾರ್ಕ್‌ನ ಹಿಂದಿರುವ ಮಾರ್ಕ್ ಕಬ್ಬನ್, ಬೆಂಗಳೂರಿನ ಸಾಲು ಮರಗಳ ಹಿಂದಿರುವ ಜರ್ಮನಿಯ ಗುಸ್ತಾವ್ ಕ್ರುಂಬಿಗಲ್, ಸ್ಯಾಂಕಿ ಕೆರೆಯ ಹಿಂದಿರುವ ಕರ್ನಲ್ ಸ್ಯಾಂಕಿ, ಇಲ್ಲಿನ ಹಲವು ಭವ್ಯ ವಾಸ್ತುಶಿಲ್ಪಗಳ ಹಿಂದಿರುವ ಮೈಸೂರಿನ ಒಡೆಯರು, ಟಿಪ್ಪು ಸುಲ್ತಾನ, ತಮಿಳು– ತೆಲುಗು ಮೂಲದಿಂದ ಬಂದು ನೆಲೆನಿಂತು ಇಲ್ಲಿನ ಕನ್ನಡವನ್ನು ಶ್ರೀಮಂತಗೊಳಿಸಿದ ಡಿವಿಜಿ, ಮಾಸ್ತಿ ಪುತಿನ, ನಾಡಿನ ಆಚೆಯವರಾದರೂ ಇಲ್ಲಿನ ಆಡಳಿತ ಕಾನೂನು ಸುವ್ಯವಸ್ಥೆಯನ್ನೆಲ್ಲ ಸೊಗಸಾಗಿ ನಿರ್ವಹಿಸಿದ ಹಲವು ಐಎಎಸ್ ಐಪಿಎಸ್‌ಗಳು– ಇವರೆಲ್ಲರ ಹೃದಯದಲ್ಲಿ ಈ ಬೆಂಗಳೂರು ನಮ್ಮದೆಂಬ ಭಾವನೆ ಇದ್ದಿರಲೇಬೇಕು. ತಾನು ದುಡಿದು ಹೊತ್ತು ಹೊತ್ತಿನ ತುತ್ತು ಕಾಣುವ ಈ ಊರಿನ ಬಗ್ಗೆ ಪ್ರೀತಿ ಇದ್ದರೆ ಅದನ್ನು ಸೊಗಸಾಗಿ ಉಳಿಸಿಕೊಳ್ಳುವ ದರ್ದು ಕೂಡ ಇರುತ್ತದೆ. 'ನನ್ನ ದುಡಿಮೆಗೆ ತಕ್ಕ ಟ್ಯಾಕ್ಸ್ ಕಟ್ಟೀನಿ, ಉಳಿದದ್ದೆಲ್ಲ ಸರಕಾರ ನೋಡಿಕೊಳ್ಳಬೇಕು' ಎಂಬುದು ಸೊಕ್ಕು ಮಾತ್ರ. ಈ ಊರನ್ನು ನನ್ನದಾಗಿಸಿಕೊಳ್ಳುತ್ತೇನೆ ಎಂಬ ಪ್ರೀತಿ ಇದ್ದರೆ ಮಾತ್ರ ಬೆಂಗಳೂರಿಗೆ ಬಾ, ಅಷ್ಟೆ.

ಪ್ರಸ್ತುತ

ಡಾ. ಮುರಲೀ ಮೋಹನ್ ಚೂಂತಾರ್
vveditoped@gmail.com

ಸತ್ವ ಕಳೆದುಕೊಳ್ಳುತ್ತಿರುವ ಆ್ಯಂಟಿಬಯೋಟಿಕ್‌ಗಳು

ನಮ್ಮ ದೇಹಕ್ಕೆ ರೋಗಾಣುಗಳು ಸೇರಿಕೊಂಡು ದೇಹದೆಲ್ಲೆಡೆ ಸೋಂಕು ಉಂಟುಮಾಡಿ ತಮ್ಮ ರುದ್ರನರ್ತನವನ್ನು ಆರಂಭಿಸುವಾಗ, ಅಂತಹಾ ರೋಗಾಣುಗಳನ್ನು ಹತೋಟಿಯಲ್ಲಿಡುವ ಜೀವರಕ್ಷಕ ಔಷಧಿಗಳೇ ' ಆ್ಯಂಟಿಬಯೋಟಿಕ್‌ಗಳು'. ಅಲೆಗ್ಸಾಂಡರ್ ಫ್ಲೆಮಿಂಗ್ ಎಂಬ ಪುಣ್ಯಾತ್ಮ 1927ರಲ್ಲಿ 'ಪೆನ್ಸಿಲಿನ್' ಎಂಬ ಜೀವರಕ್ಷಕ ಆಂಟಿಬಯೋಟಿಕ್‌ನ್ನು ಕಂಡುಹಿಡಿದು ಲಕ್ಷಾಂತರ ಜನರ ಜೀವವನ್ನು ಉಳಿಸಿದ. ಅದರ ಬಳಿಕ ಸಾವಿರಾರು ವಿಧವಿಧದ ಆ್ಯಂಟಿಬಯೋಟಿಕ್‌ಗಳು ಹುಟ್ಟಿಕೊಂಡವು. ಕಾಲಕ್ರಮೇಣ ಬ್ಯಾಕ್ಟೀರಿಯಾ ಹಾಗೂ ಇತರ ರೋಗಾಣುಗಳು ಕೂಡ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧಕತ್ವವನ್ನು ಬೆಳೆಸಿಕೊಂಡು ತನ್ನ ದೇಹದಲ್ಲಿ, ಜೀನ್‌ಗಳಲ್ಲಿ, ಡಿಎನ್‌ಎಗಳಲ್ಲಿ, ವರ್ಣತಂತುಗಳಲ್ಲಿಅಗತ್ಯ ಮಾರ್ಪಾಡು ಮಾಡಿಕೊಂಡು ವಿಷಮ ಪರಿಸ್ಥಿತಿಯಲ್ಲಿಯೂ ಬದುಕುವ ಕಲೆಯನ್ನು ರೂಢಿಸಿಕೊಂಡವು. ಹೊಸ ಹೊಸ ಆ್ಯಂಟಿಬಯೋಟಿಕ್‌ಗಳು ಹುಟ್ಟಿಕೊಂಡಂತೆ, ಹೊಸ ಹೊಸ ರೋಗಾಣುಗಳು ಮತ್ತು ಹೊಸ ಹೊಸ ರೋಗಗಳೂ ಹುಟ್ಟಿಕೊಂಡವು. ಅನಿಯಂತ್ರಿತ ಅನಗತ್ಯ ಆಂಟಿಬಯೋಟಿಕ್‌ಗಳ ಬಳಕೆ ಮತ್ತು ಸತ್ವರಹಿತ ಆ್ಯಂಟಿಬಯೋಟಿಕ್‌ಗಳು, ರೋಗಿಗಳ ಅತಿಯಾದ ನಿರೀಕ್ಷೆಗಳು, ವೈದ್ಯರ ಅತಿಯಾದ ಆಸೆ ಬುರುಕುತನ ಹೇಗೆ ಎಲ್ಲವೂ ಮೇಳೈಸಿ ಜೀವರಕ್ಷಕವಾಗ ಬೇಕಿದ್ದ ಆ್ಯಂಟಿಬಯೋಟಿಕ್‌ಗಳು ತಮ್ಮ ಜೀವಸತ್ವ ಮತ್ತು ಜೀವರಕ್ಷಕತ್ವವನ್ನು ಕಳೆದುಕೊಂಡು ಜೀವಭಕ್ಷಕ ಔಷಧಗಳಾಗುತ್ತಿರುವುದೇ ಬಹಳ ನೋವಿನ ಸಂಗತಿ.

ವಾಸ್ತವ ಏನು?

ವಿಶ್ವಸಂಸ್ಥೆಯ ಇತ್ತೀಚಿನ ವರದಿಯಂತೆ 76 ದೇಶಗಳಲ್ಲಿ ನಡೆದ ಸರ್ವೆಯ ಪ್ರಕಾರ, 2000ರಲ್ಲಿ 20 ಬಿಲಿಯನ್‌ರಷ್ಟಿದ್ದ ದಿನವೊಂದರಲ್ಲಿ ಬಳಸುವ ಆ್ಯಂಟಿಬಯೋಟಿಕ್ ಸೇವನೆ 2015ರಲ್ಲಿ 35 ಬಿಲಿಯನ್‌ಗೆ ತಲುಪಿದೆ. ಏನಿಲ್ಲವೆಂದರೂ 15 ವರ್ಷಗಳಲ್ಲಿ ಶೇಕಡಾ 65ರಷ್ಟು ಏರಿಕೆ ಕಂಡಿದೆ. ಭಾರತವೂ ಈ ಏರಿಕೆಗೆ ಹೊರತಾಗಿಲ್ಲ 2000ದಲ್ಲಿ 33 ಲಕ್ಷಗಳಷ್ಟಿದ್ದ ಬಳಿಕೆ, 2015ರಲ್ಲಿ 66 ಲಕ್ಷಕ್ಕೆ ತಲುಪಿರುವುದು ಬಹಳ ವಿಷಾದನೀಯ ಸಂಗತಿ. ಕಳೆದ 15 ವರ್ಷಗಳಲ್ಲಿ ದ್ವಿಗುಣವಾಗಿರುವ ಈ ಆ್ಯಂಟಿಬಯೋಟಿಕ್‌ಗಳ ಸೇವನೆಗೆ ಹತ್ತು ಹಲವು ಕಾರಣಗಳನ್ನು ನೀಡಬಹುದು. ಹೆಚ್ಚುತ್ತಿರುವ ಆದಾಯ, ವೈದ್ಯರ ಚೀಟಿಯಿಲ್ಲದ ಎಲ್ಲೆಂದರಲ್ಲಿ ಸುಲಭವಾಗಿ ಸಿಗುವ ಆಂಟಿಬಯೋಟಿಕ್‌ಗಳು, ಸರಿಯಾದ ಕಾನೂನು ಇಲ್ಲದೆ ಅನಧಿಕೃತ ಔಷಧ ಮಾರಾಟ, ಕಡಿಮೆ ವೆಚ್ಚದ ಕಳಪೆ ಔಷಧಿಗಳು, ಹೆಚ್ಚುತ್ತಿರುವ ಆಸ್ಪತ್ರೆಯ ಸೋಂಕು ರೋಗಗಳು, ಪದೇ ಪದೇ ಮನುಕುಲದ ಮೇಲೆ ಸವಾರಿ ಮಾಡುವ ಸಾಂಕ್ರಾಮಿಕ ರೋಗಗಳು ಇವೆಲ್ಲವೂ ಸೇರಿ ಆ್ಯಂಟಿಬಯೋಟಿಕ್‌ಗಳ ಸೇವನೆಯಲ್ಲಿ ಬಹಳಷ್ಟು ಹೆಚ್ಚಳ ಉಂಟಾಗಿರುವುದು ಬಹಳ ಅಪಾಯಕಾರಿಯಾದ ಬೆಳವಣಿಗೆ ಎಂದರೂ ತಪ್ಪಲ್ಲ.

ಈ ರೀತಿಯಾಗಿ ಅತಿಯಾದ ಆ್ಯಂಟಿಬಯೋಟಿಕ್ ಬಳಕೆಯಿಂದಾಗಿ ರೋಗಾಣುಗಳು ಬಹಳ ಸುಲಭವಾಗಿ ರೋಗ ಪ್ರತಿರೋಧಕತ್ವ ಬೆಳೆಸಿಕೊಂಡಿರುವುದು ಸತ್ಯವಾದ ಮಾತು. ಇ-ಕೊಲೈ, ಸ್ಟ್ರೆಪ್ಟೋಕೋಕಸ್, ಸ್ಟೆಫೈಲೋಕೋಕಸ್, ನ್ಯೂಮೋಕೋಕೈ, ಮತ್ತು ಟ್ಯುಬರುಕುಲಸ್ ಬ್ಯಾಸಿಲ್ಲೈ ಮುಂತಾದ ರೋಗಾಣುಗಳು ಬಹಳ ಸುಲಭವಾಗಿ ಪ್ರತಿರೋಧಕತ್ವ ಬೆಳೆಸಿಕೊಂಡು ರೋಗ ನಿಯಂತ್ರಣಕ್ಕೆ ಸಿಗದೆ ಮನುಕುಲದ ಮೇಲೆ ಸವಾರಿ ಮಾಡುವ ಹಂತಕ್ಕೆ ಬಂದು ನಿಂತಿದೆ. ಈ ಎಲ್ಲಾ ಕಾರಣದಿಂದಾಗಿ ಮೊದಲೆಲ್ಲಾ ಬಹಳ ಸುಲಭವಾಗಿ ಸರಳ ಆಂಟಿಬಯೋಟಿಕ್‌ಗಳಿಂದ ಗುಣಪಡಿಸಲಾಗುತ್ತಿದ್ದ ರೋಗಗಳು ಇದೀಗ ಅತ್ಯಂತ ದುಬಾರಿ ಮತ್ತು ಪರಿಷ್ಕರಿಸಿದ ಆಂಟಿಬಯೋಟಿಕ್‌ಗಳಿಗೂ ಸ್ಪಂದಿಸದಿರುವುದೇ ಬಹಳ ಆತಂಕಕಾರಿ ಬೆಳವಣಿಗೆಯಾಗಿದೆ.

ನಿಯಂತ್ರಣ ಹೇಗೆ?

1. ವೈದ್ಯರ ಚೀಟಿ ಇಲ್ಲದೆ ಫಾರ್ಮಸಿಗಳಲ್ಲಿ ಆ್ಯಂಟಿಬಯೋಟಿಕ್ ನೀಡಬಾರದೆಂಬ ಕಠಿಣ ಕಾನೂನು ತರಬೇಕು.
2. ಅನಗತ್ಯವಾಗಿ ರೋಗಿಗಳೇ ವೈದ್ಯರಾಗಿ ಸಣ್ಣಪುಟ್ಟ ರೋಗಗಳಿಗೂ ಆ್ಯಂಟಿಬಯೋಟಿಕ್ ಬಳಸುವ ಚಾಳಿಯನ್ನು ಬಿಡಬೇಕು. ಶೀತ, ನೆಗಡಿ ವೈರಾಣುವಿನ ಸೋಂಕಿನಿಂದ ಬರುವ ಕಾರಣದಿಂದ, ಆ್ಯಂಟಿಬಯೋಟಿಕ್ ಅವಶ್ಯಕತೆ ಇರುವುದಿಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಎಲ್ಲರೂ ಒಪ್ಪಲೇ ಬೇಕು.
3. ಹೆಚ್ಚಿನ ರೋಗಗಳಿಗೆ ಲಸಿಕೆ ಲಭ್ಯವಿದ್ದು ಎಲ್ಲರೂ ಲಸಿಕೆ ಹಾಕಿಸಿಕೊಂಡಲ್ಲಿ ಆ್ಯಂಟಿಬಯೋಟಿಕ್ ಸೇವಿಸಬೇಕಾದ ಪ್ರಮೇಯವೇ ಇರುವುದಿಲ್ಲ. ಸರಕಾರ ಎಲ್ಲರಿಗೂ ಲಸಿಕೆ ಹಾಕಿಸಿಕೊಳ್ಳುವಂತೆ ಸೂಕ್ತ ಸೌಲಭ್ಯ ನೀಡಬೇಕು ಮತ್ತು ಜನರು ಇದನ್ನು ಅನುಸರಿಸಲೇ ಬೇಕು.
4. ವೈದ್ಯರು ಕೂಡಾ ಅತೀ ಅವಶ್ಯವಿದ್ದಲ್ಲಿ ಮಾತ್ರ ಆ್ಯಂಟಿಬಯೋಟಿಕ್ ನೀಡಬೇಕು. ರೋಗಿಗಳು ರೋಗ ಬೇಗ ಕಡಿಮೆಯಾಗಬೇಕೆಂದು ಆ್ಯಂಟಿಬಯೋಟಿಕ್ ನೀಡಲು ವೈದ್ಯರ ಮೇಲೆ ಒತ್ತಡ ಹೇರಬಾರದು.
5. ಅತಿಯಾದ ಆ್ಯಂಟಿಬಯೋಟಿಕ್ ಬಳಸಲು ಪ್ರೇರೇಪಿಸುವ ಔಷಧಿ ಕಂಪೆನಿಗಳ ಮೇಲೆ ಕಾನೂನು ಕ್ರಮ ತೆಗೆದು ಕೊಳ್ಳಬೇಕು.
6. ರೋಗಿಗಳು ದಿನ ಬೆಳಗಾಗುವುದರೊಳಗೆ ರೋಗ ಕಡಿಮೆಯಾಗಬೇಕು ಎಂಬ ಅತಿಯಾದ ನಿರೀಕ್ಷೆ ಇಟ್ಟುಕೊಳ್ಳಬಾರದು. ವೈದ್ಯರಿಗೆ ಸ್ವತಂತ್ರ ನಿರ್ಣಯ ತೆಗೆದುಕೊಳ್ಳಲು ಅವಕಾಶ ನೀಡಬೇಕು. ಡಾ. ಗೂಗಲ್ ಸಹಾಯದಿಂದ ವೈದ್ಯರ ಬಳಿ ತಮ್ಮ ಆ್ಯಂಟಿಬಯೋಟಿಕ್ ಬಗೆಗಿನ ಅಲ್ಪ ಜ್ಞಾನವನ್ನು ತೋರಿಸಿ ವೈದ್ಯರ ದಾರಿ ತಪ್ಪಿಸಬಾರದು.
7. 24 ಅತೀ ಅಗತ್ಯದ ಮತ್ತು ಸುರಕ್ಷಿತ ಆ್ಯಂಟಿಬಯೋಟಿಕ್‌ಗಳನ್ನು ಔಷಧಿ ನಿಯಂತ್ರಣ ಕಾಯಿದೆಯ ಏ1 ಎಂಬ ಗುಂಪಿನಡಿಯಲ್ಲಿ ಸೇರಿಸಲಾಗಿದ್ದು, ಈ ಔಷಧವನ್ನು ಕಡ್ಡಾಯವಾಗಿ ಕೆಂಪು ಗೆರೆ' ಯಲ್ಲಿ ನಮೂದಿಸಿ, ಈ ಔಷದಿಯ ಮಾರಾಟಕ್ಕಾಗಿ ವಿಶೇಷ ನೋಂದಣಿ ಪುಸ್ತಕ ಮಾಡಬೇಕು. ಇದರಲ್ಲಿ ರೋಗಿಯ ಹೆಸರು, ಔಷಧಿಯ ಹೆಸರು, ಔಷದ ಅಂಗಡಿಯ ಹೆಸರು ವಿಳಾಸ ಬರೆದೇ ಈ ಔಷಧಿ ನೀಡಬೇಕು ಮತ್ತು ಎಷ್ಟು ಸಂಖ್ಯೆಯ ಔಷಧಿ ನೀಡಿದೆ ಎಂಬುದನ್ನು ಗುರುತಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ 'ಜೀವರಕ್ಷಕ' ಔಷಧಿಗಳ ಮಾರಾಟದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಇಲ್ಲವಾದಲ್ಲಿ ಈ ಜೀವರಕ್ಷಕ ಔಷದಿಗಳು ಚಾಕಲೇಟಿನಂತೆ ಬಿಕರಿಯಾಗಿ ತನ್ನ ಜೀವರಕ್ಷಕ ಸತ್ವವನ್ನು ಕಳೆದುಕೊಂಡು, ರೋಗಾಣುವಿನ ಮೇಲಿನ ನಿಯಂತ್ರಣ ಸಾಧಿಸಲು ಸಾಧ್ಯವಾಗದೆ, ರೋಗ ಮತ್ತಷ್ಟು ಉಲ್ಬಣಿಸಬಹುದು ಮತ್ತು ಹೊಸ ಹೊಸ ಮತ್ತಷ್ಟು ಕ್ಲಿಷ್ಟಕರ ರೋಗಾಣುಗಳು ಉತ್ಪತ್ತಿಯಾಗಲು ಪರೋಕ್ಷವಾಗಿ ಕಾರಣವಾಗಬಹುದು.

ಕೊನೆಮಾತು

ಇತ್ತೀಚಿನ ದಿನಗಳಲ್ಲಿ ಆಂಟಿಬಯೋಟಿಕ್ ಬಳಕೆ ಮಿತಿಮೀರುತ್ತಿದೆ. ಇದಕ್ಕೆ ಸೂಕ್ತ ನಿಯಂತ್ರಣ ಮಾಡದಿದ್ದಲ್ಲಿ ಮುಂದೊಂದು ದಿನ ಪ್ರತಿಯೊಬ್ಬರು, ಊಟದ ಜೊತೆಗೆ ರೋಗ ಬರದಂತೆ ಆಂಟಿಬಯೋಟಿಕ್ ಬಳಸಬೇಕಾದ ಸಂದಿಗ್ಧ ಪರಿಸ್ಥಿತಿ ಬರಲೂಬಹುದು. ಔಷಧಿಯನ್ನು ಔಷಧಿಯ ರೀತಿಯಲ್ಲಿಯೇ ಸೇವಿಸಬೇಕು. ಲಸಿಕೆಯಿಂದ ತಡೆಗಟ್ಟ ಬಹುದಾದ ಎಲ್ಲಾ ರೋಗಗಳಿಗೂ ಲಸಿಕೆ ಹಾಕಿಸಿ ಕೊಳ್ಳಲೇಬೇಕು. ಹಾಗಾದಲ್ಲಿ ಮಾತ್ರ ಸುಂದರ ಸುದೃಢ ಆರೋಗ್ಯವಂತ ಸಮಾಜದ ನಿರ್ಮಾಣ ಆಗಬಹುದು. ಅದರಲ್ಲಿಯೇ ನಮ್ಮೆಲ್ಲರ ಒಳಿತು ಅಡಗಿದೆ.

ಬೆಳ್ಳಿಹಬ್ಬದ ಸಾರ್ಥಕತೆ ಕಂಡ ಸರಕಾರಿ ಶಿಕ್ಷಣ ಯೋಜನೆ!

ಭಾರತದಲ್ಲಿ ಯೋಜನೆಗಳು ಘೋಷಣೆಯಾಗುವುದು ಸರಕಾರಿ ದಾಖಲೆಗಳಲ್ಲಿ ಇರುವುದಕ್ಕೆ ಮಾತ್ರ ಎಂದು ಜನಸಾಮಾನ್ಯರೂ ಆಡಿಕೊಳ್ಳುವ ಕಾಲದಲ್ಲಿ, ಸದ್ದಿಲ್ಲದೆ ಸಮಾಜದ, ಜನಸಮುದಾಯದ ಜೊತೆಗೆ ಸರಕಾರಿ ಆಡಳಿತ ವಲಯದಲ್ಲೂ ಒಟ್ಟೊಟ್ಟಿಗೆ ಅತ್ಯದ್ಭುತ ಯಶಸ್ಸು ಕಂಡ ಒಂದು ವಿಶಿಷ್ಟ ಶಿಕ್ಷಣ ಯೋಜನೆಯಾಗಿದೆ ಸರ್ವಶಿಕ್ಷಾ ಅಭಿಯಾನ!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ) ಭಾರತ ಸರಕಾರವು ಪ್ರಾರಂಭಿಸಿದ ಪ್ರಮುಖ ಕಾರ್ಯಕ್ರಮವಾಗಿದ್ದು, ಭಾರತ ಸಂವಿಧಾನದ ಆಶಯದಂತೆ ಸಮಯಕ್ಕೆ ಅನುಗುಣವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣವನ್ನು (ಯುಇಇ) ಸಾಧಿಸಲು ಇದನ್ನು ಪ್ರಾರಂಭಿಸಲಾಯಿತು. ಭಾರತದ ಸಂವಿಧಾನದ 86ನೇ ತಿದ್ದುಪಡಿಯು ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕು ಎಂದು ಘೋಷಿಸಿದೆ. ಈ ಶಿಕ್ಷಣದ ಹಕ್ಕು 6–14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತದೆ.

ಎಸ್‌ಎಸ್‌ಎ ಕಾರ್ಯಕ್ರಮವು 2000–2001ರಿಂದ ಕಾರ್ಯನಿರ್ವಹಿಸುತ್ತಿದ್ದು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಸರ್ವ ಶಿಕ್ಷಾ ಅಭಿಯಾನ ಕಾರ್ಯ ಕ್ರಮದ ಜವಾಬ್ದಾರಿ ಮತ್ತು ನಿರ್ವಹಣೆಯನ್ನು ಹೊತ್ತಿದೆ. ಸುಮಾರು 15 ರಿಂದ 20 ಲಕ್ಷಕ್ಕೂ ಅಧಿಕ ಜನವಸತಿ ಪ್ರದೇಶಗಳಲ್ಲಿ 2 ಕೋಟಿಗೂ ಅಧಿಕ ಮಕ್ಕಳ ಅಗತ್ಯಗಳನ್ನು ಪೂರೈಸಲು ಮತ್ತು ಇಡೀ ದೇಶವನ್ನು ಈ ಯೋಜನೆಯಡಿಯಲ್ಲಿ ತರಲು, ರಾಜ್ಯ ಸರಕಾರಗಳ ಸಹಭಾಗಿತ್ವದಲ್ಲಿ ಸರ್ವ ಶಿಕ್ಷಾ ಅಭಿಯಾನ ಯೋಜನೆಯನ್ನು ಪ್ರಾರಂಭಿಸಲಾಯಿತು. 2018ರಲ್ಲಿ, ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವನ್ನು ಒಟ್ಟುಗೂಡಿಸಿ ಸಮಗ್ರ ಶಿಕ್ಷಾ ಅಭಿಯಾನ ಯೋಜನೆಯನ್ನು ರೂಪಿಸಲಾಯಿತು.

ಹಲವು ವಿಶೇಷ ಮತ್ತು ಪ್ರಮುಖ ಉದ್ದೇಶಗಳನ್ನು ಇಟ್ಟುಕೊಂಡು ಈ ಯೋಜನೆಗೆ ಅಡಿಪಾಯ ಹಾಕಿದ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಕೇವಲ ಕಾಟಾಚಾರಕ್ಕೆ ಯೋಜನೆ ಘೋಷಿಸಿ ಸುಮ್ಮನಾಗಲಿಲ್ಲ. ಇದನ್ನು ಸಮಗ್ರ ರಾಷ್ಟ್ರೀಯ ಯೋಜನೆಯಾಗಿ ದೇಶದ ಎಲ್ಲ ರಾಜ್ಯಗಳಲ್ಲೂ ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶಗಳಲ್ಲೂ ಕಡ್ಡಾಯವಾಗಿ ಜಾರಿಯಾಗುವಂತೆ ನೋಡಿಕೊಂಡರು. ಈ ಮೂಲಕ ಸರ್ವಶಿಕ್ಷಾ ಅಭಿಯಾನದ ಆದ್ಯ ಪ್ರವರ್ತಕರಾಗಿ, ಒಂದಿಡೀ ತಲೆಮಾರನ್ನು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಮೂಲಕ ಇಂದಿಗೂ ನಮ್ಮ ನಡುವೆ ಧೀಮಂತ ನಾಯಕರಾಗಿ ಉಳಿದಿದ್ದಾರೆ.

ಸರ್ವಶಿಕ್ಷಾ ಅಭಿಯಾನವು ಭಾರತದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ದಾರಿ ಮಾಡಿಕೊಟ್ಟ ಮಹತ್ವದ ಯೋಜನೆಯಾಗಿದೆ. ಇದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಮಾತ್ರವಲ್ಲ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಸಬಲೀಕರಣಕ್ಕೂ ಸಹಕಾರಿಯಾಗಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಒಂದು ನಿರ್ದಿಷ್ಟ ಸಮಯದೊಳಗೆ ಅನುಷ್ಠಾನಗೊಳಿಸಲು ಪ್ರಾರಂಭಿಸಲಾಯಿತು. ದೇಶಾದ್ಯಂತ ಗುಣಮಟ್ಟದ ಮೂಲಭೂತ ಶಿಕ್ಷಣವನ್ನು ಒದಗಿಸಲು ಸರ್ವ ಶಿಕ್ಷಾ ಅಭಿಯಾನ ಯೋಜನೆಯ ಮೂಲಕ ಆದ್ಯತೆ ನೀಡಲಾಯಿತು. ಒಂದು ದೂರದೃಷ್ಟಿಯನ್ನು ಒಳಗೊಂಡು ಆರಂಭವಾದ ಈ ಯೋಜನೆಯು ಇಂದಿಗೆ 25 ವರ್ಷಗಳನ್ನು ಪೂರೈಸುತ್ತಿದೆ. ಸರಕಾರದ ನೂರಾರು ಯೋಜನೆಗಳಲ್ಲಿ ಇಂದಿಗೂ, ಈ ಯೋಜನೆಗೆ ಇರುವ ಒಂದು ಗೌರವ, ಜಾರಿಗೆ ತರುವಲ್ಲಿನ ಮುತುವರ್ಜಿಯು ಸರ್ವಶಿಕ್ಷಾ ಅಭಿಯಾನವನ್ನು ಪ್ರತ್ಯೇಕ ಸ್ಥಾನದಲ್ಲಿರುವಂತೆ ಮಾಡಿದೆ ಎನ್ನಬಹುದು.

ಇದರಲ್ಲಿ 6–14 ವರ್ಷದ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಖಚಿತಪಡಿಸುವುದು. ವಿದ್ಯಾಲಯಗಳಿಗೆ ಉತ್ತಮ ಮೂಲಸೌಕರ್ಯಗಳಾದ ಕ್ಲಾಸ್ ರೂಮ್, ಶೌಚಾಲಯ, ಕುಡಿಯುವ ನೀರಿನ ಸೌಕರ್ಯ ಇತ್ಯಾದಿ ವ್ಯವಸ್ಥೆಗಳನ್ನು ಒದಗಿಸುವುದು, ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಿಸುವುದಲ್ಲದೆ ಮಕ್ಕಳು ಮರಳಿ ಶಾಲೆಗೆ ಪ್ರವೇಶ ಹೊಂದಲು ಸಹಕಾರಿಯಾಗುವಂತೆ ಮತ್ತು ಶಾಲೆಯಿಂದ ಹೊರಗೆ ಉಳಿಯದಂತೆ ನೋಡಿಕೊಳ್ಳುವುದು ಸಹ ಸಾಧ್ಯವಾಯಿತು.

ಲಿಂಗ, ಜಾತಿ, ವರ್ಣಾಧಾರಿತ ಭೇದವಿಲ್ಲದೆ ಹಾಗೂ ವಿಶೇಷ ಅಗತ್ಯವಿರುವ ದಿವ್ಯಾಂಗ ಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ಸೌಲಭ್ಯಗಳನ್ನು ನೀಡುವಂತೆ ಈ ಯೋಜನೆ ಒಳಗೊಂಡಿದೆ. ಅವುಗಳಲ್ಲಿ, ಗ್ರಾಮ ಪಂಚಾಯತ್, ಬ್ಲಾಕ್–ಜಿಲ್ಲೆ ಮಟ್ಟದಲ್ಲಿ ಯೋಜನೆ ಜಾರಿಗೆ ಸ್ಥಳೀಯ ಸಂಸ್ಥೆಗಳ ಪಾಲ್ಗೊಳ್ಳುವಿಕೆ, ಶಿಕ್ಷಕರ ನೇಮಕಾತಿ ಮತ್ತು ತರಬೇತಿ, ಮಕ್ಕಳ ಶೈಕ್ಷಣಿಕ ಕ್ಷಮತೆಯ ಪರೀಕ್ಷೆ, ಬಾಲಕರಿಗೆ ಹಾಗೂ ಬಾಲಕಿಯರಿಗೆ ಸಮಾನ ಅವಕಾಶ, ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ), ಶಿಕ್ಷಣದಲ್ಲಿ ಮಾಹಿತಿಯ ತಂತ್ರಜ್ಞಾನ (ಐಸಿಟಿ) ಬಳಕೆ ಸೇರಿದಂತೆ ಹತ್ತಾರು ಪ್ರಮುಖ ಉದ್ದೇಶಗಳನ್ನು ವ್ಯವಸ್ಥಿತವಾಗಿ ಅಳವಡಿಸಿಕೊಂಡು ಜಾರಿಗೆ ತರಲಾಯಿತು.

ಭಾರತದಂತಹ ವಿಶಾಲ ಮತ್ತು ವಿಭಿನ್ನ ಭೌಗೋಳಿಕ ಪರಿಸ್ಥಿತಿ ಹೊಂದಿರುವ ದೇಶದಲ್ಲಿ ಒಂದು ಯೋಜನೆಯು ಎಲ್ಲ ಗ್ರಾಮೀಣ ಭಾಗಗಳನ್ನು ತಲುಪುವಂತೆ ನೋಡಿಕೊಳ್ಳುವುದು ಸಾಮಾನ್ಯದ ಮಾತಲ್ಲ. ಆದರೆ, ಈ ಯೋಜನೆ ಎಲ್ಲ ಅಡೆತಡೆಗಳನ್ನು ದಾಟಿ, ಅಂದುಕೊಂಡಂತೆ ತನ್ನ ಗೆಲುವು ಸಾಧಿಸುವಲ್ಲಿ ಇಂದಿಗೂ ನಿರಂತರ ಜಾರಿಯಲ್ಲಿದೆ ಎನ್ನಬಹುದು. ಇದರ ಭಾಗವಾಗಿ, ವಿದ್ಯಾರ್ಥಿಗಳ ಶಾಲೆಗೆ ಸೇರುವ ಪ್ರಮಾಣದಲ್ಲಿ ಗಣನೀಯ ಏರಿಕೆಯಾಯಿತು, ಶಾಲೆಯಿಂದ ಮಕ್ಕಳು ಹೊರಗುಳಿಯುವ ಪ್ರಮಾಣದಲ್ಲಿ ಇಳಿಕೆಯಾಯಿತು. ಮೂಲಸೌಕರ್ಯ ಕಲ್ಪಿಸಿದ್ದರಿಂದ, ಯುವತಿಯರ ಶಾಲಾ ದಾಖಲೆ ಪ್ರಮಾಣದಲ್ಲಿ ಹೆಚ್ಚಳವಾಯಿತು. ಮತ್ತು ಸೌಲಭ್ಯವಿಲ್ಲದ ಗ್ರಾಮಗಳಲ್ಲಿ ಹೊಸ ಶಾಲೆಗಳ ಆರಂಭಕ್ಕಾಗಿ ಶೀಘ್ರ ಕ್ರಮಕೈಗೊಳ್ಳಲಾಯಿತು.

ಜನರ ಸಹಭಾಗಿತ್ವ ಹೊಂದಿದ ಅಪರೂಪದ ಯೋಜನೆಯಾಗಿ ಹೊಮ್ಮಿದ್ದರಿಂದ, 2018ರಿಂದ ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವನ್ನು ಮತ್ತು ಶಿಕ್ಷಕರ ಶಿಕ್ಷಣ ಯೋಜನೆಗಳನ್ನು ಒಂದೇ ಯೋಜನೆಯ ಅಡಿಯಲ್ಲಿ ಸಮಗ್ರ ಶಿಕ್ಷಣ ಅಭಿಯಾನ ಹೆಸರಿನಲ್ಲಿ ವಿಲೀನಗೊಳಿಸಿ ಜಾರಿಗೊಳಿಸಲಾಗಿದೆ. ಅನುಚ್ಛೇದ 21ಎ (86ನೇ ತಿದ್ದುಪಡಿ)ನಲ್ಲಿರುವಂತೆ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಮತ್ತು ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ ಕಾಯಿದೆ 2009) ರ ಅಡಿಯಲ್ಲಿ 2018ರಿಂದ ಸರ್ವ ಶಿಕ್ಷಾ ಅಭಿಯಾನ ಯೋಜನೆ ಕಾನೂನುಬದ್ಧತೆ ಹೊಂದಿವೆ.

ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ, ಆಧುನಿಕ ಪಠ್ಯಕ್ರಮ ಅಳವಡಿಸಿಕೊಳ್ಳುವುದರ ಜೊತೆಗೆ, ತರಬೇತಿ ಪಡೆದ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನು ನೇಮಿಸುವುದು, ಲಿಂಗ ತಾರತಮ್ಯ ಹೋಗಲಾಡಿಸಲು, ಬಾಲಕಿಯರಿಗಾಗಿ ಕಸ್ತೂರಿಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಂತಹ ವಿಶೇಷ ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಶಾಲಾ ಅಭಿವೃದ್ಧಿ ಸಮಿತಿಗಳು (ಎಸ್‌ಡಿಎಂಸಿ), ಗ್ರಾಮಸ್ಥರ, ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಬೆಂಬಲಿಸುವುದು ಸಹ ಇದರ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. ಕೇವಲ ಯೋಜನೆಯನ್ನು ಅನುಷ್ಠಾನಗೊಳಿಸುವತ್ತ ಗಮನಹರಿಸದೆ, ಇದಕ್ಕೆ ಸಂಬಂಧಿಸಿದ ಕಟ್ಟಡ, ಶಾಲೆಗಳ ಅಭಿವೃದ್ಧಿ, ಹೊಸ ಶಾಲೆಗಳ ನಿರ್ಮಾಣ ಸೇರಿದಂತೆ ಶಿಕ್ಷಣಕ್ಕೆ ಪೂರಕವಾಗಿ ಸಹಾಯವಾಗುವಂತಹ ಶಾಲಾ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲು ಇದರಲ್ಲಿ ಅವಕಾಶವಿದೆ. ಕನಿಷ್ಠ ಒಬ್ಬ ಶಿಕ್ಷಕರನ್ನು ಪ್ರತಿಯೊಂದು ಪ್ರಾಥಮಿಕ ಶಾಲೆಗೆ ಕಡ್ಡಾಯವಾಗಿರುವಂತೆ ನೋಡಿಕೊಳ್ಳುವುದಲ್ಲದೆ, ನಿಯಮಿತವಾಗಿ ಶಿಕ್ಷಕರ ತರಬೇತಿ ಶಿಬಿರಗಳು, ಶಾಲೆ ಬಿಟ್ಟ ಮಕ್ಕಳು ಶಾಲೆಗೆ ಸೇರುವವರೆಗೂ ವಿಶೇಷ ತರಬೇತಿ ಕೇಂದ್ರಗಳು, ಮಕ್ಕಳಿಗೆ ಸೂಕ್ತ ಆಹಾರ ಒದಗಿಸಿ ಪ್ರವೇಶ ಹೆಚ್ಚಿಸುವ ಉದ್ದೇಶದ ಬಿಸಿಯೂಟ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವುದು ಈ ಯೋಜನೆಯ ಒಂದು ವಿಶಿಷ್ಟತೆಯಾಗಿದೆ.

ಇಷ್ಟೆಲ್ಲ ಸಮಗ್ರ ವಿಚಾರಗಳನ್ನೊಳಗೊಂಡ ಈ ಒಂದು ರಾಷ್ಟ್ರೀಯ ಯೋಜನೆಗೆ ಸಿಕ್ಕ ಯಶಸ್ಸನ್ನು ಗಮನಿಸಿದಾಗ, ಮಕ್ಕಳ ಶಾಲಾ ಪ್ರವೇಶ ದರವು 95% ಕ್ಕಿಂತ ಹೆಚ್ಚಿದ್ದು, ಇದೊಂದು ಸಾಧನೆ ಎಂದೇ ಹೇಳಬಹುದು. ವಿವಿಧ ಕಾರಣಗಳ ನೆಪವೊಡ್ಡಿ, ಶಾಲೆಗಳಿಂದ ದೂರ ಉಳಿದಿದ್ದ ಮಕ್ಕಳ ಶೇಕಡಾವಾರು ಸಂಖ್ಯೆ 10ಕ್ಕಿಂತ ಕಡಿಮೆ ಮಟ್ಟಕ್ಕೆ ತಲುಪಿದೆ. ರಾಜ್ಯದ ಬಹುತೇಕ ಶೇ.90ಕ್ಕಿಂತ ಹೆಚ್ಚು ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಸೂಕ್ತ ತರಬೇತಿ ಹೊಂದಿರುವ ಲಕ್ಷಾಂತರ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಇಂತಹ ಒಂದು ವಿಶಿಷ್ಟ ಯೋಜನೆಯನ್ನು ದೇಶದ ಸಮುದಾಯ ಮತ್ತು ಮಕ್ಕಳು ಸ್ಪಂದಿಸಿದ ರೀತಿಗೆ, ಸರ್ಕಾರವು ಮತ್ತಷ್ಟು ಪ್ರೇರಿತಗೊಂಡು ಇಂದಿನ ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನೂ ಒಳಗೊಂಡಂತೆ, 2018ರಿಂದ ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಮತ್ತು ಶಿಕ್ಷಕರ ಶಿಕ್ಷಣ ಯೋಜನೆಗಳನ್ನು ಸಮಗ್ರ ಶಿಕ್ಷಾ ಎಂಬ ಹೊಸ ಯೋಜನೆಯಡಿ ವಿಲೀನಗೊಳಿಸಲಾಗಿದೆ.

ಸಮಗ್ರ ಶಿಕ್ಷಾ ಯೋಜನೆಯಲ್ಲಿ, ಶಿಶು ವಿಹಾರದಿಂದ ಹತ್ತನೇ ತರಗತಿ ತನಕ ಸಮಗ್ರ ಶಿಕ್ಷಣ, ಡಿಜಿಟಲ್ ಶಿಕ್ಷಣ, ಖಖಉಖ, ಲೈಬ್ರರಿ, ಮಾಹಿತಿ ತಂತ್ರಜ್ಞಾನ ಬಳಕೆ ಜೊತೆಗೆ ಮಕ್ಕಳ ತಾತ್ವಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಲು ಯೋಜಿಸಲಾಗಿದೆ. ಈ ಮೂಲಕ ಕರ್ನಾಟಕದಲ್ಲಿ, ರಾಜ್ಯದ ಎಲ್ಲ ತಾಲೂಕುಗಳಲ್ಲಿ ಕಾರ್ಯ ನಿರ್ವಹಣೆ, ಎಸ್‌ಡಿಎಂಸಿಗಳ ಮೂಲಕ ನಿರ್ವಹಣೆ, ಮೊಬೈಲ್ ಶಾಲೆಗಳು, ಹಳ್ಳಿ ಶಾಲೆಗಳ ಸಕ್ರಿಯಗೊಳಿಕೆ, ನಲಿ–ಕಲಿ ಪದ್ಧತಿಯಂತಹ ಶಿಕ್ಷಣ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಸರ್ವಶಿಕ್ಷಾ ಅಭಿಯಾನ ಮತ್ತು ಸಮಗ್ರ ಶಿಕ್ಷಣ ಯೋಜನೆಗಳನ್ನು ಜಿಲ್ಲಾವಾರು ವಿಂಗಡಿಸಿ ಜಾರಿಗೊಳಿಸಲಾಗಿದ್ದು, ಶಾಲಾ ಮೂಲಸೌಕರ್ಯ, ಶಿಕ್ಷಕರ ನೇಮಕಾತಿ, ವಿದ್ಯಾರ್ಥಿಗಳ ದಾಖಲಾತಿ, ಬಜೆಟ್ ವಿನಿಯೋಗ ಮತ್ತು ವಿವಿಧ ಶೈಕ್ಷಣಿಕ ಸಾಧನೆಗಳನ್ನು ಒಳಗೊಂಡಿವೆ. ಸರ್ವ ಶಿಕ್ಷಾ ಅಭಿಯಾನ ಯೋಜನೆಯಡಿಯಲ್ಲಿ ಮತ್ತೊಂದು ಉಪಕ್ರಮವಾಗಿ, 2014ರಲ್ಲಿ 'ಪಡೇ ಭಾರತ್ ಬಡೇ ಭಾರತ್' ಕಾರ್ಯಕ್ರಮವನ್ನು ಪ್ರಾರಂಭಿಸಿತು. ಪಡೇ ಭಾರತ್ ಬಡೇ ಭಾರತ್ ಕಾರ್ಯಕ್ರಮವು ಒಂದನೇ ಮತ್ತು ಎರಡನೆಯ ತರಗತಿಯಲ್ಲಿರುವ ಮಕ್ಕಳ ಓದುವ ಮತ್ತು ಬರೆಯುವ ಕೌಶಲ್ಯದ ಜೊತೆಗೆ, ಅವರ ಗಣಿತ ಕೌಶಲ್ಯಗಳನ್ನು ಸುಧಾರಿಸಲು ಈ ಕಾರ್ಯಕ್ರಮವನ್ನು ರೂಪಿಸಲಾಯಿತು. ಪ್ರಾಯೋಗಿಕ ಶಿಕ್ಷಣದ ಜೊತೆಗೆ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದಾಗಿ, ಮಕ್ಕಳಲ್ಲಿ ಅತ್ಯುತ್ತಮ ಬರಹಗಾರರು ಮತ್ತು ಓದುಗರನ್ನು ಸೃಷ್ಟಿಸಲು ಸಹಾಯ ಮಾಡುವ ಮಹತ್ವವನ್ನು ಒತ್ತಿಹೇಳುತ್ತದೆ.

ಮಕ್ಕಳಿಗೆ ಸೂಕ್ಷ್ಮಗ್ರಹಿಕೆಯೊಂದಿಗೆ ಬರೆಯುವ ಮತ್ತು ಓದುವ ಆಸಕ್ತಿಯನ್ನು ಹುಟ್ಟುಹಾಕುವ ಮೂಲಕ ಮಕ್ಕಳ ಭಾಷಾ ಬೆಳವಣಿಗೆಯನ್ನು ಸುಧಾರಿಸಲು, ಮತ್ತು ಸಾಮಾಜಿಕ, ಭೌತಿಕ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರದಲ್ಲಿ ತಮ್ಮನ್ನು ತಾವು ಸಮಗ್ರವಾಗಿ ಗುರುತಿಸಿಕೊಳ್ಳುವುದು ಮುಖ್ಯ. ಜೀವನದಲ್ಲಿ ಬರುವ ಅಡೆತಡೆಗಳನ್ನು ಎದುರಿಸಿ, ಪ್ರಜ್ಞಾವಂತ ನಾಗರಿಕನಾಗಿ ತನ್ನತನವನ್ನು ರೂಪಿಸಿಕೊಳ್ಳಲು ಆಸರೆಯಾಗಿ ನಿಲ್ಲುವ ಆಲದ ಮರದಂತಾಗಿರುತ್ತದೆ ಶಿಕ್ಷಣ. ಶಿಕ್ಷಣವೇ ಶಕ್ತಿ ಎಂಬ ಮಾತು ಸುಮ್ಮನೇ ಹೇಳಿದ್ದಲ್ಲ ಎಂಬುದಕ್ಕೆ ನಮ್ಮ ನಡುವೆ ಬೆಳೆದ ಮಹಾಪುರುಷರೇ ಸಾಕ್ಷಿ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:128

ಸಮಾಚಾರ ಸಣ್ಣದಲ್ಲ

ದ.ಭಾರತದ 3 ರಾಜ್ಯಗಳಲ್ಲಿ ಮಳೆ

ಚೆನ್ನೈ: ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಭಾರೀ ಮಳೆಯಾಗುತ್ತಿದೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಈವರೆಗೆ ಮಳೆ ಸಂಬಂಧಿತ ದುರ್ಘಟನೆಗಳಲ್ಲಿ ಒಟ್ಟು 8 ಮಂದಿ ಮೃತಪಟ್ಟಿದ್ದಾರೆ. ಹೊಸೂರು ಎಡಬ್ಲ್ಯುಎಸ್‌ನಲ್ಲಿ 12 ಸೆಂ.ಮೀ, ಕೃಷ್ಣಗಿರಿ, ರಾಣಿಪೇಟೆ, ಧರ್ಮಪುರಿ, ಸೇಲಂ ಜಿಲ್ಲೆಗಳಲ್ಲಿ 6 ಸೆಂ.ಮೀ. ಮತ್ತು ಕೊಯಮತ್ತೂರು, ವೆಲ್ಲೂರು, ನೀಲಗಿರಿಯ ಕೆಲವೆಡೆ 5 ಸೆಂ.ಮೀ. ಮಳೆಯಾಗಿದೆ. ಚೆನ್ನೈ ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲಿ ಮಂಗಳವಾರ ಸಂಜೆ ಬಳಿಕ ಭಾರೀ ಮಳೆಯಾಗಿದೆ. ಕೇರಳದ ಉತ್ತರ ಭಾಗದ ಹಲವು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದೆ. ಕುನ್ನಂಕುಲಂ(ತ್ರಿಶೂರ್), ಕಣ್ಣೂರು, ಮಲಪ್ಪುರಂ, ಕೋಝಿಕ್ಕೋಡ್ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ 15 ಸೆಂ. ಮೀ. ಮಳೆ ದಾಖಲಾಗಿದೆ. ಕಾಸರಗೋಡು, ಕಣ್ಣೂರು, ವಯನಾಡ್ ಮತ್ತು ಕೋಝಿಕ್ಕೋಡ್ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಮುಂದಿನ 7 ದಿನ ಗುಡುಗು-ಮಿಂಚು-ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ವಾಡಿಕೆಯಂತೆ ನೈಋತ್ಯ ಮುಂಗಾರು ಜೂನ್ ಮೊದಲ ವಾರ ಆಗಮಿಸುತ್ತದೆ. ಆದರೆ, ಅದಕ್ಕೂ 2 ವಾರ ಮೊದಲೇ ದಕ್ಷಿಣ ಭಾರತದ ರಾಜ್ಯಗಳಲ್ಲಿ ವರ್ಷಧಾರೆಯಾಗುತ್ತಿದೆ.

ಕೇಂದ್ರ ವಿರುದ್ಧ ಸುಪ್ರೀಂ ಮೊರೆ ಹೋದ ತ.ನಾ.

ದೆಹಲಿ: ಶಾಲಾ ಹಂತದ ಶಿಕ್ಷಣ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರಕಾರ ಪ್ರಾಯೋಜಿತ ಸಮಗ್ರ ಶಿಕ್ಷಾ(ಎಸ್ ಎಸ್) ಯೋಜನೆಯಡಿ ರಾಜ್ಯದೊಂದಿಗೆ ಹಂಚಿಕೊಳ್ಳಬೇಕಾದ 2,291 ಕೋಟಿ ರು.ಗಳ ನಿಧಿಯನ್ನು ಕೇಂದ್ರ ಸರಕಾರ ತಡೆ ಹಿಡಿದಿರುವುದು ಸರಿಯಾದ ಕ್ರಮವಲ್ಲ ಎಂದು ತಮಿಳುನಾಡು ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದೆ. ತ್ರಿಭಾಷಾ ಸೂತ್ರ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)-2020ರ ನಿಬಂಧನೆಗಳನ್ನು ಒಳಗೊಂಡ ಪಿಎಂಶ್ರೀ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ತಮಿಳುನಾಡು ಸರಕಾರ ನಿರಾಕರಿಸಿದ ನಂತರ ಕೇಂದ್ರ ಸರಕಾರ, ನಿಧಿ ವಿತರಣೆಯನ್ನು ತಡೆಹಿಡಿದಿದೆ ಎಂದು ಆರೋಪಿಸಲಾಗಿದೆ. ನ್ಯಾಯಾಲಯ ನಿಗದಿಪಡಿಸಿದ ಸಮಯದೊಳಗೆ 2,291.30 ಕೋಟಿ ರು.ಗಳನ್ನು ಬಿಡುಗಡೆ ಮಾಡಬೇಕು ಎಂದು ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡುವಂತೆಯೂ ರಾಜ್ಯ ಸರಕಾರ ಅರ್ಜಿಯಲ್ಲಿ ಮನವಿ ಮಾಡಿದೆ.

ದೇಶಾದ್ಯಂತ 260 ಕರೋನಾ ಪ್ರಕರಣ

ಮುಂಬೈ: ಮಹಾರಾಷ್ಟ್ರ ರಾಜಧಾನಿ ಮುಂಬೈ ನಗರದಲ್ಲಿ ಕೋವಿಡ್-19 ಸೋಂಕಿನಿಂದ ಬಾಲಕ ಸೇರಿದಂತೆ ಇಬ್ಬರು ಮೃತಪಟ್ಟಿದ್ದಾರೆ. ಕರೋನಾ ಸೋಂಕಿನ



ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಕೇವಲ ಕರೋನಾ ವೈರಸ್‌ನಿಂದಲೇ ಸಾವು ಸಂಭವಿಸಿಲ್ಲ. ಮೃತಪಟ್ಟ ಇಬ್ಬರಿಗೂ ಬೇರೆ ಬೇರೆ ಗಂಭೀರ ಆರೋಗ್ಯ ಸಮಸ್ಯೆಗಳೂ ಇದ್ದವು ಎಂದು ಮುಂಬೈನ ಕೆಇಎಂ ಆಸ್ಪತ್ರೆ ವೈದ್ಯರು ಹೇಳಿದ್ದಾರೆ. ಸದ್ಯ ಹಾವಳಿ ನಡೆಸಿರುವ ಕರೋನಾ ವೈರಾಣುವಿನಿಂದ ಯಾವುದೇ ರೀತಿಯ ಗಂಭೀರವಾದ ಗುಣಲಕ್ಷಣಗಳು ಕಾಣಿಸಿಕೊಂಡಿಲ್ಲ. ಹೀಗಾಗಿ ಆತಂಕದ ಸ್ಥಿತಿ ನಿರ್ಮಾಣವಾಗಿಲ್ಲ. ಆದರೆ ನಿರ್ಲಕ್ಷ್ಯ ಬೇಡ ಎಂದು ಆರೋಗ್ಯ ಇಲಾಖೆ ತಿಳಿಸಿದ್ದು, ಎಲ್ಲ ಕಡೆ ಸಂದೇಶ ರವಾನಿಸಿದ್ದು, ಕಟ್ಟೆಚ್ಚರ ವಹಿಸಿದೆ. ಹಾಂಕಾಂಗ್ ಮತ್ತು ಸಿಂಗಾಪುರ ನಂತರ ಭಾರತದಲ್ಲೂ ಕೋವಿಡ್-19ರ ಪಾಸಿಟಿವ್ ಪ್ರಕರಣಗಳ ಸಂಖ್ಯೆ ಹೆಚ್ಚಲಾರಂಭಿಸಿದೆ. ಕರ್ನಾಟದಲ್ಲಿಯೂ 16 ಪ್ರಕರಣ ಪತ್ತೆಯಾಗಿವೆ. ದೇಶಾದ್ಯಂತ ಬುಧವಾರದ ವೇಳೆಗೆ ಒಟ್ಟು 260 ಕೋವಿಡ್-19 ಪಾಸಿಟಿವ್ ಪ್ರಕರಣಗಳಿವೆ. ಕೇರಳದಲ್ಲಿ 69, ಮಹಾರಾಷ್ಟ್ರ 44, ತಮಿಳುನಾಡು 34, ಪುದುಚೇರಿಯಲ್ಲಿ 12, ಗುಜರಾತ್, ದೆಹಲಿ, ಹರಿಯಾಣ, ರಾಜಸ್ಥಾನ, ಸಿಕ್ಕಿಂನಲ್ಲಿಯೂ ಕೋವಿಡ್-19 ಪಾಸಿಟಿವ್ ಕೇಸ್‌ಗಳು ಪತ್ತೆಯಾಗಿವೆ.

ಪಾಕ್ ಹೈಕಮಿಷನ್ ಸಿಬ್ಬಂದಿ ಉಚ್ಚಾಟನೆ

ಪಾಕಿಸ್ತಾನ: ಹೈಕಮಿಷನ್‌ನ ದೆಹಲಿ ಕಚೇರಿಯಲ್ಲಿರುವ ಅಧಿಕಾರಿಯೊಬ್ಬರು ತಮ್ಮ ಸ್ಥಾನಮಾನಕ್ಕೆ ಹೊಂದಿಕೆಯಾಗದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಕಿಡಿಕಾರಿರುವ ಭಾರತ ಸರಕಾರ, ಆ ಅಧಿಕಾರಿಯನ್ನು 'ಪರ್ಸನಾ ನಾನ್ ಗ್ರಾಟಾ' ಎಂದು ಘೋಷಿಸಿದೆ. ಆ ಅಧಿಕಾರಿಯನ್ನು ದೇಶದಿಂದ ಹೊರಹಾಕಿದೆ. ಉಚ್ಚಾಟಿತ ಅಧಿಕಾರಿ 24 ಗಂಟೆಗಳೊಳಗೆ ಭಾರತ ತೊರೆಯಬೇಕು ಎಂದು ಸೂಚನೆ ನೀಡಲಾಗಿದೆ. ಈ ಕುರಿತು ಪಾಕ್ ಹೈಕಮಿಷನ್‌ಗೆ ಬುಧವಾರ ಆದೇಶ ತಲುಪಿಸಿದೆ. ಪಾಕ್ ಪರ ಬೇಹುಗಾರಿಕೆ ನಡೆಸುತ್ತಿದ ಆರೋಪದಡಿ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಮತ್ತು ಇತರೆ 11 ಮಂದಿಯ ಬಂಧನವಾದ ನಂತರ ಪಾಕ್ ಹೈಕಮಿಷನ್ ಅಧಿಕಾರಿಯ ಉಚ್ಚಾಟನೆ ಆಗಿರುವುದು ಉಲ್ಲೇಖಾರ್ಹ.

{ಜೈರಾಮ್ ರಮೇಶ್} ಕಾಂಗ್ರೆಸ್ ಸಂಸದ

ಪ್ರಧಾನಿ ನರೇಂದ್ರ ಮೋದಿ ತಮ್ಮ ನಾಯಕತ್ವದ ಬಗ್ಗೆ ಜನರಲ್ಲಿ ಮೂಡಿರುವ ಹತಾಶೆ ಹಾಗೂ ಪಾಕಿಸ್ತಾನ ವಿರುದ್ಧದ ಸೇನಾ ಕಾರ್ಯಾಚರಣೆ ಕುರಿತು ಹೆಚ್ಚುತ್ತಿರುವ ಗಂಭೀರ ಪ್ರಶ್ನೆಗಳು, ಟೀಕೆಗಳನ್ನು ತಪ್ಪಿಸಿಕೊಳ್ಳಲು ಹಾಗೂ ದೇಶದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ವಿವಿಧ ದೇಶಗಳಿಗೆ ಸರ್ವಪಕ್ಷಗಳ ನಿಯೋಗ ಕಳುಹಿಸುತ್ತಿದ್ದಾರೆ.



ಕೇಂದ್ರ ಸೂಚನೆಯಂತೆ ರಾಜ್ಯಗಳಲ್ಲಿ ಎಸ್‌ಟಿಎಫ್ | ರಾಜಸ್ಥಾನ 1008, ಮಹಾರಾಷ್ಟ್ರ 766 ಸೆರೆ

ಬಾಂಗ್ಲಾ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ

ದೆಹಲಿ: ಮಹಾರಾಷ್ಟ್ರ, ಒಡಿಶಾ ಸೇರಿದಂತೆ ಹಲವು ರಾಜ್ಯಗಳು ತಮ್ಮ ನೆಲದಲ್ಲಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ ಆರಂಭಿಸಿವೆ. ಕೇಂದ್ರ ಗೃಹ ಸಚಿವಾಲಯ ಇತ್ತೀಚೆಗೆ ಹೊರಡಿಸಿದ ಸುತ್ತೋಲೆ ಮೇರೆಗೆ ಹಲವು ರಾಜ್ಯಗಳಲ್ಲಿ 'ವಿಶೇಷ ಕಾರ್ಯಾಚರಣೆ ಪಡೆ'(ಎಸ್‌ಟಿಎಫ್) ರಚನೆ ಮಾಡಲಾಗಿದೆ.

ಒಡಿಶಾ ರಾಜ್ಯದ ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ಅವರು ಸುದ್ದಿಸಂಸ್ಥೆ ಜತೆ ಮಾತನಾಡಿ, ಕೇಂದ್ರ ಗೃಹ ಸಚಿವಾಲಯದ ಸೂಚನೆ ಮೇರೆಗೆ ರಾಜ್ಯದಲ್ಲಿರುವ ಅಕ್ರಮ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚುವ ಕಾರ್ಯ ಆರಂಭಿಸಲಾಗಿದೆ. ಅದಕ್ಕಾಗಿ ಪೊಲೀಸ್ ಮಹಾ ನಿರ್ದೇಶಕ ಪಿನಾಕ್ ಮಿಶ್ರಾ ನೇತೃತ್ವದಲ್ಲಿ 'ವಿಶೇಷ ಕಾರ್ಯಾಚರಣೆ ಪಡೆ'(ಎಸ್ ಟಿಎಫ್) ರಚಿಸಲಾಗಿದೆ ಎಂದು ಹೇಳಿದ್ದಾರೆ.

ಬಾಂಗ್ಲಾದೇಶಿ ವಲಸಿಗರ ದಾಖಲೆ ಪತ್ರಗಳನ್ನು ಪರಿಶೀಲಿಸಿ ಅವರು ಅಕ್ರಮ ವಲಸಿಗರೇ ಅಥವಾ ಕಾನೂನು ಪ್ರಕಾರವೇ(ವೀಸಾ ಸಮೇತ) ಭಾರತ ಪ್ರವೇಶಿಸಿದವರೇ ಎಂಬುದನ್ನು ಕಂಡುಕೊಂಡು ವರದಿ ಸಿದ್ಧಪಡಿಸುವಂತೆ ಹಾಗೂ ಅಕ್ರಮ ವಲಸಿಗರಾಗಿದ್ದರೆ ಗಡಿಪಾರು ಪ್ರಕ್ರಿಯೆಯನ್ನು ಕಾನೂನು ಪ್ರಕಾರ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನೂ ನೀಡಲಾಗಿದೆ. ಕರಾವಳಿ ಭದ್ರತಾ ಪಡೆಗೂ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು.

ಅಕ್ರಮ ವಲಸಿಗರ ವಿರುದ್ಧ ಭಾರತ ಸರಕಾರ ಈ ಬಾರಿ ಕಠಿಣ ನಿಲುವು ತಳೆದಿದೆ. ಒಡಿಶಾ ಸರಕಾರವೂ ರಾಜ್ಯದಲ್ಲಿನ ಅಕ್ರಮ ವಲಸಿಗರ ವಿರುದ್ಧ ಕಟ್ಟುನಿಟ್ಟು ಕ್ರಮಕ್ಕೆ ಮುಂದಾಗಿದೆ. ಸಮರ್ಪಕ ದಾಖಲೆಪತ್ರಗಳಿಲ್ಲದ ಒಬ್ಬ ವಿದೇಶಿ ವ್ಯಕ್ತಿಯೂ ರಾಜ್ಯದಲ್ಲಿ ಇರಲು ಬಿಡುವುದಿಲ್ಲ. ಈಗಾಗಲೇ ಅಕ್ರಮ ವಲಸಿಗರ ಗುರುತು

ಪತ್ತೆ ಕಾರ್ಯ ಶುರುವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವಿದೇಶಿಗರ ತಪಾಸಣೆ, ದಾಖಲೆ ಪತ್ರಗಳ ಪರಿಶೀಲನೆ ನಡೆದಿದೆ ಎಂದು ಸಚಿವ ಹರಿಚಂದನ್ ವಿವರಿಸಿದರು. ಬಾಂಗ್ಲಾ ಅಕ್ರಮ ವಲಸಿಗರ ವಿರುದ್ಧ ಭಾರತದಲ್ಲೀಗ 'ಪುಷ್ ಬ್ಯಾಕ್' ಕಾರ್ಯತಂತ್ರ ಜಾರಿಯಲ್ಲಿದೆ. ರೊಹಿಂಗ್ಯಾಗಳನ್ನೂ ಹೊರದೂಡಲಾಗುತ್ತಿದೆ. ಗೋಲ್‌ಪಾರಾದಲ್ಲಿನ ಮತಿಯಾ ಬಂಧನ ಕೇಂದ್ರದಲ್ಲಿದ್ದವ ರನ್ನೂ ಅವರ ದೇಶಕ್ಕೆ ವಾಪಸ್ ಕಳುಹಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ಗುಜರಾತ್‌ನ ಅಹಮದಾಬಾದ್ ಮತ್ತು ಸೂರತ್ ನಗರಗಳಲ್ಲಿದ್ದ 1014 ಅಕ್ರಮ ಬಾಂಗ್ಲಾ ವಲಸಿಗರನ್ನು ಏ.26ರಂದು ಪತ್ತೆ ಹಚ್ಚಿ ಬಂಧಿಸಲಾಗಿದ್ದು, ಎಲ್ಲರನ್ನೂ ಸದ್ಯ ಸೆರೆಮನೆಯಲ್ಲಿಡಲಾಗಿದೆ. ಸದ್ಯದಲ್ಲೇ ಗಡಿಪಾರು ಪ್ರಕ್ರಿಯೆ ಜರುಗಲಿದೆ.

ರಾಜಸ್ಥಾನ: 1008 ಬಂಧನ

ರಾಜಸ್ಥಾನದಲ್ಲಿರುವ ಅಕ್ರಮ ಬಾಂಗ್ಲಾದೇಶಿ ವಲಸಿಗರ ವಿರುದ್ಧ ಏ.30ರಿಂದಲೇ ಪೊಲೀಸ್ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಗಡಿಪಾರು ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಹೇಳಿದ್ದಾರೆ. ರಾಜ್ಯದ 17 ಜಿಲ್ಲೆಗಳಿಂದ 1008 ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಬಂಧಿಸಲಾಗಿದೆ. ಮೊದಲ ತಂಡದಲ್ಲಿ 148 ಜನರನ್ನು ವಿಶೇಷ ವಿಮಾನದಲ್ಲಿ ಪಶ್ಚಿಮ ಬಂಗಾಳಕ್ಕೆ ಕಳುಹಿಸಿಕೊಡಲಾಗಿದೆ. ಎಲ್ಲರನ್ನೂ ಅಲ್ಲಿನ ಬಂಧನ ಕೇಂದ್ರದಲ್ಲಿರಿಸಲಾಗಿದ್ದು, ಗಡಿಪಾರು ಕಾನೂನು ಪ್ರಕ್ರಿಯೆ ಜಾರಿಯಲ್ಲಿದೆ ಎಂದು ರಾಜಸ್ಥಾನ ಪೊಲೀಸರು ತಿಳಿಸಿದ್ದಾರೆ.

ಮೊದಲಿಗೆ ವಿದೇಶಿ ಪ್ರಜೆಗಳಿಗೆ ನೌಕರಿ ಕೊಟ್ಟಿರುವ ವಿವಿಧ ಉದ್ಯಮಗಳು, ವಾಣಿಜ್ಯ ಸಂಸ್ಥೆಗಳವರಿಗೆ 'ದಾಖಲೆಪತ್ರ' ಒದಗಿಸುವಂತೆ ಸೂಚನೆ ನೀಡಲಾಗಿದೆ. ಸರಕಾರದ ವಿವಿಧ ಇಲಾಖೆಗಳಿಗೂ, ತನಿಖಾ ಸಂಸ್ಥೆಗಳಿಗೂ ವಲಸೆ ಕಾರ್ಮಿಕರ ಬಗ್ಗೆ ಅಂಕಿ ಅಂಶ ಕಲೆಹಾಕುವಂತೆ ಸೂಚಿಸಲಾಗಿದೆ. ಅಲ್ಲದೇ, ಸಮರ್ಪಕ ದಾಖಲೆ ಪತ್ರಗಳಿಲ್ಲದ ಬಾಂಗ್ಲಾದೇಶಿ ಮತ್ತು ಬೇರೆ ದೇಶದ ವ್ಯಕ್ತಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳದಂತೆ ರಾಜ್ಯ ಸರಕಾರದ ವಿವಿಧ ಇಂಜಿನಿಯರಿಂಗ್ ಇಲಾಖೆಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

-ಪೃಥ್ವಿರಾಜ್ ಹರಿಚಂದನ್
ಒಡಿಶಾ ಕಾನೂನು ಸಚಿವ

ಒಡಿಶಾ ರಾಜ್ಯ ಬಾಂಗ್ಲಾದೇಶದೊಂದಿಗೆ ಗಡಿ ಹಂಚಿಕೊಂಡಿದ್ದು, ಗಡಿಯಲ್ಲಿ ಕಟ್ಟೆಚ್ಚರ ವಹಿಸಲಾಗುತ್ತಿದೆ. ರಾಜ್ಯದ ಬಾಲಸೋರ್, ಭದ್ರಕ್, ಕೇಂದ್ರಪಾರಾ, ಜಗತ್‌ಸಿಂಗ್ ಪುರ, ಪುರಿ, ಗಂಜಾಂ ಜಿಲ್ಲೆಗಳಲ್ಲಿಯೇ ಅತಿ ಹೆಚ್ಚು ಬಾಂಗ್ಲಾದೇಶಿ ವಲಸಿಗರು ಇದ್ದಾರೆ. ಈ ಜಿಲ್ಲೆಗಳಲ್ಲಿ ಬಾಂಗ್ಲಾದೇಶಿ ವಲಸಿಗರ ದಾಖಲೆಪತ್ರಗಳ ಪರಿಶೀಲನೆ ಬಹುತೇಕ ಮುಗಿದಿದೆ. ಅಕ್ರಮ ವಲಸಿಗರ ವಿರುದ್ಧ 'ದಿ ಫಾರಿನರ್ಸ್ ಆಕ್ಟ್'(ವಿದೇಶಿಗರ ಕಾಯಿದೆ) ಅನ್ವಯ ಸರಕಾರ ಗಡಿಪಾರು ಕ್ರಮ ಕೈಗೊಳ್ಳಲಿದೆ.

-ಪಿನಾಕ್ ಮಿಶ್ರಾ
'ಎಸ್‌ಟಿಎಫ್' ಮುಖ್ಯಸ್ಥ

300 ಬಾಂಗ್ಲಾದೇಶಿ ವಲಸಿಗರ ಗಡಿಪಾರು: ಮಹಾರಾಷ್ಟ್ರ

ಇನ್ನೊಂದೆಡೆ, ಮಹಾರಾಷ್ಟ್ರ ಸರಕಾರವೂ ಅಕ್ರಮ ಬಾಂಗ್ಲಾದೇಶಿ ವಲಸಿಗರ ವಿರುದ್ಧ ಕಾರ್ಯಾಚರಣೆ ಆರಂಭಿಸಿದೆ. ಈವರೆಗೆ 300 ಬಾಂಗ್ಲಾದೇಶಿ ಪ್ರಜೆಗಳನ್ನು ಅಕ್ರಮ ವಲಸೆ ಆರೋಪದಡಿ ಗಡಿಪಾರು ಮಾಡಿದ್ದಾರೆ. ಅಲ್ಲದೇ, ಈ ವರ್ಷದಲ್ಲಿ ಈವರೆಗೆ 766 ಅಕ್ರಮ ವಲಸಿಗರನ್ನು ಬಂಧಿಸಿ ಜೈಲಿಗೆ ದೂಡಲಾಗಿದೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. ಅಕ್ರಮ ಬಾಂಗ್ಲಾದೇಶಿಗರ ವಿರುದ್ಧ ರಾಜ್ಯ ಸರಕಾರದ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಸಚಿವ ಚಂದ್ರಶೇಖರ ಬವಾಂಕುಲೆ ಹೇಳಿದ್ದಾರೆ. ಅಲ್ಲದೇ, ಈ ವರ್ಷ(ಮೇ 18ರವರೆಗೆ) 18 ಲಕ್ಷ ಅಕ್ರಮ ಪಡಿತರ ಚೀಟಿಗಳನ್ನು ಪತ್ತೆ ಮಾಡಿ ರದ್ದುಗೊಳಿಸಲಾಗಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆ ಪಡಿತರ ಚೀಟಿಗಳು ಅಕ್ರಮ ಬಾಂಗ್ಲಾ ವಲಸಿಗರ ಬಳಿಯೇ ಇದ್ದವು ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಚಿಕನ್ ನೆಕ್' ಭಾಗದ ಸುರಕ್ಷೆಗಾಗಿ ಭಾರತದ ಮುಂಜಾಗ್ರತೆ

ಬಾಂಗ್ಲಾ ಗಡಿಗೆ ರಫೇಲ್, ಬ್ರಹ್ಮೋಸ್, ಎಸ್-400

ದೆಹಲಿ: ಈಶಾನ್ಯ ಭಾರತದ ರಾಜ್ಯಗಳನ್ನು ದೇಶದ ಉಳಿದ ಭಾಗಗಳ ಜತೆಗೆ ಜೋಡಿಸುವ ಕಿರಿದಾದ ಭೂಪ್ರದೇಶವನ್ನು 'ಸಿಲಿಗುರಿ ಕಾರಿಡಾರ್'(ಚಿಕನ್ ನೆಕ್) ಭಾಗಕ್ಕೆ ಫ್ರಾನ್ಸ್ ನಿರ್ಮಿತ ಅತ್ಯಾಧುನಿಕ ಯುದ್ಧ ವಿಮಾನ ರಫೇಲ್, ದೇಶದಲ್ಲೇ ತಯಾರಾದ ಅತ್ಯಂತ ಶಕ್ತಿಶಾಲಿ ಖಂಡಾಂತರ ಕ್ಷಿಪಣಿ ಬ್ರಹ್ಮೋಸ್ ಮತ್ತು ರಷ್ಯಾದಲ್ಲಿ ತಯಾರಾದ 'ಬಲಿಷ್ಠ ಕ್ಷಿಪಣಿ ವಿನಾಶಕ ಸಾಧನ' ಎಸ್-400 ಸಮರಾಸ್ತ್ರಗಳನ್ನು ನಿಯೋಜಿಸಲಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಬಾಂಗ್ಲಾದೇಶ ಮತ್ತು ನೇಪಾಳದ ಗಡಿ ಭಾಗಗಳಿಗೆ ತಾಗಿಕೊಂಡಿರುವ ಈ ಭೂ ಪ್ರದೇಶ, ಸೇನಾ ಕಾರ್ಯತಂತ್ರ ಮತ್ತು ಭದ್ರತಾ ದೃಷ್ಟಿಯಿಂದ ಬಹಳ ಸೂಕ್ಷ್ಮವಾದುದಾಗಿದೆ. ಈ ಭೂ ಪ್ರದೇಶವನ್ನು ಭಾರತದ ದುರ್ಬಲ ಕೊಂಡಿ ಎಂದೂ ವಿಶ್ಲೇಷಿಸಲಾಗುತ್ತದೆ. 'ಚಿಕನ್ ನೆಕ್'(ಸಿಲಿಗುರಿ ಕಾರಿಡಾರ್)ಗೆ ಸಮೀಪದಲ್ಲಿ ಚೀನಾ ಉಪಸ್ಥಿತಿ ಭಾರತದ ಚಿಂತೆಗೆ ಕಾರಣವಾಗಿದೆ.

ಬಾಂಗ್ಲಾ ಭೂಭಾಗದಲ್ಲಿನ ಲಾಲ್‌ಮೋನಿಹರತ್‌ನಲ್ಲಿ 2ನೇ ಮಹಾಯುದ್ಧ ಕಾಲದ ವಾಯುನೆಲೆಯಿದೆ. ಇದನ್ನು ಪುನರುಜ್ಜೀವಗೊಳಿಸಲು ಯೂನುಸ್ ಕೋರಿಕೆ ಮೇರೆಗೆ ಚೀನಾ ಬಾಂಗ್ಲಾದೇಶಕ್ಕೆ ಸಹಾಯ ಮಾಡುತ್ತಿದೆ ಎಂದು ವರದಿಯಾಗಿದೆ. ದಶಕಗಳಿಂದ ನಿಷ್ಕ್ರಿಯವಾಗಿದ್ದ ಈ ವಾಯುನೆಲೆ ಸದ್ಯ ಬಾಂಗ್ಲಾ ವಾಯುಪಡೆ ಉಸ್ತುವಾರಿಯಲ್ಲಿದೆ. ಇತ್ತೀಚೆಗೆ ಚೀನಾ ಸೇನೆಯ ಅಧಿಕಾರಿಗಳು ಈ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ. ಈ ಸ್ಥಳದ ಬಗ್ಗೆ ಚೀನಾ ಹೆಚ್ಚು ಆಸಕ್ತಿ ತೋರಿಸುತ್ತಿರುವುದು ಭಾರತದ ಆತಂಕಕ್ಕೆ ಕಾರಣವಾಗಿದೆ. ಏಕೆಂದರೆ ಲಾಲ್ ಮೋನಿಹರತ್ ವಾಯುನೆಲೆ ಭಾರತದ ಗಡಿಯಿಂದ 15 ಕಿ.ಮೀ. ಹಾಗೂ ಸಿಲಿಗುರಿ ಕಾರಿಡಾರ್‌ನಿಂದ 135 ಕಿ.ಮೀ. ದೂರದಲ್ಲಿದೆ.

ಗಡಿ ಭಾಗದತ್ತ ಕಣ್ಣಿಡಿ: ಮಮತಾ ಸೂಚನೆ

ಗಡಿಯಾಚೆಯಿಂದ ಅಪಾಯ ಎದುರಾಗುವ ಸಾಧ್ಯತೆ ಇದೆ. ಪಶ್ಚಿಮ ಬಂಗಾಳದ ಉತ್ತರ ಭಾಗದತ್ತ ಹೆಚ್ಚು ನಿಗಾ ವಹಿಸಿರಿ ಎಂದು ರಾಜ್ಯ ಸರಕಾರದ ಅಧಿಕಾರಿಗಳಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಆದೇಶಿಸಿದ್ದಾರೆ. ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಗಡಿ ಭಾಗದ ಕಾವಲಿಗೆ ಇದ್ದರೂ ರಾಜ್ಯದ ಅಧಿಕಾರಿಗಳೂ ಜಾಗೃತವಾಗಿರಬೇಕಿದೆ. ಗಡಿಯತ್ತ ಹೆಚ್ಚು ಗಮನ ಹರಿಸಬೇಕಿದೆ ಎಂದು ಅಧಿಕಾರಿಗಳ ಸಭೆಯಲ್ಲಿ ಮಮತಾ ಹೇಳಿದ್ದಾರೆ.

ಹಗೆಯಾಗಿ ಬದಲಾದ ಮಿತ್ರದೇಶ ಬಾಂಗ್ಲಾ!

ಬಾಂಗ್ಲಾದೇಶದಲ್ಲಿನ ಆಂತರಿಕ ಸಂಘರ್ಷದ ಪರಿಣಾಮವಾಗಿ ಹಿಂದಿನ ಪ್ರಧಾನಿ ಷೇಕ್ ಹಸೀನಾ ಅವರು ಪದತ್ಯಾಗ ಮಾಡಿ, ದೇಶ ತೊರೆಯುವಂತಾಗಿದ್ದು, ಆ ಬಳಿಕ ಬಾಂಗ್ಲಾದಲ್ಲಿ ಮೊಹಮ್ಮದ್ ಯೂನುಸ್ ನೇತೃತ್ವದಲ್ಲಿ ರಚನೆಯಾದ ಮಧ್ಯಂತರ ಸರಕಾರ ಭಾರತದ ವಿರುದ್ಧ ಕಿಡಿಕಾರಲಾರಂಭಿಸಿದೆ. ಮಿತ್ರತ್ವ ಹಗೆತನಕ್ಕೆ ಬದಲಾಗಿದೆ. ಯೂನುಸ್ ಚೀನಾ ಭೇಟಿ ನಂತರವಂತೂ ಭಾರತ-ಬಾಂಗ್ಲಾ ಸಂಬಂಧ ಮತ್ತಷ್ಟು ಹಳಸಿದೆ. ಚೀನಾ ಭೇಟಿ ಕಾಲದಲ್ಲಿ ಯೂನುಸ್ ಆಡಿದ್ದ 'ಭಾರತದ ಈಶಾನ್ಯ ಭಾಗದ 7 ಸೋದರಿ ರಾಜ್ಯಗಳನ್ನು ನಮ್ಮದೇ ಭೂಭಾಗ ಆವರಿಸಿಕೊಂಡಿದೆ' ಎಂಬ ಮಾತು ಕೂಡಾ ಚಿಂತೆಗೆ ಕಾರಣವಾಗಿದೆ.

ಸಂವಿಧಾನದಿಂದ ಕೊಡಮಾಡಿದ ಮೂಲಭೂತ ಹಕ್ಕೂ ಅಲ್ಲ | ಕೇಂದ್ರ ಸರಕಾರದ ಪ್ರಬಲ ವಾದ

ವಕ್ಫ್ ಇಸ್ಲಾಂನ ಅತ್ಯಗತ್ಯ ಭಾಗವಲ್ಲ: ಕೇಂದ್ರ

ದೆಹಲಿ: 'ವಕ್ಫ್' ಎಂಬುದು ಇಸ್ಲಾಂ ಧರ್ಮದ ಅತ್ಯಗತ್ಯವಾದ ಭಾಗವೇನೂ ಅಲ್ಲ. ಸಂವಿಧಾನದಿಂದ ಕೊಡಮಾಡಿದ ಮೂಲಭೂತ ಹಕ್ಕೂ ಅಲ್ಲ. ಹಾಗೆಂದು

ಪ್ರತಿಪಾದಿಸಲೂ ಸಾಧ್ಯವಿಲ್ಲ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ಪ್ರಬಲ ವಾದ ಮಂಡಿಸಿದೆ.

ವಕ್ಫ್ (ತಿದ್ದುಪಡಿ) ಕಾಯಿದೆ-2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ನಡೆಸಿರುವ ಮುಖ್ಯ ನ್ಯಾಯಮೂರ್ತಿ ಬಿ. ಆರ್.ಗವಾಯಿ ಮತ್ತು ನ್ಯಾ. ಆಗಸ್ಟೀನ್ ಜಾರ್ಜ್ ಮಾಸಿಹ್ ಅವರ ದ್ವಿಸದಸ್ಯ ಪೀಠದ ಮುಂದೆ ಕೇಂದ್ರ ಸರಕಾರದ ಪರ ವಾಗಿ ಬುಧವಾರವೂ ವಾದ ಮುಂದು ವರಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ವಕ್ಫ್' ಎಂಬ ಪರಿಕಲ್ಪನೆ ಇಸ್ಲಾಂ ಧರ್ಮದ ಭಾಗ ಎಂಬುದನ್ನು ಸಾಬೀತುಪಡಿಸುವವರೆಗೂ ಉಳಿದೆಲ್ಲಾ ವಾದಗಳೂ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ ಎಂದು ಹೇಳಿದರು.

ವಕ್ಫ್ ಎಂಬುದು ಇಸ್ಲಾಂ ಪರಿಕಲ್ಪನೆ

ಯಿಂದ ಬಂದಿರುವುದಾಗಿದೆ. ಅದರಲ್ಲಿ ವಿವಾದವೇನೂ ಇಲ್ಲ. ಆದರೆ, ವಕ್ಫ್ ಎಂಬುದನ್ನು ಇಸ್ಲಾಂನ ಅವಿಚ್ಛಿನ್ನ ಭಾಗ ಎಂಬುದು ದೃಢಪಡುವವರೆಗೂ ಹಾಗೆ ಪ್ರತಿಪಾದಿಸಲು ಸಾಧ್ಯವಿಲ್ಲ ಎಂದು ಮೆಹ್ತಾ ವಾದಿಸಿದರು.

ಇದೇ ವೇಳೆ, 'ದೇಶದ ಸಂಸತ್ತಿಗೆ ವಕ್ಫ್ ತಿದ್ದುಪಡಿ ಕಾಯಿದೆ-2025 ಅಂಗೀಕರಿಸುವ ಸಾಮರ್ಥ್ಯವಿಲ್ಲ' ಎಂದೂ ಯಾರೂ ಹೇಳಲಾಗದು' ಎಂದು ತುಷಾರ್ ಮೆಹ್ತಾ ಪೀಠಕ್ಕೆ ಅರುಹಿದರು. ಕಾಯಿದೆ ಜಾರಿಗೂ ಮೊದಲು ರಾಜ್ಯ ಸರಕಾರಗಳು ಮತ್ತು ರಾಜ್ಯ ವಕ್ಫ್ ಮಂಡಳಿಗಳ ಜತೆ ಸಮಾಲೋಚಿಸಲಾಗಿದೆ. ಜಂಟಿ ಸಂಸದೀಯ ಸಮಿತಿಯಿಂದ ವರದಿಯನ್ನೂ ಪಡೆಯಲಾಗಿದೆ ಎಂದರು.

ತಡೆಯಾಜ್ಞೆ ಅನಗತ್ಯ: ವಕ್ಫ್ ಆಡಳಿತದ ಜಾತ್ಯತೀತ ಅಂಶಗಳನ್ನಷ್ಟೇ ನಿಯಂತ್ರಿಸಲು ತಿದ್ದುಪಡಿ ಕಾಯಿದೆಯಲ್ಲಿ ಪ್ರಯತ್ನಿಸಲಾಗಿದೆ. ವಕ್ಫ್ ತಿದ್ದುಪಡಿ ಕಾಯಿದೆ ಮಧ್ಯಂತರ ತಡೆ ನೀಡಲೇಬೇಕು ಎನ್ನುವಂತಹ 'ಗಂಭೀರ ರಾಷ್ಟ್ರೀಯ ತುರ್ತು' ಏನೂ ಇಲ್ಲ ಎಂದು ತುಷಾರ್ ಮೆಹ್ತಾ ಪೀಠಕ್ಕೆ ಮನವರಿಕೆ ಮಾಡಿಕೊಡಲು ಯತ್ನಿಸಿದರು.

ಅಕ್ರಮ ವಕ್ಫ್ ಆಸ್ತಿಗಳ ಮರಳಿ ಪಡೆಯಲು ಅಧಿಕಾರ

ಸರಕಾರದ ಭೂಮಿ, ಆಸ್ತಿಗಳ ಮೇಲೆ ಯಾರೂ ಹಕ್ಕು ಸ್ಥಾಪಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವ ಕೇಂದ್ರ ಸರಕಾರ, 'ವಕ್ಫ್ ಬಳಕೆಯಲ್ಲಿದ್ದ ಆಸ್ತಿ' ಎಂಬ ನೀತಿ ಬಳಸಿಕೊಂಡು ವಕ್ಫ್ ಮಂಡಳಿ ವಶಪಡಿಸಿಕೊಂಡ ಸರಕಾರದ ಆಸ್ತಿಗಳನ್ನು ಮರಳಿ ಪಡೆದುಕೊಳ್ಳಲು ಸರಕಾರಕ್ಕೆ ಕಾನೂನುಬದ್ಧ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ. ದಾಖಲೆಗಳು ಇಲ್ಲದಿದ್ದರೂ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ದೀರ್ಘಕಾಲ ಬಳಸಿದ ಸರಕಾರದ ಆಸ್ತಿಗಳನ್ನು 'ಬಳಕೆಯಿಂದ ಪಡೆದ ಆಸ್ತಿ' ಎಂಬ ಆಧಾರದ ಮೇಲೆ ವಕ್ಫ್ ಮಂಡಳಿ ತನ್ನ ವಶವಾಗಿಸಿಕೊಳ್ಳುತ್ತಾ ಬಂದಿದೆ. ಇದನ್ನು ಅಲ್ಲಗಳೆದ ತುಷಾರ ಮೆಹ್ತಾ, 'ಸರಕಾರಿ ಭೂಮಿ ಮತ್ತು ಆಸ್ತಿಗಳ ಮೇಲೆ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು. ಸರಕಾರಕ್ಕೆ ಸೇರಿದ ಆಸ್ತಿ ಪ್ರಸ್ತುತ ವಕ್ಫ್ ಆಸ್ತಿ ಎಂದು ಘೋಷಣೆಯಾಗಿದ್ದರೆ ಅದನ್ನು ತನ್ನ ವಶಕ್ಕೆ ಪಡೆದುಕೊಳ್ಳಲು ಸರಕಾರಕ್ಕೆ ಅಧಿಕಾರವಿದೆ. ಇದನ್ನೂ ದೃಢೀಕರಿಸುವಂತೆ ಸುಪ್ರೀಂ ಕೋರ್ಟ್ ತೀರ್ಪು ಕೂಡಾ ಇದೆ ಎಂದು ಪೀಠದ ಗಮನ ಸೆಳೆದರು. ಆಸ್ತಿ ವಿಚಾರದಲ್ಲಿ ಯಾವುದೇ ಬಾಧಿತರು ನ್ಯಾಯಾಲಯದ ಮೊರೆ ಹೋಗಿಲ್ಲ ಎಂದು ವಕ್ಫ್ ಪ್ರತಿಪಾದಿಸಲು ಸಾಧ್ಯವಿಲ್ಲ ಎಂದರು.

ಜೆಡಿಯು ಸಂಸದ ಸಂಜಯ್ ಝಾ ನೇತೃತ್ವ ನಿಯೋಗ ಪ್ರವಾಸ ಆರಂಭ

ಪಾಕ್ ಮುಖವಾಡ ಕಳಚಲು ನಿಯೋಗದ ವಿದೇಶ ಯಾತ್ರೆ

ದೆಹಲಿ: ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದಲ್ಲಿ 8 ಸಂಸದರ ಸರ್ವಪಕ್ಷ ನಿಯೋಗದ ಮೊದಲ ತಂಡದ ವಿದೇಶ ಯಾತ್ರೆ ಬುಧವಾರ ಆರಂಭಗೊಂಡಿದೆ.

ಆಪರೇಷನ್ ಸಿಂದೂರ್ ಯಶಸ್ಸು, ಗಡಿಯಾಚೆಗಿನ ಭಯೋತ್ಪಾದನೆ ಸೇರಿದಂತೆ ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನದ ಪೂರ್ಣ ಬಂಡವಾಳ ಬಯಲು ಮಾಡಲು ಸಂಯುಕ್ತ ಜನತಾ ದಳ(ಜೆಡಿಯು)ಹಿರಿಯ ಸಂಸದ ಸಂಜಯ್ ಝಾ ನೇತೃತ್ವದ ಒಟ್ಟು 8 ಸಂಸದರ ನಿಯೋಗದ ಮೊದಲ ತಂಡ ಬುಧವಾರ ದೆಹಲಿಯಿಂದ 5 ರಾಷ್ಟ್ರಗಳತ್ತ ಪ್ರಯಾಣ ಬೆಳೆಸಿದೆ.

ಮೊದಲ ತಂಡದಲ್ಲಿ ಬಿಜೆಪಿ ಸಂಸದರಾದ ಅಪರಾಜಿತ ಸಾರಂಗಿ, ಪ್ರಧಾನ್ ಬರುಹ್, ಬ್ರಿಜ್ ಲಾಲ್ ಮತ್ತು ಹೇಮಂಗ್ ಜೋಷಿ, ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ, ಸಿಪಿಐ-ಎಂ ಸಂಸದ ಜಾನ್ ಬ್ರಿಟ್ಟಾಸ್ ಮತ್ತು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರುಗಳಿದ್ದಾರೆ.

ಸಂಜಯ್ ಝಾ ನೇತೃತ್ವದ ಈ ಸರ್ವಪಕ್ಷ ನಿಯೋಗ ಜಪಾನ್, ದಕ್ಷಿಣ ಕೊರಿಯ, ಇಂಡೋನೇಷ್ಯಾ, ಮಲೇಷಿಯಾ ಮತ್ತು ಸಿಂಗಾಪುರಕ್ಕೆ ಭೇಟಿ ನೀಡಲಿದೆ. ಆ ದೇಶಗಳ ಪ್ರಮುಖರೆದುರು ಪಾಕಿಸ್ತಾನ ನಡೆಸುತ್ತಿರುವ ಭಯೋತ್ಪಾದನೆ ಚಟುವಟಿಕೆಗಳನ್ನು ತೆರೆದಿಡಲಿದೆ. ಅಲ್ಲದೇ,

ಭಾರತದ ಕೇವಲ 4 ದಿನಗಳ ಸಮರದಲ್ಲಿ ಶತ್ರುದೇಶವನ್ನು ಬಗ್ಗುಬಡಿದ ರೀತಿಯನ್ನೂ ಅನಾವರಣಗೊಳಿಸಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಿವರಿಸಿದೆ.

ಸರ್ವಪಕ್ಷ ನಿಯೋಗದ ಈ ಸುತ್ತಿನ ಭೇಟಿ ಜೂ.5ರವರೆಗೂ ಮುಂದುವರಿಯಲಿದೆ.

ವಿಶ್ವದ ವಿವಿಧೆಡೆಯ ದೇಶಗಳಿಗೆ ಸರ್ವಪಕ್ಷಗಳ ಸಂಸದರನ್ನು ಒಳಗೊಂಡ ಒಟ್ಟು 7 ನಿಯೋಗಗಳನ್ನು ಕಳುಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ನಿಯೋಗಗಳಿಗಾಗಿ ಕೇಂದ್ರ ಸರಕಾರ ಒಟ್ಟು 59 ಸದಸ್ಯರುಗಳನ್ನು ಆಯ್ಕೆ ಮಾಡಿದೆ. ನಿಯೋಗದಲ್ಲಿ 51 ನಾಯಕರು ಮತ್ತು 8 ರಾಯಭಾರಿಗಳು ಸೇರಿದ್ದಾರೆ. ಇವರಲ್ಲಿ 10 ಮುಸ್ಲಿಂ ಸಂಸದರೂ ಇದ್ದಾರೆ. ಪ್ರತಿ ನಿಯೋಗದಲ್ಲಿಯೂ ಕನಿಷ್ಠ ಒಬ್ಬ ಮುಸ್ಲಿಂ ಸಂಸದರು ಇರುವಂತೆ ವ್ಯವಸ್ಥೆ ಮಾಡಲಾಗಿದೆ. ಎನ್‌ಡಿಎ ಮಿತ್ರಪಕ್ಷಗಳು, ಕಾಂಗ್ರೆಸ್, ಶಿವಸೇನೆ(ಯುಬಿಟಿ), ಎಸ್‌ಪಿ, ಎಐಎಂಐಎಂ ಮತ್ತು ಇತರೆ ಪಕ್ಷಗಳ ಸಂಸದರು ಇದ್ದಾರೆ.

ಬಲೂಚ್ ಶಾಲೆ ಬಸ್ ಸ್ಫೋಟ: 4 ಚಿಣ್ಣರು ಬಲಿ

ಬಲೂಚ್: ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಶಾಲಾ ಬಸ್ ಗುರಿಯಾಗಿಸಿ ಬುಧವಾರ ನಡೆದ ಆತ್ಮಾಹುತಿ ಬಾಂಬ್ ದಾಳಿಗೆ ನಾಲ್ವರು ಮಕ್ಕಳು ಬಲಿಯಾಗಿದ್ದಾರೆ. 38 ಮಂದಿ

ಗಂಭೀರವಾಗಿ ಗಾಯಗೊಂಡಿದ್ದಾರೆ. ಈವರೆಗೂ ಉಗ್ರರ ಯಾವುದೇ ಗುಂಪು ದಾಳಿ ಹೊಣೆ ಹೊತ್ತುಕೊಂಡಿಲ್ಲ, ಈ ಪ್ರದೇಶದಲ್ಲಿ ಭದ್ರತಾ ಪಡೆಗಳು, ನಾಗರಿಕರನ್ನು ಗುರಿಯಾಗಿಸಿ ಇಂತಹ ಆತ್ಮಾಹುತಿ ದಾಳಿಗಳು ನಡೆಯುತ್ತಲೇ ಇರುತ್ತವೆ. ಈ ದಾಳಿಯೂ ಬಲೂಚ್ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಬಂಡುಕೋರರ ಕೃತ್ಯವೇ ಇರಬೇಕು ಎನ್ನಲಾಗಿದೆ. ಬಲೂಚಿಸ್ತಾನ ಪ್ರಾಂತ್ಯದ ಖುಜ್ದಾರ್ ಜಿಲ್ಲೆಯಲ್ಲಿ ಶಾಲೆಯತ್ತ ಸಾಗುತ್ತಿದ್ದ ಬಸ್‌ಗೆ ಸ್ಫೋಟಕಗಳನ್ನು ಜೋಡಿಸಿದ್ದ ಕಾರು ನೇರವಾಗಿ ಡಿಕ್ಕಿ ಹೊಡೆದಿದೆ. ಪರಿಣಾಮ ತಕ್ಷಣವೇ ಬೆಂಕಿ ಹೊತ್ತಿಕೊಂಡಿದ್ದು, ಬಸ್ ಪೂರ್ಣ ಭಸ್ಮವಾಗಿದೆ. ನಾಲ್ವರು ಮಕ್ಕಳು ಸಜೀವ ದಹನವಾಗಿದ್ದಾರೆ ಎಂದು ಸ್ಥಳೀಯ ಉಪ ಆಯುಕ್ತ ಯಾಸಿರ್ ಇಕ್ಬಾಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಪುಟ್ಟ ಮಕ್ಕಳ ಸಾವಿಗೆ ದುಃಖ ವ್ಯಕ್ತಪಡಿಸಿರುವ ಪಾಕ್ ಗೃಹ ಸಚಿವ ಮೊಹ್ಸಿನ್ ನಖ್ವಿ, ದಾಳಿಗೆ ಕಾರಣರಾದವರನ್ನು ಹಿಂಸಾಮೃಗಗಳು ಎಂದು ಕರೆದಿದ್ದಾರೆ.

ನ್ಯಾಷನಲ್ ಹೆರಾಲ್ಡ್: ಸೋನಿಯಾ, ರಾಹುಲ್‌ಗೆ ಸಂಕಷ್ಟ

ಆರೋಪ ಮೇಲ್ನೋಟಕ್ಕೆ ಸಾಬೀತು: ಇ.ಡಿ

ಚೆನ್ನೈ: ದೆಹಲಿ: 'ನ್ಯಾಷನಲ್ ಹೆರಾಲ್ಡ್' ಪತ್ರಿಕಾ ಸಂಸ್ಥೆಯ ಅಕ್ರಮ ಆಸ್ತಿ ಹಸ್ತಾಂತರ ಹಗರಣದಲ್ಲಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ದಾಖಲಾ

ಗಿರುವ 'ಹಣ ಅಕ್ರಮ ವರ್ಗಾವಣೆ' ಪ್ರಕರಣದಲ್ಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿವೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ದೆಹಲಿ ವಿಶೇಷ ನ್ಯಾಯಾಲಯಕ್ಕೆ ಬುಧವಾರ ತಿಳಿಸಿದೆ.

ಈ ಪ್ರಕರಣವನ್ನು ವಿಚಾರಣೆಗೆ ಪರಿಗಣಿಸಬೇಕೆ ಬೇಡವೇ ಎಂಬ ಬಗೆಗಿನ ಆರಂಭಿಕ ಹಂತದ ವಾದಗಳ ಮಂಡನೆ ಸಂದರ್ಭ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರ ಮುಂದೆ ಇ.ಡಿ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಹೇಳಿಕೆ ದಾಖಲಿಸಿದರು.

ಈ ಪ್ರಕರಣದಲ್ಲಿನ ದೋಷಾರೋಪಪಟ್ಟಿಯ ನಕಲು ಪ್ರತಿಯನ್ನು ದೂರುದಾರರಾದ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರಿಗೆ ಒದಗಿಸುವಂತೆ ನ್ಯಾಯಾಧೀಶರು ಇ.ಡಿ ಪರ ವಕೀಲರಿಗೆ ಸೂಚಿಸಿದರು. ಅವರ ಖಾಸಗಿ ದೂರಿನ ಆಧಾರದ ಮೇಲೆ ಇ.ಡಿ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿದೆ.

ಗಂಭೀರ ಆರೋಪ: 2023ರ ನವೆಂಬರ್‌ನಲ್ಲಿ ನ್ಯಾಷನಲ್ ಹೆರಾಲ್ಡ್ ಮಾಲೀಕತ್ವಕ್ಕೆ ಸಂಬಂಧಿಸಿದ 751.9 ಕೋಟಿ ರು. ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಳ್ಳುವವರೆಗೂ ಆರೋಪಿಗಳಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ 142 ಕೋಟಿ ರು. ಆದಾಯ ಪಡೆದಿರುವುದು ಅಪರಾಧವಾಗಿದೆ ಎಂದು ಇ.ಡಿ ಗಂಭೀರ ಆರೋಪ ಮಾಡಿದೆ.

2014ರ ಜೂ.26ರಂದು ಸುಬ್ರಮಣಿ ಸ್ವಾಮಿ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಖಾಸಗಿ ದೂರು ದಾಖಲಿಸಿದ್ದರು. ನ್ಯಾಯಾಲಯ ಅದನ್ನು ವಿಚಾರಣೆಗೆ ಪರಿಗಣಿಸಿದ ನಂತರ, 2021ರಲ್ಲಿ ತನಿಖೆ ಆರಂಭಿಸಿದ ಇ.ಡಿ ಇತ್ತೀಚೆಗೆ ಆರೋಪಪಟ್ಟಿ ಸಲ್ಲಿಸಿತ್ತು.

ಹಿಂದಿನ ಪ್ರಧಾನಿ ಜವಾಹರಲಾಲ್ ನೆಹರು ನೇತೃತ್ವದಲ್ಲಿ 5,000 ಸ್ವಾತಂತ್ರ್ಯ ಹೋರಾಟಗಾರರು ಷೇರುದಾರರಾಗಿ 1937ರಲ್ಲಿ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಸ್ಥಾಪಿಸಲಾಯಿತು. ಈ ಸಂಸ್ಥೆ ಯಾವುದೇ ಒಬ್ಬ ವ್ಯಕ್ತಿಗೆ ಸೇರಿದ್ದಾಗಿರಲಿಲ್ಲ. ಈ ಸಂಸ್ಥೆಯ ಮೂಲಕ 1938ರಲ್ಲಿ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಆರಂಭಿಸಲಾಯಿತು. 2010ರಲ್ಲಿ ಎಜೆಎಲ್ ಷೇರುದಾರರ ಸಂಖ್ಯೆ 1,057ಕ್ಕೆ ತಗ್ಗಿತು. ಆ ವರ್ಷ ಸಂಸ್ಥೆ ತೀವ್ರ ನಷ್ಟ ಅನುಭವಿಸಿತು. 2011ರಲ್ಲಿ ಯಂಗ್ ಇಂಡಿಯನ್ ಪ್ರೈ.ಲಿ.ಗೆ 'ಎಜೆಎಲ್' ವಶಕ್ಕೆ ನೀಡಲಾಯಿತು. ಆಗ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಯಂಗ್ ಇಂಡಿಯನ್ ಪ್ರೈ.ಲಿ. ನಿರ್ದೇಶಕ ಮಂಡಳಿಯಲ್ಲಿದ್ದರು. ಎಜೆಎಲ್ ಅನ್ನು ಯಂಗ್ ಇಂಡಿಯ ಪ್ರೈ.ಲಿ. ಬಹಳ ಕಡಿಮೆ ಮೌಲ್ಯಕ್ಕೆ ಸ್ವಾಧೀನಪಡಿಸಿಕೊಂಡಿದೆ ಎಂದು ದೂರಲಾಗಿದೆ.

103 ರೈಲು ನಿಲ್ದಾಣ ಇಂದು ಉದ್ಘಾಟನೆ

ದೆಹಲಿ: ಕರ್ನಾಟಕದ ಐದು ರೈಲು ನಿಲ್ದಾಣಗಳು ಸೇರಿದಂತೆ ದೇಶಾದ್ಯಂತ 103 'ಅಮೃತ್ ರೈಲು ನಿಲ್ದಾಣ'ಗಳನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾಜಸ್ಥಾನದ ಬಿಕಾನೇರ್‌ನಿಂದ

ವರ್ಚುವಲ್ ಮಾರ್ಗದಲ್ಲಿ ಉದ್ಘಾಟಿಸಲಿದ್ದಾರೆ. ಕೊಪ್ಪಳ ಜಿಲ್ಲೆಯ ಮುನಿರಾಬಾದ್, ಬಾಗಲಕೋಟೆ, ಗದಗ, ಬೆಳಗಾವಿ ಜಿಲ್ಲೆಯ ಗೋಕಾಕ್ ರಸ್ತೆ ಮತ್ತು ಧಾರವಾಡ ರೈಲು ನಿಲ್ದಾಣಗಳಲ್ಲದೇ, 18 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ 86 ಜಿಲ್ಲೆಗಳಲ್ಲಿನ ಒಟ್ಟು 103 ಅಮೃತ್ ರೈಲು ನಿಲ್ದಾಣಗಳನ್ನು 'ಅಮೃತ್ ಭಾರತ್ ನಿಲ್ದಾಣ ಯೋಜನೆ'(ಎಬಿಎಸ್‌ಎಸ್)ಯಡಿ ಒಟ್ಟಾರೆ 1,100 ಕೋಟಿ ರು. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ದೇಶಾದ್ಯಂತ ಇರುವ ಭಾರತೀಯ ರೈಲ್ವೆಗೆ ಸೇರಿದ 1,300ಕ್ಕೂ ಅಧಿಕ ರೈಲು ನಿಲ್ದಾಣಗಳಿಗೆ 'ಅಮೃತ್ ಭಾರತ್ ನಿಲ್ದಾಣ ಯೋಜನೆ'ಯಡಿ ಆಧುನಿಕ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ಉನ್ನತೀಕರಿಸಿ ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ. ತಡರಾತ್ರಿ ರೈಲು ಪ್ರಯಾಣವಿದ್ದರೆ ಪ್ರಯಾಣಿಕರು ನಿಲ್ದಾಣದಲ್ಲಿಯೇ ತಂಗಲು ವ್ಯವಸ್ಥೆ ಕಲ್ಪಿಸಲಾಗಿದೆ. ನಿಲ್ದಾಣಗಳ ಉನ್ನತೀಕರಣ ಕಾಮಗಾರಿಯಲ್ಲಿ ಪ್ರಾದೇಶಿಕ ವಾಸ್ತುಶಿಲ್ಪವನ್ನು ಬಳಸಿಕೊಳ್ಳಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಉಬರ್‌ಗೆ ಸಿಸಿಪಿಎ ನೋಟಿಸ್ ಜಾರಿ

ದೆಹಲಿ: ತ್ವರಿತ ಸೇವೆ ಪಡೆಯಲು ಇಚ್ಛಿಸುವ ಗ್ರಾಹಕರು ಕ್ಯಾಬ್ ಬುಕಿಂಗ್‌ಗೂ ಮೊದಲೇ ಹಣ ಪಾವತಿ ಮಾಡುವಂತೆ ಸೂಚಿಸುವ ಹೊಸ ಫ್ಯೂಚರ್ ಅನ್ನು ಉಬರ್ ಕಂಪನಿಯು ತನ್ನ ಆ್ಯಪ್‌ನಲ್ಲಿ ಅಭಿವೃದ್ಧಿಪಡಿಸಿದೆ. ಇದು ನ್ಯಾಯಸಮ್ಮತವಲ್ಲದ ಕ್ರಮ ಎಂದಿರುವ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಉಬರ್‌ಗೆ ನೋಟಿಸ್ ನೀಡಿದೆ. 'ತ್ವರಿತ ಸೇವೆಗೆ ಬಳಕೆದಾರರಿಂದ ಸೇವೆಗೂ ಮೊದಲೇ ಹಣ ಪಡೆಯುವುದು ಸರಿಯಾದ ಕ್ರಮವಲ್ಲ. ಈ ಕ್ರಮವು ಗ್ರಾಹಕರ ಮೇಲೆ ಒತ್ತಡ ಹೇರಿದಂತಾಗುತ್ತದೆ. ಅಲ್ಲದೆ, ನ್ಯಾಯಸಮ್ಮತವಲ್ಲದ ವ್ಯಾಪಾರ ಚಟುವಟಿಕೆಯಾಗಿದೆ. ಕಂಪನಿಯು ತನ್ನ ಸೇವೆಯಲ್ಲಿ ನ್ಯಾಯೋಚಿತ ಮತ್ತು ಪಾರದರ್ಶಕತೆ ಕಾಪಾಡಿಕೊಳ್ಳಬೇಕಿದೆ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಎಕ್ಸ್‌ನಲ್ಲಿ ಹೇಳಿದ್ದಾರೆ. ಉಬರ್‌ನ ಈ ಧೋರಣೆ ಬಗ್ಗೆ ತನಿಖೆ ನಡೆಸುವಂತೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರಕ್ಕೆ ಸಚಿವರು ನಿರ್ದೇಶನ ನೀಡಿದ್ದಾರೆ. ಹಾಗಾಗಿ, ಉಬರ್ ಕಂಪನಿಗೆ ವಿವರಣೆ ಕೋರಿ, ಪ್ರಾಧಿಕಾರವು ನೋಟಿಸ್ ನೀಡಿದೆ.

ಕುಲಪತಿಗಳ ನೇಮಕ ಸರಕಾರದ ಕ್ರಮಕ್ಕೆ ತಡೆ

ಚೆನ್ನೈ: ರಾಜ್ಯ ಸರಕಾರದ ಆಡಳಿತಕ್ಕೆ ಒಳಪಡುವ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕ ಮಾಡುವ ರಾಜ್ಯ ಸರಕಾರದ ಕ್ರಮಕ್ಕೆ ಮದ್ರಾಸ್ ಹೈಕೋರ್ಟ್ ಬುಧವಾರ ಮಧ್ಯಂತರ ತಡೆ ನೀಡಿದೆ. ತರಾತುರಿಯಲ್ಲಿ ಪ್ರಕರಣ ಕೈಗೆತ್ತಿಕೊಳ್ಳುತ್ತಿರುವುದಕ್ಕೆ ರಾಜ್ಯ ಸರಕಾರ ಆಕ್ಷೇಪ ವ್ಯಕ್ತಪಡಿಸಿದರೂ, ನ್ಯಾ.ಜಿ.ಆರ್.ಸ್ವಾಮಿನಾಥನ್ ಮತ್ತು ನ್ಯಾ.ವಿ.ಲಕ್ಷ್ಮೀನಾರಾಯಣನ್ ಅವರಿದ್ದ ವಿಭಾಗೀಯ ಪೀಠವು ಮಧ್ಯಂತರ ತಡೆ ನೀಡಿತು. ಬಿಜೆಪಿ ಮುಖಂಡರೂ ಆಗಿರುವ ವಕೀಲರೊಬ್ಬರು ಸರಕಾರದ ಕ್ರಮದ ವಿರುದ್ಧ ಅರ್ಜಿ ಸಲ್ಲಿಸಿದ್ದರು. ಸದ್ಯ ಹೈಕೋರ್ಟ್ ತಡೆ ನೀಡಿರುವ ಈ ಪ್ರಕರಣವು ಸುಪ್ರೀಂಕೋರ್ಟ್‌ನಿಂದ ಒಪ್ಪಿಗೆ ಪಡೆದ ರಾಜ್ಯ ಸರಕಾರ ಮತ್ತು ರಾಜ್ಯಪಾಲರ ನಡುವಿನ ವ್ಯಾಜ್ಯದಲ್ಲಿನ ಒಂದು ಮಸೂದೆಯಾಗಿದೆ.

ಪೂಜಾ ಖೇಡ್ಕರ್‌ಗೆ ನಿರೀಕ್ಷಣಾ ಜಾಮೀನು

ದೆಹಲಿ: ನಕಲಿ ಪ್ರಮಾಣಪತ್ರ ಬಳಸಿ ನಾಗರಿಕ ಸೇವಾ ಪರೀಕ್ಷೆಯ ಲಾಭ ಪಡೆದುಕೊಂಡ ಆರೋಪ ಎದುರಿಸುತ್ತಿರುವ ಮಾಜಿ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರೀಕ್ಷಣಾ ಜಾಮೀನು ನೀಡಿದೆ. ಜಾಮೀನು ಮಂಜೂರು ಮಾಡಿದ ನ್ಯಾಯಮೂರ್ತಿಗಳಾದ ಬಿ.ವಿ ನಾಗರತ್ನ ಮತ್ತು ಸತೀಶ ಚಂದ್ರ ಅವರಿದ್ದ ಪೀಠ, ತನಿಖೆಗೆ ಸಹಕರಿಸುವಂತೆ ಖೇಡ್ಕರ್ ಅವರಿಗೆ ಸೂಚಿಸಿದೆ. ಖೇಡ್ಕರ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದಕ್ಕೆ ದೆಹಲಿ ಪೊಲೀಸರು ಮತ್ತು ಯುಪಿಎಸ್‌ಸಿ ವಿರೋಧ ವ್ಯಕ್ತಪಡಿಸಿವೆ. ಆಕೆ ಆಯೋಗ ಮತ್ತು ಜನರನ್ನು ವಂಚಿಸಿದ್ದಾಳೆ ಎಂದು ಹೇಳಿವೆ.

10 ಗ್ರಾಂ ಚಿನ್ನದ ದರ 1,910 ರು. ಏರಿಕೆ

ದೆಹಲಿ: ಜಾಗತಿಕ ಮಾರುಕಟ್ಟೆಯಲ್ಲಿ ಬುಧವಾರ ಚಿನ್ನದ ದರ ಏರಿಕೆಯಾಗಿದೆ. ಹೀಗಾಗಿ, ದೇಶೀಯ ಚಿನಿವಾರ ಪೇಟೆಯಲ್ಲೂ ಧಾರಣೆಯು ಹೆಚ್ಚಳವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. 10 ಗ್ರಾಂ ಚಿನ್ನದ (ಶೇ.99.9 ಪರಿಶುದ್ಧತೆ) ದರವು ₹1,910 ಏರಿಕೆಯಾಗಿದ್ದು, ₹98,450ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ.99.5 ಪರಿಶುದ್ಧತೆ) ಬೆಲೆಯು ₹1,870 ಹೆಚ್ಚಳವಾಗಿ, ₹98 ಸಾವಿರ ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1,660 ಏರಿಕೆಯಾಗಿ, ₹99,160 ಆಗಿದೆ. ಡಾಲರ್ ಮೌಲ್ಯ ಇಳಿಕೆಯಾಗುತ್ತಿದೆ. ಆರ್ಥಿಕ ಅನಿಶ್ಚಿತತೆಯಿಂದಾಗಿ ಮೂಡೀಸ್ ಸಂಸ್ಥೆಯು ಅಮೆರಿಕದ ಕ್ರೆಡಿಟ್ ರೇಟಿಂಗ್ ಅನ್ನು 'ಎಎಎ' ದಿಂದ 'ಎಎ1' ಶ್ರೇಣಿಗೆ ಇಳಿಸಿದೆ. ಇದು ಹೂಡಿಕೆದಾರರಲ್ಲಿ ಆತಂಕ ಹೆಚ್ಚಿಸಿದ್ದು, ಹಳದಿ ಲೋಹದ ಖರೀದಿಗೆ ಮುಂದಾಗಿದ್ದಾರೆ. ಇದರಿಂದ ಬೆಲೆ ಏರಿಕೆಯಾಗಿದೆ ಎನ್ನಲಾಗಿದೆ

ಜೂನ್ 5ರಂದು ರಾಮ ದರ್ಬಾರ್ ಪ್ರಾಣಪ್ರತಿಷ್ಠೆ

ದೆಹಲಿ: ಅಯೋಧ್ಯೆಯ ರಾಮಮಂದಿರದ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಜೂನ್ 5ರಂದು ರಾಮ ದರ್ಬಾರ್‌ನಲ್ಲಿ ಮೂರ್ತಿಗಳ ಪ್ರಾಣಪ್ರತಿಷ್ಠಾಪನೆ ನಡೆಯಲಿದೆ. ಆದರೆ, ಈ ಬಾರಿ ಪ್ರಾಣಪ್ರತಿಷ್ಠಾಪನೆಗೆ ಆಗಮಿಸುವ ಅತಿಥಿಗಳ ಪಟ್ಟಿಯಲ್ಲಿ ರಾಜ್ಯ ಅಥವಾ ಕೇಂದ್ರದ ವಿಐಪಿಗಳ ಹೆಸರು ಇರುವುದಿಲ್ಲ ಎಂದು ಶ್ರೀರಾಮ ಜನ್ಮಭೂಮಿ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ತಿಳಿಸಿದ್ದಾರೆ. ಜೂನ್ 3ರಿಂದಲೇ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮಗಳು ಆರಂಭವಾಗಲಿವೆ. ವಿವಿಧ ಧಾರ್ಮಿಕ ಗುರುಗಳನ್ನು ಆಹ್ವಾನಿಸಲಾಗುವುದು. ಕೇಂದ್ರ ಅಥವಾ ರಾಜ್ಯದ ವಿಐಪಿಗಳನ್ನು ಆಹ್ವಾನಿಸದೇ ಇರಲು ಟ್ರಸ್ ನಿರ್ಧರಿಸಿದೆ. ರಾಮ ದರ್ಬಾರ್ ಜತೆಗೆ ದೇವಾಲಯದ ಆವರಣದಲ್ಲಿರುವ ಇತರ 7 ದೇಗುಲಗಳ ಧಾರ್ಮಿಕ ಸಮಾರಂಭವೂ ಅದೇ ದಿನ ನಡೆಯಲಿದೆ ಎಂದು ತಿಳಿಸಿದ್ದಾರೆ.

{ ಕೆ.ಎನ್. ರಾಜಣ್ಣ } ಸಚಿವ

ಸಹಕಾರ ಇಲಾಖೆಯಲ್ಲಿ ನಡೆದಿರುವ ಅಕ್ರಮದಲ್ಲಿ ಭಾಗಿಯಾಗಿರುವ ಇಲಾಖೆ ನೌಕರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ರಾಜ್ಯ ಸರಕಾರ ಸಹಕಾರ ಇಲಾಖೆಯಲ್ಲಿ ತಿದ್ದುಪಡಿ ಮಾಡಲು ಮುಂದಾಗಿದ್ದು, ತಿದ್ದುಪಡಿ ಪ್ರಕ್ರಿಯೆ ಮುಗಿಯುತ್ತಿದ್ದಂತೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.

ಕೆಪಿಸಿಸಿ ಕಚೇರಿಯಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಪುಣ್ಯಸ್ಮರಣೆ

ದೇವರು ಬಿಜೆಪಿ ಆಸ್ತಿಯೇ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇವರು, ಧರ್ಮ ಬಿಜೆಪಿಯವರ ಆಸ್ತಿಯೇ? ಪೂಜೆಯನ್ನು ಬಿಜೆಪಿಯವರು ಮಾತ್ರ ಮಾಡುವುದೇ? ನೀರಿಗೆ, ಗಾಳಿಗೆ, ಬೆಳಕಿಗೆ ಜಾತಿ ಇದೆಯೇ? ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ನಿಮಿತ್ತ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ ಕೆ ಶಿವಕುಮಾರ್ ಅವರು ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಡಿಕೆಶಿ, ನಾವು ಏನೇ ಮಾಡಿದರೂ ಬಿಜೆಪಿಯವರು ಟೀಕೆ ಮಾಡುತ್ತಾರೆ. ಕೆಆರ್‌ಎಸ್ ಬಳಿ ಕಾವೇರಿ ಆರತಿ ಕಾರ್ಯಕ್ರಮ ಮಾಡಲು ಮುಂದಾಗಿದ್ದೇವೆ. ಇದಕ್ಕೆ ಪೂರ್ವಭಾವಿಯಾಗಿ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ಕಾರ್ಯಕ್ರಮ ಮಾಡಲಾಯಿತು. ಸುಮಾರು 25 ಸಾವಿರ ಜನರು ಭಾಗವಹಿಸಿದ್ದರು. ಸ್ಥಳೀಯ ಶಾಸಕರು ಇದನ್ನು ನೋಡಿ ಗಾಬರಿಯಾಗಿದ್ದರು. ನಾವು ನಮ್ಮ ಕೆಲಸ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ರೈತ ಸಂಘದವರು ಟೀಕೆ ಮಾಡುತ್ತಿದ್ದಾರೆ. ಅವರನ್ನು ಕರೆದು ಮಾತನಾಡಲಾಗುವುದು. ಟೀಕೆಗಳನ್ನು ಯಾರೂ ನಿಲ್ಲಿಸಲು ಸಾಧ್ಯವಿಲ್ಲ, ಟೀಕೆಗಳಿಲ್ಲದೇ ಯಾವುದೇ ಕೆಲಸಗಳು ಆಗುವುದಿಲ್ಲ, ನಾವೆಲ್ಲರೂ ಒಟ್ಟಾಗಿ ಸಮಾಜವನ್ನು ತೆಗೆದುಕೊಂಡು ಹೋಗಲಾಗುವುದು ಎಂದರು.

ಮೊದಲು ಒಂದು ಲ್ಯಾಂಡ್‌ಲೈನ್ ಸಂಪರ್ಕ ಪಡೆದುಕೊಳ್ಳಲು ಸಂಸದರಿಂದ ಪತ್ರ ಪಡೆಯಬೇಕಿತ್ತು. ಯುವ ಕಾಂಗ್ರೆಸ್ ಅಧ್ಯಕ್ಷನಾದ ನಿನ್ನನು ಹೇಗೆ ಸಂಪರ್ಕಿಸುವುದು ಎಂದು ಹೇಳಿ ಜಾಫರ್ ಷರೀಫ್ ಅವರು ನನಗೆ ಫೋನ್ ಸಂಪರ್ಕ ಕೊಡಿಸಿದರು. ಸೆಲ್ ಫೋನ್ ತಂತ್ರಜ್ಞಾನ ಭಾರತಕ್ಕೆ ಬರಲು ರಾಜೀವ್ ಗಾಂಧಿ ಅವರು ಹಾಗೂ ಅವರಿಗೆ ಸಲಹೆಗಾರರಾಗಿದ್ದ ಸ್ಯಾಮ್ ಪಿತ್ರೋಡ ಅವರು ಕಾರಣ ಎಂದರು.

ನನ್ನನ್ನು ಚನ್ನಪಟ್ಟಣದಿಂದ ಬೆಂಗಳೂರಿನ ತನಕ ಕಾರಿನಲ್ಲಿ ಜತೆಯಾಗಿ ಕರೆದುಕೊಂಡು ಬಂದ ರಾಜೀವ್ ಗಾಂಧಿ ಅವರು ರಾಜ್ಯದ ಪರಿಸ್ಥಿತಿಯ ಬಗ್ಗೆ ಅವಲೋಕಿಸಿದರು. ನನ್ನ ಬಳಿ ಚರ್ಚೆ ಮಾಡಿದರು. ಅಂದು ರಾತ್ರಿ ಏನು ಮಾತುಕತೆಯಾಯಿತು ಎಂದು ನಾನು ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ವೀರೇಂದ್ರ ಪಾಟೀಲ್ ಅವರು ಅಂದು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಆದರೆ ಅವರ ಆರೋಗ್ಯ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಇದನ್ನು ಗಮನಿಸಿದ ಅವರು ಮರಳಿ ಹೋಗುವಾಗ ವಿಮಾನ ನಿಲ್ದಾಣದಲ್ಲಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಗಿದೆ ಎಂದು ತಿಳಿಸಿದರು ಎಂದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ನಿಮಿತ್ತ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ ಕೆ ಶಿವಕುಮಾರ್ ಅವರು ಪುಷ್ಪ ನಮನ ಸಲ್ಲಿಸಿದರು.

ಗ್ಯಾರಂಟಿ ಸಮಿತಿಗಳಿಂದ ಪಟ್ಟಾ ಖಾತೆ ಹಂಚಿಕೆ

ಮುಂದಿನ ದಿನಗಳಲ್ಲಿ ಪಟ್ಟಾ ಖಾತೆ ಹಂಚಿಕೆಯನ್ನು ಅಧಿಕಾರಿಗಳು ಹಂಚಿಕೆ ಮಾಡುವುದಿಲ್ಲ. ಬದಲಾಗಿ ಪ್ರತಿ ಕ್ಷೇತ್ರದ ಗ್ಯಾರಂಟಿ ಸಮಿತಿಯ ಸದಸ್ಯರು ಜನರಿಗೆ ಖಾತೆಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿಯೂ ಇ-ಸ್ವತ್ತು ಖಾತೆಗಳ ಡಿಜಿಟಲೀಕರಣ ಮಾಡಲಾಗುತ್ತಿದೆ. ಇಲ್ಲಿಯೂ ಅದೇ ರೀತಿ ಹಂಚಿಕೆ ಮಾಡಲಾಗುವುದು. ಬಿಬಿಎಂಪಿ ತನ್ನ ಅಸ್ತಿತ್ವ ಕಳೆದುಕೊಂಡಿದೆ. ಈಗ ಗ್ರೇಟರ್ ಬೆಂಗಳೂರು ಜಾರಿಗೆ ಬಂದಿದೆ. ಶೀಘ್ರದಲ್ಲಿಯೇ ಚುನಾವಣೆ ನಡೆಯಲಿದೆ. ಮುಂದಕ್ಕೆ ಶಾಸಕರಾಗಬೇಕು ಎನ್ನುವ ಆಲೋಚನೆ ಇದ್ದವರು ಸ್ಥಳೀಯ ಸಂಸ್ಥೆ ಚುನಾವಣೆಗೆ ಸಿದ್ಧರಾಗಬೇಕು ಎಂದರು. ಭಯೋತ್ಪಾದಕ ದಾಳಿ ಬಗ್ಗೆ ಚರ್ಚೆ ನಡೆಯುತ್ತಿವೆ. ಬಿ.ಕೆ.ಹರಿಪ್ರಸಾದ್ ಅವರು ಹೇಳುವಂತೆ ಲೈನ್ ಆಫ್ ಕಂಟ್ರೋಲ್ ಇಂದ ಪಹಲ್ಗಾಮ್ ಗೆ ಬರುವುದಕ್ಕೆ ಹತ್ತು ದಿನವಾಗುತ್ತದೆ ಎಂದು ಹೇಳಲಾಗುತ್ತದೆ. ಇದೆಲ್ಲಾ ನಡೆದಿದ್ದು ನಿಜವೇ ಎಂದು ನಾವು ಅಧ್ಯಯನ ಮಾಡಬೇಕಿದೆ. ನಮಗೆ ಪಕ್ಷಕ್ಕಿಂತ ದೇಶ ಮುಖ್ಯ. ಇದರ ಬಗ್ಗೆ ನೀವು ನಾವು ತಿಳಿದುಕೊಳ್ಳಬೇಕಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಹೇಳಿದರು.

ರಾಜೀವ್ ಗಾಂಧಿ ಅವರ ಹತ್ಯೆಯಿಂದ ಸ್ತ್ರೀ ಶಕ್ತಿಗೆ, ಯುವ ಪೀಳಿಗೆ ಹಾಗೂ ಇಡೀ ದೇಶಕ್ಕೆ ದೊಡ್ಡ ನಷ್ಟವಾಗಿದೆ. ರಾಜೀವ್ ಗಾಂಧಿ ಅವರ ಬಗ್ಗೆ ಇಡೀ ಪ್ರಪಂಚದಲ್ಲಿಯೇ ಸಾಕಷ್ಟು ಒಲವಿತ್ತು. ಅವರನ್ನು ಇತರೇ ರಾಷ್ಟ್ರಗಳು ಅತ್ಯಂತ ಗೌರವದಿಂದ ನೋಡುತ್ತಿದ್ದರು. ಅಷ್ಟರ ಮಟ್ಟಿಗೆ ಅವರು ತಮ್ಮ ಆಧುನಿಕ ಚಿಂತನೆಗಳಿಂದ ಪ್ರಭಾವ ಬೀರಿದ್ದರು. ಇವರಿಂದ 18 ವರ್ಷಕ್ಕೆ ಮತದಾನದ ಹಕ್ಕು ದೊರೆಯಿತು, ಮಹಿಳೆಯರಿಗೆ ಸ್ಥಳೀಯ ಸಂಸ್ಥೆಯಲ್ಲಿ ಶೇ. 50 ರಷ್ಟು ಮೀಸಲಾತಿ ನೀಡಿದರು. ಪಕ್ಷಾಂತರ ವಿರೋಧಿ ಕಾಯ್ದೆಗೆ ಕಾನೂನು ತಂದರು. ದೆಹಲಿಗೆ ರಾಜ್ಯದ ಸ್ಥಾನಮಾನ ನೀಡಿದರು.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಮುಖದ ಮೇಲೆ ಮೂತ್ರ ಮಾಡಿದ್ದ ಆರೋಪ
ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಎಫ್‌ಐಆರ್

ಮುನಿರತ್ನ ವಿರುದ್ಧ ಮತ್ತೊಂದು ಅತ್ಯಾಚಾರ ಪ್ರಕರಣ ದಾಖಲು

ಬೆಂಗಳೂರು: ರಾಜರಾಜೇಶ್ವರಿ ನಗರ ಶಾಸಕ ಮುನಿರತ್ನ ವಿರುದ್ಧ ಮತ್ತೊಂದು ಅತ್ಯಾಚಾರ ಪ್ರಕರಣ ದಾಖಲಾಗಿದ್ದು, ಬಿಜೆಪಿ ಕಾರ್ಯಕರ್ತೆ ನೀಡಿದ ದೂರು ಆಧರಿಸಿ ಆರ್ ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಿಸಲಾಗಿದೆ.

ಮುನಿರತ್ನ ಹಾಗೂ ಅವರ ಬೆಂಬಲಿಗರಾದ ವಸಂತ, ಚನ್ನಕೇಶವ, ಕಮಲ್ ವಿರುದ್ಧ ಎಫ್ ಐಆರ್ ದಾಖಲಾಗಿದೆ. 2013ರಲ್ಲಿ ಸಾಮೂಹಿಕ ಅತ್ಯಾಚಾರ ನಡೆದಿದ್ದ ಬಗ್ಗೆ ಸಂತ್ರಸ್ತೆ ದೂರು ನೀಡಿದ್ದರು. ಶಾಸಕರ ಕಚೇರಿಯಲ್ಲೇ ಅತ್ಯಾಚಾರ ಎಸಗಲಾಗಿತ್ತು. ಅಷ್ಟೇ ಅಲ್ಲದೆ, ವೈರಸ್ ಇಂಜೆಕ್ಷನ್ ಚುಚ್ಚಿದ್ದರು. ಅದರಿಂದಾಗಿ ಇಡಿಆರ್ ಕಾಯಿಲೆ ಬಂದಿದೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಶಾಸಕರು ಮತ್ತು ಇತರ ಆರೋಪಿಗಳ ಕೃತ್ಯದಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ್ದಾಗಿ ಮಹಿಳೆ ಪೊಲೀಸರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಶಾಸಕರ ಕಚೇರಿಯಲ್ಲೇ ಬೆತ್ತಲಾಗಿಸಿ ಮುಖದ ಮೇಲೆ ಮೂತ್ರ ಮಾಡಿದರು: ಶಾಸಕರ ಕಚೇರಿಯಲ್ಲಿ ಆರೋಪಿಗಳು ರೂಮಿನಲ್ಲಿರುವ ದಿವಾನ್ ಮೇಲೆ ಕುಳಿತು ಕೊಳ್ಳಲು ಹೇಳಿದಾಗ ನಾನು ಒಪ್ಪದಿದ್ದಾಗ ಕೆನ್ನೆಗೆ ಹೊಡೆದಿದ್ದರು. ಬಳಿಕ ನಾನು ದಿವಾನ್ ಕಾಟ್ ಮೇಲೆ ಕುಳಿತು ಕೊಂಡಾಗ ಎ1, ಎ2 ಮತ್ತು ಎ3 ಆರೋಪಿತರುಗಳು ಬಲವಂತವಾಗಿ ಬೆತ್ತಲೆಗೊಳಿಸಿ, ದಿವಾನ್ ಕಾಟ್ ಮೇಲೆ ಮಲಗಿಸಿ, ಎಷ್ಟು ಬೇಡಿಕೊಂಡರು ಕೇಳದೇ ಬೆದರಿಕೆ ಹಾಕಿದ್ದಾರೆ. ಸಹಕರಿಸದೇ ಇದ್ದರೆ ನಿನ್ನ ಮಗನನ್ನು ಈಗಲೇ ಹೊಡೆದು ಹಾಕಿಸುತ್ತೇವೆಂದು ಹೇಳಿ ಬೆದರಿಸಿ, ಎ1 ಆರೋಪಿತನು ಎ2 ಆರೋಪಿತನಿಂದ ನನ್ನ ಮೇಲೆ ಬಲವಂತದಿಂದ ಅತ್ಯಾಚಾರ ಮಾಡಿಸಿದ್ದಾರೆ. ನಂತರ ಎ3 ಆರೋಪಿತನಿಂದಲೂ ಅತ್ಯಾಚಾರ ಮಾಡಿಸಿದ್ದಾರೆ. ಎ1 ಆರೋಪಿತನು ಫೋನ್ ಮಾಡಿ ಅಪರಿಚಿತ ಎ5 ಆರೋಪಿಯಾದ 40 ವರ್ಷ ವಯಸ್ಸಿನ ಗಂಡಸನ್ನು ಕರೆಸಿಕೊಂಡು ಆತನು ತಂದಿದ್ದ ಬಿಳಿಬಣ್ಣದ ಬಾಕ್ಸ್ ಪಡೆದು ಕೊಂಡಿದ್ದಾನೆ. ನಂತರ ಎ1 ಆರೋಪಿಯು ಪ್ಯಾಂಟ್ ಜಿಪ್ ಬಿಚ್ಚಿ ಬಾಯಿಗೆ ಮೂತ್ರ ವಿಸರ್ಜನೆ ಮಾಡಲು ಯತ್ನಿಸಿದಾಗ ಬಾಯಿ ಮುಚ್ಚಿಕೊಂಡಿದ್ದರಿಂದ ಮುಖದ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದಾನೆ. ಎ1 ಆರೋಪಿ ಎ2 ಮತ್ತು ಎ3 ಆರೋಪಿತರು ಗಳಿಗೆ ನನ್ನ ಕೈಗಳನ್ನು ಹಿಡಿದು ಕೊಳ್ಳುವಂತೆ ತಿಳಿಸಿ, ಬಿಳಿ ಬಣ್ಣದ ಬಾಕ್ಸ್‌ನಲ್ಲಿದ್ದ ಇಂಜೆಕ್ಷನ್ ಅನ್ನು ತಂದು ಎಡಗೈಗೆ ಚುಚ್ಚಿದ್ದಾನೆ ಎಂದು ಸಂತ್ರಸ್ತೆಯು ಪೊಲೀಸರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಏನಿದೆ?

ನಾನು ಬಿಜೆಪಿ ಮಹಿಳಾ ಕಾರ್ಯಕರ್ತೆಯಾಗಿ ಕೆಲಸ ಮಾಡಿಕೊಂಡು ಬಂದಿದ್ದು, ಮೊದಲನೆಯ ಪತಿ ರಾಜು 15 ವರ್ಷಗಳ ಹಿಂದೆ ಬಿಟ್ಟು ಹೋಗಿದ್ದರಿಂದ 5 ವರ್ಷಗಳ ಹಿಂದೆ ಜಗದೀಶ್ ಎಂಬುವರನ್ನು ಮನೆಯಲ್ಲಿಯೇ ವಿವಾಹ ಮಾಡಿಕೊಂಡು ಸಂಸಾರ ಮಾಡಿಕೊಂಡಿದ್ದೇನೆ. 2013 ರಲ್ಲಿ ನಾನು ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಎ1 ಆರೋಪಿ ಮುನಿರತ್ನ ಅವರು ಪೀಣ್ಯ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ವೇಶ್ಯಾವಾಟಿಕೆ ನಡೆಸುತ್ತಿರುತ್ತಾಳೆಂದು ಕೇಸು ದಾಖಲಿಸಿ ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಬಿಡುಗಡೆಯಾಗಿ ಬಂದ ನಂತರದಲ್ಲಿ ಮುನಿರತ್ನ ತನ್ನ ಬೆಂಬಲಿಗರಾದ ನಂದಿನಿ ಲೇಔಟ್ ವಾಸಿಗಳಾದ ಎ2 ವಸಂತ, ಎ3 ಚನ್ನಕೇಶವ, ಆಶ್ರಯನಗರದ ಎ4 ಕಮಲ್ ಮತ್ತು ಇತರರೊಂದಿಗೆ ಸೇರಿಕೊಂಡು ಆಶ್ರಯನಗರದ ವಾಸಿ ಸುನೀತಬಾಯಿ (ಮೂಗಿ) ಮೂಲಕ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಆಫ್ ಮರ್ಡರ್ ಪ್ರಕರಣ ದಾಖಲಿಸಿ ಮತ್ತೆ ತನ್ನನ್ನು ಜೈಲಿಗೆ ಕಳುಹಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ದಾಖಲಾಗಿದೆ.

ಬೆಂಗಳೂರಿಗೆ ಬಂದ ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಅವರನ್ನು ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ ಸುಧೀಂದ್ರ ಸ್ವಾಗತಿಸಿದರು.

368 ಮರಗಳಿಗೆ ಕೊಡಲಿ; ವಿರೋಧ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ಇಲಾಖೆಯು ಜಾರಿಗೆ ತಂದಿರುವ ವಾಣಿಜ್ಯ ಯೋಜನೆಯ ಸಲುವಾಗಿ 368 ಮರಗಳನ್ನು ಕಡಿಯಲು ನಿವಾಸಿಗಳು ಹಾಗೂ ಪರಿಸರ ಕಾರ್ಯಕರ್ತರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ವಸಂತ ನಗರದ ಕಂಟೋನ್ಮೆಂಟ್ ಕಾಲೋನಿಯಲ್ಲಿ ನಡೆದ ಸಾರ್ವಜನಿಕ ಸಮಾಲೋಚನೆಯಲ್ಲಿ ವಿರೋಧ ವ್ಯಕ್ತವಾಗಿದ್ದು, ಹೆರಿಟೇಜ್ ವೇಜಯ ಸಂಸ್ಥಾಪಕಿಯು ಮಾತನಾಡಿ, ಮರ ಕತ್ತರಿಸುವ ಪ್ರಸ್ತಾಪವನ್ನು ವಿರೋಧಿಸಿ 10,500 ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ನಾವು ಇದರ ವಿರುದ್ಧ ದೃಢವಾಗಿ ನಿಲ್ಲುತ್ತೇವೆ. ಅರಣ್ಯ ಇಲಾಖೆಯು ನಮ್ಮ ಮರಗಳನ್ನು ರಕ್ಷಿಸಬೇಕು. ಇಲ್ಲದಿದ್ದರೆ, ನಾವು ಅದನ್ನು ನಮ್ಮ ಕೈಯಲ್ಲಿ ತೆಗೆದುಕೊಂಡು ಈ ಪರಂಪರೆಯನ್ನು ಉಳಿಸಿಕೊಳ್ಳಲು ಏನು ಅಗತ್ಯವಿದೆಯೋ ಅದೆಲ್ಲಾವನ್ನು ಮಾಡುತ್ತೇವೆ ಎಂದು ಹೇಳಿದರು. ಸುಧಾರಿತ ಸಂಚಾರ ನಿರ್ವಹಣೆ, ಸಾರ್ವಜನಿಕ ಅನುಕೂಲತೆ ಮತ್ತು ಹೆಚ್ಚಿದ ಆದಾಯದಂತಹ ಅಂಶಗಳನ್ನು ಉಲ್ಲೇಖಿಸಿ, ಪ್ರಸ್ತಾವಿತ ಯೋಜನೆಯ ಪ್ರಯೋಜನಗಳನ್ನು ರೈಲ್ವೆ ಅಧಿಕಾರಿಗಳು ವಿವರಿಸಿದರು. ಅವರ ವಾದಗಳನ್ನು ತಕ್ಷಣವೇ ತಿರಸ್ಕರಿಸಲಾಯಿತು. ಅನೇಕರು ಪ್ರಸ್ತಾವನೆಯನ್ನು ವೀಕ್ಷಿಸಲು ನಿರಾಕರಿಸಿದರು. ಈ ಯೋಜನೆಯ ಅಡಿಪಾಯ ಯಾವಾಗಲೂ ಸಾರ್ವಜನಿಕ ಕಾಳಜಿ ಮತ್ತು ಅಭಿಪ್ರಾಯಗಳನ್ನು ಆಧರಿಸಿರುತ್ತದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಾಮಿ ಮಾತನಾಡಿ, ಯೋಜನೆಯು ಅದರ ಅಂತಿಮ ಹಂತದಲ್ಲಿ ನಮಗೆ ಬಂದಿತು. ನಾವು ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೆವು ಮತ್ತು ಈಗ ಸಮುದಾಯವು ತನ್ನ ವಿರೋಧವನ್ನು ವ್ಯಕ್ತಪಡಿಸಿದೆ, ನಿಮ್ಮ ಆತಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಆಂಧ್ರಪ್ರದೇಶಕ್ಕೆ ಕುಮ್ಕಿ ಆನೆ ಹಸ್ತಾಂತರ ಕಾರ್ಯಕ್ರಮದಲ್ಲಿ ಸಚಿವ ಈಶ್ವರ್ ಖಂಡ್ರೆ ಅಭಿಮತ

ನೆರೆ ರಾಜ್ಯದ ಬಾಂಧವ್ಯಕ್ಕೆ ರಾಜಕೀಯ ಅಡ್ಡಿಯಲ್ಲ

ಬೆಂಗಳೂರು: ನೆರೆ ರಾಜ್ಯಗಳು ಉತ್ತಮ ಸೌಹಾರ್ದ ಸಂಬಂಧ ಹೊಂದಿರಬೇಕು. ಈ ಬಾಂಧವ್ಯಕ್ಕೆ ರಾಜಕೀಯ ಅಡ್ಡಿಯಾಗುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಭಿಪ್ರಾಯಪಟ್ಟರು.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಬುಧವಾರ ನಡೆದ ನೆರೆಯ ರಾಜ್ಯ ಆಂಧ್ರಪ್ರದೇಶಕ್ಕೆ ನಾಲ್ಕು ಕುಮ್ಕಿ ಆನೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೆರೆ ರಾಜ್ಯಗಳೊಂದಿಗೆ ಉತ್ತಮ ಬಾಂಧವ್ಯಕ್ಕೆ ಇಂದಿನ ಈ ಆನೆಗಳ ಹಸ್ತಾಂತರ ಸಹಕಾರಿಯಾಗಲಿದೆ. ಕಳೆದ ವರ್ಷ ಬೆಂಗಳೂರಿಗೆ ಬಂದಿದ್ದ ಪವನ್ ಕಲ್ಯಾಣ್ ಆಂಧ್ರದಲ್ಲಿನ ಆನೆ ಮತ್ತು ಮಾನವ ಸಂಘರ್ಷದ ಬಗ್ಗೆ ತಿಳಿಸಿ 8 ಕುಮ್ಕಿ ಆನೆಗಳನ್ನು ನೀಡುವಂತೆ ಮನವಿ ಮಾಡಿದ್ದರು. ಅವರ ಮನವಿ ಪರಿಗಣಿಸಿ ರಾಜ್ಯದಿಂದ 6 ಆನೆಗಳನ್ನು ನೀಡಲು ಸಮ್ಮತಿಸಲಾಗಿದೆ. ಅದರನ್ವಯ ಈಗ 4 ಆನೆ ನೀಡುತ್ತಿದ್ದು, ಮುಂದೆ ಇನ್ನೆರಡು ಆನೆಗಳನ್ನು ನೀಡಲಾಗುವುದು. ಇದು ನೆರೆಯ ರಾಜ್ಯದೊಂದಿಗಿನ ಸೌಹಾರ್ದ ಸಂಬಂಧ ಹೆಚ್ಚಿಸುವುದರ ಜತೆಗೆ, ಕರ್ನಾಟಕ ಗಡಿ ಮತ್ತು ಆಂಧ್ರದ ಆನೆ-ಮಾನವ ಸಂಘರ್ಷಕ್ಕೆ ಪರಿಹಾರ ಒದಗಿಸಲಿದೆ ಎಂದರು.

ಆನೆಗಳಿಗೆ ಪೂಜೆ: ದಸರಾ ಆನೆಗಳು ವೀರನಹೊಸಹಳ್ಳಿಯಿಂದ ಮೈಸೂರಿಗೆ ಬರುವಾಗ ಪೂಜೆ ಮಾಡಿ ಕಳಿಸುವ ರೀತಿಯಲ್ಲೇ ರಾಜ್ಯದಿಂದ ಆಂಧ್ರಕ್ಕೆ ನೀಡುತ್ತಿರುವ ಆನೆಗಳಿಗೂ ಪೂಜೆ ಸಲ್ಲಿಸಲಾಗುತ್ತಿದೆ. ಇದು ಆನೆಗಳ ಬಗ್ಗೆ ಕರ್ನಾಟಕ ರಾಜ್ಯಕ್ಕೆ ಇರುವ ಪ್ರೀತಿ, ವಾತ್ಸಲ್ಯದ ಧ್ಯೋತಕವಾಗಿದೆ.

ವಿಧಾನಸೌಧದ ಮುಂಭಾಗದಲ್ಲಿ ನಡೆದ ಆಂಧ್ರಪ್ರದೇಶಕ್ಕೆ ಕುಮ್ಕಿ ಆನೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಅವರನ್ನು ಸನ್ಮಾನಿಸಿದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಸಚಿವರಾದ ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ರಹೀಂ ಖಾನ್ ಮತ್ತಿತರರಿದ್ದರು.

ಆಂಧ್ರಪ್ರದೇಶಕ್ಕೆ ನೀಡಲಾಗಿರುವ ಆನೆಗಳ ಆರೋಗ್ಯದ ಬಗ್ಗೆ ಪ್ರತಿ ವರ್ಷ ವರದಿ ತರಿಸಿಕೊಳ್ಳಲಾಗುವುದು. ಈ ಅಂಶವನ್ನು ಆನೆ ಹಸ್ತಾಂತರ ಕುರಿತ ಒಪ್ಪಂದದಲ್ಲೂ ಸೇರಿಸಲಾಗಿದೆ. ಪವನ್ ಕಲ್ಯಾಣ್ ಅವರು ಆನೆಗಳನ್ನು ಮುತುವರ್ಜಿಯಿಂದ ಕಾಪಾಡುವ ಭರವಸೆ ನೀಡಿದ್ದಾರೆ ಎಂದರು.

ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವ ಪವನ್ ಕಲ್ಯಾಣ್ ಅವರಿಗೆ ಪಳಗಿಸಿದ ಆನೆಗಳನ್ನು ಹಸ್ತಾಂತರ ಮಾಡಿದರು. ಈ ವೇಳೆ ರಾಜ್ಯದಿಂದ ಆಂಧ್ರ ಪ್ರದೇಶ ರಾಜ್ಯಕ್ಕೆ ಕುಮ್ಕಿ ಆನೆಗಳನ್ನು ಹಸ್ತಾಂತರಿಸುವ ಒಡಂಬಡಿಕೆಗೆ ಸಹಿ ಹಾಕಿದರು. ಸಚಿವರಾದ ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ರಹೀಂ ಖಾನ್, ಸರಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಆಂಧ್ರಪ್ರದೇಶಕ್ಕೆ ನೀಡಲಾದ ಆನೆಗಳ ವಿವರ

- ಕೃಷ್ಣ (15 ವರ್ಷ) 2022ರಲ್ಲಿ ಚಿಕ್ಕಮಗಳೂರಿನಲ್ಲಿ ಸೆರೆ ಹಿಡಿದ ಆನೆ
- ಶಿವಮೊಗ್ಗ ಅಭಿಮನ್ಯು (14 ವರ್ಷ) 2023ರಲ್ಲಿ ಹೊನ್ನಾಳಿಯಲ್ಲಿ ಸೆರೆ ಹಿಡಿದ ಆನೆ
- ದೇವ (39 ವರ್ಷ) 2019ರಲ್ಲಿ ಕುಶಾಲನಗರದಲ್ಲಿ ಸೆರೆ ಹಿಡಿದ ಆನೆ
- ರಂಜನ್ (26 ವರ್ಷ) ದುಬಾರೆ ಶಿಬಿರದಲ್ಲೇ ಜನಿಸಿದ ಆನೆ

ಮಾನವ ಆನೆ ಸಂಘರ್ಷ ತಡೆಗಟ್ಟಲು ಅಕ್ಕ-ಪಕ್ಕದ ರಾಜ್ಯಗಳ ಸಹಕಾರ ಅಗತ್ಯ. ದೇಶದಲ್ಲೇ ಆನೆ ಸಂಪತ್ತು ಹೆಚ್ಚಾಗಿರುವ ರಾಜ್ಯ ನಮ್ಮದು. 3695 ಆನೆಗಳು ನಮ್ಮಲ್ಲಿವೆ. ಮಾನವ, ಆನೆ ಸಂಘರ್ಷ ತಡೆಯುವುದರಿಂದ ಜೀವ ಹಾನಿ, ಬೆಳೆ ಹಾನಿ ತಪ್ಪುತ್ತದೆ. ಈ ಮಹತ್ವದ ಉದ್ದೇಶದಿಂದಲೇ ರಾಜ್ಯದಿಂದ ನಾಲ್ಕು ಕುಮ್ಕಿ ಆನೆಗಳನ್ನು ಆಂಧ್ರಕ್ಕೆ ಹಸ್ತಾಂತರಿಸಲಾಗಿದೆ. ಮುಂದಿನ ದಿನಗಳಲ್ಲಿ ಎರಡು ಆನೆಗಳನ್ನು ನೀಡಲಾಗುತ್ತದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ತೆಲುಗಿನಲ್ಲಿ ಪ್ರಕೃತಿ, ಅದ್ದಂ ರಂಡೂ ಒಕಟೇ, ಅದ್ದಂ ನುವ್ವಲಾಗವುಂಟೆ ಅಲಾಗೇ ಚೂಪಿಸ್ತುಂದಿ, ಪ್ರಕೃತಿ ನುವ್ವು ದಾನ್ನೆಂತ ಕಾಪಾಡಿತೆ ಅದಿ ನಿನ್ನಂತೆ ಕಾಪಾಡುತುಂದಿ. ಇದರ ಅರ್ಥ, ಪ್ರಕೃತಿ – ಕನ್ನಡಿ, ಎರಡೂ ಒಂದೇ. ಕನ್ನಡಿ ಇರುವ ರೂಪವನ್ನೇ ನಿಮಗೆ ತೋರಿಸುತ್ತದೆ. ನೀವು ಪ್ರಕೃತಿ ರಕ್ಷಿಸಿದರೆ, ಪ್ರಕೃತಿ ನಿಮ್ಮನ್ನು ರಕ್ಷಿಸುತ್ತದೆ. ಸಂಸ್ಕೃತದಲ್ಲಿ ವೃಕ್ಷೋ ರಕ್ಷತಿ ರಕ್ಷಿತಃ ಎಂದು ಹೇಳುತ್ತಾರೆ. ನಾವು ಮರ ರಕ್ಷಿಸಿದರೆ ಮರ ನಮ್ಮನ್ನು ರಕ್ಷಿಸುತ್ತದೆ. ಹೀಗಾಗಿ ಎಲ್ಲರೂ ಸಸಿ ನೆಟ್ಟು ಪೋಷಿಸುವ ಸಂಕಲ್ಪ ಮಾಡೋಣ.

– ಈಶ್ವರ್ ಖಂಡ್ರೆ, ಅರಣ್ಯ ಸಚಿವರು

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ದಿವಾಳಿ ಮಾಡೆಲ್ ಆಫ್ ಕರ್ನಾಟಕ ಬಿರುದು ನೀಡುತ್ತಿದ್ದೇವೆ: ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ

ಸರಕಾರದ ವಿರುದ್ಧ ಬಿಜೆಪಿಯ ಚಾರ್ಜ್‌ಶೀಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರ 2ನೇ ವರ್ಷದ ಸಂಭ್ರಮಾಚರಣೆ ಆಚರಿಸಿದ ಬೆನ್ನಲ್ಲೇ, ಪ್ರತಿಪಕ್ಷ ಬಿಜೆಪಿ, ಸರಕಾರದ ವಿರುದ್ಧ ಚಾರ್ಜ್‌ಶೀಟ್ ಬಿಡುಗಡೆಗೊಳಿಸಿದೆ. ಸಿಎಂ ಸಿದ್ದರಾಮಯ್ಯಗೆ ದಿವಾಳಿ ಮಾಡೆಲ್ ಆಫ್ ಕರ್ನಾಟಕ ಬಿರುದನ್ನು ನೀಡುತ್ತಿದ್ದೇವೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ನಗರ ಕಾರ್ಯಾಲಯದಲ್ಲಿ ಕಾಂಗ್ರೆಸ್ ಸರಕಾರದ ಎರಡು ವರ್ಷದ ಸಾಧನೆಯ ವಿರುದ್ಧ ಚಾರ್ಜ್ ಶೀಟ್ ಬಿಡುಗಡೆ ಮಾಡಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರಕಾರ ದಿವಾಳಿಯಾಗಿದೆ. ಸಾಲ ಪಡೆದು ಸಂಬಳ ಕೊಡುವಂಥ ಸ್ಥಿತಿ ಬಂದಿದೆ. ನಮ್ಮ ಡಿ.ಕೆ.ಶಿವಕುಮಾರ್ ಇದನ್ನು ಸರಿಯಾಗಿ ಹೇಳಿದ್ದಾರೆ. ತಿಂಗಳಿಗೊಮ್ಮೆ 2 ಸಾವಿರ ಹಣ ಕೊಡಲು ನಿಮ್ಮಪ್ಪನ ಮನೆ ಗಂಟಾ ಎಂದು ಕೇಳಿದ್ದಾರೆ ಎಂದರು.

ತಿಂಗಳಿಗೊಮ್ಮೆ 2 ಸಾವಿರ ಫಟಾಫಟ್ ಹಣ ಕೊಡುವುದಾಗಿ ರಾಹುಲ್ ಗಾಂಧಿ ಹೇಳಿದ್ದರು. ಇಲ್ಲಿ ಶಿವಕುಮಾರ್ ಕಟಾಕಟ್, ಯಾವಾಗ ಹಣ ಬರುತ್ತೋ ಆಗ ದುಡ್ಡು ಕೊಡುವುದಾಗಿ ಹೇಳಿದ್ದಾರೆ ಎಂದರು.

ಯಾವ ಸಾಧನೆಗೆ ಈ ಸಂಭ್ರಮಾಚರಣೆ?: ಮುಖ್ಯಮಂತ್ರಿಗಳೇ.. ಯಾವ ಸಾಧನೆಗಾಗಿ ಈ 2 ವರ್ಷದ ಸಂಭ್ರಮಾಚರಣೆ ಮಾಡಿದ್ದೀರಿ? ಹಾಲಿನ ದರ ಏರಿಸಿದ್ದೀರಿ. ನೀರು, ವಿದ್ಯುತ್, ಪೆಟ್ರೋಲ್, ಡೀಸೆಲ್, ಆಸ್ತಿ ತೆರಿಗೆ- ಇವೆಲ್ಲವನ್ನೂ ಏರಿಸಿದ್ದೀರಿ. ದರ ಏರಿಸಿದ ಪರಿಣಾಮವಾಗಿ ಜನರು ಕಷ್ಟದಲ್ಲಿರುವಾಗಿ, ಸಮಾವೇಶ ಮಾಡಬೇಕೆಂದು ನಿಮಗೆ ಯಾಕೆ ಅನ್ನಿಸಿದೆ? ಎಂದು ಪ್ರಶಿಸಿದರಲ್ಲದೆ, ಎರಡು ವರ್ಷದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 187 ಕೋಟಿಯನ್ನು ಫಟಾಫಟ್ ಲೂಟಿ ಮಾಡಿದ್ದೀರಿ. ಇನ್ನೊಂದೆಡೆ 89 ಕೋಟಿ ಲೂಟಿ ಆದುದಾಗಿ ಸಿದ್ದರಾಮಯ್ಯನವರೇ ಅಧಿವೇಶನದಲ್ಲೇ ಹೇಳಿದ್ದಾರೆ. ಅದಕ್ಕಾಗಿ ಈ ಸಂಭ್ರಮವೇ? ಮುಡಾ ಹಗರಣದಲ್ಲಿ ವಾಸ್ತು ಪ್ರಕಾರ ಇರುವ 14 ಮೂಲೆ ನಿವೇಶನಗಳನ್ನು ಲೂಟಿ ಹೊಡೆದುದಕ್ಕೆ ನಿಮ್ಮ ಈ ಸಂಭ್ರಮಾಚರಣೆಯೇ? ಎಂದು ಪ್ರಶ್ನಿಸಿದರು.

ವಕ್ಫ್ ಮಂಡಳಿ ಹೆಸರಿನಲ್ಲಿ ಮುಸ್ಲಿಮರು ಲಕ್ಷಾಂತರ ಎಕರೆ ರೈತರ ಜಮೀನು, ದೇವಸ್ಥಾನದ ಆಸ್ತಿಯನ್ನು ಲೂಟಿ ಹೊಡೆದರಲ್ಲವೇ? ಅವರಿಗೆಲ್ಲ ಇದೇ ಜಮೀರ್ ಅಹ್ಮದ್ ಕೃಪಾಶೀರ್ವಾದ ಮಾಡಿದ್ದರಲ್ಲವೇ? ವಕ್ಫ್ ಆಸ್ತಿ ವಾಪಸ್ ಕೊಡಿಸುವುದಾಗಿ ಹೇಳಿಕೆ ಕೊಟ್ಟರಲ್ಲವೇ? ಇದಕ್ಕಾಗಿ ನಿಮ್ಮ ಸಾಧನಾ ಸಮಾವೇಶ ಮಾಡುತ್ತಿದ್ದೀರಾ ? ಕೆಪಿಎಸ್‌ಸಿ ಪ್ರಶ್ನೆಪತ್ರಿಕೆ ತಯಾರು ಮಾಡಲು ಯೋಗ್ಯತೆ ಇಲ್ಲದ ಸರಕಾರ ಇದು. ಕನ್ನಡ ಅನುವಾದದಲ್ಲಿ 79 ತಪ್ಪು ಮಾಡಿದ್ದಾರೆ. 2 ಲಕ್ಷ ಅಭ್ಯರ್ಥಿಗಳು ಇದ್ದರು. ಅವರ ಮನೆ, ಜೀವನ ಹಾಳು ಮಾಡಿದ್ದೀರಲ್ಲವೇ? ಅವರ ಬಾಳಿಗೆ ಕೊಡಲಿ ಇಟ್ಟಿದ್ದಕ್ಕೆ ಸಾಧನಾ ಸಮಾವೇಶ ಮಾಡುತ್ತೀರಾ ಎಂದು ಪ್ರಶ್ನೆ ಮಾಡಿದರು.

ತಂದೆ, ತಾಯಿಯ ಆಸೆಗೆ ಕೊಳ್ಳಿ ಇಟ್ಟಿರಲ್ಲವೇ?: ಚಾಮರಾಜನಗರ, ಮಂಡ್ಯ, ರಾಯಚೂರು ಸೇರಿ 9 ವಿಶ್ವವಿದ್ಯಾಲಯ ಯಾಕೆ ಮುಚ್ಚಿದ್ದೀರಿ? ಅದಕ್ಕೆ ಕೇವಲ 250 ಕೋಟಿ ಬೇಕಾಗಿತ್ತು. ನಿಮಗೆ ಬಾರ್, ವೈನ್ ಸ್ಟೋರ್‌ಗಳಿಂದ ಬರುವ ಹಣದ ಶೇ.10ರಷ್ಟನ್ನು ಹಾಕಿದ್ದರೆ ಬಡ ವಿದ್ಯಾರ್ಥಿಗಳ ಆಶಯ ಈಡೇರಿಸಬಹುದಿತ್ತು. ಮಗ, ಮಗಳು ವಿದ್ಯಾವಂತರಾಗುವ ತಂದೆ, ತಾಯಿಯ ಆಸೆಗೆ ಕೊಳ್ಳಿ ಇಟ್ಟಿರಲ್ಲವೇ? ಎಂದು ಆರೋಪಿಸಿರಲ್ಲದೆ, ರಾಜ್ಯದ 40 ಸರಕಾರಿ ಸಂಸ್ಥೆಗಳು ದಿವಾಳಿ ಆಗಿವೆ. ಸಾರ್ವಜನಿಕ ವಲಯದ 127 ಉದ್ಯಮಗಳಲ್ಲಿ 60 ಉದ್ಯಮಗಳು ನಷ್ಟದಲ್ಲಿವೆ. ಈ ಕಂಪನಿಗಳು 46,800 ಕೋಟಿ ಸಾಲ ಮಾಡಿವೆ. ಪ್ರವಾಸೋದ್ಯಮ, ರಾಜೀವ್ ಗಾಂಧಿ ವಸತಿ ನಿಗಮ, ಮೈಸೂರು ಪೇಪರ್ ಮಿಲ್ಸ್, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಬೆಸ್ಕಾಂ ಮುಚ್ಚುವ ಸ್ಥಿತಿಯಲ್ಲಿದೆ ಎಂದು ಸಿಎಜಿ ವರದಿ ಉಲ್ಲೇಖಿಸಿ ತಿಳಿಸಿದರು.

ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಕೆ.ಗೋಪಾಲಯ್ಯ, ಎಸ್. ರಘು, ಸಿ.ಕೆ.ರಾಮಮೂರ್ತಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ,ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಎ.ಆರ್.ಸಪ್ತಗಿರಿಗೌಡ ಉಪಸ್ಥಿತರಿದ್ದರು.

ಕಾಂಗ್ರೆಸ್ ಸರಕಾರವನ್ನು ಪ್ರಶ್ನಿಸಿ ರಾಜ್ಯ ಬಿಜೆಪಿ ನಾಯಕರು ಬಿಜೆಪಿ ಕಾರ್ಯಾಲಯದಲ್ಲಿ ಚಾರ್ಜ್‌ಶೀಟ್ ಬಿಡುಗಡೆ ಮಾಡಿದರು.

ಹುಬ್ಬಳ್ಳಿಯಲ್ಲಿ ನೇಹಾ ಲವ್ ಜಿಹಾದ್ ಕೊಲೆ ಆಯಿತು. ಇದಕ್ಕಾಗಿ ಸಂಭ್ರಮಾಚರಣೆಯೇ? ನಾಗಮಂಗಲದಲ್ಲಿ ಪೊಲೀಸ್ ವ್ಯಾನಿನಲ್ಲೇ ಗಣೇಶನ ವಿಗ್ರಹದ ಮೆರವಣಿಗೆ ನಡೆಸಿ ವಿಗ್ರಹ ವಿಸರ್ಜಿಸಿದ್ದೀರಿ. ಗಣೇಶನಿಗೂ ಜೈಲುವಾಸ ಮಾಡಿದ್ದೀರಿ. ಇದಕ್ಕೋಸ್ಕರ ಈ ಸಮಾವೇಶವೇ? ಪಾಕಿಸ್ತಾನದ ಜೊತೆ ಯುದ್ಧ ಬೇಡ ಎಂದಿದ್ದೀರಿ. ಪಾಕಿಸ್ತಾನ ಜಿಂದಾಬಾದ್ ಎಂದರೆ, ನಸೀರ್ ಸಾಬ್ ಜಿಂದಾಬಾದ್ ಹೇಳಿಕೆ ಕೊಟ್ಟಿರಿ. ಫೊರೆನ್ಸಿಕ್ ವರದಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದದ್ದು ಸಾಬೀತಾಗಿದೆ. ನಿಮಗೆ ಮಾನ ಮರ್ಯಾದೆ ಇದೆಯೇ ಕಾಂಗ್ರೆಸ್ಸಿಗರೇ?

–ಆರ್. ಅಶೋಕ, ಪ್ರತಿಪಕ್ಷ ನಾಯಕ

ಅಂತಾರಾಷ್ಟ್ರೀಯ ಬಾನಿನಲ್ಲಿ ಕನ್ನಡದ ಬಾನು ಹಾರ್ಟ್ ಲ್ಯಾಂಪ್‌ಗೊಲಿದ ಬುಕರ್

ಹರೀಶ್ ಕೇರ

ಇದು ಕನ್ನಡಮ್ಮನ ಕೀರ್ತಿ ಕಿರೀಟಕ್ಕೆ ಗರಿ ಏರಿದ ಹೆಮ್ಮೆಯ ಕ್ಷಣ, ಕನ್ನಡ ಸಾಹಿತ್ಯಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರೆತ ಅಪರೂಪದ ಗಳಿಗೆಯೂ ಹೌದು. ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪುರಸ್ಕಾರವು ಕನ್ನಡದ ಕತೆಗಾರ್ತಿ, ಸಾಹಿತಿ ಹಾಸನದ ಬಾನು ಮುಷ್ತಾಕ್ ಅವರಿಗೆ ಸಂದಿದೆ. ಅವರ 'ಹಸೀನಾ ಮತ್ತು ಇತರ ಕತೆಗಳು' ಸಣ್ಣಕತೆಗಳ ಸಂಕಲನದ ಇಂಗ್ಲಿಷ್ ಅನುವಾದ 'ಹಾರ್ಟ್ ಲ್ಯಾಂಪ್'ಗೆ ಈ ವರ್ಷದ ಬುಕರ್ ಪ್ರಶಸ್ತಿ ದೊರೆತಿದೆ. ಇದು ಕನ್ನಡಕ್ಕೆ, ಕನ್ನಡದ ಕತೆಗಾರ್ತಿಗೆ, ಕನ್ನಡದ ಕತೆಗಳಿಗೆ ದೊರೆತಿರುವ ಮೊದಲ ಬುಕರ್ ಪ್ರಶಸ್ತಿ. ಹಾಗಾಗಿಯೇ ಇದು ಬಾನು ಮುಷ್ತಾಕ್ ಅವರಿಗಷ್ಟೇ ಅಲ್ಲ, ಸಮಸ್ತ ಕನ್ನಡಿಗರಿಗೂ ಸಂಭ್ರಮದ ಕ್ಷಣ.

ಪತ್ರಕರ್ತೆ ದೀಪಾ ಭಾಸ್ತಿ ಅವರು ಬಾನು ಮುಷ್ತಾಕ್ ಅವರ ಸಣ್ಣ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದರು. ಈ ಕೃತಿಯನ್ನು ಪೆಂಗ್ವಿನ್ ಪ್ರಕಾಶನ ಪ್ರಕಟಿಸಿತ್ತು. ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಇಂಟರ್‌ನ್ಯಾಷನಲ್ ಬುಕರ್ ಪ್ರಶಸ್ತಿ ಕುರಿತ ಅಧಿಕೃತ ಘೋಷಣೆ ಹೊರಬಿದ್ದಿದ್ದು, ವಿಜೇತರಿಗೆ 50,000 ಪೌಂಡ್ ಬಹುಮಾನ ಅಂದರೆ, 57.48 ಲಕ್ಷ ರು. ಸಿಗಲಿವೆ. ಇದನ್ನು ಲೇಖಕರು ಹಾಗೂ ಅನುವಾದಕರ ನಡುವೆ ಹಂಚಲಾಗುತ್ತದೆ.

ಬಾನು ಮುಷ್ತಾಕ್‌ರವರು ಕೃತಿಯ ಅನುವಾದಕಿ ದೀಪಾ ಭಾಸ್ತಿ ಅವರೊಂದಿಗೆ ಈ ವಿಶೇಷ ಸಂದರ್ಭದಲ್ಲಿ ಲಂಡನ್‌ನಲ್ಲಿದ್ದು ಪ್ರಶಸ್ತಿಯನ್ನು ಸ್ವೀಕರಿಸಿದರು. 1990 ಮತ್ತು 2023ರ ನಡುವೆ ಪ್ರಕಟಗೊಂಡ 12 ಕತೆಗಳನ್ನೊಳಗೊಂಡ ಈ ಸಂಕಲನವನ್ನು ದೀಪಾ ಭಾಸ್ತಿ ಅವರು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದರು. ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ದೈನಂದಿನ ಬದುಕನ್ನು ಆಧರಿಸಿದ ಈ ಕತೆಗಳು ಇದೀಗ ಅಂತಾರಾಷ್ಟ್ರೀಯ ಮೇರು ಮನ್ನಣೆ ಪಡೆದಿರುವುದು ನಿಜಕ್ಕೂ ಕನ್ನಡಿಗರ ಪಾಲಿಗೆ ಹೆಮ್ಮೆಯ ವಿಷಯ.

ಬುಕರ್ ಪ್ರಶಸ್ತಿಗೆ ಅರ್ಹತೆ ಏನು?

ಬುಕರ್ ಪ್ರಶಸ್ತಿಯಲ್ಲಿ ಎರಡು ವಿಧಗಳಿವೆ. ಒಂದು ಬುಕರ್ ಪ್ರಶಸ್ತಿ, ಇನ್ನೊಂದು ಇಂಟರ್‌ನ್ಯಾಷನಲ್ ಬುಕರ್ ಪ್ರಶಸ್ತಿ. ಬುಕರ್ ಪ್ರಶಸ್ತಿ 1969ರಲ್ಲಿ Man Booker Prize ಎಂಬ ಹೆಸರಿನಿಂದ ಆರಂಭವಾಯಿತು. ಇಂಗ್ಲಿಷ್‌ನಲ್ಲೇ ರಚನೆಯಾದ ಹಾಗೂ ಬ್ರಿಟನ್‌ನಲ್ಲಿ ಪ್ರಕಟವಾದ ಕೃತಿಗೆ ಈ ಬಹುಮಾನ ನೀಡಲಾಗುತ್ತದೆ. ಅದನ್ನೇ 'ಬುಕರ್ ಅವಾರ್ಡ್' ಎನ್ನಲಾಗುತ್ತದೆ. ಎರಡನೆಯದು Man Booker International Prize, ಅದನ್ನು 2005ರಲ್ಲಿ ಆರಂಭಿಸಲಾಯಿತು. ಅದು ಬೇರೆ ಯಾವುದೇ ಭಾಷೆಯಿಂದ ಇಂಗ್ಲಿಷ್‌ಗೆ ಅನುವಾದವಾಗಿರುವ, ಬ್ರಿಟನ್‌ನಲ್ಲಿ ಪ್ರಕಟವಾಗಿರುವ ಕೃತಿಗೆ ಕೊಡಲಾಗುತ್ತದೆ. ಮೂಲ ಲೇಖಕರು ಹಾಗೂ ಅನುವಾದಕರಿಗೆ ಬಹುಮಾನದ ಹಣವನ್ನು ಹಂಚಲಾಗುತ್ತದೆ. ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರಿಗೆ 'ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಸಂದಿದೆ. ಕನ್ನಡದ ಕೃತಿಗೆ ಹಾಗೂ ಸಣ್ಣಕತೆಗಳ ಸಂಕಲನಕ್ಕೆ ಇದೇ ಮೊದಲ ಬಾರಿಗೆ ಈ ಪುರಸ್ಕಾರ ದೊರೆಯುತ್ತಿದೆ.

ಬಾನು ಮುಷ್ತಾಕ್ ಹಿನ್ನೆಲೆ

ಕನ್ನಡದ ಸಾಹಿತ್ಯಾಸಕ್ತರಿಗೆ ಬಾನು ಮುಷ್ತಾಕ್ ಅವರ ಹೆಸರು ಚಿರಪರಿಚಿತ. ಅವರ ಕೃತಿಗಳು ಸಿನಿಮಾ ಕೂಡ ಆಗಿವೆ. 1954 ಏಪ್ರಿಲ್ 3ರಂದು ಹಾಸನ ಜಿಲ್ಲೆಯ ವಲಭಬಾಯಿಯಲ್ಲಿ ಅವರು ಜನಿಸಿದರು. ಅರಸೀಕೆರೆಯಲ್ಲಿ ಶಾಲೆಗೆ ಸೇರಿದ ಬಾನು ಮುಷ್ತಾಕ್‌ಗೆ ಉರ್ದು ತಲೆಗೆ ಹೋಗಲಿಲ್ಲ, ಹೀಗಾಗಿ ಅವರ ಪೋಷಕರು ಕನ್ನಡವನ್ನಾದರೂ ಕಲಿಯಲಿ ಎಂದು ಆಕೆಯನ್ನು ಶಿವಮೊಗ್ಗದ ಕ್ರಿಶ್ಚಿಯನ್ ಕಾನ್ವೆಂಟ್ ಶಾಲೆಗೆ ಸೇರಿಸಿದರು. 8ನೇ ವಯಸ್ಸಿನಲ್ಲಿ ಕನ್ನಡ ಭಾಷೆಯ ಮಿಷನರಿ ಶಾಲೆಗೆ ಸೇರಿದ ಅವರು ಆರು ತಿಂಗಳಲ್ಲಿ ಕನ್ನಡ ಓದಲು ಮತ್ತು ಬರೆಯಲು ಪಟ್ಟು ಹಿಡಿದು ಕಲಿತರು. ಆನಂತರ ಬಿಎಸ್ಸಿ, ಎಲ್‌ಎಲ್‌ಬಿ ವರೆಗೂ ತಮ್ಮ ವ್ಯಾಸಂಗ ಪೂರ್ಣಗೊಳಿಸಿದರು.

ವಕೀಲೆಯಾಗಿದ್ದ ಅವರು ಪ್ರಗತಿಪರ ಚಳವಳಿಗಳಿಂದ ಪ್ರೇರಿತರಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡರು. ಒಮ್ಮೆ ಒಬ್ಬರು ಮುಸ್ಲಿಂ ಯುವತಿ ಸಿನಿಮಾ ನೋಡಿದ್ದಕ್ಕೆ ಆಕೆಯ ವಿರುದ್ಧ ಫತ್ವಾ ಹೊರಡಿಸಲಾಗಿತ್ತು. ಆ ಘಟನೆಯನ್ನು ಅವರು ಖಂಡಿಸಿದ್ದರಲ್ಲದೇ, ಲಂಕೇಶ್ ಪತ್ರಿಕೆಗೆ ಬರೆಯುವ ಮೂಲಕ ಪತ್ರಕರ್ತೆಯಾಗಿ ಮಾಧ್ಯಮ ಲೋಕಕ್ಕೆ ಪದಾರ್ಪಣೆ ಮಾಡಿದರು. ಬಾಲ್ಯದಲ್ಲೇ ಲೇಖನ, ಕತೆ, ಅಂಕಣಗಳನ್ನು ಬರೆಯತೊಡಗಿದ ಬಾನು ಅವರನ್ನು ಕನ್ನಡ ಸಾಹಿತ್ಯ ಲೋಕ ಗುರುತಿಸಿತು. ಲಂಕೇಶ್ ಪತ್ರಿಕೆಗೆ ಜಿಲ್ಲಾ ವರದಿಗಾರರಾಗಿ 9 ವರ್ಷ ಅವರು ಸೇವೆ ಸಲ್ಲಿಸಿದ್ದಾರೆ.

ವೃತ್ತಿಯಲ್ಲಿ ವಕೀಲರಾದ ಬಳಿಕವೂ ಬಾನು ಮುಷ್ತಾಕ್ ಅವರು, ಕತೆಗಳನ್ನು ಬರೆಯತೊಡಗಿದರು. ಕಥೆ, ಕಾದಂಬರಿಗಳು, ಪ್ರಬಂಧಗಳನ್ನು ಬರೆಯುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. ಅವರ ಕೃತಿಗಳು ಉರ್ದು, ಹಿಂದಿ, ತಮಿಳು, ಮಲಯಾಳಂ ಮತ್ತು ಇಂಗ್ಲಿಷ್‌ನಲ್ಲಿಯೂ ಅನುವಾದವಾಗಿ ಪ್ರಕಟವಾಗಿವೆ. ಬಾನು ಸಾಮಾಜಿಕ ಕಾರ್ಯಕರ್ತೆ, ಮಹಿಳಾಪರ ಹೋರಾಟಗಾರ್ತಿ, ಪ್ರಗತಿಪರ ಚಿಂತಕಿ, ಪತ್ರಕರ್ತೆಯಾಗಿಯೂ ಗಮನ ಸೆಳೆದರು. ಶೋಷಣೆಗೆ ಒಳಗಾದ ಮುಸ್ಲಿಂ ಮಹಿಳೆಯರ ಪರವಾಗಿ ತಮ್ಮ ಧ್ವನಿ ಎತ್ತಿದರು.



'ಹಾರ್ಟ್ ಲ್ಯಾಂಪ್' ಅವರ ಮೊದಲ ಪೂರ್ಣ ಪ್ರಮಾಣದ ಇಂಗ್ಲಿಷ್ ಅನುವಾದ ಕೃತಿ. 'ಕುಬ್ರ', 'ಬಡವರ ಮಗಳು ಹೆಣ್ಣಲ್ಲ' ಅವರ ಕಾದಂಬರಿಗಳು. 'ಹೆಜ್ಜೆ ಮೂಡದ ಹಾದಿ', 'ಬೆಂಕಿಮಳೆ', 'ಎದೆಯ ಹಣತೆ' ಮುಂತಾದವು ಅವರ ಕಥಾಸಂಕಲನಗಳು. ಫಾರಸಿ ಕೃತಿ 'ತಾರೀಖ್-ಎ-ಫೆರಿಸ್ತಾ'ವನ್ನು ಉರ್ದುವಿನಿಂದ ಕನ್ನಡೀಕರಿಸಿದ್ದಾರೆ. ಅವರ 'ಕರಿನಾಗರಗಳು' ಕತೆಯನ್ನು ಆಧರಿಸಿ ಗಿರೀಶ್ ಕಾಸರವಳ್ಳಿ ಅವರು 'ಹಸೀನಾ' ಚಿತ್ರ ನಿರ್ದೇಶಿಸಿದ್ದರು. ಅದಕ್ಕೆ 3 ರಾಷ್ಟ್ರ ಪ್ರಶಸ್ತಿಗಳು ಸಂದಿವೆ

ದೀಪಾ ಭಾಸ್ತಿ: ಪರಿಚಯ

ದೀಪಾ ಭಾಸ್ತಿ ಕನ್ನಡ ಮೂಲದ ಇಂಗ್ಲಿಷ್ ಪತ್ರಕರ್ತೆ. ಮಡಿಕೇರಿಯಲ್ಲಿ ಜನಿಸಿದ ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ವೃತ್ತಿ ಆರಂಭಿಸಿದರು. ನಂತರ ಪೂರ್ಣಪ್ರಮಾಣದ ಬರಹಗಾರ್ತಿಯಾಗಿ ಕಾರವಾನ್, ಟೈಮ್ಸ್ ಆಫ್ ಇಂಡಿಯಾ, ಸ್ಕ್ರಾಲ್, ಓಪನ್, ಹಿಮಾಲ್ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಬರೆದರು. ಅಂತಾರಾಷ್ಟ್ರೀಯ ಪತ್ರಿಕೆಗಳಾದ ಆರ್ಟ್ ರಿವ್ಯೂ, ದಿ ಗಾರ್ಡಿಯನ್, ಪ್ಯಾರಿಸ್ ರಿವ್ಯೂಗಳಲ್ಲಿ ಅವರ ಬರಹಗಳು ಪ್ರಕಟಗೊಂಡಿವೆ. ಸಾಹಿತ್ಯದ ಜೊತೆಗೆ ವಿಮರ್ಶೆಗಳನ್ನೂ ಪ್ರಕಟಿಸಿದ್ದಾರೆ. ದಿ ಫೋರೇಜರ್ ಎಂಬ ಆನ್‌ಲೈನ್ ಪತ್ರಿಕೆಯನ್ನೂ ಆರಂಭಿಸಿದ್ದರು. ಕಳೆದ ಕೆಲವು ವರ್ಷಗಳಿಂದ ಅನುವಾದದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ದೀಪಾ, ಕನ್ನಡದ ಎರಡು ಕೃತಿಗಳನ್ನು ಈಗಾಗಲೇ ಅನುವಾದಿಸಿ ಗಮನ ಸೆಳೆದಿದ್ದಾರೆ. ಶಿವರಾಮ ಕಾರಂತರ 'ಅದೇ ಊರು, ಅದೇ ಮರ' ಹಾಗೂ ಕೊಡಗಿನ ಗೌರಮ್ಮನವರ ಸಣ್ಣ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಪರಿಚಯಿಸಿದ್ದಾರೆ.

ಬಾನು ಅವರಿಗೆ ಸಂದ ಇತರ ಪ್ರಶಸ್ತಿಗಳು

ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಪದ್ಮಭೂಷಣ ಬಿ. ಸರೋಜದೇವಿ ಸಾಹಿತ್ಯ ಪ್ರಶಸ್ತಿ, ಒಮ್ಮೆ ಹೆಣ್ಣಾಗು ಪ್ರಭುವೆ ನಾಟಕ ರೂಪಾಂತರಕ್ಕೆ ಇಂಟರ್‌ನ್ಯಾಷನಲ್ ವುಮನ್ ಫಾರ್ ರೇಡಿಯೋ ಆ್ಯಂಡ್ ಟೆಲಿವಿಷನ್ ಬಹುಮಾನ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ಎಚ್.ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನ ಹಾಗೂ ಗುಡಿಬಂಡೆ ಪೂರ್ಣಿಮಾ ದತ್ತಿನಿಧಿ ಬಹುಮಾನ, ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ ಪ್ರಶಸ್ತಿ, ಸುಧಾಮೂರ್ತಿ ಪ್ರಶಸ್ತಿಗಳು ಬಾನು ಮುಷ್ತಾಕ್ ಅವರಿಗೆ ಒಲಿದು ಬಂದಿವೆ. ಬಾನು ಅವರು ಹಾಸನ ನಗರ ಸಭೆಗೆ 1983ರಿಂದ ಎರಡು ಅವಧಿಗೆ ನಗರಸಭಾ ಸದಸ್ಯೆಯಾಗಿ ಆಯ್ಕೆಯಾಗಿದ್ದರು. ಹಾಸನದ ಜಿಲ್ಲಾ ಶ್ರೀ ಚಾಮ ರಾಜೇಂದ್ರ ಆಸ್ಪತ್ರೆಯ ಸಂದರ್ಶಕರ ಮಂಡಳಿಯ ಅಧ್ಯಕ್ಷೆಯಾಗಿ, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯೆಯಾಗಿ, ಹಾಸನ ನಗರ ಗ್ರಂಥಾಲಯ ಸಮಿತಿಯ ಸದಸ್ಯೆಯಾಗಿ, ಆಕಾಶವಾಣಿ ಬೆಂಗಳೂರು ಕೇಂದ್ರದ ಸಲಹಾ ಮಂಡಳಿ ಸದಸ್ಯೆಯಾಗಿ, ಹಾಸನದ ಜಿಲ್ಲಾ ಸಮತಾ ವೇದಿಕೆಯ ಅಧ್ಯಕ್ಷೆಯಾಗಿ ಮತ್ತು ಮಹಿಳಾ ವಿಕಾಸ ವೇದಿಕೆ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ.

ಬುಕರ್ ಪ್ರಶಸ್ತಿ ವಿಜೇತ ಭಾರತೀಯರು

ಭಾರತೀಯ ಲೇಖಕರಿಗೆ ಈ ಮೊದಲು ಐದು ಬಾರಿ ಬುಕರ್ ಪುರಸ್ಕಾರ ಸಂದಿದೆ. ವಿ.ಎಸ್. ನೈಪಾಲ್ ಅವರಿಗೆ 1971ರಲ್ಲಿ ಇನ್ ಎ ಫ್ರೀ ಸ್ಟೇಟ್, ಸಲ್ಮಾನ್ ರಶ್ದಿ ಅವರಿಗೆ 1981ರಲ್ಲಿ ಮಿಡ್‌ನೈಟ್ಸ್ ಚಿಲ್ಡ್ರನ್ , ಅರುಂಧತಿ ರಾಯ್ ಅವರಿಗೆ 1997ರಲ್ಲಿ ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್, ಕಿರಣ್ ದೇಸಾಯಿ ಅವರಿಗೆ 2006ರಲ್ಲಿ ದಿ ಇನ್ಹೆರಿಟೆನ್ಸ್ ಆಫ್ ಲಾಸ್, ಅರವಿಂದ್ ಅಡಿಗ ಅವರಿಗೆ 2008ರಲ್ಲಿ ದಿ ವೈಟ್ ಟೈಗರ್ ಕೃತಿಗೆ ಬುಕರ್ ಪ್ರಶಸ್ತಿ ಗೆದ್ದಿದ್ದಾರೆ. ಆದರೆ ಅವೆಲ್ಲವೂ ಮೂಲ ಇಂಗ್ಲಿಷ್‌ನಲ್ಲಿ ಬರೆದ ಕೃತಿಗಳು. ಇನ್ನು ಎರಡನೇದಾದ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ 2022ರಲ್ಲಿ ಗೀತಾಂಜಲಿಶ್ರೀ ಅವರ ಹಿಂದಿ ಕಾದಂಬರಿಯ ಅನುವಾದ ಟೂಂಬ್ ಆಫ್ ಸ್ಯಾಂಡ್‌ಗೆ ದೊರೆಯಿತು. ಗೀತಾಂಜಲಿಶ್ರೀ ಮತ್ತು ಅನುವಾದಕಿ ಡೈಸಿ ರಾಕ್‌ವೆಲ್ ಬಹುಮಾನ ಪಡೆದರು. 2023ರಲ್ಲಿ ಪೆರುಮಾಳ್ ಮುರುಗನ್ ಅವರ ತಮಿಳು ಕಾದಂಬರಿ ಪೈರ್‌ನ ಅನುವಾದ ಪ್ರಶಸ್ತಿಯ ಲಿಸ್ಟ್‌ನಲ್ಲಿದ್ದರೂ ಬಹುಮಾನ ದೊರೆತಿರಲಿಲ್ಲ.

» 2025ರ ಬುಕರ್ ಪ್ರಶಸ್ತಿ: ಶಾರ್ಟ್ ಲಿಸ್ಟ್‌ನಲ್ಲಿ ಇದ್ದವರು

» **ಸೋಲ್ವೆಜ್ ಬಲ್ಲೆ ಅವರ ಆನ್ ದಿ ಕ್ಯಾಲ್ಕುಲೇಷನ್ ಆಫ್ ವಾಲ್ಯೂಮ್:** ಬಾರ್ಬರಾ ಜೆ. ಹ್ಯಾವೆಲ್ಯಾಂಡ್ ಅವರಿಂದ ಡ್ಯಾನಿಶ್‌ನಿಂದ ಅನುವಾದ

» **ವಿನ್ಸೆಂಟ್ ಡೆಲೆಕ್ರೊಯಿಕ್ಸ್ ಅವರ ಸ್ಮಾಲ್ ಬೋಟ್** ಹೆಲೆನ್ ಸ್ಟೀವನ್ಸನ್ ಅವರಿಂದ ಫ್ರೆಂಚ್‌ನಿಂದ ಅನುವಾದ

» **ಹಿರೊಮಿ ಕವಾಕಾಮಿ ಅವರ ಅಂಡರ್ ದಿ ಐ ಆಫ್ ದಿ ಬಿಗ್ ಬರ್ಡ್** ಆಸಾ ಯೊನೆಡಾ ಅವರಿಂದ ಜಪಾನೀಸ್‌ನಿಂದ ಅನುವಾದ

» **ವಿನ್ಸೆಂಜೊ ಲ್ಯಾಟ್ರೊನಿಕೊ ಅವರ ಪರ್ಫೆಕ್ಷನ್** (ಸೋಫಿ ಹ್ಯೂಸ್ ಅವರಿಂದ ಇಟಾಲಿಯನ್‌ನಿಂದ ಅನುವಾದ)

» **ಅನ್ನೆ ಸೆರ್ರೆ ಅವರ ಎ ಲೆಪರ್ಡ್-ಸ್ಕಿನ್ ಹ್ಯಾಟ್** ಮಾರ್ಕ್ ಹಚಿನ್ಸನ್ ಅವರಿಂದ ಫ್ರೆಂಚ್‌ನಿಂದ ಅನುವಾದ

▸▸ ತುಮಕೂರು ನಗರಕ್ಕೂ ಮೆಟ್ರೋ ಭಾಗ್ಯ ▸▸ ಗ್ರೇಟರ್ ಬೆಂಗಳೂರಿಗೆ ಇನ್ನಷ್ಟು ಹತ್ತಿರ

ಕಲ್ಪವೃಕ್ಷ ನಗರಿಗೆ ನಮ್ಮ ಮೆಟ್ರೋ ಗರಿ ಅಂತರ ಸಿಟಿಗೆ ಪ್ರಥಮ ಮೆಟ್ರೋ ಸಿರಿ

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ, ತುಮಕೂರು



ಜಿಲ್ಲೆಯ ಜನರ ಕನಸು ನನಸಾಗುವ ಕಾಲ ಹತ್ತಿರ ಬಂದಿದ್ದು ಶೀಘ್ರವೇ ತುಮಕೂರಿಗೆ ಮೆಟ್ರೋ ಪ್ರಯಾಣ ಆರಂಭವಾಗಲಿದ್ದು, ರಾಜಧಾನಿ ನಗರಿ ಬೃಹತ್ ಬೆಂಗಳೂರಿಗೆ ತುಮಕೂರು ಮತ್ತಷ್ಟು ಸನಿಹವಾಗಲಿದೆ...!

ಬೆಂಗಳೂರಿನ ಜತೆಗೆ ಮೆಟ್ರೋ ಸವಲತ್ತು ಪಡೆಯುತ್ತಿರುವ ಪಾಲಿಗೆ ತುಮಕೂರು ಜಿಲ್ಲೆ ಪ್ರಥಮ ಎಂಬ ಹಿರಿಮೆಗೆ ಸೇರಲಿದೆ. ಕಲ್ಪತರು ನಾಡಿನ ಜನತೆ ಕೂಡ ಮೆಟ್ರೋಗಾಗಿ ಬಹುವರ್ಷಗಳಿಂದ ಕಾಯುತ್ತಿದ್ದರು. ಅದೀಗ ನಿಜವಾಗುವ ಮುಹೂರ್ತ ಕೂಡಿ ಬಂದಿದೆ.

ಮಾದಾವರ ಟು ತುಮಕೂರು:

ನಮ್ಮ ಮೆಟ್ರೋದ ಹಸಿರು ಮಾರ್ಗವನ್ನು ಮಾದಾವರದಿಂದ ತುಮಕೂರುವರೆಗೆ ವಿಸ್ತರಿಸಲು ಅನುಮೋದನೆ ದೊರೆತರೆ, ಇದು ಕರ್ನಾಟಕದ ಮೊದಲ ಅಂತರ ಜಿಲ್ಲೆ – ಅಂತರ ನಗರ ಮೆಟ್ರೋ ಯೋಜನೆಯಾಗಿ ಕರ್ನಾಟಕದಲ್ಲಿ ಹೊಸ ಇತಿಹಾಸ ಬರೆಯಲಿದೆ.

ಸಂಚಾರ ದಟ್ಟಣೆ ಇಳಿಕೆ:

ಮೆಟ್ರೋ ಮಾರ್ಗದಿಂದಾಗಿ ತುಮಕೂರು – ಬೆಂಗಳೂರು ಹೆದ್ದಾರಿಯಲ್ಲಿ ಪ್ರಯಾಣಿಸುವ ಲಕ್ಷಾಂತರ ಪ್ರಯಾಣಿಕರಿಗೆ ಬಹಳ ಅನುಕೂಲವಾಗಲಿದ್ದು, ಸಮಯ ಕೂಡ ಉಳಿತಾಯವಾಗಲಿದೆ. ದೈನಂದಿನ ರಸ್ತೆ ಸಂಚಾರದ ದಟ್ಟಣೆ ಕಡಿಮೆ ಮಾಡಿ, ಪರಿಸರ ಸ್ನೇಹಿ ಮೆಟ್ರೋ ಯೋಜನೆಯಡಿ ಸಾಮೂಹಿಕ ಸಾರಿಗೆ ಜಾರಿಯಾಗಲಿದೆ.

25 ಕಡೆ ಎಲಿವೇಟೆಡ್ ನಿಲ್ದಾಣ:

ಬೆಂಗಳೂರು-ತುಮಕೂರು ಮೆಟ್ರೋ ಮಾರ್ಗ ಬೆಂಗಳೂರಿನ ಹೊರವಲಯದ ಮಾದಾವರದ ನಿಲ್ದಾಣದಿಂದ ಆರಂಭವಾಗಿ ತುಮಕೂರಿನ ಶಿರಾ ಗೇಟ್‌ವರೆಗೆ ವಿಸ್ತರಿಸಲಿದೆ. ಒಟ್ಟು 56.6 ಕಿಮೀ ಉದ್ದದ ಮೆಟ್ರೋ ಮಾರ್ಗದಲ್ಲಿ 25 ಎಲಿವೇಟೆಡ್ ನಿಲ್ದಾಣಗಳನ್ನು ಒಳಗೊಂಡಿದೆ.

ಎಲ್ಲೆಲ್ಲಿ ನಿಲ್ದಾಣಗಳು:

ಮಾದಾವರ, ಮಾಕಳಿ, ದಾಸನಪುರ, ನೆಲಮಂಗಲ, ವೀವರ್ ಕಾಲೋನಿ, ನೆಲಮಂಗಲ ವಿಶ್ವೇಶ್ವರಪುರ, ನೆಲಮಂಗಲ ಟೋಲ್‌ಗೇಟ್, ಬೂದಿಹಾಳ್, ಟಿ.ಬೇಗೂರ್, ತಿಪ್ಪಗೊಂಡನಹಳ್ಳಿ, ಕುಲಪುರದ ಕೋಣಾಪುರದನಹಳ್ಳಿ, ಬಿ. ಪ್ರದೇಶ, ದಾಬಸ್‌ಪೇಟೆ, ನಲ್ಲಯ್ಯನಪಾಳ್ಯ, ಚಿಕ್ಕಹಳ್ಳಿ, ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ಪಂಡಿತನಹಳ್ಳಿ, ಕ್ಯಾತ್ಸಂದ್ರ ಬೈಪಾಸ್, ಕ್ಯಾತ್ಸಂದ್ರ, ಎಸ್‌ಐಟಿ, ತುಮಕೂರು ಬಸ್ ನಿಲ್ದಾಣ, ಟೂಡಾ ಲೇಔಟ್, ನಾಗಣ್ಣ ಪಾಳ್ಯ, ಮತ್ತು ಶಿರಾ ಗೇಟ್‌ನಲ್ಲಿ ಮುಕ್ತಾಯಗೊಳ್ಳಲಿದೆ.

> ತುಮಕೂರಿಗೆ ಮೆಟ್ರೋ ಯೋಜನೆ ವಿಸ್ತರಣೆ ಸಂಬಂಧ ಬಿಎಂಆರ್‌ಸಿಎಲ್ ಈಗಾಗಲೇ ವರದಿ ಕೊಟ್ಟಿದೆ. ನಮ್ಮ ಅವಧಿಯಲ್ಲೇ ಇದನ್ನು ಕಾರ್ಯರೂಪಕ್ಕೆ ತರುವ ಕೆಲಸ ಆಗಲಿದೆ. ತುಮಕೂರಿನ ಜನರಿಗೆ ಕೇಂದ್ರದ ಎಲ್ಲಾ ಸೌಲಭ್ಯಗಳು ಸಿಗಬೇಕು. ಇನ್ನೊಂದು ತಿಂಗಳಲ್ಲಿ ತುಮಕೂರು ಜನರಿಗೆ ದೊಡ್ಡ ಸುದ್ದಿ ಕೊಡುತ್ತೇವೆ. ಅದು ಇಡೀ ತುಮಕೂರಿನ ಚಿತ್ರಣವನ್ನೇ ಬದಲಾವಣೆ ಮಾಡಲಿದೆ. ತುಮಕೂರು ನಗರ ಬೆಂಗಳೂರಿನ ಅತಿ ದೊಡ್ಡ ಎರಡನೇ ನಗರವಾಗಿ ಬೆಳೆಯುವುದಂತೂ ನಿಶ್ಚಿತ..!
> –ವಿ.ಸೋಮಣ್ಣ, ಕೇಂದ್ರ ರೈಲ್ವೇ ಸಚಿವ

ಡಿಪಿಆರ್ ವರದಿ ಸಲ್ಲಿಕೆ :

'ತುಮಕೂರು ಮೆಟ್ರೋ' ಯೋಜನೆಯ ಕನಸು ನನಸಾಗುವುದಕ್ಕೆ ಹತ್ತಿರದಲ್ಲಿದೆ. ಬಹುನಿರೀಕ್ಷಿತ ಯೋಜನೆಯ ಕಾರ್ಯ ಸಾಧ್ಯತಾ ಅಧ್ಯಯನ ವರದಿ ಈಗಾಗಲೇ ಸಲ್ಲಿಸಲಾಗಿದ್ದು, ರಾಜ್ಯ ಸರಕಾರ ಪರಿಶೀಲನೆಗೆ ಒಳಪಡಿಸಲಿದೆ. ಸಂಪುಟದಲ್ಲಿ ಅನುಮೋದನೆ ದೊರೆತರೆ, ಬೆಂಗಳೂರನ್ನು ಮತ್ತೊಂದು ಜಿಲ್ಲೆಗೆ ಸಂಪರ್ಕಿಸುವ ಮೊದಲ ಮೆಟ್ರೋ ಸೇವೆಯಾಗಿ ಹೊರ ಹೊಮ್ಮಲಿದೆ. ಕಾರ್ಯಸಾಧ್ಯತಾ ಅಧ್ಯಯನ ವರದಿಯನ್ನು ಬೆಂಗಳೂರು ಮೆಟ್ರೋ ರೈಲು ಕಂಪನಿ ರಾಜ್ಯ ಸರಕಾರಕ್ಕೆ ಸಲ್ಲಿಸಿದೆ. ಮುಂದಿನ ಕ್ರಮಕ್ಕಾಗಿ ಕಾಯಲಾಗುತ್ತಿದೆ ಎಂದು ಮೆಟ್ರೋ ಕಂಪನಿಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಯಶವಂತ್ ಚೌಹಾಣ್ ದೃಢಪಡಿಸಿದ್ದಾರೆ. ಡಿಪಿಆರ್ ವರದಿ ಸರಕಾರ ಪರಿಶೀಲಿಸಿದ ಬಳಿಕ, ಯೋಜನೆಗೆ ರಾಜ್ಯದ ಅನುಮೋದನೆ ದೊರೆಯುವ ನಿರೀಕ್ಷೆಯಿದೆ. ರಾಜ್ಯ ಸರಕಾರದಿಂದ ಅನುಮತಿ ಸಿಕ್ಕ ನಂತರ, ಕೇಂದ್ರ ಸರಕಾರದಿಂದ ಅಂತಿಮ ಅನುಮೋದನೆಯೂ ದೊರೆತ ಕೂಡಲೇ ನಿರ್ಮಾಣ ಕಾಮಗಾರಿ ಆರಂಭವಾಗಲಿವೆ.

ಜೂನ್‌ನಿಂದ ಕಾಮಗಾರಿ:

ಮೆಟ್ರೋ ಮಾರ್ಗ ತುಮಕೂರು ಹೆದ್ದಾರಿಯ ಟ್ರಾಫಿಕ್ ದಟ್ಟಣೆಯನ್ನು ಕಡಿಮೆ ಮಾಡುವ ಜತೆ ಎರಡು ನಗರಗಳ ನಡುವಿನ ಆರ್ಥಿಕ ಕೊಡು – ಕೊಳ್ಳುವಿಕೆಯ ನೆಲೆಗಳನ್ನು ಕೂಡ ಬಲಗೊಳಿಸಲಿದೆ. ಈ ಯೋಜನೆಯನ್ನ ಯಶಸ್ವಿಯಾಗಿ ಜಾರಿಗೆ ತರುವಲ್ಲಿ ವೇಗದ ಸಿದ್ಧತೆಗಳು ನಡೆದಿವೆ. ಉಭಯ ಸರಕಾರಗಳ ಅನುಮೋದನೆಯೊಂದೇ ಬಾಕಿ ಅಷ್ಟೇ. ಅತ್ತ ಕಡೆ ಸರಕಾರದ ಗ್ರೀನ್ ಸಿಗ್ನಲ್ ದೊರೆಯುತ್ತಿದ್ದಂತೆ ಬರುವ ಜೂನ್ ತಿಂಗಳಿಂದಲೇ ಕಾಮಗಾರಿ ಆರಂಭವಾಗುವ ನಿರೀಕ್ಷೆಯಿದೆ. ಅಂದಾಜು ರೂ. 18,670 ರಿಂದ 20,650 ಕೋಟಿ ವೆಚ್ಚದ ಈ ಯೋಜನೆ 2032ರ ವೇಳೆಗೆ 2.8 ಲಕ್ಷ ದೈನಂದಿನ ಪ್ರಯಾಣಿಕರನ್ನು ನಿರೀಕ್ಷಿಸುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ರಿಯಲ್ ಎಸ್ಟೇಟ್ ಉದ್ಯಮ:

ಈ ಯೋಜನೆಯಿಂದಾಗಿ ಮೆಟ್ರೋ ನಿಲ್ದಾಣಗಳ ಬಳಿ 250 ಎಕರೆ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿಯಾಗಲಿದೆ. ಇದರಲ್ಲಿ ವಸತಿ ಮತ್ತು ವಾಣಿಜ್ಯ ಸ್ಥಳಗಳು ಸೇರಿದ್ದು ಖಾಸಗಿ ಹೂಡಿಕೆಗೆ ಹೆಚ್ಚು ಆಕರ್ಷಕವಾಗಿಸುತ್ತದೆ. ಈ ಯೋಜನೆಗೆ ರಾಜ್ಯ ಸರಕಾರ ಮತ್ತು ಖಾಸಗಿ ಪಾಲುದಾರರು ಆದಾಯ ಹಂಚಿಕೆ ಮಾದರಿ ರೂಪಿಸಬೇಕಾಗುತ್ತದೆ. ಮಾದಾವರ ಮತ್ತು ನೆಲಮಂಗಲ ನಡುವಿನ ಐದು ಪ್ರಮುಖ ನಿಲ್ದಾಣಗಳ ಬಳಿ ಮತ್ತು ತುಮಕೂರು ನಗರದಲ್ಲಿ ಒಂದು ನಿಲ್ದಾಣದ ಬಳಿ ರಿಯಲ್ ಎಸ್ಟೇಟ್ ಅಭಿವೃದ್ಧಿ ಬಗ್ಗೆ ವರದಿಯಲ್ಲಿ ಸೂಚಿಸಲಾಗಿದೆ. ಈ ಯೋಜನೆಗೆ ಒಟ್ಟು 470 ಎಕರೆಯಷ್ಟು ಭೂಮಿ ಅಗತ್ಯವಿದೆ.

ಭರ್ಜರಿ ವರ್ಷಾಧಾರೆ | ಸಿಡಿಲಿಗೆ 12 ಕುರಿ ಬಲಿ | ಜಮೀನುಗಳು ಜಲಾವೃತ | ಬೆಳೆ ನಾಶ

ಮುಂಗಾರಿಗೆ ಮುನ್ನವೇ ಮಳೆ ಅಬ್ಬರ ನಾಲ್ಕು ದಿನದ ಮಳೆಗೆ ಬದುಕು ತತ್ತರ

ಬೆಂಗಳೂರು: ರಾಜ್ಯದಲ್ಲಿ ಪೂರ್ವ ಮುಂಗಾರು ಅಬ್ಬರ ಜೋರಾಗಿದ್ದು, ಕಳೆದ 4 ದಿನಗಳಿಂದ ರಾಜ್ಯಾದ್ಯಾಂತ ಭಾರೀ ಮಳೆ ಆಗಿದೆ. ಬೆಂಗಳೂರು, ದಕ್ಷಿಣ ಕನ್ನಡ, ಉಡುಪಿ, ಕಲಬುರಗಿ, ರಾಯಚೂರು, ಬೀದರ್, ಯಾದಗಿರಿ ಸೇರಿ ಹಲವು ಜಿಲ್ಲೆಗಳಲ್ಲಿ ಸಿಡಿಲು ಗುಡುಗು ಸಹಿತ ಧಾರಾಕಾರ ಮಳೆ ಸುರಿದಿದ್ದು, ಹಲವಾರು ಅವಾಂತಗಳು ಸೃಷ್ಟಿ ಆಗಿವೆ. ಇನ್ನು 1 ವಾರ ರಾಜ್ಯದಲ್ಲಿ ಮಳೆ ಮುಂದುವರಿಯಲಿದೆ. ಮೇ 27ಕ್ಕೆ ರಾಜ್ಯಕ್ಕೆ ಮುಂಗಾರು ಪ್ರವೇಶಿಸಲಿದೆ.

ಯಾದಗಿರಿ ಸಿಡಿಲಿಗೆ 12 ಕುರಿ ಸಾವು:

ಯಾದಗಿರಿ ಜಿಲ್ಲೆಯಾದ್ಯಂತ ಗುಡುಗು ಸಿಡಿಲು ಸಹಿತ ಮಳೆ ಆಗಿದೆ. ವಡಗೇರಾ, ಗುರುಮಠಕಲ್, ಕೆಂಭಾವಿ ಸೇರಿ ಹಲವೆಡೆ ಉತ್ತಮ ಮಳೆ ಆಗಿದ್ದು, ಕೃಷಿ ಚಟುವಟಿಕೆಗಳು ಆರಂಭ ಆಗಿವೆ. ಸಿಡಿಲು ಬಡಿದು 12 ಕುರಿಗಳು ಸಾವನ್ನಪ್ಪಿರುವ ಘಟನೆ ಯರಗೋಳ ಗ್ರಾಮದಲ್ಲಿ ನಡೆದಿದೆ. ಮೇಯಿಸಲು ಜಮೀನಿಗೆ ಹೋದ ವೇಳೆ ಕಾಳಪ್ಪ ಇದ್ಲಿ ಎಂಬುವರ 12 ಕುರಿಗಳು ಸಿಡಿಲಿಗೆ ಬಲಿ ಆಗಿವೆ. ಕುರಿಗಳನ್ನು ಕಳೆದುಕೊಂಡ ರೈತ ಸೂಕ್ತ ಪರಿಹಾರ ನೀಡಲು ಸರಕಾರಕ್ಕೆ ಆಗ್ರಹ ಮಾಡಿದ್ದಾರೆ. ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಹಾಗೂ ಪಶು ವೈದ್ಯರು ಭೇಟಿ ನೀಡಿ ಪಂಚನಾಮೆ ಮಾಡಿದ್ದಾರೆ.

ಬೀದರ್‌ನಲ್ಲಿ ಈರುಳ್ಳಿ ನಾಶ:

ಬೀದರ್ ಜಿಲ್ಲೆಯಾದ್ಯಂತ 2 ದಿನಗಳಿಂದ ಗುಡುಗು ಸಹಿತ ಭಾರಿ ಮಳೆ ಸುರಿದಿದೆ. ಬೀದರ್, ಕಮಲನಗರ ಸೇರಿದಂತೆ ಔರಾದನಲ್ಲಿ ಉತ್ತಮ ಮಳೆಯಾಗಿದ್ದು, ಬಿಸಿಲ ಧಗೆ ಕೊಂಚ ಕಡಿಮೆಯಾಗಿದೆ. ಎಡೆಬಿಡದೇ ಸುರಿಯುತ್ತಿರುವ ಮಳೆಗೆ ಜನ-ಜೀವನ ಅಸ್ತ ವ್ಯಸ್ತಗೊಂಡಿದೆ. ಹೊಲ ಗದ್ದೆಗಳಲ್ಲಿ ನೀರು ನಿಂತು ಅಪಾರ ಪ್ರಮಾಣದಲ್ಲಿ ತೋಟಗಾರಿಕಾ ಬೆಳೆಗಳು ಹಾನಿ ಆಗಿವೆ.

ಮಡಿಕೇರಿ ತಡೆಗೋಡೆ ಕುಸಿತ:

ಜೆಸ್ಕಾಂ ಸಿಬ್ಬಂದಿಯನ್ನು ಹೊಸಪೇಟೆ ಬೈಲುವದ್ದಿಗೆರಿ ಬಳಿ ಸ್ಥಳೀಯರು ರಕ್ಷಣೆ ಮಾಡಿದ್ದಾರೆ.

ಮಡಿಕೇರಿ ಜಿಲ್ಲೆಯ ವಿರಾಜಪೇಟೆ ಪಟ್ಟಣದಲ್ಲಿ ಹೊಸದಾಗಿ ನಿರ್ಮಿಸಿ ಈಚೆಗೆ ಲೋಕಾರ್ಪಣೆಗೊಂಡ ಅಂಬೇಡ್ಕರ್ ಭವನದ ತಡೆಗೋಡೆ ಕುಸಿತಗೊಂಡಿದೆ. 10 ವರ್ಷಗಳ ಹಿಂದೆ ಆರಂಭಗೊಂಡ ಕಾಮಗಾರಿಯು ಕೆಲವು ಸಣ್ಣಪುಟ್ಟ ಕೆಲಸಗಳು ಉಳಿಕೆಯಾಗಿದ್ದವು. ಬಳಿಕ ಕೆಲ ದಿನಗಳ ಹಿಂದೆ ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಗೊಂಡಿತ್ತು. ಹೊಸ ಕಟ್ಟಡ ಲೋಕಾರ್ಪಣೆಯ ಕೆಲವು ದಿನಗಳಲ್ಲೇ ತಡೆಗೋಡೆ ಕುಸಿದಿರುವುದು ಸಾರ್ವಜನಿಕ ವಲಯದಲ್ಲಿ ಅಸಮಾಧಾನ ಹಾಗೂ ಕಾಮಗಾರಿಯ ಗುಣಮಟ್ಟದ ಕುರಿತು ಅನುಮಾನ ವ್ಯಕ್ತಗೊಂಡಿದೆ.

ಉಡುಪಿಯಲ್ಲಿ ಕೃತಕ ನೆರೆ :

ಉಡುಪಿ ಜಿಲ್ಲೆಯಲ್ಲಿ ಭಾರೀ ಮಳೆಗೆ, ಅಲ್ಲಲ್ಲಿ ಕೃತಕ ನೆರೆ ಉಂಟಾಗಿದೆ. ಇದರಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ಥಗೊಂಡಿದೆ. ಉಡುಪಿ-ಮಣಿಪಾಲ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ಮಣಿಪಾಲ ಐನಾಕ್ಸ್‌ನಿಂದ ಸಿಂಡಿಕೇಟ್ ಸರ್ಕಲ್ ಮಧ್ಯೆ ಸಿಗುವ ರಸ್ತೆಯ ಬದಿ ತುಂಬಿಸಲಾದ ಮಣ್ಣು ಭಾರೀ ಮಳೆಯಿಂದ ಕಿತ್ತು ಬಂದಿದ್ದು, ಇದರಿಂದಾಗಿ ಕಲ್ಲು ಮಿಶ್ರಿತ ನೀರು ರಸ್ತೆಯಲ್ಲಿ ಪ್ರವಾಹದಂತೆ ಹರಿದಿದೆ.

ವಿಜಯನಗರ ಜಿಲ್ಲೆ :

ಹಲವೆಡೆ ಭಾರಿ ಮಳೆಯಾಗಿದ್ದು, ನೂರಾರು ಎಕರೆ ಜಮೀನು ಜಲಾವೃತಗೊಂಡಿದೆ. ವಿದ್ಯುತ್ ಸರಿಪಡಿಸಲು ಬಂದ ಜೆಸ್ಕಾಂ ಸಿಬ್ಬಂದಿ ನೀರಿನಲ್ಲಿ ಸಿಲುಕಿ ಪರದಾಡಿದ್ದಾರೆ. ಗೂಡ್ಸ್ ವಾಹನದಲ್ಲಿದ್ದ ಕೂಲಿ ಕಾರ್ಮಿಕ ಹಾಗೂ ನೌಕರರನ್ನು ಸ್ಥಳೀಯ ಯುವಕರು ರಕ್ಷಿಸಿದ್ದಾರೆ.

ಹೊಸಪೇಟೆ ತಾಲೂಕಿನ ಬೈಲುವದ್ದಿಗೆರಿ ಗ್ರಾಮದ ಬಳಿಯ ರೈಲ್ವೆ ನಿಲ್ದಾಣದ ಬಳಿ ವಿದ್ಯುತ್ ರಿಪೇರಿ ಕಾಮಗಾರಿಗಾಗಿ ಆಗಮಿಸಿದ್ದ ಕಾರ್ಮಿಕರಿದ್ದ ವಾಹನ ನೀರಿನಲ್ಲಿ ಸಿಲುಕಿತ್ತು. ಮಳೆಯ ನೀರಿನಲ್ಲಿ ಕೊಚ್ಚಿ ಹೋಗುವ ಭೀತಿ ಉಂಟಾಗಿತ್ತು.

ಕಾರವಾರ-ಶಿರಸಿ ರಸ್ತೆ ಕುಸಿತ

ಉತ್ತರಕನ್ನಡ ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಗೆ ಕಾರವಾರ-ಶಿರಸಿ ಹೆದ್ದಾರಿಯಲ್ಲಿ ರಸ್ತೆ ಕುಸಿತ ಆಗಿದೆ. ಕುಮಟಾ ತಾಲೂಕಿನ ಬರಗದ್ದೆ ಬಳಿ ಹೆದ್ದಾರಿ ರಸ್ತೆ ಕುಸಿತ ಆಗಿದ್ದು, ಹೆದ್ದಾರಿ ಕುಸಿತದಿಂದ ಕಾರಾವಾರ-ಶಿರಸಿ ಹೆದ್ದಾರಿ ಸಂಚಾರ ಬಂದ್ ಆಗಿದ್ದು, ಸವಾರರು ಹೈರಾಣಾಗಿದ್ದಾರೆ. ಬೆಟ್ಟದ ಮೇಲಿಂದ ಭಾರೀ ಪ್ರಮಾಣದ ಮಳೆ ನೀರು ಹರಿದು ಹೆದ್ದಾರಿ ಮೇಲೆ ಬರುತ್ತಿದೆ. ಆತಂಕದಲ್ಲಿ ವಾಹನ ಸವಾರರು ಪ್ರಯಾಣ ಮಾಡುತ್ತಿದ್ದಾರೆ.

ಕುಮಟಾ ತಾಲೂಕಿನ ಬರಗದ್ದೆ ಬಳಿ ಕಾರವಾರ-ಶಿರಸಿ ಹೆದ್ದಾರಿಯಲ್ಲಿ ರಸ್ತೆ ಕುಸಿದಿದೆ.

ಕರಾವಳಿ ಬೋಟ್‌ಗಳ ಸಾಹಸ :

ರಾಜ್ಯ ಕರಾವಳಿಗೆ ಜಿಲ್ಲೆಗಳಲ್ಲಿ ಭಾರೀ ಮಳೆ ಆಗುತ್ತಿದ್ದು, ಅರಬ್ಬಿ ಸಮುದ್ರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣ ಆಗಿದೆ. ಈ ಹಿನ್ನೆಲೆ ಮೀನುಗಾರಿಕೆ ಸ್ಥಗಿತ ಮಾಡಲಾಗಿದೆ. ಮೀನುಗಾರಿಕೆಗೆ ತೆರಳಿದ ಬೋಟ್‌ವೊಂದು ಸಮುದ್ರದ ಮಧ್ಯದಿಂದ ತೀರಕ್ಕೆ ಬರಲು ಪರದಾಡಿದ ಘಟನೆ ಉಡುಪಿಯ ಮಲ್ಪೆ ಸಮೀಪ ನಡೆದಿದೆ. ಭಾರೀ ಅಲೆಗಳ ಹೊಡೆತಕ್ಕೆ ಸಿಲುಕಿದ ಮೀನುಗಾರಿಕಾ ಬೋಟ್‌ಅನ್ನು ಹರಸಾಹಸ ಪಟ್ಟು ದಡಕ್ಕೆ ಸೇರಿಸಿದ್ದಾರೆ.

ಭಾರೀ ಪ್ರಮಾಣದ ಅಲೆಗಳ ಹೊಡೆತಕ್ಕೆ ಸಿಕ್ಕ ಮೀನುಗಾರಿಕೆ ಬೋಟ್ ಮಲ್ಪೆ ಬಳಿ ದಡ ಸೇರಲು ಹರಸಾಹಸ ಪಟ್ಟಿದೆ.

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



ಚಿತ್ತವಿಹಾರ

ಅನಗತ್ಯ ಬಂಧನವಿರದಿರಲಿ ಬದುಕಿಗೆ

● ಮಹಾದೇವ ಬಸರಕೋಡ

ಈ ಬದುಕನ್ನು ನಮ್ಮದೇ ಆದ ಕೆಲವು ಸಂಗತವಲ್ಲ ನಂಬಿಕೆಗಳಲ್ಲಿ ಬಂಧಿಸಿ ಸಂಕೀರ್ಣಗೊಳಿಸಿಕೊಳ್ಳುತ್ತೇವೆ. ಅವುಗಳು ನಾವು ಕೇಳಿದ, ಸುತ್ತಣ ಸಮಾಜದಲ್ಲಿ ನಮ್ಮನ್ನು ಪ್ರಭಾವಿಸಿದ, ಇಲ್ಲವೇ ಧಾರ್ಮಿಕತೆಯ ನೆಪದಲ್ಲಿ ನಮ್ಮ ಮೇಲೆ ಒತ್ತಾಯವಾಗಿ ಹೇರಲ್ಪಟ್ಟ, ಇಲ್ಲವೇ ಸಾಮಾಜಿಕ ರೀತಿ-ನೀತಿಗಳ ನಿಲುವುಗಳಿಂದ, ನಿಯಂತ್ರಿಸಲ್ಪಟ್ಟ, ಇನ್ನು ಕೆಲವು ಬಾರಿ ನಮ್ಮ ಪೂರ್ವಾಗ್ರಗಳಿಂದ ಬಂದ ಬಳುವಳಿಗಳಾಗಿರುತ್ತವೆ ಎಂಬುದನ್ನು ಅಲ್ಲಗಳೆಯಲಾಗದು. ಹಳೆಯದೆಲ್ಲವೂ ಹೊನ್ನೆಂದು ಭ್ರಮಿಸುವ ನಮ್ಮ ಮನಸ್ಸು ಇಂತಹ ಅರ್ಥರಹಿತ ಸಂಗತಿಗಳಿಂದ ಸುಲಭವಾಗಿ ಹೊರಬರುವುದೇ ಇಲ್ಲ.

ಝೆನ್ ಗುರುಗಳು ತಮ್ಮ ವಿದ್ಯಾರ್ಥಿಗಳಿಗೆಲ್ಲ ಉಪನ್ಯಾಸ ನೀಡುತ್ತಿದ್ದರು. ಬಿಸಿಲಿನ ತಾಪಕ್ಕೆ ವಿದ್ಯಾರ್ಥಿಗಳಿಗೆಲ್ಲ ತುಂಬ ಆಯಾಸವಾಗಿತ್ತು. ಉಪನ್ಯಾಸದ ಕಡೆಗೆ ಅವರು ತಮ್ಮ ಮನಸ್ಸನ್ನು ಕೇಂದ್ರೀಕರಿಸುವಲ್ಲಿ ಸೋಲತೊಡಗಿದರು. ಅವರಿಗೆಲ್ಲ ನಿದ್ದೆಯ ಮಂಪರು ಆವರಿಸತೊಡಗಿತು. ಝೆನ್ ಗುರುಗಳು ಇದನ್ನು ಕ್ಷಣ ಕಾಲ ಗಮನಿಸಿದರು. ಅವರು ತಮ್ಮ ಉಪನ್ಯಾಸವನ್ನು ನಿಲ್ಲಿಸಿದರು. ಇದನ್ನು ನೋಡಿದ ಕೆಲವು ವಿದ್ಯಾರ್ಥಿಗಳು ಶಿಕ್ಷೆ ಖಚಿತವೆಂದು ಭಾವಿಸಿದರು. ಪಕ್ಕದಲ್ಲಿ ತೂಕಡಿಸುತ್ತಲಿದ್ದ ತಮ್ಮ ಸಹಪಾಠಿಗಳನ್ನು ಎಚ್ಚರಿಸುವ ಪ್ರಯತ್ನದಲ್ಲಿ ತೊಡಗಿದರು.

ಝೆನ್ ಗುರುಗಳು ಇದ್ದಕ್ಕಿದ್ದಂತೆ ವಿದ್ಯಾರ್ಥಿಗಳ ಹತ್ತಿರ ಬಂದರು. 'ಮಧ್ಯಾಹ್ನದ ಹೊತ್ತು ಬಿಸಿಲು ಬಹಳಷ್ಟಿದೆ ಅಲ್ಲವೇ?' ಎಂದರು. ಕೆಲವರು ಅವರ ಮಾತಿಗೆ ತಲೆದೂಗಿದರು. ಇನ್ನು ಕೆಲವರು ಭಯದಿಂದ ಅವರತ್ತಲೇ ನೋಡುತ್ತಿದ್ದರು. ಅವರು ನಗುತ್ತಲೇ ಬಿರು ಬಿಸಿಲಿನ ಕಾರಣಕ್ಕೆ ನಿದ್ದೆ ನಿಮಗೆ ಬರುತ್ತಿರುವುದು ಸಹಜವೇ ಆಗಿದೆ. ನಾನು ನಿಮ್ಮ ಜೊತೆಗೆ ಸೇರಿಕೊಳ್ಳಲೇ? ಎಂದು ಪ್ರಶ್ನಿಸಿದರು. ಪುಸ್ತಕಗಳನ್ನು ಅಲ್ಲಿಯೇ ಮುಚ್ಚಿಟ್ಟು ಕುಳಿತ ಕುರ್ಚಿಯ ಮೇಲೆ ಅವರೂ ಕೂಡ ನಿದ್ರೆಗೆ ಜಾರಿದರು. ಅಲ್ಲಿದ್ದ ಇನ್ನು ಕೆಲವು ಅನುಯಾಯಿಗಳು ಗುರುಗಳ ವರ್ತನೆಯನ್ನು ಅಲ್ಲಗಳೆದರು. ಅದನ್ನು ಕೇಳಿದ ಗುರುಗಳು ಹೇಳಿದರು. ಬದುಕು ಸಹಜವಾಗಿರಬೇಕು. ಅನಗತ್ಯ ಬಂಧನಗಗಳಲ್ಲಿ ಬಂಧಿಯಾದರೆ ಅದಕ್ಕೆ ಯಾವ ಅರ್ಥವೂ ಇಲ್ಲ. ಎಂದರು.

ಪ್ರತಿಯೊಬ್ಬರೂ ಮಾಡುತ್ತಾರೆ ಎನ್ನುವ ಕಟ್ಟಳೆಗೆ ಕಟ್ಟುಬಿದ್ದು ಅದನ್ನು ಅನುಸರಿಸುವುದಿಂದ ಹೆಚ್ಚು ಪ್ರಯೋಜನವಾಗದು. ಸದಾ ಸರ್ವಾನುಮತದ ಭಾಗವಾಗಿ ಇರುವುದಕ್ಕಿಂತ ನಮ್ಮ ಮನಸ್ಸು ಮತ್ತು ದೈಹಿಕ ಕ್ಷಮತೆಗೆ ಅನುಗುಣವಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳುವುದು ಜಾಣತನವಾಗಿದೆ. ಅನಗತ್ಯ ಸಾಮಾಜಿಕ ಒತ್ತಡ, ಬೇಡಿಕೆಗಳಿಗೆ ಬಾಗುವುದನ್ನು ನಿಲ್ಲಿಸಿದಾಗ ಮಾತ್ರವೇ ಬದುಕಿನ ನೈಜ ಸಂತೋಷವನ್ನು ಅನುಭವಿಸಲು ಸಾಧ್ಯ. ಎಮರ್ಸನ್ ಅವರ ಅಭಿಪ್ರಾಯದಂತೆ ಬದುಕುವುದು ತುಂಬ ಸುಲಭ. ನಾವು ನಮ್ಮದೇ ರೀತಿಯಲ್ಲಿ ಬದುಕುವುದು ಕಷ್ಟಸಾಧ್ಯವಾದ ಕೆಲಸ. ಸಹಜತೆ, ಸರಳತೆ, ನಿಸರ್ಗ ಸಾಮೀಪ್ಯದ ಬದುಕನ್ನು ನಾವು ರೂಢಿಸಿಕೊಳ್ಳಬೇಕು. ಅದು ನಮ್ಮನ್ನು ಬಹಳಷ್ಟು ಎತ್ತರಕ್ಕೆ ಕೊಂಡೊಯ್ಯುತ್ತದೆ. ಸಂತಸದ ಎಲ್ಲ ರಹದಾರಿಯಗಳನ್ನು ತೆರೆದಿಡುತ್ತದೆ.

ಇಂದಿನ ಯುಗವೇ ಧಾವಂತದ ಯುಗ. ಬಹು ಬೇಗನೆ ವೃತ್ತಿಜೀವನದಲ್ಲಿ ಯಶಸ್ಸು ಗಳಿಸುವ ತರಾತುರಿ. ಅಂತಹ ತರಾತುರಿಯಲ್ಲಿ ಸಹೋದ್ಯೋಗಿಗಳನ್ನು ಹಿಂಸಿಸುವುದು, ಒತ್ತಡಕ್ಕೆ ಗುರಿಮಾಡುವುದು ಕಾಣುತ್ತಿದ್ದೇವೆ; ಆದರೆ ಇದು ಸಲ್ಲದು.

● ಸುಪ್ರೀತಾ ವೆಂಕಟ್

ವೃತ್ತಿಜೀವನದಲ್ಲಿ ಹೊಟ್ಟೆಕಿಚ್ಚು!

ಟಾಕ್ಸಿಕ್ ಎನ್ನುವ ಪದ ಇತ್ತೀಚೆಗೆ ತುಂಬಾ ಬಳಕೆಯಲ್ಲಿದೆ; ನಮ್ಮ ಜನರಿಗೆ ಇಂಗ್ಲಿಷ್‌ನಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವುದು ಸುಲಭವಾಗಿರುವುದರಿಂದಲೇ ಇರಬೇಕು, ವಿಷಮಯ ಎಂದು ಹೇಳುವುದಕ್ಕಿಂತ 'ಟಾಕ್ಸಿಕ್' ಎಂದಾಕ್ಷಣ ಅದರ ಅರ್ಥ ಬೇಗನೆ ಸ್ಫುರಿಸುತ್ತದೆ! ಟಾಕ್ಸಿಕ್ ರಿಲೇಶನ್ ಶಿಪ್, ಟಾಕ್ಸಿಕ್ ವರ್ಕ್ ಕಲ್ಚರ್, ಟಾಕ್ಸಿಕ್ ಮ್ಯಾನೇಜರ್, ಟಾಕ್ಸಿಕ್ ಇನ್ನೊಂದು ಮತ್ತೊಂದು ಎಂದು. ಈವಾಗಿನ ಕಾಲಕ್ಕೆ, ಈಗಿನ ಯುವಜನರಿಗೆ ತಾಳ್ಮೆ ತುಂಬಾ ಕಡಿಮೆ. ಸ್ವಲ್ಪ ಹೆಚ್ಚು ಕಡಿಮೆ ಆದರೆ ತಾಳ್ಮೆ ಕಳೆದುಕೊಳ್ಳದೆ ಸಂಭಾಳಿಸುವವರು ತೀರಾ ಕಡಿಮೆ ಮಂದಿ ಎಂದು ಹೇಳಬಹುದು. ಎಲ್ಲದಕ್ಕೂ, ಎಲ್ಲಾ ಕಡೆನೂ ಈ ಟಾಕ್ಸಿಕ್ ಎನ್ನುವ ಪದ ಪ್ರಯೋಗ ಆಗುವುದು. ದಿನಕ್ಕೆ ಇಪ್ಪತ್ನಾಲ್ಕು ಗಂಟೆ ಇದ್ದರೂ ಸಾಲದು ಎನ್ನುವಂತೆ ಯಾವುದಕ್ಕೂ ಸಮಯ ಇಲ್ಲ ಅನ್ನುತ್ತೇವೆ. ಅಲ್ಪ ಸಮಯದಲ್ಲಿ ಹೆಚ್ಚಿನ ಕೆಲಸ ಮಾಡಿ ಮುಗಿಸುವ ಒತ್ತಡ, ಬಲವಂತ, ಅನಿವಾರ್ಯತೆ.

ಉಸಿರು ಕಟ್ಟುವ ವಾತಾವರಣ

ವೃತ್ತಿ ಜೀವನದಲ್ಲಿ ಸಾಧನೆ ಮಾಡಬೇಕೆನ್ನುವುದು ಬಹುತೇಕರ ಆಸೆ. ಅದು ತಪ್ಪಲ್ಲ, ಜೀವನದಲ್ಲಿ ಏನಾದರೊಂದು ಮಾಡುತ್ತಿರಬೇಕು, ಗುರಿ ಇದ್ದರೇನೆ ಜೀವನಕ್ಕೊಂದು ಮೌಲ್ಯ. ಜತೆಗೆ ಬೇಗನೆ ಗುರಿ ತಲುಪುವ ಧಾವಂತವೂ ಎಲ್ಲರಲ್ಲಿ ಇದೆ! ಆದರೆ ತನ್ನ ಗುರಿ ಸಾಧಿಸಲು ಇತರರನ್ನು ಬಲಿಪಶು ಮಾಡುವುದೆಷ್ಟು ಸರಿ? ಇನ್ನೊಬ್ಬರನ್ನು ತುಳಿದೇ ಮೇಲೆ ಬರಬೇಕೆನ್ನುವುದು ಇಂತಹವರ ಮನಸ್ಥಿತಿ. ಇಂತಹ ಮನೋಭಾವ ಇರುವವರು ಉನ್ನತ ಹುದ್ದೆಯಲ್ಲಿದ್ದರೆ, ಅವರ ಕೈಕೆಳಗೆ ಕೆಲಸ ಮಾಡುವವರಿಗೆ ಉಸಿರು ಕಟ್ಟುವ ಪರಿಸರ. ಅವರ ಮಾತು ಸರಿಯಿಲ್ಲದಿದ್ದರೂ, ಹುದ್ದೆಯ ಮೇಲಿನ ಸ್ಥಾನಕ್ಕಾದರೂ ಮಾತು ಕೇಳಬೇಕಾಗುವುದು. ತಂಡದ ಸದಸ್ಯರಿಗೆ ತೊಂದರೆ ಕೊಡಬೇಕೆನ್ನುವವರು, ತಮ್ಮ ಮಾತು ನಡೆಯೋಲ್ಲ ಅಂದಾಗ, ಯಾವ ಮಟ್ಟಕ್ಕೂ ಇಳಿತಾರೆ, ಆಗ ಶುರುವಾಗುವುದು ದಬ್ಬಾಳಿಕೆ.

ಹಗೆತನ

ದಬ್ಬಾಳಿಕೆಯಿಂದ ಪ್ರಾರಂಭವಾಗುವ ಈ ಗುರಿ ತಲುಪುವ ಧಾವಂತವು, ಮುಂದೊಂದು ದಿನ ತನ್ನ ಸಹೋದ್ಯೋಗಿಗಳ ಮೇಲೆ, ಕೈ ಕೆಳಗಿನವರ ಮೇಲೆ ಅನಗತ್ಯ ದ್ವೇಷವಾಗಿ ಪರಿವರ್ತನೆಯಾಗುವುದು. ತಾನು ಉನ್ನತ ಹುದ್ದೆಯಲ್ಲಿದ್ದೇನೆ, ಅದಕ್ಕೆ ತಕ್ಕಂತೆ ಎಲ್ಲರಿಗೂ ಸೂಕ್ತ ಗೌರವ ನೀಡಿ, ಜತೆ ಜತೆಯಾಗಿ ಕೆಲಸ ಮಾಡಬೇಕೆನ್ನುವುದು ನೆನಪಾಗೋಲ್ಲ. ತನಗಿಂತ ಸ್ಥಾನ ಕೆಳಗೆ ಇರೋರು ತನ್ನ ಮಾತು ಕೇಳುತ್ತಿಲ್ಲವೆಂಬ ಆಕ್ರೋಶ, ಅವರ ಮೇಲೆ ಹಗೆತನ ಬೆಳೆಸುವಂತೆ ಮಾಡುವುದು. ಅಲ್ಲಿ ಪ್ರೌಢತೆ ಕಾಣೆಯಾಗುವುದು. ಕೈಕೆಳಗಿನವರಿಗೂ ಕೆಲಸದ ಒತ್ತಡ; ಅಂತಹ ಒತ್ತಡದ ನಡುವೆ, ತನ್ನ ಮಾತು ಕೇಳದವರನ್ನು ಹೇಗಾದರೂ ಮಾಡಿ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೆನ್ನುವ ಕೆಟ್ಟ ಛಲ. ಅದರಿಂದ ಲಾಭವಾದರೂ ಏನು? ಸರಳ : ಇಂದಿನ ವಿಶಾಲ ಜಗತ್ತಿನಲ್ಲಿ, ಉತ್ತಮ ಕೆಲಸ ಮಾಡುವವರನ್ನು ಬೇಗನೆ ಕಳೆದುಕೊಳ್ಳುತ್ತಾರೆ. ಅನಗತ್ಯ ಒತ್ತಡಕ್ಕೆ ಒಳಗಾದ ಉತ್ತಮ ಮತ್ತು ನುರಿತ ಕೆಲಸಗಾರರು, ಬೇರೆಡೆ ಕೆಲಸ ಹುಡುಕಿಕೊಂಡು ಹೋಗುತ್ತಾರೆ; ಅಂತಹವರಿಗೆ ಈಗ ಬೇಗನೆ ಕೆಲಸವೂ ಸಿಗುತ್ತದೆ. ಅನಗತ್ಯ ಒತ್ತಡ, ದ್ವೇಷಮಯ ವಾತಾವರಣದಿಂದಾಗಿ, ಟಾಕ್ಸಿಕ್ ಸನ್ನಿವೇಶದಿಂದಾಗಿ, ಒಳ್ಳೆಯ ಕೆಲಸಗಾರರೊಬ್ಬರನ್ನು ಸಂಸ್ಥೆ ಕಳೆದುಕೊಂಡಂತಾಗುತ್ತದೆ.

ಪ್ರತೀಕಾರದ ಪದತ್ಯಾಗ!

ಇತ್ತೀಚೆಗೆಲ್ಲೋ ಓದಿದ್ದೆ, ಈಗೀಗ ಕೆಲಸದೊತ್ತಡ, ಟಾಕ್ಸಿಕ್ ಮ್ಯಾನೇಜರ್, ಟಾಕ್ಸಿಕ್ ವರ್ಕ್ ಕಲ್ಚರ್ ಇವುಗಳಿಂದ ಬೇಸತ್ತು, 'ರಿವೆಂಜ್ ರೆಸಿಗ್ನೇಶನ್' (ಪ್ರತೀಕಾರಕ್ಕಾಗಿ ಪದತ್ಯಾಗ!) ಮಾಡುವವರ ಸಂಖ್ಯೆ ಹೆಚ್ಚಾಗಿದೆಯೆಂದು. ಅವಮಾನ, ನಿಂದನೆ, ಅನಗತ್ಯ ಬೈಗುಳ, ಭಾರೀ ಕೆಲಸ, ಅವೆಷ್ಟೇ ಕೆಲಸ ಮಾಡಿ ಮುಗಿಸಿದರೂ ಮುಗಿಯದಷ್ಟು ಹೊರೆ, ಕೊನೆಗೆ ಸರಿಯಾಗಿ ವಾರ್ಷಿಕ ಹೈಕ್ ಇಲ್ಲ, ಪ್ರಮೋಶನ್ ಇಲ್ಲ, ಮಾಡಿದ ಕೆಲಸಕ್ಕೊಂದಿಷ್ಟು ಮರ್ಯಾದೆನೂ ಇಲ್ಲ ಅಂದ ಮೇಲೆ ನೌಕರರು ಬೇರೆ ಕೆಲಸ ಹುಡುಕದೆ ಇರುತ್ತಾರೆಯೇ?

ರಿವೆಂಜ್ ರೆಸಿಗ್ನೇಶನ್ ಅನ್ನು ಯಾವ ಅರ್ಥದಲ್ಲಿಯಾದರೂ ಅರ್ಥೈಸಿಕೊಳ್ಳಬಹುದು. ಇದ್ದ ಕಡೆಗೆ ಕಾಟ ನೀಡಿ ಹೋಗೋದಂತೇನಲ್ಲ, ತಮ್ಮ ತಮ್ಮ ವೃತ್ತಿ ಕೌಶಲ್ಯಗಳನ್ನು ವೃದ್ಧಿಗೊಳಿಸಲು, ಅಥವಾ ಕೆಲಸದ ಭದ್ರತೆಗಾಗಿ, ಅಥವಾ ಉತ್ತಮ ಸಂಬಳಕ್ಕಾಗಿ ಹೀಗೆ ಏನು ಬೇಕಾದರೂ ಆಗಿರಬಹುದು. ಹುದ್ದೆಯ ಶೀರ್ಷಿಕೆ ಉಳಿಸುವುದಕ್ಕಾಗಿ ಕೆಲಸದ ವಾತಾವರಣವನ್ನು ನಕಾರಾತ್ಮಕಗೊಳಿಸುವುದು ದೊಡ್ಡ ತಪ್ಪು. ಲವಲವಿಕೆಯ ವಾತಾವರಣ ಇದ್ದರೆ, ಅಂತಹ ಪರಿಸರದಲ್ಲಿ ಕೆಲಸ ಮಾಡಲು ಎಲ್ಲರೂ ತಯಾರಿರುತ್ತಾರೆ. ಸಕಾರಾತ್ಮಕ ವಾತಾವರಣ ನಿರ್ಮಿಸಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಒಬ್ಬರು ಬಿಟ್ಟು ಹೋದರೆ ಆ ಸ್ಥಾನಕ್ಕೆ ಇನ್ನೊಬ್ಬರು ಬರುತ್ತಾರೆ ಅನ್ನುವ ಉದ್ಧಟತನ ಮುಂದೊಂದು ದಿನ ತಿರುಗುಬಾಣವಾಗಬಹುದು. ಬಿ ಪಾಸಿಟಿವ್ ಅಂದ ಹಾಗೆ ಪಾಸಿಟಿವಿಟಿ ಪಸರಿಸೋಣ.

ಹಸಿವು ಮಮತೆ ಬದುಕಿನ ರಹಸ್ಯಗಳು

ಹೊಟ್ಟೆಯಲಿ ಹಸಿವು, ಮನದಲಿ ಮಮತೆ - ಈ ಎರಡು
ಗುಟ್ಟು ಕೀಲುಗಳಿಹವು ಸೃಷ್ಟಿಯಂತ್ರದಲಿ
ಕಟ್ಟಿಪುವು ಕೋಟೆಗಳ, ಕೀಳಿಪುವು ತಾರೆಗಳ
ಸೊಟ್ಟಾಗಿಪುವು ನಿನ್ನ - ಮಂಕುತಿಮ್ಮ॥

ಮನುಷ್ಯನ ಉದರದ ಹಸಿವು ಹಾಗೂ ಮನದಲ್ಲಿನ ಮಮತೆಗಳೇ ಈ ಜಗತ್ತಿನ ಸೃಷ್ಟಿಯಂತ್ರದ ಹಾಗೂ ನಮ್ಮಯ ಬದುಕಿನ ಕೀಲುಗಳು. ಈ ಹಸಿವು ಹಾಗೂ ಮಮತೆಗಳು ಮನುಷ್ಯನಿಂದ ಅಸಾಧ್ಯವಾದುದನ್ನೂ ಸಹ ಸಾಧ್ಯವಾಗಿಸಿವೆ. ಹಸಿವು ಹಾಗೂ ಮಮತೆಗಳು ಯಾವ ರೀತಿ ಎಂದರೆ ನಮ್ಮಗಳಿಂದ ಕೋಟೆಗಳನ್ನು ಕಟ್ಟಿಸುತ್ತವೆ ಹಾಗೆಯೇ ನಭದಲ್ಲಿಯ ತಾರೆಗಳನ್ನೂ ಸಹ ಕೀಳಿಸುವಂತೆ ಪ್ರೇರೇಪಿಸುತ್ತವೆ. ಅಂತೆಯೇ ಫಲ ಕೈಗೂಡದೇ ಇದ್ದಾಗ ಅವುಗಳು ನಮ್ಮ ಜೀವನವನ್ನೂ ಸಹ ಸೊಟ್ಟಾಗಿಸುತ್ತವೆ ಎಂದು ಮನುಷ್ಯನ ನೈಜ ಬದುಕಿನ ಸ್ವರೂಪವನ್ನು ಈ ಪದ್ಯದಲ್ಲಿ ತಿಳಿಸಿದ್ದಾರೆ.

ಮನುಷ್ಯನ ಮನದಲ್ಲಿ ಎಲ್ಲಾ ಆಕಾಂಕ್ಷೆಗಳು ಮೂಡುವುದು ಈ ಹಸಿವು ಹಾಗೂ ಮಮತೆಗಳಿಂದಲೇ ಹೌದು. ಅಂತೆಯೇ ಮನುಷ್ಯನಿಗಿರುವ ಹಸಿವು ಹಾಗೂ ಮನದಲ್ಲಿಮೂಡುವ ಮಮತೆಗಳು ಆತನಿಂದ ಎಂಥಹ ಕೆಲಸಕ್ಕೂ ಕೈ ಹಾಕಿಸಿಬಿಡುತ್ತವೆ. ಹಸಿವೆಂಬುದು ಮೊದಲಿಗೆ ವಸ್ತುವನ್ನು ಪಡೆಯಲು ಪ್ರೇರೇಪಿಸಿದರೆ, ನಂತರ ಪಡೆದ ವಸ್ತಗಳ ಮೇಲೆ ಮನದಲ್ಲಿ ಮಮಕಾರ ಉಂಟಾಗುತ್ತದೆ. ಈ ಹಿಂದಿನ ಇತಿಹಾಸವನ್ನೇ ನಾವು ನೋಡಿದರೂ ಸಹ ಎಲ್ಲಾ ವ್ಯವಸ್ಥೆಗಳೂ ಸಹ ನಿಂತಿರುವುದು ಈ ಹಸಿವು ಹಾಗೂ ಮನದ ಮಮತೆಗಳಿಂದಲೇ ಹೌದು. ಜಠರಾಗ್ನಿಯು ಬುಗಿಲೆದ್ದರೆ ಆ ಜ್ವಾಲೆಗೆ ಕಂದದವರು ಯಾರೂ ಇಲ್ಲ. ಹಾಗೆಯೇ ಈ ಮನದಲ್ಲಿಯ ಮಮತೆಗಳೂ ಸಹ ಯಾವುದೋ ರೀತಿಯಲ್ಲಿ ಎಲ್ಲವೂ ನನ್ನದಾಗಬೇಕು ಎಂಬ ಇಚ್ಛೆಯನ್ನು ವ್ಯಕ್ತಪಡಿಸಿ ಆಪೋಷನ ಮಾಡುತ್ತಲಿರುತ್ತದೆ. ಇವನು ಕಟ್ಟಿದ ರಾಜ್ಯಗಳು, ಗೆದ್ದ ಪ್ರದೇಶಗಳು, ಸಮುದ್ರಗಳು, ಆಕಾಶ , ಕಲಿತ ಕಲೆ, ಶಾಸ್ತ್ರ, ಅರಿತ ಜ್ಞಾನ - ವಿಜ್ಞಾನಗಳು ಎಲ್ಲವೂ ತನ್ನನ್ನು ಮತ್ತು ತಾನು ಕಟ್ಟಿಕೊಂಡ ಸಮಾಜವನ್ನು ಬದಲಾಯಿಸುವ, ಸುಧಾರಿಸುವ ಮತ್ತು ಔನ್ನತ್ಯಕ್ಕೆ ಕೊಂಡುಹೋಗುವ ಇವನ ಪ್ರಯತ್ನಕ್ಕೆಇವನ ಮಹತ್ವಾಕಾಂಕ್ಷೆ ಮತ್ತು ಮಮತೆಗಳೇ ಕಾರಣವೆಂದರೆ ಸೂಕ್ತವಾಗುತ್ತದೆ. ಆದುದರಿಂದ ಮನುಷ್ಯನ ಹೊಟ್ಟೆಯ ಹಸಿವು, ಮಾನಸಿಕವಾದ ಜ್ಞಾನ ವಿಜ್ಞಾನದ ಹಸಿವುಗಳು ಹಾಗೂ ಆತನು ಮನದಲ್ಲಡಗಿಸಿಕೊಂಡ ಮಮತೆಗಳು ಆತನನ್ನು ಮೇರು ಮಟ್ಟಕ್ಕೂ ತರುತ್ತವೆ ಅಂತೆಯೇ ಪ್ರಪಾತಕ್ಕೂ ಕೊಂಡೊಯ್ಯುತ್ತವೆ. ಇವೆರಡೂ ಕೋಟೆಗಳನ್ನು ಕಟ್ಟಿಸುತ್ತವೆ ಅಂದರೆ ಸಮಾಜಕ್ಕೆ ಕೋಟೆಯಾಗಿ ರಕ್ಷಿಸುವಂಥಹ ಕೆಲಸವನ್ನೂ ಮಾಡಿಸುತ್ತವೆ. ಕೆಲವೊಮ್ಮೆ ಈ ಹಸಿವು ಹಾಗೂ ಮಮತೆಗಳು ಅಸಾಧ್ಯವಾದುದನ್ನು ಸಾಧಿಸಲೆತ್ನಿಸಿ ಆತನನ್ನು ಚೊಟ್ಟವಾಗಿಸಿಯೂ ಬಿಡುತ್ತವೆ. ಒಟ್ಟಿನಲ್ಲಿ ಮನುಷ್ಯನಲ್ಲುದ್ಭವಿಸುವ ಆಸೆಗಳ ಮೂಲ ಆತನ ಹಸಿವು ಹಾಗು ಆತನಲ್ಲಿಯ ಮಮತೆಗಳು, ಇವೆರಡೂ ಆತನನ್ನು ಔನ್ನತ್ಯಕ್ಕೂ ಕೊಂಡೊಯ್ಯುತ್ತವೆ ಹಾಗೆಯೇ ಕೆಲವೊಮ್ಮೆ ಆತನನ್ನು ಚೊಟ್ಟವಾಗಿಸಿಬಿಡುತ್ತವೆ ಎಂಬ ನಗ್ನ ಸತ್ಯವನ್ನ ಈ ಮುಕ್ತಕವು ಹೇಳಿದೆ.

ಡೈನಾಮೆಟ್ ಕಂಡು ಹಿಡಿದವನು ನೊಬೆಲ್. ಆತನು ರಾಸಾಯನಿಕ ವಸ್ತುಗಳ ಮೇಲೆ ಇಟ್ಟಿದ್ದ ಮಮತೆ ಹಾಗೂ ಹೆಸರಾಗಬೇಕೆಂಬ ಹಂಬಲದ ಮಮತೆಯಲಿ ಈ ಅವಿಷ್ಕಾರ ಮಾಡಿ ಹೇರಳವಾಗಿ ಹಣ ಸಂಪಾದನೆ ಮಾಡಿದನು. ಕೊನೆಗೆ ತನ್ನಲ್ಲಿಯ ಎಲ್ಲಾ ಸಂಪತ್ತನ್ನು ದಾನಮಾಡಿದನು. ಈಗಲೂ ಆತನ ಹೆಸರಲ್ಲಿ ನೊಬೆಲ್ ಬಹುಮಾನ ಇರುವುದನ್ನು ಕಂಡಿದ್ದೇವೆ. ಈತನಲ್ಲಿಯ ಹಸಿವು, ಜ್ಞಾನ ವಿಜ್ಞಾನದ ಹಸಿವು, ರಾಸಾಯನಿಕ ವಸ್ತುಗಳ ಮೇಲಿನ ಮಮತೆಗಳು ಆತನಿಂದ ಡೈನಾಮೆಟ್‌ಗಳನ್ನು ಕಂಡು ಹಿಡಿಸಿದವು. ಆದರೆ ಆತನಿಗೆ ನಾನು ಅವಿಷ್ಕಾರ ಮಾಡಿರುವುದು ಸೊಟ್ಟಾಗಿದೆ ಎಂಬ ಅರಿವು ಆಗಿ ಆತನು ತನ್ನ ತಪ್ಪನ್ನು ತಿದ್ದಿಕೊಂಡನು. ಹೀಗೆ ಹಸಿವು ಹಾಗೂ ಮಮತೆಗಳು ಎಂಥಹ ಕೆಲಸಕ್ಕೂ ಈ ಮಾನವರಿಂದ ಕೈ ಹಾಕಿಸುತ್ತವೆ ಎಂಬ ಸೂಕ್ತಿಯು ಸತ್ಯವಾದುದೇ ಆಗಿದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಹನಿ ಮಳೆ

ಮಳೆಯ ಅವಾಂತರ

ನಗರದ ರಸ್ತೆಗಳಿಂದು ಈಜುಕೊಳ
ಸುರಿಯುತ್ತಿರುವ ಸತತ ಮಳೆಗೆ
ಎಲ್ಲರೂ ಕಲಿಯಬೇಕು ಈಜು
ಬೇಗ ತಲುಪಲು ಮನೆಗೆ

● ಮಹಾಂತೇಶ ಮಾಗನೂರ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಜೋರಾಗಿ ಅಳುವುದು ಕೊನೆಗೆ ದೀರ್ಘವಾಗಿದೆ (3)
3. ಅನೇಕ ರೀತಿಯಿಂದ ಮಾಡಿದ ಅಪಹಾಸ್ಯ (3)
6. ಮೌನ ಅಥವಾ ನಿಶ್ಯಬ್ದ (3)
7. ಒಂದು ಬಗೆಯ ಸಿಡಿಮದ್ದು (3)
9. ಹಾವಿಗೆ ಮತ್ತೊಂದು ಹೆಸರು (3)
12. ತರ್ಜುಮೆ (4)
13. ಮರ ಕತ್ತರಿಸುವ ಸಾಧನ (4)
14. ಗ್ರೀಸ್ ದೇಶದಿಂದ ಬಂದವನು (3)
20. ಅರ್ಧ ಚಂದ್ರಾಕೃತಿಯ ರಚನೆ (3)
21. ನಿ, ತಿರುಗಿ ಬಂದ ಉತ್ತರ (3)
22. ಮತ್ತೊಂದು ಹುಟ್ಟು (3)
23. ಪತ್ರಗಳನ್ನು ಕಳುಹಿಸುವ ಕವರು (3)

ಮೇಲಿಂದ ಕೆಳಕ್ಕೆ

1. ಶ್ವಾಸ ತೆಗೆದುಕೊಂಡಾದಾಗ ಬಂದಿತು ನಂಬಿಕೆ (3)
2. ನೀರು, ಪಾನಕ ಇತ್ಯಾದಿ (3)
3. ಅವನು ಸರ ತೆಗೆದುಕೊಳ್ಳುವಾಗ ಮಾಡಿದ ಗಡಿಬಿಡಿ (4)
4. ತಾವರೆಗೆ ಇನ್ನೊಂದು ಹೆಸರಿದು (3)
5. ಕಡು ಲೋಭಿ ಇವನು (3)
8. ಮನುಷ್ಯನಿಗೆ ಮತ್ತೊಂದು ಹೆಸರಿದು (3)
9. ಹುಟ್ಟುವಿಕೆ (3)
10. ಆಗಸಕ್ಕೆ ಮತ್ತೊಂದು ಹೆಸರಿದು (3)
11. ಒಗೆದು ಶುಚಿಮಾಡುವವ (3)
15. ಅಭಿವೃದ್ಧಿಯನ್ನು ಸೂಚಿಸುವ ಜೈನ ತೀರ್ಥಂಕರ (4)
16. ಸೇವೆ, ಊಳಿಗ (3)
17. ಅನುಸರಿಸಿ ಹುಟ್ಟಿದವನು, ತಮ್ಮ (3)
18. ವಾಯು, ಮಾರುತ (3)
19. ಕೈಯಿಂದ ಆತ್ಮರಕ್ಷಣೆಯ ಕಲೆ (3)

ನಮಗೆ ಮುಳುವಾಗುವ ನಮ್ಮ ಕೋಪ

ಒಂದು ಸಂಜೆ, ಶ್ರೀಕೃಷ್ಣ, ಬಲರಾಮ ಮತ್ತು ಸಾತ್ಯಕಿ ವಾಯುವಿಹಾರಕ್ಕೆ ಹೊರಟರು. ಮಾತು ಹರಟೆಗಳಲ್ಲಿ ಮಗ್ನರಾಗಿದ್ದವರಿಗೆ ಕತ್ತಲೆಯಾದುದು ಅರಿವಿಗೆ ಬರಲಿಲ್ಲ. ಅವರು ಮೂವರು ದಟ್ಟವಾದ ಕಾಡಿನೊಳಗೆ ಬಂದುಬಿಟ್ಟಿದ್ದರು. ಅತ್ತ ಮುಂದೆ ಸಾಗುವುದಕ್ಕೂ ಅಲ್ಲ, ಹಿಂದೆ ತಿರುಗುವುದಕ್ಕೂ ಅನುಕೂಲಕರವಲ್ಲದ ಸಮಯ. ವಿಧಿಯಿಲ್ಲದೆ ಅವರು ಅಲ್ಲೇ ಕಾಡಿನಲ್ಲಿ ರಾತ್ರಿ ಕಳೆಯಲು ನಿರ್ಧರಿಸಿದರು.

ಕಾಡಿನಲ್ಲಿ ಮೂವರೂ ಒಂದೇ ಸಮಯದಲ್ಲಿ ನಿದ್ರಿಸುವುದು ಸುರಕ್ಷಿತವಲ್ಲ ಎಂದು ಯೋಚಿಸಿದ ಅವರು ಯಾರಾದರೂ ಇಬ್ಬರು ಮಲಗಿದ್ದು ಉಳಿದ ಒಬ್ಬರು ಸರದಿಯಂತೆ ಎಚ್ಚರವಾಗಿರಲು ನಿರ್ಧರಿಸಿದರು. ಮೊದಲು ಸಾತ್ಯಕಿ ಎಚ್ಚರವಾಗಿದ್ದು ಕಾಯುತ್ತಿದ್ದ. ಅಷ್ಟರಲ್ಲಿ ಒಬ್ಬ ರಾಕ್ಷಸನು ಕೃಷ್ಣ ಮತ್ತು ಬಲರಾಮರ ಕಡೆಗೆ ಬರುತ್ತಿರುವುದು ಕಾಣಿಸಿತು. ಸಾತ್ಯಕಿ ತಕ್ಷಣ ರಾಕ್ಷಸನನ್ನು ತಡೆದನು.

ಆ ರಾಕ್ಷಸನು ಸಾತ್ಯಕಿಯ ಮೇಲೆ ದಾಳಿ ಮಾಡಿದನು. ಸಾತ್ಯಕಿ ಕೋಪದಿಂದ ತನ್ನ ಗದೆಯಿಂದ ಅವನನ್ನು ಎದುರಿಸಿದನು. ಸಾತ್ಯಕಿ ಕೋಪಗೊಂಡಂತೆ, ರಾಕ್ಷಸನ ದೇಹವು ದ್ವಿಗುಣಗೊಂಡಿತು. ಸಾತ್ಯಕಿಯ ಕೋಪ ಇನ್ನೂ ಹೆಚ್ಚಾಯಿತು, ಆ ದೈತ್ಯನ ದೇಹವೂ ಬೆಳೆಯಿತು. ರಾಕ್ಷಸನ ದೇಹದ ಮುಂದೆ ಸಾತ್ಯಕಿ ಆಟಿಕೆಯಂತೆ ಕಾಣುತ್ತಿದ್ದ. ಆ ರಾಕ್ಷಸನು ಸಾತ್ಯಕಿಯನ್ನು ಎತ್ತಿಕೊಂಡು ಸುತ್ತು ಹಾಕಿ ಕೆಳಗೆ ಎಸೆದು ಹೊರಟು ಹೋದನು. ಗಾಯಗೊಂಡ ಸಾತ್ಯಕಿ ಸ್ವಲ್ಪ ಹೊತ್ತಿನಲ್ಲಿಯೇ ತನ್ನ ಶಕ್ತಿಯನ್ನು ಮರಳಿ ಪಡೆದು ಎದ್ದು ನಿಂತನು. ಅದೇ ಸಮಯಕ್ಕೆ ಎಚ್ಚರಗೊಂಡ ಬಲರಾಮ, ಇನ್ನು ತಾನು ಕಾವಲು ಕಾಯುತ್ತೇನೆಂದು ಹೇಳಿ, ಸಾತ್ಯಕಿಗೆ ಮಲಗಲು ಹೇಳಿದನು. ರಾಕ್ಷಸನೊಂದಿಗಿನ ಹೋರಾಟದಿಂದ ದಣಿದ ಸಾತ್ಯಕಿ ನಿಧಾನವಾಗಿ ಮರದ ಬುಡವನ್ನು ತಲುಪಿ, ವಿಶ್ರಾಂತಿ ಪಡೆದು ನಿದ್ರೆಗೆ ಜಾರಿದನು.

ಬಲರಾಮನು ಕಾವಲು ಕಾಯುತ್ತಾ ಅಲ್ಲಿಯೇ ಓಡಾಡುತ್ತಿದ್ದನು.

ಮತ್ತೆ ರಾಕ್ಷಸ ಎದುರಾದನು. ಮೊದಲೇ ಮುಂಗೋಪಿಯಾಗಿದ್ದ ಬಲರಾಮನು ಕೋಪದಿಂದ ತನ್ನ ಕತ್ತಿಯನ್ನು ಎತ್ತಿ ಆ ರಾಕ್ಷಸನ ಮೇಲೆ ಆಕ್ರಮಣ ಮಾಡಿದನು. ಆ ರಾಕ್ಷಸನು ವಿಕಟಾಟ್ಟಹಾಸ ಮಾಡುತ್ತಾತನ್ನ ದೇಹವನ್ನು ಬೆಳೆಸದನು. ಕೊನೆಗೆ, ಉಗ್ರ ರೂಪವನ್ನು ತಾಳಿದ ರಾಕ್ಷಸನು ಬಲರಾಮನನ್ನು ನೆಲಕ್ಕೆ ಕೆಡವಿ ಹಿಂದಕ್ಕೆ ಹೊರಟನು.

ಅಷ್ಟರಲ್ಲಿ, ಕೃಷ್ಣ ಪರಮಾತ್ಮನು ಎಚ್ಚರ ಗೊಂಡು ತನ್ನ ಕಾವಲು ಕಾರ್ಯವನ್ನು ಶುರು ಮಾಡಿದನು. ಸ್ವಲ್ಪ ಸಮಯದ ನಂತರ, ಸಾತ್ಯಕಿ ಮತ್ತು ಬಲರಾಮರನ್ನು ಎದುರಿಸಿ ಸೋಲಿಸಿದ ಅದೇ ರಾಕ್ಷಸನು ಶ್ರೀ ಕೃಷ್ಣನನ್ನೂ ಹೋರಾಡಲು ಪ್ರಚೋದಿಸಿದನು. ಆ ರಾಕ್ಷಸನು ಕೃಷ್ಣನ ಮೇಲೆ ಆಕ್ರಮಣ ಮಾಡಿದನು. ಕೃಷ್ಣ ಅಷ್ಟೇ ಶಾಂತವಾಗಿ ಅವನೊಂದಿಗೆ ಮಲ್ಲಯುದ್ಧಕ್ಕೆ ನಿಂತನು. ಇದ್ದಕ್ಕಿದಂತೆ ಆ ದೈತ್ಯನ ದೇಹವು ಅರ್ಧದಷ್ಟು ಕುಗ್ಗಿತು. ಅವನು ಎಷ್ಟೇ ಕೀಟಲೆ ಮಾಡಿದರೂ, ಪ್ರಚೋದಿಸಿದರೂ, ಪ್ರೇರೇಪಿಸಿದರೂ ಕೃಷ್ಣ ಒಂದಿನಿತೂ ಕೋಪಗೊಳ್ಳದೆ, ಅಚಲವಾದ ನಗುವಿನೊಂದಿಗೆ ಅವನನ್ನು ಎದುರಿಸಿದನು.

ಹೀಗೆ ಚಿಕ್ಕದಾಗುತ್ತಿದ್ದ ಆ ದೈತ್ಯನ ದೈತ್ಯಾಕಾರದ ದೇಹ ಮುಷ್ಠಿಯಲ್ಲಿ ಹಿಡಿಯುವಷ್ಟು ಚಿಕ್ಕದಾಯಿತು. ಕೃಷ್ಣನು ಆ ರಾಕ್ಷಸನನ್ನು ತನ್ನ ಅಂಗೈಯಲ್ಲಿ ಹಿಡಿದು ತನ್ನ ಉತ್ತರೀಯದ ಅಂಚಿಗೆ ಕಟ್ಟಿಕೊಂಡನು.

ಬೆಳಗಾಯಿತು ಸಾತ್ಯಕಿ ಮತ್ತು ಬಲರಾಮರು ಎಚ್ಚರಗೊಂಡರು.ಅವರು ತಮ್ಮ ದೇಹದ ಮೇಲಿನ ಗಾಯಗಳನ್ನು ನೋಡಿಕೊಂಡರು ಮತ್ತು ರಾತ್ರಿಯಲ್ಲಿ ಕಂಡ ದೈತ್ಯನ ಬಗ್ಗೆ ಶ್ರೀ ಕೃಷ್ಣನಿಗೆ ಹೇಳಿದರು.ಇವನೇನಾ ಆ ರಾಕ್ಷಸ? ಎನ್ನುತ್ತಾ ಕೃಷ್ಣನು ತನ್ನ ಉತ್ತರೀಯದ ಅಂಚಿನಲ್ಲಿ ಕಟ್ಟಿದ್ದ ಗಂಟನ್ನು ಬಿಚ್ಚಿದನು. ಆಗ ಮುಷ್ಠಿಯ ಗಾತ್ರದ ದೈತ್ಯ ಹೊರಜಿಗಿದ.

ಬಲರಾಮ ಮತ್ತು ಸಾತ್ಯಕಿಗೆ ಆಶ್ಚರ್ಯವಾಯಿತು. ಇದು ಹೇಗಾಯಿತು ಎಂದಾಗ ಕೃಷ್ಣ ನಗುತ್ತಾ ಹೇಳಿದ ಈ ರಾಕ್ಷಸ ಕೋಪದ ಸಾಕಾರ ಮೂರ್ತಿಯು, ಮತ್ತು ಕೋಪಕ್ಕೆ ಉತ್ತರ ಕೋಪವಲ್ಲ, ನೀವಿಬ್ಬರೂ ಮತ್ತೆ ಮತ್ತೆ ಕೋಪಗೊಳ್ಳುತ್ತಲೇ ಜಗಳವಾಡಿದ್ದೀರಿ. ಅದಕ್ಕಾಗಿಯೇ ನೀವು ಅವನ ಕೈಯಲ್ಲಿ ಸೋತುಬಿಟ್ಟಿರಿ ಎಂದು ಕೃಷ್ಣ ಹೇಳಿದನು. ನಮ್ಮ ಕೋಪ ನಮ್ಮ ಶತ್ರುಗಳನ್ನು ಬಲಿಷ್ಠರನ್ನಾಗಿಸುತ್ತದೆ. ಶಾಂತ ಚಿತ್ತದಿಂದ ಎದುರಿಸಿದಾಗ ಎಂತಹವರನ್ನೂ ಮಂಡಿಯೂರುವಂತೆ ಮಾಡಬಹುದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಹೃದಯ ಮತ್ತು ಮನಸ್ಸು

ಕೃಷ್ಣ ಅರ್ಜುನನನ್ನು ಸಮಗ್ರವಾಗಿ ಪರಿಶೀಲಿಸುವ ನೇರ ಸಂಭಾಷಣೆಯೇ ಭಗವದ್ಗೀತೆಯಾಗಿದೆ. ಕೃಷ್ಣ ಅರ್ಜುನನ ಮುಖದಲ್ಲಿ ಸಂದೇಹ ಅಥವಾ ಅಪನಂಬಿಕೆ ಭಾವವನ್ನು ಕಂಡಿರಬಹುದು. ಅದಕ್ಕಾಗಿ ಹೇಳುತ್ತಾನೆ- ನನ್ನನ್ನು ಸದಾ ಸ್ಮರಿಸಿ ಯುದ್ಧ ಮಾಡು (8.7) ಯಾಕೆಂದರೆ ಅರ್ಜುನ ತನ್ನ ಕೈಯಲ್ಲಿರುವ (ಕುರುಕ್ಷೇತ್ರ ಯುದ್ಧ) ಕೆಲಸವನ್ನು ಮಾಡಲು ಅಳುಕುತ್ತಾ ಇದ್ದಾನೆ. ಕೈಯಲ್ಲಿರುವ ಕೆಲಸ ಮಾಡುವಲ್ಲಿ ಪ್ರತಿರೋಧ ಮಾಡುವ ಪ್ರವೃತ್ತಿ ಈಗಲೂ ನಮ್ಮಲ್ಲಿ ಇದೆ.

ತಕ್ಷಣ ಕೃಷ್ಣ ತನ್ನನ್ನು ಈ ರೀತಿ ವರ್ಣಿಸಿಕೊಳ್ಳುತ್ತಾನೆ. ತಾನು ಸರ್ವ ವ್ಯಾಪಿ, ಶಾಶ್ವತ, ಶ್ರೇಷ್ಠ ಆಡಳಿತಗಾರ, ಸೂಕ್ಷ್ಮ ಅಣುವಿಗಿಂತಲೂ ಸೂಕ್ಷ್ಮ, ಎಲ್ಲರ ಸಹಾಯಕ, ಗ್ರಹಿಸಲಾರದ ರೂಪವುಳ್ಳವನು, ಸೂರ್ಯನಂತೆ ಹೊಳೆಯುವವನು, ಅಂಧಕಾರಾತೀತನು. (8.9) ಅಸ್ತಿತ್ವವು ತನ್ನನ್ನು ವರ್ಣಿಸಿಕೊಳ್ಳಬೇಕಾದರೆ ಶಬ್ದಗಳೇ ಸಿಗುವುದಿಲ್ಲ.

ಕೃಷ್ಣ ತನ್ನನ್ನು ಸ್ಮರಿಸಿಕೊಳ್ಳಲು ಎರಡು ಮಾರ್ಗ ತೋರಿಸುತ್ತಾನೆ. ಒಂದನೇ ಮಾರ್ಗ ಜಾಗೃತಿಯದು. ಅದಕ್ಕಾಗಿ ಅವನು ಹೇಳುತ್ತಾನೆ ಯಾರ ಮನಸ್ಸು ಯೋಗ ದಿಂದ ಸ್ಥಿರವಾಗಿರುತ್ತದೆಯೋ, ತಕ್ಷಣ ಅವನಲ್ಲಿ ಮಗ್ನವಾಗಿರುತ್ತದೆಯೋ ಅಂಥವನು ಉನ್ನತ ಪ್ರಕಾಶವಾದ ಭಗವಂತನನ್ನು ಹೊಂದುತ್ತಾನೆ.

ಇಂದ್ರಿಯಗಳಿಂದ ಬರುವಂತಹವುಗಳನ್ನು ವಿಭಜಿಸುವ ಪ್ರವೃತ್ತಿ ಯನ್ನು ಮನಸ್ಸು ಹೊಂದಿದೆ. ಇದು ನೋವು ನಲಿವುಗಳ ದ್ವಂದ್ವಗಳಉಗಮ ಸ್ಥಾನ. (2.14) ಇದು ದೈಹಿಕ ಉಳಿವಿಗೆ ಅಥವಾ ಪ್ರಾಣಿಕ ಜೀವನಕ್ಕೆ ಉಪಯುಕ್ತವಾದರೂ ಈ ಸಾಮರ್ಥ್ಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಈ ಸ್ಥಿತಿಯನ್ನು ತಲುಪಲು ಸಮಚಿತ್ತತೆ ಹಾಗೂ ಯೋಗವನ್ನು (ಜಾಗೃತಿ ಮಾರ್ಗ) ಕೃಷ್ಣ ಸೂಚಿಸುತ್ತಾನೆ.

ಎರಡನೆಯ ಮಾರ್ಗವೆಂದರೆ ಭಕ್ತಿ ಆಧಾರಿತ ತಂತ್ರ. ಕೃಷ್ಣ ಹೇಳುತ್ತಾನೆ - ಮರಣ ಕಾಲದಲ್ಲಿ ಯಾರು ತನ್ನ ಪ್ರಾಣವನ್ನು (ಜೀವದ ಉಸಿರು) ಎರಡು ಹುಬ್ಬುಗಳ ಮಧ್ಯೆ ಏಕಾಗ್ರಗೊಳಿಸುತ್ತಾರೋ ಹಾಗೂ ಪೂರ್ಣ ಭಕ್ತಿಯೊಂದಿಗೆ ಪರಮ ಪ್ರಭುವನ್ನು ಸ್ಮರಿಸುವಲ್ಲಿ ತೊಡಗಿರು ತ್ತಾರೋ ಅವರು ಖಂಡಿತವಾಗಿ ನನ್ನನ್ನು ಹೊಂದುತ್ತಾರೆ (8.10) ಸದಾ ಚಂಚಲವಾಗಿರುವ ಮನಸ್ಸನ್ನು ನಿಗ್ರಹಿಸುವ ಮೊದಲನೇ ಮಾರ್ಗಕ್ಕಿಂತ ಈ ಮಾರ್ಗ ಸುಲಭ ಎನಿಸಿದರೂ ಇದಕ್ಕೆ ಪೂರ್ವಭಾವಿ ಯಾಗಿ ಭಕ್ತಿ ಇರುತ್ತದೆ.

ಗೀತೆಯಲ್ಲಿ ಭಕ್ತಿ ಮತ್ತು ಶ್ರದ್ಧೆಗಳು ಸಾಮಾನ್ಯ ಎಳೆಗಳಾಗಿವೆ. ಹೂವಿನ ಸುವಾಸನೆಯಂತೆ ಪರಿಸ್ಥಿತಿ ಏನೇ ಇದ್ದರೂ ನಮ್ಮ ಹೃದಯದಿಂದ ಹರಿದು ಬರುವ ಬೇಷರತ್ ಪ್ರೇಮವೇ ಭಕ್ತಿ. ಯಾವುದೇ ಪ್ರತಿರೋಧ ಇಲ್ಲದೇ ಪರಮಾತ್ಮನ ಅನುಗ್ರಹದಿಂದ ಬರುವ ಯಾವುದನ್ನಾದರೂ ಸ್ವೀಕರಿಸುವುದೇ ಶ್ರದ್ಧೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com



ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್ (Q)	12	09	03	18
ಬೆಂಗಳೂರು (Q)	12	08	03	17
ಪಂಜಾಬ್ (Q)	12	08	03	17
ಮುಂಬೈ (Q)	13	08	05	16
ಡೆಲ್ಲಿ	13	05	06	13
ಕೋಲ್ಕತ್ತಾ	13	05	06	12
ಲಖನೌ	12	05	07	10
ಹೈದರಾಬಾದ್	12	04	07	09
ರಾಜಸ್ಥಾನ್	14	04	10	08
ಚೆನ್ನೈ	13	03	10	06

ಇಂದಿನ ಪಂದ್ಯ

7.30 PM

ಗುಜರಾತ್ ಟೈಟಾನ್ಸ್ VS ಲಖನೌ ಸೂಪರ್ ಕಿಂಗ್ಸ್

ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಸ್ಕೋರ್ ಬೋರ್ಡ್

180/5 (20 ಓವರ್)

ಮುಂಬೈ ಇಂಡಿಯನ್ಸ್		ರನ್	ಬಾಲ್
ರಿಕಲ್ಟನ್	ಕಾಟ್ ▸ ತಿವಾರಿ, ಬೌಲರ್ ▸ ಕುಲ್ದೀಪ್	25	18
ರೋಹಿತ್	ಕಾಟ್ ▸ ಪೊರೆಲ್ ಬೌಲರ್ ▸ ರೆಹಮಾನ್	5	5
ವಿಲ್ ಜಾಕ್ಸ್	ಕಾಟ್ ▸ ವಿಪ್ರಜ್ ಬೌಲರ್ ▸ ಮುಕೇಶ್	21	13
ಸೂರ್ಯಕುಮಾರ್	ನಾಟೌಟ್	73	43
ತಿಲಕ್ ವರ್ಮಾ	ಕಾಟ್ ▸ ರಿಜ್ವಿ, ಬೌಲರ್ ▸ ಮುಖೇಶ್	27	27
ಹಾರ್ದಿಕ್ ಪಾಂಡ್ಯ	ಕಾಟ್ ▸ ಮುಕೇಶ್, ಬೌಲರ್ ▸ ಚಮೀರ	3	6
ನಮನ್ ಧೀರ್	ನಾಟೌಟ್	24	8

ದೆಹಲಿ ಕ್ಯಾಪಿಟಲ್ಸ್	ಓವರ್	ರನ್	ವಿಕೆಟ್
ಮುಖೇಶ್	4	48	2
ಡಿ.ಚಮೀರ	4	54	1
ಎಂ.ರೆಹಮಾನ್	4	30	1
ವಿಪ್ರಜ್	4	25	0
ಕುಲ್ದೀಪ್	4	22	1

ಮುಂಬೈ ಇಂಡಿಯನ್ಸ್	ಓವರ್	ರನ್	ವಿಕೆಟ್
ಬೌಲ್ಟ್	4	29	1
ಚಾಹರ್	3	22	1
ಜ್ಯಾಕ್ಸ್	1	16	1
ಸ್ಯಾಂಟ್ನರ್	4	11	3
ಬುಮ್ರಾ	3.2	12	3
ಕರ್ಣ್ ಶರ್ಮಾ	3	31	1

121/10 (18.2 ಓವರ್)

ಡೆಲ್ಲಿ ಕ್ಯಾಪಿಟಲ್ಸ್		ರನ್	ಬಾಲ್
ರಾಹುಲ್	ಕಾಟ್ ▸ ರಿಕಲ್ಟನ್, ಬೌಲರ್ ▸ ಬೌಲ್ಟ್	11	6
ಡು ಪ್ಲೆಸಿಸ್	ಕಾಟ್ ▸ ಸ್ಯಾಂಟ್ನರ್, ಬೌಲ್ಡ್ ▸ ಚಾಹರ್	6	7
ಪೊರೆಲ್	ಸ್ಟಂಪ್ ▸ ರಿಕಲ್ಟನ್, ಬೌಲರ್ ▸ ಜಾಕ್ಸ್	6	9
ಎಸ್.ರಿಜ್ವಿ	ಬೌಲ್ಡ್-ಬೌಲರ್ ▸ ಸ್ಯಾಂಟ್ನರ್	39	35
ವಿಪ್ರಜ್	ಕಾಟ್ ಆ್ಯಂಡ್ ಬೌಲ್ಡ್ ▸ ಸ್ಯಾಂಟ್ನರ್	20	11
ಟಿ.ಸ್ಟಬ್ಸ್	ಎಲ್‌ಬಿಡಬ್ಲ್ಯು ▸ ಬುಮ್ರಾ	2	4
ಅಶುತೋಷ್	ಸ್ಟಂಪ್ ▸ ರಿಕಲ್ಟನ್, ಬೌಲರ್ ▸ ಸ್ಯಾಂಟ್ನರ್	18	16
ಎಂ.ತಿವಾರಿ	ಬೌಲ್ಡ್ ▸ ಬುಮ್ರಾ	3	4
ಡಿ.ಚಮೀರ	ನಾಟೌಟ್	8	10
ಕುಲ್ದೀಪ್	(ಕಾಟ್ ▸ ಸಬ್ ಪ್ಲೇಯರ್) ಬೌಲರ್ ▸ ಕರ್ಣ್	7	8
ಎಂ. ರೆಹಮಾನ್	ಬೌಲ್ಡ್ ▸ ಬುಮ್ರಾ	0	1

ಹಾರ್ದಿಕ್ ಪಡೆಯ ಬೌಲಿಂಗ್‌ಗೆ ಡೆಲ್ಲಿ ಧೂಳಿಪಟ | ಸೂರ್ಯಕುಮಾರ್ ಅಮೋಘ ಬ್ಯಾಟಿಂಗ್

ಪ್ಲೇ ಆಫ್‌ಗೆ ಲಗ್ಗೆ ಇಟ್ಟ ಮುಂಬೈ

ಮುಂಬೈ: ಇಲ್ಲಿನ ವಾಂಖೆಡೆ ಕೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಟೂರ್ನಿಯ ನಿರ್ಣಾಯಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 59 ರನ್‌ಗಳಿಂದ ಸೋಲಿಸಿ, ಈ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ನಾಲ್ಕನೇ ತಂಡವಾಗಿ ಪ್ಲೇ ಆಫ್‌ಗೆ ಲಗ್ಗೆ ಇಟ್ಟಿತು.

ಮುಂಬೈ ನೀಡಿದ್ದ 181 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಲು ಡೆಲ್ಲಿಯಿಂದ ಆರಂಭದಿಂದಲೇ ಸಾಧ್ಯವಾಗಲಿಲ್ಲ. ಆರಂಭಿಕ ಆಟಗಾರ ಡು ಪ್ಲೆಸಿಸ್ 6 ಬಾಲ್‌ಗಳನ್ನು ಎದುರಿಸಿ ಕೇವಲ 7 ರನ್ ಗಳಿಸಿ ಎರಡನೇ ಓವರ್‌ನಲ್ಲಿ ತಮ್ಮ ವಿಕೆಟ್ ಒಪ್ಪಿಸಿದರು. ಆ ಬೆನ್ನಲ್ಲೇ 3ನೇ ಓವರ್‌ನಲ್ಲೇ 6 ಬಾಲ್ ಎದುರಿಸಿ 11 ರನ್ ಗಳಿಸಿದ ಕೆ.ಎಲ್.ರಾಹುಲ್ ಪೆವಿಲಿಯನ್ ಸೇರಿದರು.

ಅಭಿಷೇಕ್ ಪೋರೆಲ್ 9 ಬಾಲ್ ಎದುರಿಸಿ 6 ರನ್ ಗಳಿಸಿದ ಅಭಿಷೇಕ್ ಪೋರಲ್ ವಿಲ್ ಜಾಕ್ಸ್‌ಗೆ ವಿಕೆಟ್ ಒಪ್ಪಿಸಿದರು. ವಿಪ್ರಜ್ ನಿಗಮ್ 11 ಬಾಲ್‌ಗಳಲ್ಲಿ 20 ರನ್ ಸಂಪಾದಿಸಿ ಸಾಂಟ್ನರ್ ಬೌಲಿಂಗ್‌ನಲ್ಲಿ ಔಟ್ ಆಗಿ ಪೆವಿಲಿಯನ್ ಸೇರಿದರು. ಸ್ಟಬ್ ಕೇವಲ 2 ರನ್ ಗಳಿಸುವಲ್ಲಷ್ಟೆ ಸಫಲರಾದರು.

ಆಶುತೋಷ್ ಶರ್ಮಾ 16 ಬಾಲ್ ಎದುರಿಸಿ 18 ರನ್ ಗಳಿಸಿ ಸಾಂಟ್ನರ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಡೆಲ್ಲಿ ತಂಡದ ಪರ ಮನೋಜ್ ತಿವಾರಿ 3 ರನ್, ಚಮೀರಾ 8 ರನ್, ಕುಲ್ದೀಪ್ ಯಾದವ್ 7 ರನ್ ಗಳಿಸಲಷ್ಟೇ ಶಕ್ತರಾದರು. ಎಂ. ರೆಹಮಾನ್ ಒಂದು ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ಅಜೇಯರಾಗುಳಿದರು.

18.2 ಓವರ್‌ಗಳಲ್ಲಿ ಡೆಲ್ಲಿ ತಂಡವು 121 ರನ್‌ಗಳಿಗ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 59 ರನ್‌ಗಳ ಸೋಲೊಪ್ಪಿಕೊಂಡು ತನ್ನ ಪ್ಲೇ ಆಫ್ ಹಾದಿಯನ್ನು ಕೈ ಚೆಲ್ಲಿತು. ಮುಂಬೈ ಪರ ಸ್ಯಾಂಟ್ನರ್ ಮತ್ತು ಬುಮ್ರಾ ತಲಾ 3 ವಿಕೆಟ್ ಪಡೆದರು. ಬೌಲ್ಟ್, ಚಾಹರ್, ವಿಲ್ ಜಾಕ್ಸ್ ಮತ್ತು ಕರ್ಣ್ ಶರ್ಮಾ ತಲಾ ಒಂದು ವಿಕೆಟ್ ಗಳಿಸಿದರು.

ಇದೀಗ ಗುಜರಾತ್, ಬೆಂಗಳೂರು ಮತ್ತು ಪಂಜಾಬ್ ತಂಡದ ಜೊತೆಗೆ ಪ್ಲೇ ಆಫ್‌ನಲ್ಲಿ ಮುಂಬೈ ತಂಡವೂ ಸ್ಥಾನ ಗಿಟ್ಟಿಸಿದಂತಾಗಿದೆ.

ಟಾಸ್ ಗೆದ್ದ ಡೆಲ್ಲಿ ತಂಡವು ಬೌಲಿಂಗ್ ಆಯ್ದುಕೊಂಡು ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಮುಂಬೈ ಪರ ಆರಂಭಿಕ ಆಟಗಾರನಾಗಿ ಕ್ರೀಸ್‌ಗೆ ತೆರಳಿದ ಅನುಭವಿ ಆಟಗಾರ ರೋಹಿತ್ ಶರ್ಮಾ ಬುಧವಾರದ ಪಂದ್ಯದಲ್ಲಿ ಸಂಪೂರ್ಣ ವೈಫಲ್ಯ ಕಂಡರು. 5 ಬಾಲ್‌ಗಳನ್ನು ಎದುರಿಸಿದ ಅವರು ಕೇವಲ 5 ರನ್ ಗಳಿಸಿ ರೆಹಮನ್ ಬೌಲಿಂಗ್‌ನಲ್ಲಿ ಅಭಿಷೇಕ್ ಪೋರಲ್ ಅವರಿಗೆ ಕ್ಯಾಚ್ ಕೊಟ್ಟು ಪೆವಿಲಿಯನ್‌ಗೆ ತೆರಳಿದರು.

ಆ ಬಳಿಕ ಬಂದ ವಿಲ್ ಜಾಕ್ಸ್ ಅವರು ರಿಕಲ್ಟನ್ ಜೊತೆ ಸೇರಿ ಇನ್ನಿಂಗ್ಸ್ ಮುಂದುವರಿಸಿದರು. ಆದರೆ ತಂಡದ ಮೊತ್ತ 48 ತಲುಪಿದಾಗ 13 ಬಾಲ್‌ಗಳಿಂದ 21 ರನ್ ಗಳಿಸಿದ್ದ ವಿಲ್ ಜಾಕ್ಸ್ ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ವಿಪ್ರಜ್ ನಿಗಮ್‌ಗೆ ಕ್ಯಾಚ್ ನೀಡಿ ಔಟ್ ಆದರು.

ಆ ಬಳಿಕ ತಿಲಕ್ ವರ್ಮಾ ಮತ್ತು ರಿಯಾನ್ ರಿಕೆಲ್ಟನ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ಆದರೆ ತಂಡದ ಮೊತ್ತ 56 ರನ್ ಆದಾಗ 18 ಬಾಲ್‌ಗಳಲ್ಲಿ 25 ರನ್ ಗಳಿಸಿದ್ದ ರಿಕೆಲ್ಟನ್ ಅವರು, ಕುಲ್ದೀಪ್ ಬೌಲಿಂಗ್‌ನಲ್ಲಿ ತಿವಾರಿಗೆ ಕ್ಯಾಚ್ ನೀಡಿ ಕ್ರೀಸ್‌ನಿಂದ ತೆರಳಿದರು. ತಿಲಕ್ ವರ್ಮಾ 27 ರನ್ ಗಳಿಸಿದ್ದಾಗ ಮುಕೇಶ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 1 ಬೌಂಡರಿ ಮತ್ತು 1 ಸಿಕ್ಸರ್ ಇತ್ತು. ನಂತರ ಕ್ರೀಸ್‌ಗೆ ಬಂದ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಅವರು ಸೂರ್ಯಕುಮಾರ್‌ರೊಂದಿಗೆ ಜತೆಯಾಟ ಆಡಿದರು. ತಂಡದ ಮೊತ್ತ 123 ರನ್ ಆಗಿದ್ದಾಗ 6 ಬಾಲ್‌ನಲ್ಲಿ 3 ರನ್ ಗಳಿಸಿದ್ದ ಪಾಂಡ್ಯ ಚಮೀರಾ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಒಪ್ಪಿಸಿದರು.

ಆ ನಂತರ ಸೂರ್ಯಕುಮಾರ್ ಯಾದವ್ ಮತ್ತು ನಮನ್ ಧೀರ್ ಮಧ್ಯೆ ಪಂದ್ಯದ ಕೊನೆಯ ವರೆಗೂ ಉತ್ತಮ ಜತೆಯಾಟ ನಡೆಯಿತು. ಒಂದೆಡೆ ವಿಕೆಟ್ ಪತನ ಆಗಿದ್ದರೂ ಕ್ರೀಸ್‌ಗೆ ಅಂಟಿ ನಿಂತಿದ್ದ ಸೂರ್ಯಕುಮಾರ್ ಯಾದವ್ 43 ಬಾಲ್‌ಗಳಲ್ಲಿ 73 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 6 ಬೌಂಡರಿಗಳು ಮತ್ತು 6 ಸಿಕ್ಸರ್ ಗಳಿದ್ದವು. ಮತ್ತೊಂದು ಕಡೆ ನಮನ್ ಧೀರ್ 8 ಬಾಲ್‌ಗಳಲ್ಲಿ 24 ರನ್ ಗಳಿಸಿ ಅಜೇಯರಾಗಿ ಉಳಿದರು.

ಮುಂಬೈ ತಂಡದ ಪರ ಮುಕೇಶ್ ಕುಮಾರ್ 48 ರನ್ ನೀಡಿ 2 ವಿಕೆಟ್ ಪಡೆಯುವಲ್ಲಿ ಸಫಲರಾದರು. ಡಿ.ಚಮೀರ 54 ರನ್ ಕೊಟ್ಟು 1 ವಿಕೆಟ್, ರೆಹಮಾನ್ 30 ರನ್ ನೀಡಿ 1 ವಿಕೆಟ್ ಹಾಗೂ ಕುಲ್ದೀಪ್ ಯಾದವ್ 22 ರನ್ ನೀಡಿ 1 ವಿಕೆಟ್ ಪಡೆದರು.

ಗಿಲ್ ಪಡೆಗೆ ಟಾಪರ್ ಆಗಿ ಉಳಿಯುವಾಸೆ | ಪಂತ್ ಪಡೆಯ ಪಾಲಿಗೆ ಅನೌಪಚಾರಿಕ ಪಂದ್ಯ

ಗುಜರಾತ್‌ಗಿಂದು ಲಖನೌ ಎದುರಾಳಿ

ಗುಜರಾತ್ ತಂಡ

ಶುಭ್‌ಮನ್ ಗಿಲ್ (ನಾಯಕ)
ಸಾಯಿ ಸುದರ್ಶನ್
ಶಾರುಖ್ ಖಾನ್
ರಾಹುಲ್ ತೆವಾಟಿಯಾ
ಅರ್ಷದ್ ಖಾನ್
ರಶೀದ್ ಖಾನ್
ಸಾಯಿ ಕಿಶೋರ್
ಮೊಹಮ್ಮದ್ ಸಿರಾಜ್
ಪ್ರಸಿದ್ಧ್ ಕೃಷ್ಣ
ಇಶಾಂತ್ ಶರ್ಮಾ
ಕುಮಾರ್ ಕುಶಾಗ್ರ
ವಾಷಿಂಗ್ಟನ್ ಸುಂದರ್
ಜಯಂತ್ ಯಾದವ್
ಜೋಸ್ ಬಟ್ಲರ್

ಲಖನೌ ತಂಡ

ರಿಷಭ್ ಪಂತ್ (ನಾಯಕ)
ನಿಕೋಲಸ್ ಪೂರನ್
ರವಿ ಬಿಷ್ಣೋಯ್
ಮಾಯಾಂಕ್ ಯಾದವ್
ಮೊಹಿನ್ ಖಾನ್
ಆಯುಷ್ ಬಧೋನಿ
ಡೇವಿಡ್ ಮಿಲ್ಲರ್
ಐಡೆನ್ ಮರ್ಕ್ರಮ್
ಮಿಚೆಲ್ ಮಾರ್ಷ್
ಆವೇಶ್ ಖಾನ್
ಅಬ್ದುಲ್ ಸಮದ್
ಆರ್ಯನ್ ಜುಯಾಲ್
ಆಕಾಶ್ ದೀಪ್
ಶಾರ್ದೂಲ್ ಠಾಕೂರ್

ಅಹಮದಾಬಾದ್: ಇಲ್ಲಿ ಗುರುವಾರ ನಡೆಯಲಿರುವ ಐಪಿಎಲ್ ಲೀಗ್ ಪಂದ್ಯದಲ್ಲಿ ಟೇಬಲ್ ಟಾಪರ್ ಆಗಿರುವ ಗುಜರಾತ್ ಟೈಟನ್ಸ್ ತಂಡವು ಲಖನೌ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸ ಲಿದೆ. ಈಗಾಗಲೇ ಪ್ಲೇ ಆಫ್‌ನಿಂದ ಹೊರ ಬಿದ್ದಿರುವ ರಿಷಬ್ ಪಂತ್ ನಾಯಕತ್ವದ ಲಖನೌ ತಂಡಕ್ಕೆ ಗುರುವಾರದ ಪಂದ್ಯವು ಬರೀ ಔಪಚಾರಿಕ ಪಂದ್ಯವಾಗಲಿದೆ, ಆದರೆ ಟೇಬಲ್ ಟಾಪರ್ ಸ್ಥಾನವನ್ನು ಉಳಿಸುವ ನಿಟ್ಟಿನಲ್ಲಿ ಗಿಲ್ ನಾಯಕತ್ವದ ಗುಜರಾತ್ ತಂಡದ ಪಾಲಿಗಿದು ಮಹತ್ವದ ಪಂದ್ಯ ಎನಿಸಲಿದೆ.

ಈ ಆವೃತ್ತಿಯ ಐಪಿಎಲ್‌ನ ಮೊದಲ ಪಂದ್ಯದಲ್ಲಿ ಪಂಜಾಬ್ ಎದುರು ಪರಾಭವಗೊಂಡರೂ, ಆ ಬಳಿಕ ಗುಜರಾತ್ ಪುಟಿದೆದ್ದಿತ್ತು. ಅದು ಮುಂಬೈ, ಆರ್‌ಸಿಬಿ, ಹೈದರಾಬಾದ್ ಮತ್ತು ರಾಜಸ್ಥಾನ ವಿರುದ್ಧ ಸತತ ನಾಲ್ಕು ಪಂದ್ಯಗಳನ್ನು ಗೆದ್ದು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿತು.

ಆದರೆ ಏಪ್ರಿಲ್-12ರಂದು ಲಖನೌ ತಂಡದ ವಿರುದ್ಧ ಗುಜರಾತ್ ಅನಿರೀಕ್ಷಿತವಾಗಿ ಪರಾಭವಗೊಂಡು ಮುಖಭಂಗ ಅನುಭವಿಸಿತು. ಬಳಿಕ ಏಪ್ರಿಲ್-19ರಂದು ಗುಜರಾತ್ ತಂಡದ ವಿರುದ್ಧ 7 ವಿಕೆಟ್ ಅಂತರದಲ್ಲಿ ಗೆದ್ದು, ಏಪ್ರಿಲ್-21ರಂದು ಕೋಲ್ಕತ್ತಾ ತಂಡದೆದುರು 39 ರನ್‌ಗಳ ಜಯ ಗಳಿಸಿ ಮತ್ತೊಮ್ಮೆ ಉತ್ಕೃಷ್ಟ ತಂಡವೆಂದು ತೋರಿಸಿಕೊಟ್ಟಿತು. ಆದರೆ ಏಪ್ರಿಲ್-28ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡದ ವಿರುದ್ಧ ಗುಜರಾತ್ ತಂಡವು ಸೋಲನ್ನೊಪ್ಪಿತ್ತು.

ಆ ಬಳಿಕ ಗುಜರಾತ್ ತಂಡವು ಹ್ಯಾಟ್ರಿಕ್ ಗೆಲುವಿನೊಂದಿಗೆ ತನ್ನ ಪ್ಲೇ ಆಫ್ ಖಚಿತ ಪಡಿಸಿ ಟೇಬಲ್ ಟಾಪರ್ ಎನಿಸಿಕೊಂಡಿತು. ಮೇ-2ರಂದು ನಡೆದಿದ್ದ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ, ಮೇ-6ರಂದು ಆಯೋಜಿಸ ಲಾಗಿದ್ದ ಪಂದ್ಯದಲ್ಲಿ ಮುಂಬೈ ವಿರುದ್ಧ ಹಾಗೂ ಮೇ-18ರಂದು ಜರುಗಿದ್ದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ 10 ವಿಕೆಟ್‌ಗಳ ಜಯ ಪಡೆದು ಐಪಿಎಲ್ ಅಭಿಯಾನದಲ್ಲಿ ತನ್ನ ಪಾರಮ್ಯವನ್ನು ಮೆರೆಯಿತು.

ಈಗಾಗಲೇ ಈ ಐಪಿಎಲ್ ಆವೃತ್ತಿಯ ಪ್ಲೇ ಆಫ್‌ನಿಂದ ಹೊರ ಬಿದ್ದಿರುವ ಲಖೌ ತಂಡವು ತನ್ನ ಮೊದಲ ಪಂದ್ಯದಲ್ಲೇ ಡೆಲ್ಲಿ ವಿರುದ್ಧ ಸೋತಿತ್ತು. ಎರಡನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಗೆಲುವು ಕಂಡಿತ್ತು. ಆದರೆ ಮೂರನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಮುಗ್ಗರಿಸಿತ್ತು.

ಬಳಿಕ ಹ್ಯಾಟ್ರಿಕ್ ಗೆಲುವು ಲಖನೌ ಪಾಲಿಗೆ ಬಂದೊದಗಿದರೂ, ಆ ಸ್ಥಿರ ಪ್ರದರ್ಶನವನ್ನು ಮುಂದುವರಿಸಲು ಲಖನೌ ತಂಡಕ್ಕೆ ಸಾಧ್ಯವಾಗಲಿಲ್ಲ. ಕೊನೆಯಲ್ಲಿ ನಾಲ್ಕು ಸತತ ಪಂದ್ಯಗಳನ್ನು ಸೋಲುವ ಮೂಲಕ ಅದು ಪ್ಲೇ ಆಫ್ ಹಂತದಿಂದ ನಿರ್ಗಮಿಸಿ ಮುಖಭಂಗ ಕ್ಕೀಡಾಯಿತು.

ಗುರುವಾರ ನಡೆಯುವ ಪಂದ್ಯವು ಗುಜರಾತ್ ಮತ್ತು ಲಖನೌ ಪಾಲಿಗೆ ಈ ಐಪಿಎಲ್ ಆವೃತ್ತಿಯ 13ನೇ ಪಂದ್ಯಗಳಾಗಿದ್ದು, ಈ ಪಂದ್ಯವಲ್ಲದೆ ಇವೆರಡೂ ತಂಡಗಳಿಗೂ ಲೀಗ್ ಹಂತದಲ್ಲಿ ಇನ್ನೂ ಒಂದೊಂದು ಪಂದ್ಯ ಬಾಕಿ ಉಳಿದಿವೆ.

ನಿಯಮ ಬದಲು: ಕೋಲ್ಕತ್ತಾ ಸಿಇಒ ಅಸಮಾಧಾನ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಈ ಐಪಿಎಲ್ ಟೂರ್ನಿಯ ನಿಯಮಗಳನ್ನು ಬದಲಾಯಿಸಿದೆ. ಮಳೆಯಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯವನ್ನು ಲಖನೌಗೆ ಸ್ಥಳಾಂತರಿಸಲಾಗಿದೆ. ಇದಲ್ಲದೆ, ಇನ್ನುಳಿದ ಪಂದ್ಯಗಳು ಮಳೆಯಿಂದಾಗಿ ಸ್ಥಗಿತವಾದರೆ, ಅವುಗಳನ್ನು ನಡೆಸಲು ಹೆಚ್ಚುವರಿ 120 ನಿಮಿಷಗಳನ್ನು ನೀಡಲಾಗಿದೆ.

ಮೊದಲು ಈ ಸಮಯ ಕೇವಲ 60 ನಿಮಿಷಗಳಿಗೆ ನಿಗದಿಪಡಿಸಲಾಗಿತ್ತು. ಅಂದರೆ ಒಂದು ಗಂಟೆಯ ನಂತರ ಓವರ್‌ಗಳನ್ನು ಕಡಿತಗೊಳಿಸಲಾಗುತ್ತಿತ್ತು. ಐಪಿಎಲ್ ಸಿಒಒ ಹೇಮಾಂಗ್ ಆಮಿನ್ ಅವರು ಎಲ್ಲಾ ಹತ್ತು ತಂಡಗಳಿಗೆ ಇ-ಮೇಲ್ ಕಳುಹಿಸಿದ್ದರು. ಮಳೆಯ ಕಾರಣವನ್ನು ಗಮನದಲ್ಲಿಟ್ಟುಕೊಂಡು ಈ ಬದಲಾವಣೆ ಮಾಡಲಾಗಿದೆ ಎಂದು ಅವರು ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆದರೆ ಬಿಸಿಸಿಐನ ಈ ಹೊಸ ನಿರ್ಧಾರದ ಬಗ್ಗೆ ಕೋಲ್ಕತ್ತಾ ತಂಡ ಅಸಮಾಧಾನ ವ್ಯಕ್ತಪಡಿಸಿದೆ. ಟೂರ್ನಿ ಪುನರಾರಂಭವಾದ ತಕ್ಷಣ ಈ ನಿಯಮವನ್ನು ಏಕೆ ಜಾರಿಗೆ ತರಲಿಲ್ಲ ಎಂದು ಕೋಲ್ಕತಾ ಫ್ರಾಂಚೈಸಿಯ ಸಿಇಒ ವೆಂಕಿ ಮೈಸೂರು ಪ್ರಶ್ನಿಸಿದ್ದಾರೆ. ಐಪಿಎಲ್ ಪುನರಾರಂಭವಾದಾಗ ಮೇ 17ರಂದು ಬೆಂಗಳೂರಿನಲ್ಲಿ ಕೋಲ್ಕತ್ತಾ ಮತ್ತು ಆರ್‌ಸಿಬಿ ನಡುವಣ ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಅಪಾಯವಿದೆ ಎಂಬುದು ಸ್ಪಷ್ಟವಾಗಿತ್ತು. ಆದರೆ ಈಗ ಹೆಚ್ಚುವರಿಯಾಗಿ ನೀಡಲಾಗುತ್ತಿರುವ 120 ನಿಮಿಷಗಳ ಆಗ ನೀಡಿದ್ದರೆ, ಅಂದು ಕನಿಷ್ಠ 5 ಓವರ್‌ಗಳ ಪಂದ್ಯವನ್ನು ನಡೆಸಲು ಸಾಧ್ಯವಾಗುತ್ತಿತ್ತು ಎಂದು ಅವರು ಹೇಳಿದ್ದಾರೆ.

ಮಳೆಯಿಂದಾಗಿ ಈ ಸಲದ ಐಪಿಎಲ್ ಟೂರ್ನಿಯಲ್ಲಿ ಇಲ್ಲಿಯವರೆಗೆ ಮೂರು ಪಂದ್ಯಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಇದರಲ್ಲಿ ಕೆಕೆಆರ್‌ನ ಎರಡು ಪಂದ್ಯಗಳು ಮಳೆಗೆ ಬಲಿಯಾಗಿದ್ದವು. ಅದಕ್ಕೂ ಮೊದಲು ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಕಳೆದ ಋತುವಿನಲ್ಲಿ ಕೋಲ್ಕತಾ ನೈಟ್ ರೈಡರ್ಸ್ ತಂಡವು ಹೈದರಾಬಾದ್ ತಂಡವನ್ನು ಸೋಲಿಸುವ ಮೂಲಕ ಐಪಿಎಲ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಕಿರಾತನಾದ ಮೋಹನ್ ಲಾಲ್

ಬಹು ಭಾಷಾ ನಟ ಮೋಹನ್ ಲಾಲ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅರವತ್ತೈ ರ ವಸಂತದಲ್ಲಿರುವ ಮೋಹನ್ ಲಾಲ್ ಅವರಿಗೆ ಕಲಾವಿದರು, ಗಣ್ಯರು ಅಭಿಮಾನಿಗಳು ಶುಭಾಷಯ ಕೋರಿ ಸಂಭ್ರಮಿಸಿದ್ದಾರೆ. ಮೋಹನ್ ಲಾಲ್ , ಕಣ್ಣಪ್ಪ ಚಿತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾದಲ್ಲಿ ಮೋಹನ್ ಲಾಲ್ ಕಿರಾತನಾಗಿ ಕಾಣಿಸಿಕೊಂಡಿದ್ದು, ಅವರ ಹುಟ್ಟುಹಬ್ಬದ ಪ್ರಯುಕ್ತ ಅವರ ಪಾತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ವಿಭಿನ್ನ ಲುಕ್ ನಲ್ಲಿ ಮಿಂಚಿರುವ ಮೋಹನ್ ಲಾಲ್ ಬಿಲ್ಲು ಹಿಡಿದು ಬರುವ ದೃಶ್ಯ ಮನಮೋಹಕವಾಗಿದೆ. ಮೋಹನ್ ಲಾಲ್ ಲುಕ್ ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ. ಕಣ್ಣಪ್ಪ ವಿಷ್ಣು ಮಂಚು ಅಭಿನಯದ ಬಹು ನಿರೀಕ್ಷಿತ ಸಿನಿಮಾಗಿದ್ದು, ಪ್ಯಾನ್ ಇಂಡಿಯಾ ಚಿತ್ರವಾಗಿ ಮೂಡಿಬರಲಿದೆ. ಮುಖೇಶ್ ಕುಮಾರ್ ಸಿಂಗ್ ನಿರ್ದೇಶನದ ಈ ಚಿತ್ರವನ್ನು ಮೋಹನ್ ಬಾಬು ನಿರ್ಮಾಣ ಮಾಡಿದ್ದಾರೆ. ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ ದೊಡ್ಡ ತಾರಾಬಳಗವೇ ಇದೆ. ಅಕ್ಷಯ್ ಕುಮಾರ್, ಪ್ರಭಾಸ್ ಹೀಗೆ ದಿಗ್ಗಜ ಕಲಾವಿದರ ದಂಡೇ ಇಲ್ಲಿದೆ. ಜೂನ್ 27 ರಂದು ಕಣ್ಣಪ್ಪ ತೆರೆಗೆ ಬರಲಿದೆ.

ಈ ವರ್ಷದಲ್ಲಿ ಮೋಹನ್ ಲಾಲ್ ಅಭಿನಯದ ಎಲ್ 2 ಎಂಪುರಾನ್ ಹಾಗೂ ತುಡುರುಮ್ ಸಿನಿಮಾಗಳು ಭರ್ಜರಿ ಪ್ರದರ್ಶನ ಕಂಡು ದಾಖಲೆಯ ಗಳಿಕೆಯನ್ನು ಕಂಡಿವು. ಈಗ ಹೃದಯಪೂರ್ವಂ ಸಿನಿಮಾದ ಶೂಟಿಂಗ್ ಕೂಡ ಭರದಿಂದ ಸಾಗಿದ್ದು, ಚಿತ್ರ ಈ ವರ್ಷವೇ ತೆರೆಗೆ ಬರಲಿದೆ. ಹಾಗಾಗಿ ಶೀಘ್ರದಲ್ಲಿಯೇ ಮೋಹನ್ ಲಾಲ್ ನಟನೆಯ ಹೃದಯಪೂರ್ವಂ ಸಿನಿಮಾವನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ಇದರ ಜತೆಗೆ ವೃಷಭ ಸಿನಿಮಾದಲ್ಲಿಯೂ ಮೋಹನ್ ಲಾಲ್ ನಟಿಸಿದ್ದಾರೆ.

ಮತ್ತೆ ವಿವಾದದಲ್ಲಿ ಆರ್ ಜಿ ವಿ

ನಿರ್ದೇಶಕ ರಾಮ್ ಗೋಪಾಲ್ ವರ್ಮಾ ಅವರಿಗೆ ವಿವಾದಗಳೇನು ಹೊಸತಲ್ಲ, ಇತ್ತೀಚಿನ ದಿನಗಳಲ್ಲಿ ಅವರು ಸಿನಿಮಾಗಿಂತ ವಿವಾದಗಳಲ್ಲಿಯೇ ಸದ್ದು ಮಾಡುತ್ತಿದ್ದಾರೆ. ಈಗ ಮತ್ತೊಂದು ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಹೃತಿಕ್ ರೋಷನ್ ಹಾಗೂ ಜೂ.ಎನ್ ಟಿಆರ್ ನಟನೆಯ ಬಹುನಿರೀಕ್ಷಿತ ವಾರ್ 2 ಚಿತ್ರದ ಟೀಸರ್ ರಿಲೀಸ್ ಆಗಿದೆ. ಈ ಟೀಸರ್ ನಲ್ಲಿ ಕಿಯಾರಾ ಅಡ್ವಾಣಿ ಬಿಕಿನಿಯಲ್ಲಿ ಮಿಂಚಿದ್ದಾರೆ. ಕಿಯಾರಾ ಬಿಕನಿ ಬಗ್ಗೆ ರಾಮ್ ಗೋಪಾಲ್ ವರ್ಮಾ ಸೋಷಿಯಲ್ ಮೀಡಿಯಾದಲ್ಲಿ ಅಸಭ್ಯವಾಗಿ ಕಮೆಂಟ್ ಮಾಡಿದ್ದಾರೆ. ಇದಕ್ಕೆ ನೆಟ್ಟಿಗರು ಆರ್ ಜಿವಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹಾಗಾಗಿ ಆರ್ ಜಿವಿ ತಮ್ಮ ಪೋಸ್ಟ್ ಡಿಲೀಟ್ ಮಾಡಿದ್ದಾರೆ. ವಾರ್ 2 ಕಂಪ್ಲೀಟ್ ಆ್ಯಕ್ಷನ್ ಸಿನಿಮಾವಾಗಿದ್ದು ಅದ್ಭುವಾಗಿ ಮೂಡಿಬಂದಿದೆ. ಹೃತಿಕ್ ರೋಷನ್ ರಾ ಏಜೆಂಟ್ ಆಗಿ ನಟಿಸಿದ್ದು, ತಾರಕ್ ಖಳನಾಗಿ ಅಬ್ಬರಿಸಿದ್ದಾರೆ. ಆಗಸ್ಟ್ 14 ರಂದು ವಾರ್ 2 ತೆರೆಗೆ ಬರಲಿದೆ. ಅಯನ್ ಮುಖರ್ಜಿ ನಿರ್ದೇಶನದಲ್ಲಿ ವಾರ್ 2 ಸಿನಿಮಾ ಸಿದ್ಧವಾಗಿದೆ.

ಕೊತ್ತಲವಾಡಿ ಟೀಸರ್ ರಿಲೀಸ್

ನಟ ಯಶ್ ತಾಯಿ ಪುಷ್ಪಾ ಅರುಣ್ ಕುಮಾರ್ ನಿರ್ಮಾಣ ಸಂಸ್ಥೆ ಸ್ಥಾಪಿಸಿದ್ದು ತಮ್ಮ ಪಿ ಎ ಪ್ರೊಡಕ್ಷನ್ಸ್ ನಲ್ಲಿ ಕೊತ್ತಲವಾಡಿ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ . ಕೊತ್ತಲವಾಡಿ ಸಿನಿಮಾದ ಟಿಸರ್ ರಿಲೀಸ್ ಆಗಿದೆ. ನಟ ಶರಣ್ ಟಿಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕೊತ್ತಲವಾಡಿ ಟೀಸರ್ ನಿರೀಕ್ಷೆಗಿಂತಲೂ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಇಷ್ಟು ದಿನ ಲವ್ವರ್ ಬಾಯ್ ಆಗಿ ಮಿಂಚಿದ್ದ ಪೃಥ್ವಿ ಅಂಬರ್ ಈಗ ಕಂಪ್ಲೀಟ್ ರಗಡ್ ಹಾಗೂ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಕೊತ್ತಲವಾಡಿ ಎಂಬ ಹಳ್ಳಿಯಲ್ಲಿ ನಡೆಯುವ ಕಥೆ ಇದಾಗಿದ್ದು ಕ್ಲಾಸ್ ಹಾಗೂ ಮಾಸ್ ಆಗಿದೆ. ಅಭಿನಂದನ್ ಕಶ್ಯಪ್ ಹಿನ್ನೆಲೆ ಸಂಗೀತ ಟೀಸರ್ ಮೆರುಗು ಹೆಚ್ಚಿಸಿದೆ.

> ನಮ್ಮ ಬದಲು ನಮ್ಮ ಸಿನಿಮಾ ಮಾತನಾಡಬೇಕು. ಯಶ್ ಮನೆ ಸಿನಿಮಾ ಎಂದರೆ ಇಡೀ ದೇಶ ನೋಡುತ್ತದೆ. ಅಂದರೆ ಸಿನಿಮಾದ ಬಗ್ಗೆ ಅಂತಹ ನಿರೀಕ್ಷೆಯೂ ಇರುತ್ತದೆ. ಅಂತಹ ಸಿನಿಮಾ ಇದಾಗಿದೆ.
>
> -ಪುಷ್ಪಾ ಅರುಣ್ ಕುಮಾರ್ ನಿರ್ಮಾಪಕಿ

ಪೃಥ್ವಿ ಅಂಬರ್ ನಾಯಕನಾಗಿ ನಟಿಸುತ್ತಿದ್ದು, ಕಿರುತೆರೆ ನಟಿ ಕಾವ್ಯಾ ಶೈವ ನಾಯಕಿಯಾಗಿ ನಟಿಸುತ್ತಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗರಂತಹ ಅನುಭವಿ ತಾಾಬಳಗ ಚಿತ್ರದಲ್ಲಿದೆ

ಕಾರ್ತಿಕ್ ಛಾಯಾಗ್ರಹಣ, ರಾಮಿಸೆಟ್ಟಿ ಪವನ್ ಸಂಕಲನ, ??ವಿಕಾಸ್ ವಸಿಷ್ಠ ಸಂಗೀತ, ರಘು ನಿಡುವಳ್ಳಿ ಸಂಭಾಷಣೆ ಈ ಚಿತ್ರಕ್ಕಿದ್ದು.ವಿ.ನಾಗೇಂದ್ರ ಪ್ರಸಾದ್, ಕಿನ್ನಾಳ್ ರಾಜ್ ಹಾಗೂ ಪ್ರಮೋದ್ ಮರವಂತೆ, ಗೌಸ್ ಪಿರ್ ಸಾಹಿತ್ಯ ಕೊತ್ತಲವಾಡಿ ಸಿನಿಮಾದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ.

> ನನಗೆ ಹಳ್ಳಿಯ ಸೊಗಡು, ಹಳ್ಳಿಯ ಮುಗ್ಧ ಪವರ್ ಫುಲ್ ಪಾತ್ರ ಮಾಡಬೇಕು ಎಂಬ ಆಸೆಯಿತ್ತು. ಅದು ಸಿನಿಮಾ ಮೂಲಕ ಈಡೇರಿದೆ. ಸಿನಿಮಾ ಕಥೆಗೆ ಏನೋ ಬೇಕು ಎಲ್ಲವನ್ನೂ ಕೊಟ್ಟಿದ್ದಾರೆ. ಬಹಳ ಪ್ರೀತಿಯಿಂದ ಎಲ್ಲರೂ ಈ ಸಿನಿಮಾಗೆ ಕೆಲಸ ಮಾಡಿದ್ದಾರೆ.
>
> - ಪೃಥ್ವಿ ಅಂಬರ್ ನಟ

ನಿರ್ಮಾಪಕರಿಗೆ ಕೊತ್ತಲವಾಡಿಯ ಒನ್ ಲೈನ್ ಸ್ಟೋರಿ ಹೇಳಿದೆ ಅವರಿಗೆ ಇಷ್ಟವಾಯ್ತು. ಅದಕ್ಕೆ ಓಂಕಾರ ??ಹಾಕಿದರು. ಕಥೆ ಬರೆಯೋದಿಕ್ಕೆ ಎಂಟು ತಿಂಗಳು ಸಮಯ ತೆಗೆದುಕೊಂಡೆ. ಬಳಿಕ ಪೂರ್ತಿಯಾಗಿ ಕಥೆ ಹೇಳಿದೆ ಅವರಿಗೆ ಇಷ್ಟವಾಯ್ತು. ಅಲ್ಲಿಂದ ಈ ಜರ್ನಿ ಶುರುವಾಯ್ತು ಎಂದು ನಿರ್ದೇಶಕ ಶ್ರೀರಾಜ್ ಹೇಳಿದರು.

ರೈತನ ಬದುಕು ಬವಣೆಯ ಅಥಣಿ

ಮೂಲತಃ ರೈತರಾಗಿರುವ ವಾಸುದೇವ ಆರ್ ದೊಡ್ಡಹೆಜ್ಜಾಜಿ ನಿರ್ಮಿಸಿರುವ, ಅಥಣಿ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ನಟ ಹಾಗೂ ನಿರ್ದೇಶಕ ನಾಗೇಚಿದ್ರ ಅರಸ್ ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಅಥಣಿ ಒಂದು ಊರಿನ ಹೆಸರಾಗಿದ್ದು, ರೈತನ ಬದುಕು ಬವಣೆಗಳನ್ನು ಪ್ರೇಕ್ಷಕರಿಗೆ ತೋರಿಸುವ ಪ್ರಯತ್ನವನ್ನು ಈ ಚಿತ್ರದ ಮೂಲಕ ಮಾಡಲಾಗಿದೆ. ಎಂ.ಸಮರ್ಥ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ.

ಮಧು ಈ ಚಿತ್ರದ ನಾಯಕಿನಾಗಿಯಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ ನಿಧನರಾದ ರಾಕೇಶ್ ಪೂಜಾರಿ ಚಿತ್ರದ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶೋಭ ರಾಜ್, ಯತಿರಾಜ್, ಭವ್ಯಾ, ಹನುಮಂತೇ ಗೌಡ, ನಾಗೇಂದ್ರ ಅರಸ್ ಸೇರಿದಂತೆ ಹಿರಿಯ ಕಲಾವಿದರು ತಾರಾಬಳಗದಲ್ಲಿದ್ದಾರೆ. ಸಾಮಾನ್ಯವಾಗಿ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುವ ನಾನು ಈ ಚಿತ್ರದಲ್ಲಿ ವೈದ್ಯನ ಪಾತ್ರ ನಿಭಾಯಿಸಿದ್ದೇನೆ ಎಂದು ನಾಗೇಂದ್ರ ಅರಸ್ ಹೇಳಿದರು. ಹರ್ಷ ಕಾಗೋಡು ಸಂಗೀತ ನಿರ್ದೇಶನ, ಸಂದೀಪ್ ಹೊನ್ನಾಳಿ ಛಾಯಾಗ್ರಹಣ, ಸುನಯ್ ಜೈನ್ ಸಂಕಲನ ಜತೆಗೆ ಛಾಯಾಗ್ರಹಣವನ್ನು ನಿರ್ವಹಿಸಿದ್ದಾರೆ. ಚಿತ್ರದ ಹಾಡುಗಳಿಗೆ ವಿನುಮನಸು ಸಂಗೀತ ಸಂಯೋಜಿಸಿದ್ದಾರೆ.

> ನಾನು ರೈತ ಹಾಗೂ ರೈತನ ಕಷ್ಟವನ್ನು ಕಂಡವನು, ಹಾಗಾಗಿ ಸಮರ್ಥ್ ಅವರು ಹೇಳಿದ ಕಥೆ ಇಷ್ಟವಾಗಿ ಚಿತ್ರ ನಿರ್ಮಾಣ ಮಾಡಿದ್ದೇನೆ. ರೈತರ ಸಮಸ್ಯೆಗಳನ್ನು ತಿಳಿಸುವ ಜತೆಗೆ ಸಮಸ್ಯೆಯ ಪರಿಹಾರಕ್ಕೆ ಮಾರ್ಗಗಳನ್ನು ಹೇಳುವ ಪ್ರಯತ್ನ ಮಾಡಲಾಗಿದೆ.
>
> -ವಾಸುದೇವ್ ಆರ್ ದೊಡ್ಡಹೆಜ್ಜಾಜಿ ನಿರ್ಮಾಪಕರು

> ಎಲ್ಲಾ ಊರುಗಳಲ್ಲಿ ಕೃಷಿಕ ಎದಿರಿಸುತ್ತಿರುವ ಸಮಸ್ಯೆಗಳನ್ನು ಈ ಚಿತ್ರದ ಮೂಲಕ ತೋರಿಸಲಾಗಿದೆ. ಸುಮ್ಮನೆ ಎಲ್ಲರೂ ರೈತನ ಪರ ಎನ್ನುತ್ತಾರೆ. ಆದರೆ ರೈತನ ಕಷ್ಟಕ್ಕೆ ಯಾರು ನೆರವಾಗುವುದಿಲ್ಲ. ನಮ್ಮ ಚಿತ್ರಕ್ಕೆ ಧರಣಿ ಮಂಡಲ ಮಧ್ಯದೊಳಗೆ ಎಂಬ ಅಡಿಬರಹವಿದೆ. ರೈತನ ಕಥೆಯ ಜತೆಗೆ ಸಸ್ಪೆನ್ಸ್ , ಥ್ರಿಲ್ಲರ್ ಕಥಾಹಂದರ ಕೂಡ ಹೊಂದಿದೆ.
>
> -ಎಂ.ಸಮರ್ಥ್ ನಿರ್ದೇಶಕ

ಈ ವಾರ ತೆರೆಗೆ ಕುಲದಲ್ಲಿ ಕೀಳ್ಯಾವುದೋ

ಯೋಗರಾಜ್ ಸಿನಿಮಾಸ್ ಅರ್ಪಿಸುವ, ಪರ್ಲ್ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಸಂತೋಷ್ ಕುಮಾರ್ ಹಾಗೂ ವಿದ್ಯಾ ನಿರ್ಮಿಸಿರುವ, ಕುಲದಲ್ಲಿ ಕೀಳ್ಯಾವುದೋ ಚಿತ್ರ ಈ ವಾರ ತೆರೆಗೆ ಬರಲಿದೆ. ಕೆ. ರಾಮನಾರಾಯಣ್ ನಿರ್ದೇಶನದ ಈ ಚಿತ್ರದಲ್ಲಿ ಕಾಮಿಡಿ ಕಿಲಾಡಿಗಳು ಖ್ಯಾತಿಯ ಮಡೆನೂರ್ ಮನು ನಾಯಕನಾಗಿ ನಟಿಸಿದ್ದು, ಮೌನಾ ಗುಡ್ಡೆಮನೆ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು, ಶರತ್ ಲೋಹಿತಾಶ್ವ, ಸೋನಾಲ್ ಮಂತೆರೊ, ತಬಲ ನಾಣಿ, ಹರೀಶ್ ರಾಜ್, ಕರಿ ಸುಬ್ಬು ಡ್ರಾ ್ಯಗನ್ ಮಂಜು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಕುಲದಲ್ಲಿ ಕೀಳ್ಯಾವುದೋ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯಾವುದೇ ಕಟ್ ನೀಡದೆ ಯು/ಎ ಪ್ರಮಾಣಪತ್ರ ನೀಡಿದೆ. ಇದೇ ವಾರ ಚಿತ್ರ ತೆರೆಗೂ ಬರಲಿದೆ. ಯೋಗರಾಜ್ ಭಟ್ ಹಾಗೂ ಇಸ್ಲಾಮುದ್ದೀನ್ ಚಿತ್ರಕ್ಕೆ ಕಥೆ ಬರೆದಿದ್ದು ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ ಹಾಗೂ ರಾಮ್ ನಾರಾಯಣ್ ಚಿತ್ರದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಮನೊಮೂರ್ತಿ ಸಂಗೀತ ಹಾಡುಗಳಿಗೆ ಮಾಧುರ್ಯ ತುಂಬಿದೆ. ಮನು ಛಾಯಾಗ್ರಹಣ, ದೀಪಕ್ ಸಂಕಲನ, ವಿನೋದ್, ಮಾಸ್ ಮಾದ, ನರಸಿಂಹ ಸಾಹಸ ನಿರ್ದೇಶನ ಹಾಗೂ ಅನಿಲ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.